ಗುರುವಾರ, ಏಪ್ರಿಲ್ 6, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 95 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ ಪ್ರಬಂಧ ರಚನೆಗೆ ಉಪಯುಕ್ತವಾಗುವ ಮಾಹಿತಿ ಇಲ್ಲಿದೆ.



ವಿದೇಶ ವಿದ್ಯಮಾನ
ಡೊನಾಲ್ಡ್ ಟ್ರಂಪ್ ಬಂಧನದ ಸುತ್ತ
ಚಿನ್ನಕ್ಕೆ ಸಾರ್ವಕಾಲಿಕ ಗರಿಷ್ಠ ಬೆಲೆ 10
ಬಿಜೆಪಿ ಪರ ನಟ ಸುದೀಪ್ ಪ್ರಚಾರ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,689	17,557	₹62,600 (ಬೆಂಗಳೂರು)	₹76,500 (ಬೆಂಗಳೂರು)	81.90

ಮದುವೆ ಜವಳಿಗೆ ರಾಜ್ಯದಲ್ಲಿಯೇ ಪ್ರಸಿದ್ಧವಾದ ಬಟ್ಟೆ ಅಂಗಡಿ
#ಬಟ್ಟೆಅಂದರೆBSC
BSC
B.S. CHANNABASAPPA & SONS
ಬಿ.ಎಸ್.ಚನ್ನಬಸಪ್ಪ & ಸನ್ಸ್
ದಾವಣಗೆರೆ & ಬೆಳಗಾವಿ.

Union Bank of India
VYOM ಮೊಬೈಲ್ ಆ್ಯಪ್
ಪ್ರೀಮಿಯಮ್ ಎಚ್‌ಎನ್‌ಐ ಉಳಿತಾಯ ಖಾತೆ
ಶೂನ್ಯ RTGS/NEFT ಚಾರ್ಜ್‌ಗಳು
ಸಿಗ್ನೇಚರ್ ಡೆಬಿಟ್ ಕಾರ್ಡ್‌ಗಾಗಿ ಶೂನ್ಯ ಎಎಮ್‌ಸಿ
ಲಾಕರ್ ಬಾಡಿಗೆಯಲ್ಲಿ 50% ರಿಯಾಯಿತಿ*
*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ
ಒಳ್ಳೆಯ ಜನರು, ಉತ್ತಮ ಬ್ಯಾಂಕ್
www.unionbankofindia.co.in

ಎನ್‌ಸಿಇಆರ್‌ಟಿ ಪುಸ್ತಕದಿಂದ ಆರ್‌ಎಸ್‌ಎಸ್ ನಿಷೇಧ ಮಾಹಿತಿಯೂ ಮಾಯ

ಗಾಂಧಿ ಪಠ್ಯದ ಭಾಗಕ್ಕೆ ಕೊಕ್

ನವದೆಹಲಿ (ಪಿಟಿಐ): ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿಯು (ಎನ್‌ಸಿಇಆರ್‌ಟಿ) 12ನೇ ತರಗತಿಯ ರಾಜ್ಯಶಾಸ್ತ್ರ ಪಠ್ಯ-ಪುಸ್ತಕದಿಂದ ಮಹಾತ್ಮ ಗಾಂಧಿ ಹತ್ಯೆ ಹಾಗೂ ಆರ್‌ಎಸ್‌ಎಸ್ ನಿಷೇಧ ಕುರಿತ ಕೆಲವು ವಿವರಗಳನ್ನು ಕೈಬಿಟ್ಟಿದ್ದು, ಈ ನಡೆ, ವಿವಾದ ಭುಗಿಲೇಳುವಂತೆ ಮಾಡಿದೆ.

‘ಗಾಂಧಿ ಅವರ ಹತ್ಯೆಯು ದೇಶದ ಕೋಮು ಸಾಮರಸ್ಯದ ಮೇಲೆ ಅಗಾಧ ಪರಿಣಾಮವನ್ನು ಬೀರಿತ್ತು’, ‘ಹಿಂದೂ–ಮುಸ್ಲಿಮರ ಏಕತೆ ಸಾಧಿಸಲು ಗಾಂಧೀಜಿ ನಡೆಸಿದ ಪ್ರಯತ್ನಗಳು ಹಿಂದೂ ತೀವ್ರವಾದಿ-ಗಳನ್ನು ಕೆರಳಿಸಿದ್ದವು’, ಮತ್ತು ‘ಆರ್‌ಎಸ್‌ಎಸ್‌ನಂತಹ ಕೆಲ ಸಂಘಟನೆಗಳನ್ನು ಕೆಲಕಾಲ ನಿಷೇಧಿಸಲಾಗಿತ್ತು’ – ಇವು ಪಠ್ಯದಿಂದ ಕೈಬಿಡಲಾಗಿರುವ ಕೆಲವು ಭಾಗಗಳಾಗಿವೆ.

ಎನ್‌ಸಿಇಆರ್‌ಟಿಯ ಈ ಕ್ರಮಕ್ಕೆ ವ್ಯಾಪಕ ವಿರೋಧ ವ್ಯಕ್ತವಾಗಿದ್ದು, ಕಾಂಗ್ರೆಸ್ ಸಹಿತ ಹಲವು ಪಕ್ಷಗಳ ಮುಖಂಡರು ಎನ್‌ಸಿಇಆರ್‌ಟಿ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ‘ಚರಿತ್ರೆಯನ್ನು ಮರುರೂಪಿಸಲು ಹೊರಟವರು ಇತಿಹಾಸದ ಕಸದಬುಟ್ಟಿಗೆ ಸೇರಲಿದ್ದಾರೆ’ ಎಂದು ಕಾಂಗ್ರೆಸ್ ಕಿಡಿಕಾರಿದೆ.

11ನೇ ತರಗತಿ ಪಠ್ಯದಿಂದ ‘ಗುಜರಾತ್ ಗಲಭೆ’ಗೆ ಕತ್ತರಿ

11ನೇ ತರಗತಿಯ ಸಮಾಜವಿಜ್ಞಾನ ಪಠ್ಯಪುಸ್ತಕದಿಂದ ಗುಜರಾತ್ ಗಲಭೆಗೆ ಸಂಬಂಧಿಸಿದ ಭಾಗವನ್ನು ಮಂಡಳಿ ಕೈಬಿಟ್ಟಿದೆ.

ಪಠ್ಯಕ್ರಮ ಸಂಕ್ಷೇಪಗೊಳಿಸುವ ಪ್ರಕ್ರಿಯೆ ಸಂಬಂಧ ಎನ್‌ಸಿಇಆರ್‌ಟಿ ಕಳೆದ ವರ್ಷ ಅಧಿಸೂಚನೆ ಹೊರಡಿಸಿ, ಕೈಪಿಡಿಯೊಂದನ್ನು ಪ್ರಕಟಿಸಿತ್ತು. ಪಠ್ಯಪುಸ್ತಕದಿಂದ ಕೈಬಿಟ್ಟಿರುವ ಭಾಗಗಳ ಕುರಿತು ಈ ಕೈಪಿಡಿಯಲ್ಲಿ ತಿಳಿಸಿಲ್ಲ.

‘ಪಠ್ಯಕ್ರಮ ಸಂಕ್ಷೇಪಗೊಳಿಸುವ ಪ್ರಕ್ರಿಯೆ ಭಾಗವಾಗಿ ಮಾಡಲಾದ ಈ ಬದಲಾವಣೆಗಳಿಗೆ ಅನುಮೋದನೆ ದೊರೆತಿತ್ತು. ಆದರೆ, ಕಣ್ತಪ್ಪಿನಿಂದಾಗಿ, ಅಧಿಕೃತ ಅಧಿಸೂಚನೆಯಲ್ಲಿ ಈ ವಿಷಯ ಪ್ರಸ್ತಾಪವಾಗಿಲ್ಲ’ ಎಂದು ಎನ್‌ಸಿಇಆರ್‌ಟಿ ನಿರ್ದೇಶಕ ದಿನೇಶ್ ಸಕ್ಲಾನಿ ಹೇಳಿದ್ದಾರೆ.

‘ಅಂಡರ್‌ಸ್ಟ್ಯಾಂಡಿಂಗ್ ಸೊಸೈಟಿ’ ಎಂಬ ಶಿರೋನಾಮೆಯ ಪಾಠದಲ್ಲಿದ್ದ, ಗುಜರಾತ್ ಗಲಭೆಗೆ ಸಂಬಂಧಿಸಿದ ಅಂಶಗಳನ್ನು ಸೇರಿ ಕೆಲ ಭಾಗಗಳನ್ನು ಕೈಬಿಡಲಾಗಿದೆ.

‘ಸಮಾಜದಲ್ಲಿ ವರ್ಗ, ಧರ್ಮ ಹಾಗೂ ಜನಾಂಗಗಳು ಯಾವ ರೀತಿ ಜನವಸತಿ ಪ್ರದೇಶಗಳನ್ನು ವಿಭಜನೆ ಮಾಡುತ್ತವೆ’ ಎಂಬ ಬಗ್ಗೆ ಕೈಬಿಟ್ಟಿರುವ ಈ ಭಾಗದಲ್ಲಿ ವಿವರಣೆ ಇತ್ತು. 2002ರಲ್ಲಿ ಗುಜರಾತ್‌ನಲ್ಲಿ ಹಿಂಸಾಚಾರ ಹೇಗೆ ಭುಗಿಲೆದ್ದಿತ್ತು ಎಂಬ ಭಾಗವಿತ್ತು. ಕೋಮು ಹಿಂಸಾಚಾರವು ಅಲ್ಪಸಂಖ್ಯಾತರನ್ನು ಹೇಗೆ ಪ್ರತ್ಯೇಕಿಸುತ್ತದೆ ಎಂಬುದನ್ನು ಗುಜರಾತ್ ಗಲಭೆ ಮೂಲಕ ವಿವರಿಸಲಾಗಿತ್ತು.

ಗಾಂಧಿ ಕುರಿತ ಪಾಠದಿಂದ ಕೆಲ ಭಾಗಗಳನ್ನು ಕೈಬಿಡಲು ತಜ್ಞರ ಸಮಿತಿ ಶಿಫಾರಸು ಮಾಡಿತ್ತು. ಈ ಕುರಿತು ಒಂದೆರಡು ದಿನಗಳಲ್ಲಿ ಅಧಿಸೂಚನೆ ಪ್ರಕಟಿಸಲಾಗುತ್ತದೆ
ಎನ್‌ಸಿಇಆರ್‌ಟಿ ಅಧಿಕಾರಿ

ಬಿಜೆಪಿ ನೇತೃತ್ವದ ಸರ್ಕಾರ 2014ರಲ್ಲಿ ಅಸ್ತಿತ್ವಕ್ಕೆ ಬಂತು. ಹೀಗಾಗಿ, ಪ್ರಧಾನಿ ಮೋದಿ ಅವರ ಪ್ರಕಾರ ಆಧುನಿಕ ಭಾರತದ ಇತಿಹಾಸ 2014ರಿಂದಲೇ ಪ್ರಾರಂಭವಾಗುತ್ತದೆ.
ಕಪಿಲ್ ಸಿಬಲ್, ರಾಜ್ಯಸಭಾ ಸದಸ್ಯ

ಕೆಲ ಭಾಗಗಳನ್ನು ಕೈಬಿಡುವ ಬಗ್ಗೆ ಕಳೆದ ವರ್ಷ ಘೋಷಣೆ ಮಾಡಿರಲಿಲ್ಲ. ಈ ವಿಷಯಕ್ಕೆ ಹೆಚ್ಚು ಪ್ರಚಾರ ನೀಡಲಾಗುತ್ತಿದೆ
ದಿನೇಶ್ ಸಕ್ಲಾನಿ, ನಿರ್ದೇಶಕ, ಎನ್‌ಸಿಇಆರ್‌ಟಿ

ಇನ್ನೊಂದೆಡೆ, ಬಿಜೆಪಿ ನಾಯಕರು ಮಂಡಳಿಯ ಕ್ರಮವನ್ನು ಬಲವಾಗಿ ಸಮರ್ಥಿಸಿಕೊಂಡಿದ್ದಾರೆ.

‘12ನೇ ತರಗತಿಯ ಪಠ್ಯಕ್ರಮಕ್ಕೆ ಕತ್ತರಿ ಹಾಕಿಲ್ಲ. ಪಠ್ಯಕ್ರಮವನ್ನು ಕಳೆದ ವರ್ಷ ಜೂನ್‌ನಲ್ಲಿ ಸಂಕ್ಷೇಪಗೊಳಿ-ಸಲಾಗಿದೆ’ ಎಂದು ಎನ್‌ಸಿಇಆರ್‌ಟಿ ಸಮಜಾಯಿಷಿ ನೀಡಿದೆ.

‘ಗುಜರಾತ್ ಗಲಭೆ, ಮೊಘಲರ ನ್ಯಾಯ ಪದ್ಧತಿ, ತುರ್ತು ಪರಿಸ್ಥಿತಿ, ಶೀತಲ ಸಮರ, ನಕ್ಸಲರ ಚಳವಳಿಗೆ ಸಂಬಂಧಿಸಿದ ಪಾಠಗಳಲ್ಲಿ ಕೆಲ ಭಾಗಗಳು ಪುನರಾವರ್ತನೆಯಾಗಿವೆ, ಮತ್ತೆ ಕೆಲವು ಅಪ್ರಸ್ತುತವಾಗಿವೆ. ಈ ಕಾರಣಕ್ಕಾಗಿ ಅವುಗಳನ್ನು ಕೈಬಿಡುವ ಮೂಲಕ ಪಠ್ಯಕ್ರಮವನ್ನು ಸಂಕ್ಷೇಪ-ಗೊಳಿಸುವ ಕಾರ್ಯ ಮಾಡಲಾಗಿದೆ’ ಎಂದು ಎನ್‌ಸಿಇಆರ್‌ಟಿ ತನ್ನ ಕ್ರಮವನ್ನು ಸಮರ್ಥಿಸಿಕೊಂಡಿದೆ.

11ನೇ ಪುಟ ನೋಡಿ

ವರುಣದಿಂದ ಸೋಮಣ್ಣ ಕಣಕ್ಕೆ?

ಬೆಂಗಳೂರು: ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ವರುಣದಲ್ಲೇ ಕಟ್ಟಿಹಾಕಲು ಮುಂದಾಗಿರುವ ಬಿಜೆಪಿ ವರಿಷ್ಠರು ವಸತಿ ಸಚಿವ ವಿ.ಸೋಮಣ್ಣ ಅವರನ್ನು ಈ ಕ್ಷೇತ್ರದಲ್ಲಿ ಕಣಕ್ಕೆ ಇಳಿಸಲು ಮುಂದಾಗಿದ್ದಾರೆ.

‘ಮೈಸೂರು ಜಿಲ್ಲೆಯಲ್ಲಿ ಪ್ರಭಾವ ಹೊಂದಿರುವ ಸೋಮಣ್ಣ, ಲಿಂಗಾಯತ ಮಠಗಳ ಜತೆ ಒಡನಾಟ ಹೊಂದಿದ್ದು, ಈ ಕಾರಣಕ್ಕೆ, ವರುಣದಲ್ಲಿ ನಿಲ್ಲಿಸಿದರೆ ಪ್ರಬಲ ಎದುರಾಳಿಯನ್ನು ಕಣಕ್ಕೆ ಇಳಿಸಿದಂತಾಗುತ್ತದೆ ಎಂಬ ಲೆಕ್ಕಾಚಾರ ಇದರ ಹಿಂದೆ ಇದೆ’ ಎಂದು ಬಿಜೆಪಿ ಮೂಲಗಳು ಹೇಳಿವೆ.

‘ಬಿ.ಎಸ್. ಯಡಿಯೂರಪ್ಪ ಅವರ ಶಿಫಾರಸನ್ನು ಗಂಭೀರವಾಗಿ ಪರಿಗಣಿಸಿದ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಸೋಮಣ್ಣ ಅವರಿಗೆ ಕರೆ ಮಾಡಿ, ಸ್ಪರ್ಧೆಗೆ ಅಣಿಯಾಗಿ ಎಂದು ಸಲಹೆ ನೀಡಿದ್ದಾರೆ’ ಎಂದೂ ಮೂಲಗಳು ತಿಳಿಸಿವೆ.

‘ಮೀಡಿಯಾ ಒನ್’ ನಿರ್ಬಂಧ ತೆರವು

ಸರ್ಕಾರಕ್ಕೆ ಟೀಕೆ ಆಡಳಿತ ವಿರೋಧಿಯಲ್ಲ: ‘ಸುಪ್ರೀಂ’

ನವದೆಹಲಿ (ಪಿಟಿಐ): ‘ಸರ್ಕಾರದ ನೀತಿಗಳ ವಿರುದ್ಧ ಸುದ್ದಿವಾಹಿನಿ ಮಾಡಿರುವ ಕಟು ವಿಮರ್ಶೆಯನ್ನು ಆಡಳಿತ ವಿರೋಧಿ ಎಂದು ಕರೆಯಲಾಗದು. ಸದೃಢ ಪ್ರಜಾ-ಪ್ರಭುತ್ವಕ್ಕೆ ಸ್ವತಂತ್ರ ಮಾಧ್ಯಮ ಅಗತ್ಯ’ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

ರಾಷ್ಟ್ರೀಯ ಭದ್ರತೆಗೆ ಧಕ್ಕೆ ಉಂಟುಮಾಡಿದ ಆರೋಪದಡಿ ಕೇಂದ್ರ ಸರ್ಕಾರ ಕೇರಳದ ‘ಮೀಡಿಯಾ ಒನ್’ ಮಲಯಾಳ ಸುದ್ದಿವಾಹಿನಿಯ ಪ್ರಸಾರದ ಮೇಲೆ ನಿರ್ಬಂಧ ಹೇರಿತ್ತು. ಇದನ್ನು ಕೇರಳ ಹೈಕೋರ್ಟ್ ಎತ್ತಿ ಹಿಡಿದಿತ್ತು. ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಸುದ್ದಿವಾಹಿನಿಯು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು.

ಬುಧವಾರ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ದ್ವಿಸದಸ್ಯ ನ್ಯಾಯಪೀಠವು ಹೈಕೋರ್ಟ್ ಆದೇಶವನ್ನು ರದ್ದುಪಡಿಸಿದೆ.

‘ರಾಷ್ಟ್ರೀಯ ಭದ್ರತೆಗೆ ಧಕ್ಕೆ ಉಂಟು ಮಾಡಿದ್ದಾಗಿ ಸುಮ್ಮನೇ ಆರೋಪಿಸುವಂತಿಲ್ಲ. ಅದನ್ನು ಸಾಬೀತುಪಡಿಸುವುದಕ್ಕೆ ಅಗತ್ಯ ಸಾಕ್ಷ್ಯಾಧಾರಗಳು ಇರಲೇಬೇಕಾಗುತ್ತದೆ’ ಎಂದು ನ್ಯಾಯಮೂರ್ತಿ ಹಿಮಾ ಕೊಹ್ಲಿ ಅವರನ್ನೊಳಗೊಂಡ ನ್ಯಾಯಪೀಠವು ಕೇಂದ್ರ ಗೃಹ ಸಚಿವಾಲಯವನ್ನು ತರಾಟೆಗೆ ತೆಗೆದುಕೊಂಡಿದೆ.

‘ನಾಗರಿಕರನ್ನು ಜಾಗೃತರನ್ನಾಗಿಸುವ ಸಲುವಾಗಿ, ಪ್ರಜಾಪ್ರಭುತ್ವವನ್ನು ಸರಿಯಾದ ದಿಕ್ಕಿನಲ್ಲಿ ಮುನ್ನಡೆಸಲು ಇರುವ ಆಯ್ಕೆಗಳ ಕುರಿತು ಅರಿವು ಮೂಡಿಸುವ ನಿಟ್ಟಿನಲ್ಲಿ ಅವರಿಗೆ ಸತ್ಯ ಹೇಳಬೇಕಿರುವುದು ಮಾಧ್ಯಮದ ಕರ್ತವ್ಯ. ಪತ್ರಿಕಾ ಸ್ವಾತಂತ್ರ್ಯದ ಮೇಲಿನ ನಿರ್ಬಂಧವು ನಾಗರಿಕರನ್ನೂ ಅದೇ ನೆಲೆಯಲ್ಲಿ ಯೋಚಿಸುವಂತೆ ಮಾಡುತ್ತದೆ’ ಎಂದು ನ್ಯಾಯಪೀಠ ತಿಳಿಸಿದೆ.

11ನೇ ಪುಟ ನೋಡಿ

ಇದ್ರಿಷ್ ಸಾವು: ಪರಾರಿಯಾಗಿದ್ದ ಕೆರೆಹಳ್ಳಿ, ಸಹಚರರು

ರಾಜಸ್ಥಾನದಲ್ಲಿ ಸೆರೆಸಿಕ್ಕ ಆರೋಪಿಗಳು

ಪ್ರಜಾವಾಣಿ ವಾರ್ತೆ

ರಾಮನಗರ: ಜಾನುವಾರು ವ್ಯಾಪಾರಿ ಇದ್ರಿಷ್ ಪಾಷಾ ಅನುಮಾನಾಸ್ಪದ ಸಾವಿನ ಪ್ರಕರಣದ ಐವರು ಆರೋಪಿಗಳನ್ನು ರಾಮನಗರ ಪೊಲೀಸರು ಬುಧವಾರ ರಾಜಸ್ಥಾನದಲ್ಲಿ ಬಂಧಿಸಿ ಕರೆತರುತ್ತಿದ್ದಾರೆ.

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ರಾಷ್ಟ್ರ ರಕ್ಷಣಾ ಪಡೆ ಸಂಘಟನೆಯ ಸಂಸ್ಥಾಪಕ ಪುನೀತ್ ಕೆರೆಹಳ್ಳಿ, ಕಾರ್ಯಕರ್ತರಾದ ರಾಮನಗರ ತಾಲ್ಲೂಕಿನ ಗದಗಯ್ಯನದೊಡ್ಡಿಯ ಗೋಪಿ, ತೀರ್ಥಹಳ್ಳಿ ತಾಲ್ಲೂಕಿನ ನೊಣಬೂರಿನ ಪವನ್‌ಕುಮಾರ್, ಬೆಂಗಳೂರು ನಗರದ ಬಸವನಗುಡಿಯ ಪಿಲ್ಲಿಂಗ್ ಅಂಬಿಗಾರ ಹಾಗೂ ರಾಯಚೂರಿನ ಸುರೇಶ್‌ಕುಮಾರ್ ಬಂಧಿತರು.

ಮಾರ್ಚ್ 31ರ ಮಧ್ಯರಾತ್ರಿ ಕನಕಪುರ ತಾಲ್ಲೂಕಿನ ಸಾತನೂರು ಪೊಲೀಸ್ ಠಾಣೆ ಮುಂಭಾಗ ಪುನೀತ್ ಕೆರೆಹಳ್ಳಿ ಹಾಗೂ ಸಹಚರರು ಜಾನುವಾರು ಸಾಗಿಸುತ್ತಿದ್ದವರ ಮೇಲೆ ದಾಳಿ ನಡೆಸಿದ್ದರು. ಮರುದಿನ ಬೆಳಿಗ್ಗೆ ಘಟನೆ ನಡೆದ ಸ್ಥಳದ ಸ್ವಲ್ಪ ದೂರದಲ್ಲಿ ಇದ್ರಿಷ್ ಪಾಷಾ ಅವರ ಶವ ಸಿಕ್ಕಿತ್ತು.

5ನೇ ಪುಟ ನೋಡಿ

ಸಚಿವ ಮುನಿರತ್ನ ವಿರುದ್ಧ ಎಫ್‌ಐಆರ್

ಬೆಂಗಳೂರು: ಕೋಮು ದ್ವೇಷ ಭಾಷಣ ಹಾಗೂ ಕೋಮು ಗಲಭೆಗೆ ಪ್ರಚೋದನೆ ಆರೋಪದ ಮೇರೆಗೆ ತೋಟಗಾರಿಕೆ ಸಚಿವ ಮುನಿರತ್ನ ವಿರುದ್ಧ ರಾಜರಾಜೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ಬುಧವಾರ ಎಫ್‌ಐಆರ್ ದಾಖಲಾಗಿದೆ.

‘ಅಲ್ಪಸಂಖ್ಯಾತ ಕ್ರೈಸ್ತ ಸಮುದಾಯದವರನ್ನು ಹೊಡೆದು ಓಡಿಸಿ’ ಎಂದು ಕೋಮು ದ್ವೇಷದ ಹೇಳಿಕೆ ನೀಡಿ ಆ ಸಮುದಾಯದ ಗೌರವ ಹಾಗೂ ಹಕ್ಕುಗಳಿಗೆ ಚ್ಯುತಿ ತಂದಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಚುನಾವಣಾ ಅಧಿಕಾರಿ ಮನೋಜ್‌ಕುಮಾರ್ ದೂರು ನೀಡಿದ್ದರು.

57 ಕ್ಷೇತ್ರಗಳ ‘ಕೈ’ ಪಟ್ಟಿ ಅಂತಿಮ

ನವದೆಹಲಿ: ಮೇ 10 ರಂದು ನಡೆಯುವ ಕರ್ನಾಟಕ ವಿಧಾನಸಭಾ ಚುನಾವಣೆಗೆ ಮತ್ತೆ 57 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಪಟ್ಟಿಯನ್ನು ಕಾಂಗ್ರೆಸ್‌ನ ಕೇಂದ್ರ ಚುನಾವಣಾ ಸಮಿತಿ (ಸಿಇಸಿ) ಬುಧವಾರ ಅಂತಿಮಗೊಳಿಸಿದೆ.

ಚುನಾವಣಾ ನೀತಿಸಂಹಿತೆ ಘೋಷಣೆಗೆ ಮುನ್ನವೇ ‘ಕೈ’ ಪಡೆ 124 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿತ್ತು. ಮೇಲುಕೋಟೆ ಕ್ಷೇತ್ರದಲ್ಲಿ ಸರ್ವೋದಯ ಕರ್ನಾಟಕ ಪಕ್ಷದ ಅಭ್ಯರ್ಥಿ ದರ್ಶನ್ ಪುಟ್ಟಣ್ಣಯ್ಯ ಅವರನ್ನು ಬೆಂಬಲಿಸಲು ಪಕ್ಷ ನಿರ್ಧರಿಸಿದೆ. ಉಳಿದ 99 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಅಂತಿಮಗೊಳಿಸಲು ಚುನಾವಣಾ ಸಮಿತಿಯು ಮಂಗಳವಾರ ಹಾಗೂ ಬುಧವಾರ ಭಾರಿ ಕಸರತ್ತು ನಡೆಸಿತು.

ಸಂಸದ ಮೋಹನ್ ಪ್ರಕಾಶ್ ನೇತೃತ್ವದ ಪಕ್ಷದ ಸ್ಕ್ರೀನಿಂಗ್ ಸಮಿತಿಯು ಮಂಗಳವಾರ ಸಂಜೆ ಹಾಗೂ ಬುಧವಾರ ಬೆಳಿಗ್ಗೆ ಸಭೆ ನಡೆಸಿ 99 ಕ್ಷೇತ್ರಗಳಿಗೆ ಸಂಭಾವ್ಯರ ಹೆಸರನ್ನು ಅಖೈರುಗೊಳಿಸಿತು.

6ನೇ ಪುಟ ನೋಡಿ

ಪ್ರಜಾ ಮತ
ಜನತಂತ್ರದ ಹಬ್ಬ
ದೊಡ್ಡ ಹುದ್ದೆ ಬಿಟ್ಟರು, ರಾಜಕೀಯಕ್ಕೆ ಬಂದರು 6
ಮಾಯಕೊಂಡ: ಕಾಂಗ್ರೆಸ್‌ನಲ್ಲಿ ಸವಿತಾ ಬಂಡಾಯ 6
ಮೀಸಲಾತಿ; ‘ಮತ’ ಸೆಳೆಯುವ ನೀತಿ 7
ವಲಸಿಗರ ಕಣ್ಣು ಹಸ್ತದ ಮ್ಯಾಲೆ 7

ಚಿನಕುರಳಿ
ಪ್ರಕಾಶ್ ಶೆಟ್ಟಿ

ಕ್ಯಾನ್ಸರ್ ಮುಕ್ತ ಜೀವನ
ಕ್ಯಾನ್ಸರ್ ರೋಗಿಗಳಿಗೆ ಒಂದು ಭರವಸೆಯ ಕಿರಣ
ವಿಶ್ವ ಪ್ರಸಿದ್ಧ ನೋವುರಹಿತ ಚಿಕಿತ್ಸೆಯಾದ ಕ್ಯಾನ್ಸರ್ ಹೀಲರ್ ಥೆರಪಿ ಎಂಬ ಚಿಕಿತ್ಸೆಯು ಇಮ್ಯುನೋಥೆರಪಿ ಮುಖಾಂತರ ಕ್ಯಾನ್ಸರ್‌ನ್ನು ಸೋಲಿಸುತ್ತದೆ
CANCER HEALER CENTER A NEW BEGINNING!
ಕೇವಲ 6 ತಿಂಗಳು ಮಾತ್ರ ಬದುಕಿರಬಹುದು ಎಂದು ವೈದ್ಯರು ಹೇಳಿದ್ದರು
ಕ್ಯಾನ್ಸರ್ ಹೀಲರ್ ಕೇಂದ್ರದಲ್ಲಿ 4ನೇ ಹಂತದ ಸ್ತನ ಕ್ಯನ್ಸರ್‌ಗೆ ಯಶಸ್ವಿ ಚಿಕಿತ್ಸೆ
ನನ್ನ ಹೆಸರು ದೀಪಾಂಜಲಿ, ನನಗೆ ಈಗ 40 ವರ್ಷ ವಯಸ್ಸು. ಒಂದು ದಿನ ಅಚಾನಕ್ಕಾಗಿ ನನಗೆ ಉಸಿರಾಡಲು ಕಷ್ಟ ಎಂದೆನಿಸತೊಡಗಿತ್ತು. ತಕ್ಷಣ ಒಬ್ಬ ಗೈನಕಾಲಜಿಸ್ಟ್‌ಗೆ ಭೇಟಿ ಮಾಡಿದಾಗ, ಏನಕ್ಕೂ ಕ್ಯಾನ್ಸರ್ ತಪಾಸಣೆ ಮಾಡಿಸಿಕೊಳ್ಳಿ ಎಂದು ಸೂಚಿಸಿದರು. ನಂತರ ಸಿ.ಟಿ.ಸ್ಕ್ಯಾನ್‌ಗೆ ಒಳಗಾದ ಬಳಿಕವಷ್ಟೆ ತಿಳಿಯಿತು, ನನ್ನೊಳಗಿನ ಕ್ಯಾನ್ಸರ್ ಮೂರನೇ ಹಂತ ದಾಟಿದೆ ಅಂತಾ! ಕೂಡಲೇ ನನಗೆ ಕ್ಯಾನ್ಸರ್ ಚಿಕಿತ್ಸೆ ಪ್ರಾರಂಭಿಸಲಾಯಿತು. 11 ಕೀಮೊಥೆರಪಿಗಳು ಆದರೂ ಕೂಡ, ನನ್ನ ದೇಹ ಮಾತ್ರ ಸಂಪೂರ್ಣ ಕ್ಷೀಣಗೊಂಡಿತ್ತು. ಕೈಗಳ ಚಲನವಲನ ಸ್ತಬ್ಧಗೊಂಡಿತ್ತು. ಕೂದಲೆಲ್ಲ ಉದುರಿ, ತಲೆ ಬೋಳಾಗಿತ್ತು. ಚರ್ಮದ ಬಣ್ಣ ಕಪ್ಪು ವರ್ಣಕ್ಕೆ ತಿರುಗಿತ್ತು. ಕಡುಯಾತನೆಯ ನೋವು ಅನುಭವಿಸತೊಡಗಿದ್ದೆ. ಇನ್ನೊಂದು ಕೀಮೊಥೆರಪಿ ಪಡೆದುಕೊಳ್ಳಲೂ ಸಾಧ್ಯವಿಲ್ಲದಂತಹ ಪರಿಸ್ಥಿತಿಗೆ ತಲುಪಿದ್ದೆ. ಇದೇ ಸಂದರ್ಭದಲ್ಲಿ ನನಗೆ ಫೇಸ್‌ಬುಕ್ ಮುಖಾಂತರ ಕ್ಯಾನ್ಸರ್ ಹೀಲರ್ ಸೆಂಟರ್ ಬಗ್ಗೆ ಮಾಹಿತಿ ಸಿಕ್ಕಿತು. ನನ್ನ ಸಲಹೆಯ ಮೇರೆಗೆ, ನನ್ನ ಗಂಡ ಕೂಡ ಕ್ಯಾನ್ಸರ್ ಹೀಲರ್‌ನಲ್ಲಿ ನನ್ನ ಚಿಕಿತ್ಸೆ ಒಪ್ಪಿಕೊಂಡರು ಮತ್ತು ಡಾ. ತರಂಗ್ ಕೃಷ್ಣಾ ರವರ ಜೊತೆಗೆ ಸಮಾಲೋಚನೆ ನಡೆಸಿದ ಬಳಿಕ ಅಲ್ಲಿ ಚಿಕಿತ್ಸೆ ಪಡೆಯಲು ಪ್ರಾರಂಭಿಸಿದೆ. ಒಂದು ತಿಂಗಳು ಪೂರ್ತಿ ನಾನು ಔಷಧಿಗಳನ್ನು ಸೇವಿಸಿದ ನಂತರ, ನನ್ನಲ್ಲಿ ಅಚ್ಚರಿದಾಯಕ ಫಲಿತಾಂಶಗಳು ಕಂಡುಬಂದವು. ದೇಹದಲ್ಲಿ ಪುನಃ ಶಕ್ತಿ ಬಂದಂತಾಗಿತ್ತು. ತಲೆಗೂದಲು ಮತ್ತೆ ಚಿಗುರತೊಡಗಿದ್ದವು. ನಾನು ತುಂಬಾ ಬೇಗ ಬೇಗ ಗುಣಮುಖಳಾಗುತ್ತಿದ್ದೆ. ಅಂತ್ಯಗೊಂಡಿದ್ದ ಬದುಕಿನಲ್ಲಿ ಹೊಸಬೆಳಕು ಕಂಡಂತಾಯಿತು. ಕ್ರಮೇಣ ನಾನು ಸಹಜವಾಗಿ ಜೀವಿಸತೊಡಗಿದೆ. ಡಾ. ತರಂಗ್ ಸರ್‌ರವರು ನನ್ನ ಜೀವನದಲ್ಲಿ ದೇವರಂತೆ ಕಾಣಿಸಿದರು. ಅವರಿಗೆ ನಾನು ಹೃದಯಪೂರ್ವಕವಾಗಿ ಧನ್ಯವಾದ ಹೇಳಬಯಸುತ್ತೇನೆ ಮತ್ತು ಇತರೆ ಕ್ಯಾನ್ಸರ್ ಪೀಡಿತರಿಗೆ ಡಾ. ತರಂಗ್ ಅವರಿಂದ ಚಿಕಿತ್ಸೆ ಪಡೆಯಿರಿ ಎಂದು ದೃಢವಾಗಿ ಹೇಳುತ್ತೇನೆ.

ಡಾ. ತರಂಗ್ ಕೃಷ್ಣ
ಎಂ.ಡಿ. -ಕ್ಯಾನ್ಸರ್ ಹೀಲರ್ ಸೆಂಟರ್
ಹೆಲ್ಪ್‌ಲೈನ್ : 98100-06264
ಬೆಂಗಳೂರು
1/1 ಎ, 2ನೇ ಮಹಡಿ, ಚಿನ್ಮಯ ಮಿಷನ್ ಹಾಸ್ಪಿಟಲ್ ರೋಡ್, ಕೆಎಫ್‌ಸಿ ಸಿಗ್ನಲ್, ಹೆಚ್‌ಎಎಲ್ 1ನೇ ಹಂತ, ಇಂದಿರಾನಗರ, ಕರ್ನಾಟಕ.
ಡಾ. ತರಂಗ್ ಕೃಷ್ಣಾ ರವರ ತಂಡದ ಹಿರಿಯ ಸದಸ್ಯರು ಏಪ್ರಿಲ್ 10 ರಂದು ಬೆಂಗಳೂರಿನಲ್ಲಿ ಭೇಟಿಗೆ ಲಭ್ಯವಿರುತ್ತಾರೆ.
ಇಮ್ಯುನೊಥೆರಪಿ ಎಂದರೇನು ಮತ್ತು ಇದು ಕ್ಯಾನ್ಸರ್ ವಿರುದ್ಧ ಹೇಗೆ ಹೋರಾಡುತ್ತದೆ ?
ಕ್ಯಾನ್ಸರ್ ಹೀಲರ್ ಚಿಕಿತ್ಸೆಯು ದೇಹದ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ ಮತ್ತು ಇಮ್ಯುನಿಟಿಯನ್ನು ಸುಧಾರಿಸುತ್ತದೆ. ದೇಹದ ಇಮ್ಯುನಿಟಿಯನ್ನು ಹೆಚ್ಚಿಸುವ ಮೂಲಕ, ದೇಹದ ಸಾಮಾನ್ಯ ಜೀವಕೋಶಗಳಿಗೆ ಇದು ರಕ್ಷಾಕವಚದಂತೆ ಕಾರ್ಯವಹಿಸುತ್ತದೆ ಮತ್ತು ದೇಹವು ತನ್ನೊಳಗಿನ ಕ್ಯಾನ್ಸರ್ ಉತ್ಪಾದಕ ಕೋಶಗಳನ್ನು ವಿನಾಶಗೊಳಿಸುವಂತಹ ಸಾಮರ್ಥ್ಯ ಪಡೆಯುವಷ್ಟರ ಮಟ್ಟಿಗೆ, ದೇಹದಲ್ಲಿನ ನಿರೋಧಕ ಶಕ್ತಿಯನ್ನು ಬಲಿಷ್ಠಗೊಳಿಸುತ್ತದೆ ಹಾಗೂ ಕೆಲವೇ ತಿಂಗಳಲ್ಲಿ ಕ್ಯಾನ್ಸರ್ ರೋಗಿಗಳು ಉತ್ತಮ ಗುಣಮಟ್ಟದ ಜೀವನ ನಡೆಸುವಂತಾಗುತ್ತಾರೆ. ಈ ಚಿಕಿತ್ಸೆಯು ಇವರಿಗೆ ಕೂಡ ಪರಿಣಾಮಕಾರಿಯಾಗಿದೆ:- * ವಯೋಮಿತಿಯ ಕಾರಣದಿಂದಾಗಿ ಕೀಮೊಥೆರಪಿ ಅಥವಾ ರೇಡಿಯೇಶನ್ ಚಿಕಿತ್ಸೆ ಪಡೆಯಲು ಸಾಧ್ಯವಾಗದವರಿಗೆ * ಈಗಾಗಲೇ ಪಡೆಯುತ್ತಿರುವ ಕ್ಯಾನ್ಸರ್ ಚಿಕಿತ್ಸೆಯ ಅಡ್ಡಪರಿಣಾಮಗಳಿಂದ ಬಳಲುತ್ತಿರುವವರಿಗೆ ಮತ್ತು ದೇಹವು ಕೃಷಗೊಂಡು ಚಿಕಿತ್ಸೆ ಮುಂದುವರಿಸಲು ಸಾಧ್ಯವಾಗದೆ ಇರುವವರಿಗೆ * ಈ ಚಿಕಿತ್ಸೆಯನ್ನು ಕೀಮೊಥೆರಪಿ ಹಾಗೂ ರೇಡಿಯೊಥೆರಪಿ ಚಿಕಿತ್ಸೆಯ ಜೊತೆಯಲ್ಲಿಯೇ ಪಡೆಯಬಹುದು. ಇತರ ಚಿಕಿತ್ಸೆಯಿಂದ ಉಂಟಾಗಿರುವ ಅಡ್ಡಪರಿಣಾಮಗಳನ್ನು ಕೂಡ ಇಮ್ಯುನೋಥೆರಪಿ ಚಿಕಿತ್ಸೆಯು ತಡೆಗಟ್ಟುತ್ತದೆ.
ಕ್ಯಾನ್ಸರ್ ಹೀಲರ್ ಚಿಕಿತ್ಸೆಯಿಂದ ಗುಣಮುಖರಾಗಿರುವ ರೋಗಿಗಳ ವಿಡಿಯೋಗಳು ಇಲ್ಲಿ ಲಭ್ಯ YouTube https://youtube.com/c/DrKrishnasCancerHealerCenter
ಮಿತವ್ಯಯಕಾರಿ | ಹಸಿವಿನ ಕೊರತೆ ಉಂಟಾಗದು | ಫಲಿತಾಂಶ ಆಧಾರಿತ ಚಿಕಿತ್ಸೆ | ನೋವುರಹಿತ ಚಿಕಿತ್ಸೆ
ಅಡ್ಡಪರಿಣಾಮಗಳಿಲ್ಲ | ಸಂಶೋಧನೆ ಆಧಾರಿತ ಚಿಕಿತ್ಸೆ | ಅತ್ಯಂತ ಅನುಭವಿ ಸಿಬ್ಬಂದಿ | ಗರಿಷ್ಠ ಯಶಸ್ವಿ ಸಂಖ್ಯೆ
ಕೀಮೊಥೆರಪಿ & ರೇಡಿಯೋಥೆರಪಿ ಜೊತೆಗೂ ಪರಿಣಾಮಕಾರಿ | ನಿರೋಧಕ ವ್ಯವಸ್ಥೆಗೆ ಪ್ರತಿಕೂಲವಲ್ಲ | ಚಿಕಿತ್ಸೆಯ ಬಳಿಕ ಅತ್ಯಲ್ಪ ಮರುಕಳಿಕೆ ಸಾಧ್ಯತೆ | ಕೂದಲು ಉದುರುವುದಿಲ್ಲ & ತೂಕ ಕಡಿಮೆಯಾಗಲ್ಲ
ಕ್ಯಾನ್ಸರ್‌ನ ಕೊನೆಯ ಹಂತದಲ್ಲೂ ಪರಿಣಾಮಕಾರಿ ಪರಿಹಾರ | ದಾಖಲೆ ಪ್ರಮಾಣದ ಯಶಸ್ವಿ ಚಿಕಿತ್ಸೆಗಳು | ದೀರ್ಘಕಾಲೀನ ಪರಿಣಾಮಗಳು | ಕೇವಲ ಕ್ಯಾನ್ಸರ್ ಕೋಶಗಳು ಮಾತ್ರ ಗುರಿ
NEW DELHI, MUMBAI, INDORE, CHANDIGARH, AHMEDABAD, PATNA, RAIPUR, CHENNAI, BANGLORE, HYDERABAD, KOLKATA AND DUBAI

ಎಫ್‌ಐಆರ್ ರದ್ದು ಮಾಡಲು ನಾಗರಿಕರ ಆಗ್ರಹ

ಬೆಂಗಳೂರು: ಸ್ಯಾಂಕಿ ಮೇಲ್ಸೇತುವೆ ಹಾಗೂ ರಸ್ತೆ ವಿಸ್ತರಣೆ ಯೋಜನೆ ಸ್ಥಗಿತಗೊಳಿಸುವಂತೆ ಒತ್ತಾಯಿಸಿ 'ನಾಗರಿಕರ ಒಗ್ಗಟ್ಟು ನಡಿಗೆ' ಮೂಲಕ ಪ್ರತಿಭಟನೆ ನಡೆಸಿದ್ದವರ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ಅನ್ನು ವಾಪಸ್ ಪಡೆಯುವಂತೆ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಅವರಿಗೆ ನಾಗರಿಕರು ಮನವಿ ಮಾಡಿದ್ದಾರೆ

ಯಾವುದೇ ಅನುಮತಿ ಇಲ್ಲದೇ ಕಪ್ಪು ಬಟ್ಟೆ ಧರಿಸಿಕೊಂಡು ಪ್ರತಿಭಟನೆ ನಡೆಸಿದ್ದರು ಎಂದು ಹೇಳಿ ಸದಾಶಿವನಗರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು.

'ಮೌನವಾಗಿ ನಡಿಗೆ ಮಾಡಲಾಗಿತ್ತು. ಯಾರಿಗೂ ತೊಂದರೆ ನೀಡಿಲ್ಲ. ಎಫ್‌ಐಆರ್ ದಾಖಲಿಸಿರುವುದು ಅನ್ಯಾಯ. ಅದನ್ನು ರದ್ದುಪಡಿಸಿ' ಎಂದು ಮನವಿಯಲ್ಲಿ ನಾಗರಿಕರು ಕೋರಿದ್ದಾರೆ.

ಟ್ರಂಪ್‌ಗೆ ₹ 1 ಕೋಟಿ ಪಾವತಿಸಲು ನಟಿಗೆ ಕೋರ್ಟ್ ಆದೇಶ

ಲಾಸ್ ಏಂಜಲಿಸ್ (ಎಪಿ): ಮಾನಹಾನಿ ಮೊಕದ್ದಮೆಯಲ್ಲಿ ಪರಾಭವಗೊಂಡಿರುವ ನೀಲಿಚಿತ್ರ ತಾರೆ ಸ್ಟಾರ್ಮಿ ಡೇನಿಯಲ್ಸ್ ಅವರು ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಕಾನೂನು ಶುಲ್ಕ ವೆಚ್ಚ ಸುಮಾರು ₹ 1 ಕೋಟಿ ಪಾವತಿಸುವಂತೆ ಇಲ್ಲಿನ ಮೇಲ್ಮನವಿ ನ್ಯಾಯಾಲಯ ಮಂಗಳವಾರ ತೀರ್ಪು ನೀಡಿದೆ.

2ಬಿ ಮೀಸಲಾತಿ: ಯಥಾಸ್ಥಿತಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಸ್ಲಿಂ ಸಮುದಾಯಕ್ಕಿದ್ದ 2ಬಿ ಮೀಸಲಾತಿಯನ್ನು ಮೊದಲಿನಂತೆಯೇ ಯಥಾಸ್ಥಿತಿ ಕಾಪಾಡಬೇಕು ಎಂದು ಸ್ಟೂಡೆಂಟ್ ಇಸ್ಲಾಮಿಕ್ ಆರ್ಗನೈಸೇಷನ್ ಆಗ್ರಹಿಸಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷ ಜೀಶಾನ್, 'ಮುಸ್ಲಿಂ ಸಮುದಾಯವು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿದೆ. ಆದರೆ, ಸರ್ಕಾರವು ಯಾವುದೇ ಆಯೋಗ ಮತ್ತು ಸಮಿತಿಯ ಶಿಫಾರಸು ಇಲ್ಲದೆಯೇ ಮುಸ್ಲಿಮರಿಗಿದ್ದ ಮೀಸಲಾತಿಯನ್ನು ಕಿತ್ತುಕೊಂಡಿರುವುದು ಖಂಡನೀಯ' ಎಂದು ಹೇಳಿದರು.

'ತಮ್ಮ ರಾಜಕೀಯ ಸ್ವಾರ್ಥಕ್ಕೋಸ್ಕರ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯದ ಶೈಕ್ಷಣಿಕ ಮತ್ತು ಉದ್ಯೋಗದ ಸವಲತ್ತುಗಳಿಗೆ ಮೀಸಲಿರಿಸಿದ ಶೇಕಡ 4ರ ಪ್ರವರ್ಗ '2ಬಿ' ಮೀಸಲಾತಿಯನ್ನು ರಾಜ್ಯ ಬಿಜೆಪಿ ಸರ್ಕಾರ ರದ್ದುಗೊಳಿಸಿ ಇತರ ಸಮುದಾಯಕ್ಕೆ ನೀಡಿದ ಕ್ರಮ ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾಗಿದೆ' ಎಂದು ತಿಳಿಸಿದರು.

'ಅಲ್ಪಸಂಖ್ಯಾತ ಮುಸ್ಲಿಮರನ್ನು 2ಬಿ ಮೀಸಲಾತಿಯಿಂದ ಕೈಬಿಡುವ ನಿರ್ಧಾರವನ್ನು ಕೂಡಲೇ ಹಿಂತೆಗೆದುಕೊಳ್ಳಬೇಕು. ಸಂವಿಧಾನ ಬದ್ಧವಾಗಿರುವ ಮುಸ್ಲಿಂ ಸಮುದಾಯದ 2ಬಿ ಮೀಸಲಾತಿಯನ್ನು ರಾಜ್ಯ ಸರ್ಕಾರ ರದ್ದುಗೊಳಿಸಿರುವುದು ಮತೀಯ ತಾರತಮ್ಯ ಮತ್ತು ಸಮುದಾಯವನ್ನು ಶೈಕ್ಷಣಿಕ ಹಕ್ಕುಗಳಿಂದ ವಂಚಿಸುವ ಪ್ರಯತ್ನವಾಗಿದೆ. ಮುಸ್ಲಿಮರ ಹಕ್ಕನ್ನು ಕಸಿದು ಒಕ್ಕಲಿಗ ಮತ್ತು ಲಿಂಗಾಯಿತ ಸಮುದಾಯಗಳಿಗೆ ಹಂಚಿರುವುದು ಅನ್ಯಾಯದ ಪರಮಾವಧಿಯಾಗಿದೆ' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

'ಸ್ವಾತಿ ಮುತ್ತಿನ ಮಳೆ ಹನಿಯೇ' ಚಿತ್ರೀಕರಣಕ್ಕೆ ಕೋರ್ಟ್ ಅನುಮತಿ

ಬೆಂಗಳೂರು: 'ಬಣ್ಣದ ಗೆಜ್ಜೆ' ಸಿನಿಮಾದ ಹಾಡಿನ ಸಾಲುಗಳನ್ನು ನನ್ನ ಅನುಮತಿ ಇಲ್ಲದೆ ಬಳಸಿ ನಟಿ ರಮ್ಯಾ ಅವರು ಸಿನಿಮಾ ಮಾಡಲು ಮುಂದಾಗಿದ್ದಾರೆ' ಎಂಬ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ಅವರ ಆಕ್ಷೇಪಣೆಗಳನ್ನು ಸಿಟಿ ಸಿವಿಲ್ ಕೋರ್ಟ್ ತಳ್ಳಿ ಹಾಕಿದೆ.

'ಹಾಡಿನ ಸಾಲುಗಳನ್ನು ಸಿನಿಮಾ ಟೈಟಲ್ ಆಗಿ ಬಳಸಿದರೆ ಅದು ಕಾಪಿರೈಟ್ ಆಗುವುದಿಲ್ಲ. ಈ ಟೈಟಲ್ ಅನ್ನು ರಮ್ಯಾ ಬೇರೆಯವರಿಂದ ಪಡೆದುಕೊಂಡಿದ್ದಾರೆ. ಆದ್ದರಿಂದ, 'ಸ್ವಾತಿ ಮುತ್ತಿನ ಮಳೆ ಹನಿಯೇ' ಸಿನಿಮಾದ ಚಿತ್ರೀಕರಣ ನಡೆಸಬಹುದು ಹಾಗೂ ಬಿಡುಗಡೆಯನ್ನೂ ಮಾಡಬಹುದು' ಎಂದು ಆದೇಶಿಸಿದೆ.

'ನನ್ನ ಅನುಮತಿ ಇಲ್ಲದೆ ಬಣ್ಣದ ಗೆಜ್ಜೆ ಸಿನಿಮಾದ ಹಾಡುಗಳನ್ನು ಬಳಸಿ ಸಿನಿಮಾ ನಿರ್ಮಾಣ ಮಾಡುವುದು ಕಾಪಿರೈಟ್ ಉಲ್ಲಂಘನೆ' ಎಂದು ರಾಜೇಂದ್ರ ಸಿಂಗ್ ಬಾಬು ಫಿಲ್ಮ್ ಚೇಂಬರ್‌ಗೂ ದೂರು ನೀಡಿದ್ದರು. ನಂತರ ಕೋರ್ಟ್ ಮೆಟ್ಟಿಲೇರಿದ್ದರು. ಕೋರ್ಟ್ ತಾತ್ಕಾಲಿಕ ತಡೆಯಾಜ್ಞೆ ನೀಡಿತ್ತು. ಇದೀಗ ಕೋರ್ಟ್ ತಡೆ ಆದೇಶವನ್ನು ಬುಧವಾರ ತೆರವುಗೊಳಿಸಿದೆ.

ನಟಿ ರಮ್ಯಾ ನಿರ್ಮಾಪಕರಾಗಿ, ರಾಜ್ ಬಿ.ಶೆಟ್ಟಿ ನಟನೆಯ 'ಸ್ವಾತಿ ಮುತ್ತಿನ ಮಳೆ ಹನಿಯೇ' ಚಿತ್ರ ತೆರೆಗೆ ಬರಲು ಸಿದ್ಧವಾಗಿತ್ತು.

ಏತನ್ಮಧ್ಯೆ, ನಿರ್ದೇಶಕ ರಾಜೇಂದ್ರ ಸಿಂಗ್, ಈ ಟೈಟಲ್ ನನ್ನ 'ಬಣ್ಣದ ಗೆಜ್ಜೆ' ಸಿನಿಮಾದ ಹಾಡಿನ ಸಾಲುಗಳಾಗಿವೆ. ಅವುಗಳನ್ನು ನನ್ನ ಅನುಮತಿ ಇಲ್ಲದೆ ಬಳಸುವಂತಿಲ್ಲ' ಎಂದು ಆಕ್ಷೇಪಿಸಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

PUBLIC NOTICE

PUBLIC NOTICE

DRAFT FOR PAPER PUBLICATION. Hg 12/6/2023 CCH-62 61 AddL IN THE COURT OF THE PRINCIPAL CITY CIVIL JUDGE, AT BANGALORE. O.S. No.2501/2022.

BETWEEN:
Sri B.R. VASUDEVA MURTHY, S/o T.R. Ramaiah, aged about 42 years, Residing at No. 34, 3rd Main Road, 1st Stage, 2nd Phase, W.O.T.C. Road, Manjunathanagar, Bangalore-560010. ...Plainiff.

AND:
1.Smt. MOHINI VASANTRAO GUMASTE, W/o Late V.A. Gumaste, Aged about 88 years,
2. Sri. VIVEK VASANTRAO GUM ASTE, Sic) Late V.A. Gumaste, Aged about 63 years,
3. Sri. ANAND VASANTRAO GUMASTE, S/o Late V.A.Gumaste, Aged about 65 years,
1 to 3 are Represented by their GPA Holder
4. DR. S. MALLA REDDY, S/o Raghava Reddy, Aged about 50 years, Represented by its Managing Partner, M/s Sri RAGHAVENDRA Constructions, A registered Partnership firm,
All are residing at, "VIVEKANAND RESIDENCY" Flot No.F-2, 1st Floor, Srinivas Residency, No.3, Sy. No. 71/2, Nagashettyhalli, Sanjayanagar, Bangalore-560094.
ALSO Residing at, Sri. DR. S. MALLA REDDY, S/ o S. Raghava Reddy, Aged about 50 years, R./at Plot No.159, Sri Ram Nagar Colony, Near Chirek Public School, Kondapur, Serllingampally, Rangareddi District, Andhra Prdesh-500084. ... Defendants.

Whereas the plaintiff has filed the O.S.No. 2501/2022 for relief of specific performance suit against the Defendant No. 1 to 4 to be appearing on at 11.00 AM before noon in the City Civil Judge (CCH-62) At Bangalore on 12/6/2023

Take notice that in default of your appearance that, date above mentioned in the O.S. No. 2501/2022 will be heard and determined in your absence.

SCHEDULE "A" PROPERTY

All the piece and parcel of the vacant immovable residential property bearing No. 44, formed in converted Survey Nos 68/1, 3, 69/1, 2, 3 864 of Nagashetty Halli Village, Kasaba Hobli, Bangalore North Taluk and the said Layout formed by "The Amarajyothi House Building Co-operative Society Limited" Bangalore, now assigned as New Municipal No.44, PID No. 100-87-44, situated at Amarajyothi Layout, CHBS Nagashetty Halli, Old Ward No.100, New BBMP Ward No. 19, Bangalore, measuring East to West 40 feet and North to South 60 feet, total measuring 2400 sq. feet and bounded on the;-

East by : Property No.43.
West by : Property No.45.
North by : 30 feet Road,
South by : Site No.56.

SCHEDULE "B" PROPERTY

An undivided share of 300 square feet in the land comprised in the Schedule A property.

SCHEDULE "C" PROPERTY

Residing Flat No. F-1, on the First floor, in the residential apartment building known as "VIVEKANAND RESIDENCY constructed on the Schedule A property and consisting of Two bedrooms, one hall, kitchen, utility, two toilets, dining cum-hall, with ceramic flooring, teak and sal wood doors and windows, having 1100 square feet of super built area and one covered car parking slot in the stilt floor, together with proportionate share in common areas, passages, lobbies, staircases and other areas of common use.

Given under my name and seal of the Court this day on 25th March 2023

Sd/-By order of the Court
Assistant Registrar, City Civil Court at Bangalore-560009.

S. KUMAR, B.A,LLB, Advocate, No. 91, Ground Floor, Temple Road, Next to Asha Sweets, Between 8th & 10th Cross, Malleshwaram, Bangalore- 560003.
Place: Banglalore
Date: 6.4.2023

SADASHIVANAGAR CLUB
#21,15th Cross, Sadashivanagar, Bangalore- 560080.
Mob: 9148975091

TENDER NOTIFICATION

FOR RUNNING VEG & NON VEG MULTI CUISINE CANTEEN & CHAATS

Sealed quotations are invited from experienced catering contractors for running the Club Canteen. Interested contractors may apply within 7 days with details of Menu, Rates & Quantity.

Sd/-
Hon.Secretary

Date : **06.04.2023**.

ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿ ಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ, ಮದುವೆ ಯೋಗ, ಪ್ರೇಮ-ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮೀ ಯೋಗ ಮತ್ತು ಮಕ್ಕಳ ವಿದ್ಯಾಬ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು. ಸೂಚನೆ: ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ಗುರುದಾಸನ್(ಕೇರಳ)
ಹೋಟೆಲ್ ಸಭಾರ್‌ವಾಲ್ ವೈಸ್‌ರಾಯ್, ರೂಂ.ನಂ. 102, ನಂ. 30, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿರ್ನವ ವೃತ್ತ, (ನಂದಿನಿ ಹೋಟೆಲ್ ಎದುರು), ಬೆಂಗಳೂರು-04
ಮನೆ ವಿಳಾಸ: ಮನೆ ನಂ. 2544, ನಂದಗೋಕುಲ ನಿಲಯ, ಅಂಬರ್ ಲಾಜಿಸ್ಟಿಕ್ ಹತ್ತಿರ, ಕೆಳಮಹಡಿ, 13ನೇ ಮುಖ್ಯ ರಸ್ತೆ, 'ಇ' ಬ್ಲಾಕ್ (ಮೋರ್ ಸೂಪರ್ ಮಾರ್ಕೆಟ್ ಹಿಂಭಾಗ), ಕೊಡಿಗೇಹಳ್ಳಿ ಗೇಟ್, ಸಹಕಾರ ನಗರ, ಬೆಂಗಳೂರು-560092
Mob.: 98441 06430 / 81579 14600
ಭೇಟಿಯ ವೇಳೆ: ಬೆಳಿಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ
ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

Grand Flea Market Presents
ದ ಸೋಕ್ (ಮಾರ್ಕೆಟ್)
THE SOUQ (MARKET)
Art, Craft, Handlooms & Lifestyle Exhibition
Date : 31st March 2023 to 9th April 2023
Timings : 11:00 AM to 7:00 PM
10 DAYS EXHIBITION
Art & Crafts | Handicrafts | Clothings | Fashion Accessories | Home Decore & More
Entry Free! ದಿ ಶಾಡೋ ಶೋ The Shadow Show Live Performance
Date: 8th April 2023
Timings: 5.30 PM - 6.30 PM
Venue Karnataka Chitrakala Parishath Kumara Krupa Road, Near Shivananda Circle Bengaluru
Entry Free ಚೆಂಡಮೇಲಂ ChendaMelam Rhythm of Drums
Date:9th April 2023 | Timings: 5 PM to 7 PM
Karnataka Chitrakala Parishath Kumara Krupa Road, Bengaluru
Organized By Grand Flea Market
For Details Contact 9036658774 / 6364685716
Karnataka Chitrakala Parishath Kumara Krupa Road, Bengaluru
10 DAYS EXHIBITION | 100+ STALLS | LIVE PERFORMANCE | FREE ENTRY

ನ್ಯಾಷನಲ್ ಸಿಲ್ಕ್ ಎಕ್ಸ್‌ಪೋ
ಪ್ರದರ್ಶನ ಮತ್ತು ಮಾರಾಟ
ಕೊನೆಯ 4 ದಿನಗಳು
ವಿವಾಹ ಮತ್ತು ಬೇಸಿಗೆ ವಿಶೇಷ
ಕೈಮಗ್ಗದ ಸಿಲ್ಕ್ ಮತ್ತು ಕಾಟನ್ ಸೀರೆ, ಡಿಸೈನರ್, ಎಥ್ನಿಕ್ ಮತ್ತು ವೆಸ್ಟರ್ನ್ ಉಡುಪು, ಫ್ಯಾಷನ್ ಜ್ಯುವೆಲ್ಲರಿ ಮತ್ತು ಇನ್ನೂ ಅನೇಕ
ಭಾಗವಹಿಸುವ ರಾಜ್ಯಗಳು
ಬಿಹಾರ್, ಅಸ್ಸಾಮ್, ಉತ್ತರ ಪ್ರದೇಶ, ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ರಾಜಸ್ಥಾನ, ಕರ್ನಾಟಕ, ತಮಿಳನಾಡು , ಪಂಜಾಬ್, ತೆಲಂಗಾಣ, ಒಡಿಶಾ , ಚತ್ತೀಸ್‌ಘಡ್, ಜಮ್ಮು&ಕಾಶ್ಮೀರ, ಆಂಧ್ರಪ್ರದೇಶ ಮತ್ತು ಇನ್ನಿತರ ರಾಜ್ಯಗಳು
ಸ್ಥಳ: ಶಿಲ್ಪಕಲಾ ಮಂಟಪ
9ನೇ ಕ್ರಾಸ್, ಜೆಪಿ ನಗರ, 3ನೇ ಫೇಸ್, ಬನ್ನೇರಘಟ್ಟ ಮುಖ್ಯ ರಸ್ತೆ, ಶಾಪರ್ಸ್ ಸ್ಟಾಪ್ ಎದುರು, ಜಯದೇವ ಆಸ್ಪತ್ರೆಯ ಸಮೀಪ, ಬೆಂಗಳೂರು
CONTACT - 9412258826 | ALL DEBIT & CREDIT CARDS ACCEPTED | ENTRY FREE

JOB OPPORTUNITIES

General

RETIRED/ VRS Persons and Age above 45 Years Earn 2nd Income 50K to 60K PM in their life here no Retirement: 9886641282/ 7019215243

Multiple Vacancy

WANTED BILLING STAFF (Female) with Computer knowledge. SALES PERSON (Male) for REPUTED PLANT NURSERY, YELAHANKA, BANGALORE. 9845202274/ 9620498866

PERSONAL

Change of Name

I, ROOPASHREE RAMAKRISHNA D/o.Ramakrishna R/a#145, DSR`Elite, Mahadevapura Main Road, Mahadevapura Bangalore- 560048 Have`Changed My Name From ROOPASHREE RAMAKRISHNA YASHWANTH KUMAR to ROOPASHREE RAMAKRISHNA Vide`Affidavit Dated 05.04.2023 before notary J.Anand Kumar Bangalore

I BIPIN RAJASHEKHAR YADALAGATTE S/O RAJASHEKHAR YADALAGATTE R/O of No 1329 HMT Layout Nagasandra post Bangalore shall henceforth be known as BIPIN RAJASHEKHAR affidavit no IN-KA20076149251342V sworn before notary Anuradha D Dated 21st march 2023.

CHANGE OF NAME
I **EDWARD DEVANAND** Residing at #10-19/3, E#001, Anjanappa Building, 3rd Main, 8th Cross, Venkatarpura, Koramangala, 1st Block, Bangalore- 560034, have changed my name to **EDWARD D. PERUMALLA,** vide affidavit dated 01.04.2023, before notary M.B. Sunkad, Hubli. Henceforth I shall be called **EDWARD D. PERUMALLA** only.

I, TALIB KHAN CHAND KHAN, R/a. No. 4, Memorial Street, Thimmaiah Road Cross, Opp. Memorial Park, Bharathinagar, Bengaluru-560001, have changed my name to TALIB KHAN vide affidavit dated 03.04.2023 before notary Bhagya Kumar N, Bangalore. Henceforth I shall be called TALIB KHAN only.

ಉದ್ಯೋಗಕ್ಕೆ
ನಿಮ್ಮ ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ:
9886213331

CHANGE OF NAME
I, **SALONY VIVEK NAYAK** daughter of Mr. Vivek Nayak & resident of H No: 5, Ganesh Colony, Kalyana Nagar, Vidyanagar, Hubballi-Dharwad City, Pin:580031 have changed my name to **SALONI NAYAK** vide an affidavit sworn before a notary at Hubballi on 04-April-2023. Henceforth I shall be known as **SALONI NAYAK** for all purposes.

CHANGE OF NAME
I, **Kiran kumar mallagadhhe thammanna** S/o. **Mallagadhhe Basappa Thammanna** R/at. Bommanakere, VTC: Byakaravalli, PO: Byakaravalli, Sakaleshpura Taluk, Hassan, Karnataka. Have changed my name to **KIRRON KUMMAR MALLAGADHHE** affidavit dated 05/01/2023 before Reena Chauhan, Asst. Consular officer, Embassy of India, Muscat.

I, SIDDAPPA S/O MADIVALAPPA R/a Kissan Residency, #15/1,Near Sulappa Layout, Silicon City, Electronic City, Bengaluru-560100, have changed name to SIDDAPPA GUDYAL S/O MADIVALAPPA GUDYAL vide`affidavit 05.04.2023 before`Notary Hemalatha, Bangalore

CHANGE OF NAME
I, **ROSHAN JABEENA ABDUL RASHEED SHAIK,** residing at 117, KRK Enclave, Magadi Road, Tavarekere, Ramanagar, Bangalore - 562130, have changed my name to **ROSHAN JABEEN** vide affidavit dated 5.04.2023 before Notary L.Gopalakrishna Bangalore.

I, SUVEER SADANANDA MURTHY residing No.39, Gowrushama Smruthi 3rd Main Road 50 Feet Road, NGEF Layout, Sanjay Nagar, Bengaluru-560094 have changed my name to SUVEER SADANAND vide affidavit dated 27/03/2023 sworn before notary N.Peruvazhuthi, Bangalore

I, ARCHANA Menon, aged 29years, D/o Madan Gopalan I.R, R/at No.1803 'Amrita Varshini C Block, 21st Cross, 5th Main, Near Krishna Milk Dairy, Sahakaranagar Bangaluru 560092 have changed my name to GOTRA MENON vide affidavit dated 29/3/2023 sworn before K.P Ramesh advocate and notary Bangalore.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. ಹೆಚ್-ಜಿಎಸ್-ಯುಬಿಎಲ್-07-2022-23
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಗಳಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ : ಅಮೃತ್ ಭಾರತ್ ನಿಲ್ದಾಣ ಯೋಜನೆ (ಹಂತ-1) ಅಡಿಯಲ್ಲಿ ವಿದ್ಯುತ್ ಕಾಮಗಾರಿಗಳನ್ನು ಒಳಗೊಂಡಂತೆ ಘಟಪ್ರಭಾ, ಗೋಕಾಕ್ ರಸ್ತೆ, ಬೆಳಗಾವಿ, ಅಳ್ನಾವರ ಮತ್ತು ಸಾನ್ವೋರ್‌ದೆಮ್ ರೈಲ್ವೆ ನಿಲ್ದಾಣಗಳ (05 ಸಂಖ್ಯೆಗಳು) ಆಧುನೀಕರಣ (ಸಮಗ್ರ ಕಾಮಗಾರಿ)	ರೂ. 30,31,72,468/-
2	ಹುಬ್ಬಳ್ಳಿ ವಿಭಾಗ : ಬಳ್ಳಾರಿ - ಹದ್ದಿನಗೂಡು ನಿಲ್ದಾಣಗಳ ನಡುವೆ ರೈಲ್ವೆ ಕಿ.ಮೀ. 208/800-900 ನಲ್ಲಿ ಆರ್‌ಹೆಚ್ ಗರ್ಡರ್ ಬಳಸಿ ಬಾಕ್ಸ್ ರೋಲಿಂಗ್ ವಿಧಾನದಿಂದ ಪ್ರಿಕಾಸ್ಟ್ ಆರ್‌ಸಿಸಿ ಸೆಗ್ಮೆಂಟಲ್ ಬಾಕ್ಸ್‌ನೊಂದಿಗೆ 1x8.5x5.10 ಮೀ ಗಾತ್ರದ ರೈಲ್ ಕೆಳಸೇತುವೆಯ ನಿರ್ಮಾಣ.	ರೂ. 5,46,59,359/-
3	ಹುಬ್ಬಳ್ಳಿ ವಿಭಾಗ : ಬಳ್ಳಾರಿ ದಂಡು ಹಾಲ್ಟ್ ಮತ್ತು ಹಗರಿಬೊಮ್ಮನಹಳ್ಳಿ ನಿಲ್ದಾಣದಲ್ಲಿ ಸಾಫ್ಟ್ ಉನ್ನತೀಕರಣ / ಸುಧಾರಣಾ ಕಾಮಗಾರಿಗಳು.	ರೂ. 2,10,37,155/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 24-04-2023 ರಂದು 11:00 ಗಂಟೆಯವರೆಗೆ.
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಮುಖ್ಯ ಯೋಜನಾ ವ್ಯವಸ್ಥಾಪಕರು / ಗತಿ ಶಕ್ತಿ ಹುಬ್ಬಳ್ಳಿ
ಪಿಯುಬಿ/05/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023-24
S.W.Railways SWRRLY SWRRLY

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/163/2023 ದಿನಾಂಕ : 23-03-2023ಗೆ ತಿದ್ದುಪಡಿ
ಮೇಲೆ ತಿಳಿಸಿದ ಟೆಂಡರ್ ಪ್ರಕಟಣೆಯಲ್ಲಿ ಪರಿಷ್ಕರಿಸಿದ ಕೆಲಸದ ಹೆಸರು ಮತ್ತು ಕಾಮಗಾರಿಯ ಮೊತ್ತ ಕೆಳಕಂಡಂತಿವೆ :

ಗದಗ - ವಾಡಿ ಹೊಸ ಬಿಜಿ ಮಾರ್ಗ : ಕಿ.ಮೀ.216.661 ನಲ್ಲಿ 2x30.5 ಮೀ ಓಪನ್ ವೆಬ್ ಸ್ಟೀಲ್ ಗರ್ಡರ್ (ಓಡಬ್ಲ್ಯುಎಸ್‌ಜಿ) ಆಗಿ ಸೇತುವೆ ಸಂ. 299, ಕಿ.ಮೀ.219.858 ನಲ್ಲಿ 1x30.5 ಓಪನ್ ವೆಬ್ ಸ್ಟೀಲ್ ಗರ್ಡರ್ (ಓಡಬ್ಲ್ಯುಎಸ್‌ಜಿ) ಆಗಿ ಸೇತುವೆ ಸಂ. 307, ಕಿ.ಮೀ.227.139 ನಲ್ಲಿ (2x30.5 ಮೀ ಕಾಂಪೊಸಿಟ್ ಗರ್ಡರ್ + 1x18.3 ಮೀ ಕಾಂಪೊಸಿಟ್ ಗರ್ಡರ್) ಆಗಿ ಸೇತುವೆ ಸಂ. 317 ಬೃಹತ್ ಸೇತುವೆಗಳ ಉದ್ದೇಶಿತ ನಿರ್ಮಾಣ (**ಟೆಂಡರ್ ಉಲ್ಲೇಖ ಸಂ.: ಜಿಡಿಜಿ-ಡಬ್ಲ್ಯುಡಿ-43**).

ಹೆಸರು	ಹಾಲಿ ಇರುವ ಮೊತ್ತ	ಮಾರ್ಪಡಿಸಿದ ಮೊತ್ತ
ಪೂರ್ಣಗೊಳಿಸುವ ಅವಧಿ	9	12
ಜಾಹೀರಾತುಗೊಳಿಸಿದ ಮೊತ್ತ (ರೂ.)	306233268/-	310049849/-

ಗದಗ - ವಾಡಿ ಹೊಸ ಬಿಜಿ ಮಾರ್ಗ : ಸಿರ್ವಾಲ್ ಮತ್ತು ಬಿರಿಯಲ್ ಬುಜುರ್ಗ್ ನಡುವೆ ಕಿ.ಮೀ. 223.201 ನಲ್ಲಿ 7x30.5 ಮೀ ಓಪನ್ ವೆಬ್ ಸ್ಟೀಲ್ ಗರ್ಡರ್ (ಓಡಬ್ಲ್ಯುಎಸ್‌ಜಿ) ಆಗಿ ಸೇತುವೆ ಸಂ. 324 ಬೃಹತ್ ಸೇತುವೆಯ ಉದ್ದೇಶಿತ ನಿರ್ಮಾಣ (**ಟೆಂಡರ್ ಉಲ್ಲೇಖ ಸಂ.: ಜಿಡಿಜಿ-ಡಬ್ಲ್ಯುಡಿ-42**).

ಹೆಸರು	ಹಾಲಿ ಇರುವ ಮೊತ್ತ	ಮಾರ್ಪಡಿಸಿದ ಮೊತ್ತ
ಪೂರ್ಣಗೊಳಿಸುವ ಅವಧಿ	9	12
ಜಾಹೀರಾತುಗೊಳಿಸಿದ ಮೊತ್ತ (ರೂ.)	370737732/-	375703637/-

ಹೆಚ್ಚಿನ ವಿವರಗಳಿಗೆ www.ireps.gov.in ಗೆ ಲಾಗ್‌ಆನ್ ಮಾಡಿ.
ಮುಖ್ಯ ಸಾಮಗ್ರಿ ವ್ಯವಸ್ಥಾಪಕರು / ನಿರ್ಮಾಣ, ಬೆಂಗಳೂರು ದಂಡು
ಪಿಯುಬಿ/03/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023-24
S.W.Railways southwesternrailway_swr SWRRLY southwesternrailway SWRRLY

NOTICE

It is notified that the New Era Dealcom Pvt Ltd. of 4/1 Middleton Street, Kolkata 700071, intends to Mortgage ALL THAT THE piece and parcel of land with structure at Commercial and ITBT Office having an area of 1513.81 Square meter built-up area (land with structure) situated in Survey No. 57, Kasavanahalli Village, Varthur Hobli, Bangalore South Taluk, Bangalore District, V.P. Khata No. 713/713/1 of Doddakannelli Village Panchayath, presently BBMP Khata No. 751/713/1, Kasavanahalli, Bellandur Ward No. 150, Marathahalli Range, Bangalore. The land has been purchased from Ameeta Janak Patel, Shaunak Janak Patel and Priyanka Janak Patel (all legal heirs of Janak R Patel (since deceased)). Any person/s or body having any claim / interest / objection on the said property is/are advised to inform the undersigned, of the same in writing along with documents in support such claim or objection within 15 days from the date of publication of this notice failing which no claim / objection will be entertained and the present owner will be free to Mortgage the above property in the manner aforesaid at the absolute exclusion of any claim, demand and right of others.

Anna Malhotra (Advocate)
58/12 Prince Anwar Shah Road
Kolkata-700045

JAWAHAR NAVODAYA VIDYALAYA

BAGALUR – 562149 [Near : Yelahanka] BANGALORE URBAN DISTRICT- KARNATAKA, PH-080-29900456
Ministry of Education (Dept of School Education & Literacy, Government of India)

ಟೆಂಡರು ಪ್ರಕಟಣೆ

ನಮ್ಮ ವಿದ್ಯಾಲಯಕ್ಕೆ 2023-24 ನೇ ಸಾಲಿಗಾಗಿ ಈ ಕೆಳಕಂಡ ಕೆಲಸ / ಸಾಮಾನುಗಳ ಸರಬರಾಜಿಗಾಗಿ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

(I) ಅಕ್ಕಿ (ii) ದಿನಸಿ ವಸ್ತುಗಳು (iii) ಮೊಟ್ಟೆ ಮತ್ತು ಕೋಳಿ (iv) ತರಕಾರಿ ಮತ್ತು ಹಣ್ಣುಗಳು (v) ಬೇಕರಿ ವಸ್ತುಗಳು (vi) ನೈರ್ಮಲ್ಯ ವಸ್ತುಗಳು (ಶೌಚಾಲಯ) (vii) ರೆಡಿಮೇಡ್ ಯೂನಿಫಾರ್ಮ್ (viii) ಟಿ-ಶರ್ಟ್, ಟ್ರಾಕ್‌ಸೂಟ್, ಸ್ವೆಟರ್ (ix) ಪಾದರಕ್ಷೆಗಳ ವಸ್ತುಗಳು (ಶೂಗಳು, ಚಪ್ಪಲ್, ಸಾಕ್ಸ್) ಮತ್ತು ಶಾಲಾ ಚೀಲಗಳು (x) ಹಾಸಿಗೆ ವಸ್ತುಗಳು (xi) ಸಮವಸ್ತ್ರಗಳನ್ನು ಒಗೆಯುವುದು ಮತ್ತು ಇಸ್ತ್ರಿ ಮಾಡುವುದು.

ಇದಕ್ಕೆ ಸಂಬಂಧಿಸಿದ ಟೆಂಡರು ಫಾರಂಗಳನ್ನು ದಿನಾಂಕ 08.04.2023 ರಿಂದ 19.04.2023 ರವರೆಗೆ ಜವಾಹರ್ ನವೋದಯ ವಿದ್ಯಾಲಯ, ಬಾಗಲೂರು, ಕಛೇರಿಯ ಎಲ್ಲಾ ಕೆಲಸದ ದಿನಗಳಲ್ಲಿ ಬೆಳಿಗ್ಗೆ 9.00 ಘಂಟೆಯಿಂದ ಸಾಯಂಕಾಲ 4.00 ಗಂಟೆಯವರೆಗೆ ವಿತರಿಸಲಾಗುವುದು. ಸದರಿ ಫಾರಂಗಳ ಬೆಲೆ ರೂಪಾಯಿ 200/- ರೂ. ಆಗಿದ್ದು ಇದನ್ನು ವಿದ್ಯಾಲಯಕ್ಕೆ ಪಾವತಿಸುವುದರ ಮೂಲಕ ಪಡೆಯಬಹುದು. ಈ ಹಣವನ್ನು ವಿದ್ಯಾಲಯವು ಮರುಪಾವತಿಸುವುದಿಲ್ಲ. ವಿದ್ಯಾಲಯದ ವೆಬ್‌ಸೈಟ್ https://www.navodaya.gov.in/nvs/nvs-school/BANGALOREURBAN/en/home/ ಅಥವಾ ಸಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಫಾರಂಗಳನ್ನು ತೆಗೆದುಕೊಳ್ಳಬಹುದು.

ಭರ್ತಿ ಮಾಡಿದ ಟೆಂಡರ್ ಲಕೋಟೆಗಳನ್ನು ದಿನಾಂಕ 19.04.2023 ರ ಸಂಜೆ 04.00 ಘಂಟೆಯವರೆಗೆ ಸ್ವೀಕರಿಸಲಾಗುವುದು. ಸೀಲು ಮಾಡಿದ ಲಕೋಟೆಗಳನ್ನು ನಿಗದಿಪಡಿಸಿದ ದಿನಾಂಕದೊಳಗಾಗಿ ಖುದ್ದಾಗಿ ಅಥವಾ ಅಂಚೆ (ತ್ವರಿತ ಅಂಚೆ ಅಥವಾ ರಿಜಿಸ್ಟರ್ ಪೋಸ್ಟ್) ಮೂಲಕ ವಿದ್ಯಾಲಯಕ್ಕೆ ಕಳುಹಿಸತಕ್ಕದ್ದು. ಸೀಲು ಮಾಡಿದ ಲಕೋಟೆಗಳನ್ನು ಪ್ರಾಂಶುಪಾಲರ ಕೊಠಡಿ, ಜವಾಹರ್ ನವೋದಯ ವಿದ್ಯಾಲಯ, ಬಾಗಲೂರು-562 149, ಬೆಂಗಳೂರು ನಗರ ಜಿಲ್ಲೆಯಲ್ಲಿ ದಿನಾಂಕ 20.04.2023 ರಂದು ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವುದು.

ಪ್ರಾಂಶುಪಾಲರು

"ಹಾಡಿರಿ ಮಿಯಾ ಮಲ್ಹಾರ್ ಅಥವಾ ಭೀಮಪಲಾಸಿ, TOREX ಕಾಫ್ ಸಿರಪ್ ಇದ್ದಲ್ಲಿ ಕೆಮ್ಮಿಗೆ ಜಾಗವಿಲ್ಲ"
TOREX®
COUGH SYRUP HAI TO ALVIDA KHANSI
Follow us on: /TorexSyrup /TorexSyrup /TorexSyrup
For more information, please call or WhatsApp us: +91 977 921 4455 / care@torquepharma.com

ವೈಟ್‌ಫೀಲ್ಡ್ ಮೆಟ್ರೊ ರೈಲು ಮಾರ್ಗ • ಕಳಪೆ ಕಾಮಗಾರಿ ಆರೋಪ: ಟ್ವಿಟರ್‌ನಲ್ಲಿ ಭುಗಿಲೆದ್ದ ಜನರ ಆಕ್ರೋಶ

ಮೆಟ್ರೊ ನಿಲ್ದಾಣದಲ್ಲಿ ನೀರು: ತರಾತುರಿ ಕಾರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊದಲ ಮಳೆಯನ್ನು ಎದುರುಗೊಂಡ ವೈಟ್‌ಫೀಲ್ಡ್ ಮೆಟ್ರೊ ರೈಲು ಮಾರ್ಗ ಕಾಮಗಾರಿಯು ಗುಣಮಟ್ಟವನ್ನು ಬಯಲು ಮಾಡಿದೆ. ಮಂಗಳವಾರ ರಾತ್ರಿ ಸುರಿದ ಮಳೆ ಈ ಮಾರ್ಗದ ನಿಲ್ದಾಣಗಳನ್ನು ಆವರಿಸಿದ್ದು, ತರಾತುರಿಯಲ್ಲಿ ಉದ್ಘಾಟನೆ ಮಾಡಿದ್ದೇ ಇದಕ್ಕೆ ಕಾರಣ ಎಂಬ ಆಕ್ರೋಶ ಟ್ವಿಟರ್‌ನಲ್ಲಿ ವ್ಯಕ್ತವಾಗಿದೆ.

10 ದಿನಗಳ ಹಿಂದಷ್ಟೇ ಈ ಮಾರ್ಗ ಸಾರ್ವಜನಿಕ ಸೇವೆಗೆ ಲಭ್ಯವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರೇ ಖುದ್ದು ರೈಲುಗಳ ಕಾರ್ಯಾಚರಣೆಗೆ ಚಾಲನೆ ನೀಡಿದ್ದರು. ಕಾರ್ಮಿಕರೊಂದಿಗೆ ಪ್ರಯಾಣವನ್ನೂ ಮಾಡಿದ್ದರು. ಅಂದಿನಿಂದ ರೈಲುಗಳ ಕಾರ್ಯಾಚರಣೆಯೂ ಆರಂಭವಾಗಿತ್ತು.



ನಲ್ಲೂರಹಳ್ಳಿ ಮೆಟ್ರೊ ರೈಲು ನಿಲ್ದಾಣದಲ್ಲಿ ತುಂಬಿಕೊಂಡಿದ್ದ ನೀರು ಹೊರ ಹಾಕುತ್ತಿರುವ ಸಿಬ್ಬಂದಿ

ಮೊದಲ ಬಾರಿಗೆ ಮಂಗಳವಾರ ರಾತ್ರಿ ಜೋರು ಮಳೆ ಸುರಿದಿದ್ದು, ನಲ್ಲೂರಹಳ್ಳಿ ನಿಲ್ದಾಣದ ಪ್ಲಾಟ್‌ಫಾರಂ ಮತ್ತು ಕಾನ್‌ಕೋರ್ಸ್‌ನಲ್ಲಿ ಟಿಕೆಟ್ ಕೌಂಟರ್ ಆಸುಪಾಸಿನ ಜಾಗದಲ್ಲಿ ನೀರು ತುಂಬಿಕೊಂಡಿತ್ತು. ನೀರು ಹೊರಹಾಕಲು ಸಿಬ್ಬಂದಿ ಪರದಾಡಬೇಕಾಯಿತು. ಗ್ರಾನೈಟ್ ನೆಲ ಹಾಸು ಆಗಿರುವುದರಿಂದ ಸ್ವಲ್ಪ ನೀರು ಬಿದ್ದರೂ ಜಾರುವ ಸಾಧ್ಯತೆ ಇರುತ್ತದೆ. ಬೀಳುವ ಭಯದಲ್ಲಿ ಪ್ರಯಾಣಿಕರು ನೀರಿನಲ್ಲಿ ಸಾಗಬೇಕಾಯಿತು.

ಮುಖ್ಯಾಂಶಗಳು

- 10 ದಿನಗಳ ಹಿಂದಷ್ಟೇ ಆರಂಭವಾಗಿದ್ದ ಸಂಚಾರ
- ಜಾರಿ ಬೀಳುವ ಭಯದಲ್ಲಿ ಪ್ರಯಾಣಿಕರು

ಈ ವಿಡಿಯೊಗಳನ್ನು ವೈಟ್‌ಫೀಲ್ಡ್ ರೈಸಿಂಗ್ ಸಂಘಟನೆ ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದು, 'ಕಾಮಗಾರಿ ಪೂರ್ಣಗೊಳಿಸದೆ ತರಾತುರಿಯಲ್ಲಿ ಮೆಟ್ರೊ ನಿಲ್ದಾಣಗಳನ್ನು ತೆರೆದಿದ್ದರಿಂದ ಈ ಸಮಸ್ಯೆ ಎದುರಾಗಿದೆ' ಎಂದು ಹಲವರು ಟ್ವಿಟರ್‌ನಲ್ಲಿ ಪ್ರತಿಕ್ರಿಯಿಸಿದ್ದಾರೆ.

'ಪಟ್ಟಂದೂರು ಅಗ್ರಹಾರ ನಿಲ್ದಾಣದಲ್ಲೂ ಇದೇ ಸ್ಥಿತಿ ಉಂಟಾಗಿತ್ತು' ಎಂದು ವರುಣ್ ರಾವ್ ಎಂಬುವರು ಟ್ವೀಟ್ ಮಾಡಿದ್ದಾರೆ. 'ಚುನಾವಣೆ ಸಮೀಪಿಸುತ್ತಿದೆ ಎಂಬ ಕಾರಣಕ್ಕೆ ಕಾಮಗಾರಿ ಅಪೂರ್ಣವಾಗಿದ್ದರೂ ಉದ್ಘಾಟನೆ ಮಾಡಿದರೆ ಏನಾಗುತ್ತದೆ ಎಂಬುದಕ್ಕೆ ಇದು ಉದಾಹರಣೆ' ಎಂದು ಆಮ್ ಆದ್ಮಿ ಪಕ್ಷದ ಅಶೋಕ್ ಮೃತ್ಯುಂಜಯ ಅಭಿಪ್ರಾಯಪಟ್ಟಿದ್ದಾರೆ.

'ಈ ರೀತಿಯ ಕಳಪೆ ಕಾಮಗಾರಿ ನಿರ್ವಹಿಸಿದರೂ ಜನ ತೆರಿಗೆ ಪಾವತಿಯನ್ನು ಸಮರ್ಪಕವಾಗಿ ಮಾಡಬೇಕು. ಆಡಂಬರದ ಉದ್ಘಾಟನೆಗಿಂತ ಗುಣಮಟ್ಟಕ್ಕೆ ಒತ್ತು ನೀಡಬೇಕಿತ್ತು' ಎಂದು ಅಭಿನವ್ ಎನ್ನುವವರು ಟೀಕಿಸಿದ್ದಾರೆ.

'40 ಪರ್ಸೆಂಟ್ ಕಮಿಷನ್‌ಗೆ ಸಾಕ್ಷಿ'

ಮೆಟ್ರೊ ರೈಲು ನಿಲ್ದಾಣಕ್ಕೆ ನೀರು ನುಗ್ಗಿರುವುದು ಶೇ 40ರಷ್ಟು ಕಮಿಷನ್‌ಗೆ ಸಾಕ್ಷಿ ಎಂದು ಕಾಂಗ್ರೆಸ್ ವ್ಯಂಗ್ಯವಾಡಿದೆ.

'ಪ್ರಧಾನಿ ನರೇಂದ್ರಮೋದಿ ಉದ್ಘಾಟಿಸಿದ ಬೆಂಗಳೂರು-ಮೈಸೂರು ಹೆದ್ದಾರಿಯು ಸಾಧಾರಣ ಮಳೆಗೆ ಮುಳುಗಿತ್ತು. ಅವರೇ ಉದ್ಘಾಟಿಸಿದ ಮೆಟ್ರೊ ನಿಲ್ದಾಣವು ಸಣ್ಣ ಮಳೆಗೆ ಮುಳುಗಿದೆ. ಕಾಮಗಾರಿ ಮುಗಿಯುವ ಮುನ್ನವೇ ಉದ್ಘಾಟನೆಗೆ ಹಾತೊರೆಯುವ ಪ್ರಚಾರ ಜೀವಿಗೆ ಜನರ ಹಿತ ಮುಖ್ಯವಲ್ಲ. ಪ್ರಚಾರವೇ ಮುಖ್ಯ' ಎಂದು ಟೀಕಿಸಿ ಟ್ವೀಟ್ ಮಾಡಿದೆ.

ಪೈಪ್ ಸೋರಿಕೆ ದುರಸ್ತಿ: ಅಂಜುಂ

ನಲ್ಲೂರಹಳ್ಳಿ ನಿಲ್ದಾಣದ ಕಾನ್‌ಕೋರ್ಸ್‌ನಲ್ಲಿ ಮಾತ್ರ ನೀರು ಅಲ್ಲಲ್ಲಿ ತುಂಬಿಕೊಂಡಿದ್ದು, ಬುಧವಾರ ಎಲ್ಲವನ್ನೂ ಸರಿಪಡಿಸಲಾಗಿದೆ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ 'ಪ್ರಜಾವಾಣಿ'ಗೆ ಸ್ಪಷ್ಟಪಡಿಸಿದರು.

'ಈ ಮಾರ್ಗದಲ್ಲಿ ಎಲ್ಲಾ ನಿಲ್ದಾಣಗಳಲ್ಲಿ ನೀರು ಸರಾಗವಾಗಿ ಹರಿದು ಹೋಗಿದೆ. ಡ್ರೈನೇಜ್‌ಗೆ ಹೋಗಬೇಕಿದ್ದ ಪೈಪ್‌ನಲ್ಲಿ ದೋಷ ಕಾಣಿಸಿದ್ದರಿಂದ ಈ ಸಮಸ್ಯೆಯಾಗಿತ್ತು. ಈಗ ಸರಿಯಾಗಿದೆ' ಎಂದು ಅವರು ತಿಳಿಸಿದರು.

ಸಂಬಳ ನೀಡಲು ಮಾಲೀಕ ನಕಾರ

ಕಾಲ್ನಡಿಗೆಯಲ್ಲಿಯೇ ಒಡಿಶಾ ತಲುಪಿದ ಕಾರ್ಮಿಕರು!

ಕೋರಾಪುಟ್, ಒಡಿಶಾ (ಪಿಟಿಐ): ಕೆಲಸ ಅರಸಿಕೊಂಡು ಬೆಂಗಳೂರಿಗೆ ಬಂದಿದ್ದ ಒಡಿಶಾ ಮೂಲದ ಮೂವರು ವಲಸೆ ಕಾರ್ಮಿಕರು ತಮ್ಮ ದುಡಿಮೆಗೆ ಸಂಬಳ ಸಿಗದೆ, 1,000 ಕಿ.ಮೀ.ಗೂ ಹೆಚ್ಚು ದೂರವನ್ನು ಏಳು ದಿನಗಳಲ್ಲಿ ಕಾಲ್ನಡಿಗೆಯಲ್ಲೇ ಕ್ರಮಿಸಿ ತಮ್ಮ ಸ್ವಗ್ರಾಮ ತಲುಪಿದ್ದಾರೆ.

ಕಾಳಹಂದಿ ಜಿಲ್ಲೆಯ ಟಿಂಗಾಳ್‌ಕನ್ ಗ್ರಾಮದ ನಿವಾಸಿಗಳಾದ ಬುದು ಮಾಂಝಿ, ಕತರ್ ಮಾಂಝಿ ಹಾಗೂ ಭಿಕಾರಿ ಮಾಂಝಿ ಈ ಸಾಹಸ ಮಾಡಿದವರು.

ಕುಟುಂಬಕ್ಕೆ ನೆರವಾಗಲು ಕೆಲಸ ಅರಸಿ ಹೋಗಿದ್ದ ಈ ಕಾರ್ಮಿಕರು ಮನೆಗೆ ಮರಳುವಾಗ ಖಾಲಿ ಕಿಸೆ ಮತ್ತು ಕೈಯಲ್ಲಿ ಕುಡಿಯುವ ನೀರಿನ ಬಾಟಲಿಗಳು ಮಾತ್ರ ಇದ್ದವು. ಮೂವರೂ ಶೋಚನೀಯ ಸ್ಥಿತಿಯಲ್ಲಿದ್ದರು ಎಂದು ಸ್ಥಳೀಯರು ಹೇಳಿದ್ದಾರೆ.

ಈ ಮೂವರು ಎರಡು ತಿಂಗಳಿನಿಂದ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದರು. ಆದರೆ, ಮಾಲೀಕ ಸಂಬಳ ನೀಡಿರಲಿಲ್ಲ. ಸಂಬಳ ಕೇಳಿದಾಗಲೆಲ್ಲ ಸಿಬ್ಬಂದಿಯಿಂದ ಹಲ್ಲೆ ಮಾಡಿಸುತ್ತಿದ್ದ ಎನ್ನಲಾಗಿದೆ. ಹೀಗಾಗಿ ಈ ಕಾರ್ಮಿಕರು ಪ್ರಯಾಣಕ್ಕೂ ಹಣವಿಲ್ಲದೆ, ತಮ್ಮ ಊರನ್ನು ಕಾಲ್ನಡಿಗೆಯಲ್ಲೇ ತಲುಪಿದ್ದಾರೆ.

ಮಧ್ಯವರ್ತಿ ಮೂಲಕ ಎರಡು ತಿಂಗಳ ಹಿಂದೆಯೇ ಒಡಿಶಾದಿಂದ ಬೆಂಗಳೂರಿಗೆ ಬಂದಿದ್ದ ವಲಸೆ ಕಾರ್ಮಿಕರಲ್ಲಿ ಈ ಮೂವರಿಗೂ ಕೆಲಸ ಸಿಕ್ಕಿತ್ತು. ಆದರೆ, ಎರಡು ತಿಂಗಳು ದುಡಿದರೂ ಸಂಬಳ ಸಿಕ್ಕಿರಲಿಲ್ಲ ಎನ್ನಲಾಗಿದೆ.

ಅಸಭ್ಯ ವರ್ತನೆ ತಡೆಯಲು ಧ್ವನಿವರ್ಧಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ ಉದ್ಯಾನದಲ್ಲಿ ವಯಸ್ಕರ ಅಸಭ್ಯ ವರ್ತನೆಯನ್ನು ನಿಯಂತ್ರಿಸಲು ಭದ್ರತಾ ಸಿಬ್ಬಂದಿಗೆ ತೋಟಗಾರಿಕೆ ಇಲಾಖೆ ಧ್ವನಿವರ್ಧಕಗಳನ್ನು ನೀಡಿದೆ.

'ಉದ್ಯಾನಕ್ಕೆ ಬರುವ ಕೆಲವರ ವರ್ತನೆ ಮಿತಿ ಮೀರಿತ್ತು. ಕೆಲವು ಯುವಕ–ಯುವತಿಯರು ಮನ ಬಂದಂತೆ ಅಸಭ್ಯವಾಗಿ ವರ್ತಿಸುತ್ತಿದ್ದಾರೆ. ಕುಟುಂಬ ಸಮೇತ ಉದ್ಯಾನಕ್ಕೆ ಬರುವ ಹಿರಿಯರಿಗೆ, ಮಕ್ಕಳಿಗೆ, ಮಹಿಳೆಯರಿಗೆ ಇದು ಕಿರಿಕಿರಿಯಾಗುತ್ತಿತ್ತು. ಇದನ್ನು ತಡೆಯಲು ಭದ್ರತಾ ಸಿಬ್ಬಂದಿ ಧ್ವನಿವರ್ಧಕ ಬಳಸಿ ಎಚ್ಚರಿಕೆ ನೀಡುತ್ತಿದ್ದಾರೆ. ಉದ್ಯಾನದಲ್ಲಿ ಇಂತಹ ಅಸಭ್ಯ ವರ್ತನೆಗಳಿಗೆ ಕಡಿವಾಣ ಬಿದ್ದಂತಾಗಿದೆ. ತೋಟಗಾರಿಕೆ ಇಲಾಖೆಯ ಈ ನೂತನ ಕ್ರಮ ಶ್ಲಾಘನೀಯ' ಎಂದು ಕಬ್ಬನ್ ಉದ್ಯಾನದ ನಡಿಗೆದಾರ ಸಂತೋಷ್ ಕುಮಾರ್ ತಿಳಿಸಿದರು.

ಕಬ್ಬನ್ ಉದ್ಯಾನದಲ್ಲಿ ಭದ್ರತಾ ಸಿಬ್ಬಂದಿಯೊಬ್ಬರು ಧ್ವನಿ ವರ್ಧಕದ ಮೂಲಕ ಅಸಭ್ಯವಾಗಿ ವರ್ತಿಸುತ್ತಿರುವವರಿಗೆ ಎಚ್ಚರಿಕೆ ನೀಡುತ್ತಿರುವುದು –ಪ್ರಜಾವಾಣಿ ಚಿತ್ರ

'ಉದ್ಯಾನದ ನಾಲ್ಕು ಪ್ರವೇಶ ದ್ವಾರಗಳಲ್ಲಿ ಕಾರ್ಯನಿರ್ವಹಿಸುವ ಭದ್ರತಾ ಸಿಬ್ಬಂದಿಗೆ ಧ್ವನಿವರ್ಧಕ ನೀಡಲಾಗಿದೆ. ಉದ್ಯಾನದಲ್ಲಿ ಸ್ವಚ್ಛತೆ ಕಾಪಾಡುವುದು, ಗಿಡ–ಮರಗಳಿಗೆ ಹಾನಿ ಮಾಡಬಾರದು ಎಂಬ ಎಚ್ಚರಿಕೆಯನ್ನು ಧ್ವನಿವರ್ಧಕದ ಮೂಲಕ ಜಾಗೃತಿ ಮೂಡಿಸುವ ಕೆಲಸ ಮಾಡಲಾಗುತ್ತದೆ' ಎಂದು ಉದ್ಯಾನದ ಭದ್ರತಾ ಸಿಬ್ಬಂದಿ ತಿಳಿಸಿದರು.

ಕಾರಿನಲ್ಲಿ ಮೃತದೇಹ ಪ್ರಕರಣ: ವ್ಯಕ್ತಿ ಗುರುತು ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಡಿಗೇಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಭದ್ರಪ್ಪ ಲೇಔಟ್‌ನಲ್ಲಿ ನಿಲುಗಡೆ ಮಾಡಿದ್ದ ಕಾರಿನಲ್ಲಿ ಸುಟ್ಟುಹೋದ ಸ್ಥಿತಿಯಲ್ಲಿ ಪತ್ತೆಯಾಗಿದ್ದ ಮೃತದೇಹದ ಗುರುತನ್ನು ಪೊಲೀಸರು ಪತ್ತೆ ಮಾಡಿದ್ದಾರೆ.

ದೊಡ್ಡಬೊಮ್ಮಸಂದ್ರದ ವಿನೋದ್ ಎಂದು ಗುರುತಿಸಲಾಗಿದೆ. ಬಡಾವಣೆಯಲ್ಲಿ ನಿಲುಗಡೆ ಮಾಡಿದ್ದ ಕಾರಿಗೆ ಬೆಂಕಿ ತಗುಲಿತ್ತು. ಅದರಲ್ಲಿ ಮೃತದೇಹ ಪತ್ತೆಯಾಗಿತ್ತು. ಅಂದು ಆ ವ್ಯಕ್ತಿಯ ಗುರುತು ಪತ್ತೆ ಮಾಡಲು ಪೊಲೀಸರಿಗೆ ಸಾಧ್ಯವಾಗಿರಲಿಲ್ಲ. ಮೃತದೇಹವು ನಿರ್ಗತಿಕನದ್ದು ಎಂದು ಸ್ಥಳೀಯರು ತಿಳಿಸಿದ್ದರು.

'ವಿನೋದ್ ವಿಪರೀತ ಮದ್ಯ ಸೇವಿಸುತ್ತಿದ್ದರು. ಮದ್ಯ ಸೇವನೆ ಬಳಿಕ ರಾತ್ರಿ ಮನೆಗೆ ತೆರಳುತ್ತಿರಲಿಲ್ಲ. ದೇವಿನಗರ ಮುಖ್ಯರಸ್ತೆಯ ಐಎಫ್‌ಎಲ್ ಫೈನಾನ್ಸ್ ಕಂಪನಿ ಎದುರು ನಿಲುಗಡೆ ಮಾಡಿದ್ದ ಗುಜರಿ ಫೋರ್ಡ್ ಕಾರಿನಲ್ಲಿ ಮಲಗುತ್ತಿದ್ದರು. ಮಾರ್ಚ್ 29ರಂದು ರಾತ್ರಿ ಹಚ್ಚಿಕೊಂಡಿದ್ದ ಸೊಳ್ಳೆ ಬತ್ತಿಯಿಂದ ಬೆಂಕಿ ತಗುಲಿ ಮೃತಪಟ್ಟಿದ್ದರು. ಮೃತ ವಿನೋದ್ ತಾಯಿ ಹಾಗೂ ಸಹೋದರಿ ಸಿಸಿ ಟಿವಿ ಕ್ಯಾಮೆರಾ ದೃಶ್ಯಾವಳಿ ಹಾಗೂ ಅವರು ಧರಿಸಿದ್ದ ಚಡ್ಡಿಯಿಂದ ಮೃತದೇಹದ ಗುರುತು ಪತ್ತೆ ಮಾಡಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಥಳಿತಕ್ಕೆ ಒಳಗಾಗಿದ್ದ ವ್ಯಕ್ತಿ ಸಾವು: ಇಬ್ಬರ ಬಂಧನ

ಬೆಂಗಳೂರು: ಕಾರಿನಲ್ಲಿ ಹಾಕಿದ್ದ ಸಂಗೀತದ ಶಬ್ದವನ್ನು ಕಡಿಮೆ ಮಾಡುವಂತೆ ಮನವಿ ಮಾಡಿದ್ದಾಗ ನಡೆದ ಗಲಾಟೆಯಲ್ಲಿ ಥಳಿತಕ್ಕೆ ಒಳಗಾಗಿದ್ದ ಒಡಿಶಾದ ಲಾಯೆಡ್ ನೇಹಮಿಯ (54) ಅವರು ಬುಧವಾರ ಮೃತಪಟ್ಟಿದ್ದಾರೆ.

ಒಡಿಶಾದ ರಾಮ ಸಮಂತ್, ಬಾಸುದೇವ್ ಸಮಂತ್ ರಾಯ್ ಅವರನ್ನು ಬಂಧಿಸಲಾಗಿದೆ.

ಏ.2ರಂದು ಮುಂಜಾನೆ 4.30ರ ಸುಮಾರಿಗೆ ವಿಜ್ಞಾನ ನಗರದ ಖಾಸಗಿ ಅಪಾರ್ಟ್‌ಮೆಂಟ್ ಎದುರಿನ ರಸ್ತೆಯಲ್ಲಿ ಅಭಿಷೇಕ್, ರಾಮ ಸಮಂತ್, ಬಾಸುದೇವ್ ಮತ್ತು ಸಮಂತ್ ರಾಯ್ ಕಾರು ನಿಲ್ಲಿಸಿಕೊಂಡು ಜೋರಾಗಿ ಹಾಡು ಹಾಕಿಕೊಂಡಿದ್ದರು. ಲಾಯೆಡ್ ನೇಹಮಿಯ ಅವರು ಬಂದು ಶಬ್ದ ಕಡಿಮೆಗೊಳಿಸಿ. ಮನೆಯಲ್ಲಿ ವಯಸ್ಸಾದವರು ಇದ್ದಾರೆ ಎಂದು ಮನವಿ ಮಾಡಿದ್ದರು. ಆಗ ಗಲಾಟೆ ನಡೆದು ಲಾಯೆಡ್ ಅವರನ್ನು ಆರೋಪಿಗಳು ಥಳಿಸಿದ್ದಾರೆ. ಇದೇ ವೇಳೆ ಮಹಿಳೆಯ ಮೇಲೆಯೂ ಆರೋಪಿಗಳು ಹಲ್ಲೆ ಮಾಡಿದ್ದರು. ಬಳಿಕ ಹಲ್ಲೆಗೊಳಗಾದ ಲಾಯೆಡ್ ಮತ್ತು ಆರೋಪಿಗಳು ಎಚ್‌ಎಎಲ್ ಠಾಣೆಯಲ್ಲಿ ದೂರು-ಪ್ರತಿದೂರು ದಾಖಲಿಸಿದ್ದರು. ಗಾಯಗೊಂಡಿದ್ದ ಲಾಯೆಡ್ ನೇಹಮಿಯ ಅವರು ಆಸ್ಪತ್ರೆಗೆ ದಾಖಲಾಗಿದ್ದು ಅಲ್ಲಿಯೇ ಮೃತಪಟ್ಟಿದ್ದಾರೆ.

ಕೊಲೆ ಪ್ರಕರಣ ದಾಖಲಿಸಿಕೊಂಡು ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು. ಎಚ್‌ಎಎಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಜಕಾಲುವೆ ಕಾಮಗಾರಿಯಿಂದ ತೊಡಕು: ತುಷಾರ್ ಗಿರಿನಾಥ್

ಮಣ್ಣಿನಿಂದ ಮಳೆ ನೀರು ಹರಿವಿಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹದೇವಪುರ ವಲಯದಲ್ಲಿ ರಾಜಕಾಲುವೆ ನಿರ್ಮಾಣ, ಸ್ವಚ್ಛತೆ ಕಾಮಗಾರಿಗಳು ನಡೆಯುತ್ತಿರುವುದರಿಂದ ಮಳೆ ನೀರು ಹರಿವಿಗೆ ತಡೆ ಉಂಟಾಗಿತ್ತು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಸುದ್ದಿಗಾರರೊಂದಿಗೆ ಬುಧವಾರ ಮಾತನಾಡಿದ ಅವರು, ಕಳೆದ ಡಿಸೆಂಬರ್ 15ರವರೆಗೂ ಮಳೆ ಬರುತ್ತಿತ್ತು. ರಾಜಕಾಲುವೆ ಕಾಮಗಾರಿಯನ್ನು ಆರಂಭಿಸಲು ಸಾಧ್ಯವಾಗಿರಲಿಲ್ಲ. ಇದೀಗ ಎಲ್ಲ ಏಜೆನ್ಸಿಗಳೂ ಕಾಮಗಾರಿಗಳನ್ನು ನಡೆಸುತ್ತಿವೆ. 94 ಪ್ಯಾಕೇಜ್‌ಗಳಲ್ಲಿ 512 ಕಡೆ ರಾಜಕಾಲುವೆ ಕಾಮಗಾರಿ ನಡೆಯುತ್ತಿದೆ. ಹೀಗಾಗಿ, ಮಳೆ ಪ್ರಮಾಣ ಕಡಿಮೆಯಾಗಿದ್ದರೂ ಮಣ್ಣು ಹಾಗೂ ಸಾಮಗ್ರಿಗಳು ಅಡ್ಡವಾಗಿದ್ದರಿಂದ ನೀರು ಹರಿಯದೆ ಕೆಲಕಾಲ ಸಮಸ್ಯೆ ಉಂಟಾಗಿತ್ತು ಎಂದು ಮಾಹಿತಿ ನೀಡಿದರು.

ಬಿಡಬ್ಲ್ಯುಎಸ್‌ಎಸ್‌ಬಿ, ಬೆಸ್ಕಾಂ ಸೇರಿದಂತೆ ಹಲವು ಏಜೆನ್ಸಿಗಳು ಕಾಮಗಾರಿಗಳನ್ನು ನಡೆಸುತ್ತಿವೆ. ಏಪ್ರಿಲ್ ಅಂತ್ಯದೊಳಗೆ ಕಾಮಗಾರಿ ಮುಗಿಸಲು ಅವರಿಗೆ ಗಡುವು ನೀಡಲಾಗಿದೆ. ಇನ್ನು ಕಾಡುಬಿಸನಹಳ್ಳಿಯ ಸಮೀಪ ಬಿಎಂಆರ್‌ಸಿಎಲ್ ಕಾಮಗಾರಿ ನಡೆಸುತ್ತಿದ್ದು, ಅಲ್ಲಿ ಪೈಪ್ ಒಡೆದು ನೀರು ತುಂಬಿಕೊಂಡಿದೆ. ಪಂಪ್‌ಸೆಟ್ ಬಳಸಿ ನೀರು ಹೊರಹಾಕಿ ಕೆಲಸ ಮಾಡಲು ಅನುವು ಮಾಡಿಕೊಡಲಾಗಿದೆ ಎಂದು ತಿಳಿಸಿದರು.

ನೀರು ನಿಲ್ಲುವ ಸ್ಥಳಗಳು	
ವಲಯ	ಸಂಖ್ಯೆ
ಪೂರ್ವ	454
ಪಶ್ಚಿಮ	284
ದಕ್ಷಿಣ	267
ಮಹದೇವಪುರ	177
ರಾಜರಾಜೇಶ್ವರಿ ನಗರ	161
ಬೊಮ್ಮನಹಳ್ಳಿ	108
ದಾಸರಹಳ್ಳಿ	26
ಯಲಹಂಕ	91
ಒಟ್ಟು	1,568

ಸ್ವಚ್ಛತೆಗೆ ಗಡುವು: ಪ್ರಾಥಮಿಕ ಹಾಗೂ ದ್ವಿತೀಯ ಹಂತದ ರಾಜಕಾಲುವೆಗಳನ್ನು ಏಪ್ರಿಲ್ ಅಂತ್ಯದೊಳಗೆ ಸ್ವಚ್ಛಗೊಳಿಸಿ, ನೀರು ಸರಾಗವಾಗಿ ಹರಿಯುವಂತೆ ಮಾಡಬೇಕು ಎಂದು ರಾಜಕಾಲುವೆ ವಿಭಾಗದ ಎಂಜಿನಿಯರ್‌ಗಳಿಗೆ ಸೂಚಿಸಲಾಗಿದೆ. ಮೇನಿಂದ ಮತ್ತೊಂದು ಸುತ್ತಿನ ಸ್ವಚ್ಛತೆ ಕೈಗೊಳ್ಳಲಾಗುತ್ತದೆ. ಆದ್ದರಿಂದ, ಜೂನ್‌ನಿಂದ ಮಳೆಗಾಲ ಆರಂಭವಾದರೆ ಯಾವುದೇ ತೊಂದರೆ ಆಗುವುದಿಲ್ಲ ಎಂದು ತುಷಾರ್ ಗಿರಿನಾಥ್ ಅಭಿಪ್ರಾಯಪಟ್ಟರು.

ಹೆಚ್ಚಿನ ಮಳೆಯಾದಾಗ ನಿಂತುಕೊಳ್ಳುವ ಸ್ಥಳಗಳನ್ನು ಜಿಯೊಟ್ಯಾಗ್ ಮೂಲಕ ಗುರುತಿಸಲಾಗಿದೆ. ಈ ಸ್ಥಳಗಳಲ್ಲಿ ಹೆಚ್ಚಿನ ಜಾಗ್ರತೆ ವಹಿಸಿ ಕ್ರಮ ಕೈಗೊಳ್ಳಲು ಎಲ್ಲ ವಲಯದ ಮುಖ್ಯ ಎಂಜಿನಿಯರ್ ಹಾಗೂ ಪ್ರಧಾನ ಎಂಜಿನಿಯರ್‌ಗಳೊಂದಿಗೆ ಸಭೆ ನಡೆಸಿ ಸೂಚಿಸಲಾಗಿದೆ. ಶೇ 70ರಷ್ಟು ಮುನ್ನೆಚ್ಚರಿಕೆ ಕೆಲಸ ಮುಗಿದಿದ್ದು, ಇನ್ನುಳಿದ ಕಾಮಗಾರಿಯನ್ನೂ ಮುಗಿಸಲಾಗುತ್ತದೆ ಎಂದರು.

ವಲಯವಾರು ನಿಯಂತ್ರಣ ಕೊಠಡಿಯಲ್ಲಿ ಬಿಬಿಎಂಪಿ ಸಿಬ್ಬಂದಿಯನ್ನೇ ನೇಮಿಸಲಾಗುತ್ತದೆ. ಎಲ್ಲ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂದರು.

ಮನೆ ಒಡೆಯುವುದಿಲ್ಲ: ರಾಜಕಾಲುವೆ ಒತ್ತುವರಿ ತೆರವು ಪ್ರಕರಣಗಳಲ್ಲಿ ಮನೆ ಅಥವಾ ಅಂಗಡಿಗಳನ್ನು ಸದ್ಯಕ್ಕೆ ಒಡೆಯುತ್ತಿಲ್ಲ. ಚುನಾವಣೆ ನೀತಿ ಸಂಹಿತೆ ಇರುವುದರಿಂದ ಮತದಾರರ ಸ್ಥಳ ಬದಲಾವಣೆ ಆಗುತ್ತದೆ. ಹೀಗಾಗಿ ಆಯೋಗದ ಮಾರ್ಗಸೂಚಿಯಂತೆ ಮನೆ ಅಥವಾ ಅಂಗಡಿಗಳನ್ನು ತೆರವು ಮಾಡುವುದಿಲ್ಲ ಎಂದು ತುಷಾರ್ ಗಿರಿನಾಥ್ ಹೇಳಿದರು.

1,568 ಸ್ಥಳಗಳಲ್ಲಿ ಸಂಕಷ್ಟ!

ನಗರದಲ್ಲಿ ಎಲ್ಲೆಲ್ಲಿ ಎಷ್ಟು ಮಳೆ ಬಂದರೆ ನೀರು ನಿಲ್ಲುತ್ತದೆ ಎಂಬುದನ್ನು ಬಿಬಿಎಂಪಿ ಪಟ್ಟಿ ಮಾಡಿದೆ. ನಗರದಲ್ಲಿ 1,568 ಸ್ಥಳಗಳಲ್ಲಿ ನೀರು ನಿಲ್ಲುತ್ತದೆ. 10 ಮಿ.ಮೀ ಮಳೆ ಬಂದರೂ ಜಲಾವೃತವಾಗುವ ಪ್ರದೇಶಗಳೂ ಇವೆ. ಈ ಸ್ಥಳಗಳಲ್ಲಿ ನೀರು ಸರಾಗವಾಗಿ ಹರಿಯಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದ್ದಾರೆ.

10 ಮಿ.ಮೀ ಹಾಗೂ 20 ಮಿ.ಮೀ ಮಳೆಯಾದರೆ ಎಲ್ಲಿ ಸಮಸ್ಯೆಯಾಗುತ್ತದೆ ಎಂಬ ಮಾಹಿತಿ ಹೀಗಿದೆ.

10 ಎಂಎಂ ಮಳೆಗೆ: ಸಿ.ವಿ ರಾಮನ್ ನಗರದ ಎಪಿಜೆ ಅಬ್ದುಲ್ ಕಲಾಂ ರಸ್ತೆ, ವರ್ತೂರಿನ ಪಣತ್ತೂರು ಮುಖ್ಯರಸ್ತೆ, ದೊಡ್ಡನೆಕ್ಕುಂದಿಯ ತುಬರಹಳ್ಳಿ ಸಮೀಪದ ವಿಬ್‌ಗ್ಯೋರ್ ಪ್ರೌಢಶಾಲೆ ರಸ್ತೆ, ಜಕ್ಕೂರು, ಥಣಿಸಂದ್ರ, ರಾಚೇನಹಳ್ಳಿ ಮುಖ್ಯರಸ್ತೆ.

20 ಎಂಎಂ ಮಳೆಗೆ: ಶಾಂತಿನಗರ, ಕಮರ್ಷಿಯಲ್ ರಸ್ತೆ, ಸಂಪಂಗಿರಾಮನಗರ, ಬೈರಸಂದ್ರ, ನ್ಯೂ ತಿಪ್ಪಸಂದ್ರ, ಕಲ್ಯಾಣನಗರ ವರ್ತುಲ ರಸ್ತೆ, ಹೊರಮಾವು, ಕೆಂಗೇರಿ, ಹೆಮ್ಮಿಗೆಪುರ, ರಾಜರಾಜೇಶ್ವರಿನಗರ, ಜೆ.ಪಿ. ನಗರ, ಸಾರಕ್ಕಿ, ಜೆ.ಸಿ. ರಸ್ತೆ, ಧರ್ಮರಾಯಸ್ವಾಮಿ ದೇವಸ್ಥಾನ, ಮೆಜೆಸ್ಟಿಕ್, ಕಾಟನ್‌ಪೇಟೆ, ಶಿವಾನಂದ ವೃತ್ತ, ಶಿವನಗರ, ಓಕಳಿಪುರ ಕೆಳಸೇತುವೆ, ಓಕಳಿಪುರ, ಮಲ್ಲೇಶ್ವರ, ಅರಮನೆ ನಗರ, ಆನಂದರಾವ್ ವೃತ್ತ ರೈಲ್ವೆ ಕೆಳಸೇತುವೆ, ಡಾ. ರಾಜ್‌ಕುಮಾರ್ ರಸ್ತೆ, ಶೇಷಾದ್ರಿಪುರ ಕೆಳಸೇತುವೆ, ಗಾಂಧಿನಗರ, ರೇಸ್‌ಕೋರ್ಸ್ ಲೇಔಟ್, ಸಂಪಿಗೆ ಲೇಔಟ್, ಕಾವೇರಿಪುರ, ಶ್ರೀರಾಮಪುರ ಕೆಳಸೇತುವೆ, ಗಾಯತ್ರಿನಗರ, ಜಕ್ಕೂರು.

ಬೆಂಗಳೂರು ಮಾರುಕಟ್ಟೆಗೆ ಅಮುಲ್ ಹಾಲು–ಮೊಸರು

ಕೆಎಂಎಫ್‌ಗೆ ಯಾವುದೇ ರೀತಿ ಧಕ್ಕೆ ಇಲ್ಲ: ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮುಲ್ ಐಸ್‌ಕ್ರೀಮ್ ಸೇರಿ ಹಲವು ಉತ್ಪನ್ನಗಳನ್ನು ಬೆಂಗಳೂರಿನಲ್ಲಿ ಮಾರಾಟ ಮಾಡುತ್ತಿದ್ದ ಅಮುಲ್, ಈಗ ಹಾಲು ಮತ್ತು ಮೊಸರನ್ನು ಮಾರುಕಟ್ಟೆಗೆ ಇಳಿಸಲು ಮುಂದಾಗಿದೆ. ಕ್ವಿಕ್ ಕಾಮರ್ಸ್ ಪ್ಲಾಟ್‌ಫಾರ್ಮ್ ಮೂಲಕ ಗುರುವಾರದಿಂದ ಮನೆಗಳಿಗೆ ತಲುಪಿಸಲು ಹೊರಟಿದೆ.

‘ಹಾಲು ಮತ್ತು ಮೊಸರಿನ ರೂಪದಲ್ಲಿ ಹೊಸ ತಾಜಾತನವನ್ನು ಅಮುಲ್ ತರುತ್ತಿದೆ. ಕ್ವಿಕ್ ಕಾಮರ್ಸ್ ಮೂಲಕ ಆರ್ಡರ್ ಮಾಡಿದರೆ ಮನೆ ಬಾಗಿಲಿಗೆ ತಲುಪಿಸಲಾಗುವುದು’ ಎಂದು ಅಮುಲ್ ತನ್ನ ಟ್ವಿಟರ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದೆ.

ಗುಜರಾತಿನ ಅಮುಲ್, ಕನ್ನಡದಲ್ಲಿ ಟ್ವಿಟರ್ ಮತ್ತು ಫೇಸ್‌ಬುಕ್ ಖಾತೆಗಳನ್ನು ತೆರೆದಿದೆ. ಕನ್ನಡದಲ್ಲೇ ಮಾಹಿತಿ ಒದಗಿಸಿದ್ದು, ಲೀಟರ್‌ಗೆ ಎಷ್ಟು ದರ ನಿಗದಿ ಮಾಡಲಿದೆ ಎಂಬುದನ್ನು ಸ್ಪಷ್ಟಪಡಿಸಿಲ್ಲ.

ಕರ್ನಾಟಕ ಹಾಲು ಮಹಾ ಮಂಡಳವು ರಾಜ್ಯದ ಹಾಲು ಉತ್ಪಾದಕರಿಂದ(ರೈತರು) ಸಂಗ್ರಹಿದ ಹಾಲನ್ನು ರಾಜ್ಯ ಮತ್ತು ಹೊರ ರಾಜ್ಯಗಳಿಗೆ ಪೂರೈಸುತ್ತಿದೆ. ಕೆಎಂಎಫ್ ಅನ್ನು ಅಮುಲ್ ಜತೆ ವಿಲೀನ ಮಾಡುವ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಪ್ರಸ್ತಾಪಿಸಿದ್ದರು. ಶಾ ಅವರ ಹೇಳಿಕೆಗೆ ತೀವ್ರ ವಿರೋಧ ವ್ಯಕ್ತವಾಗಿತ್ತು.

ಈ ಬಗ್ಗೆ ಪ್ರತಿಕ್ರಿಯಿಸಿರುವ ಕೆಎಂಎಫ್ ಅಧಿಕಾರಿಗಳು, ‘ಆನ್‌ಲೈನ್‌ನಲ್ಲಿ ಬುಕ್ಕಿಂಗ್ ಮಾಡಿದವರಿಗೆ ಹಾಲು ಮತ್ತು ಮೊಸರು ಮಾರಾಟ ಮಾಡಲು ಅಮುಲ್ ಮುಂದಾಗಿರುವ ಮಾಹಿತಿ ದೊರೆತಿದೆ. ಇದರಿಂದ, ನಂದಿನಿ ಹಾಲು ಮಾರಾಟಕ್ಕೆ ಯಾವುದೇ ತೊಂದರೆ ಆಗುವುದಿಲ್ಲ. ಬೆಳಗಾವಿ ಮತ್ತು ಹುಬ್ಬಳ್ಳಿಯಲ್ಲಿ ಈಗಾಗಲೇ ಅಮುಲ್ ಹಾಲು ಪೂರೈಕೆಯಾಗುತ್ತಿದ್ದು, 500 ಲೀಟರ್ ಮೀರಲು ಸಾಧ್ಯವಾಗಿಲ್ಲ’ ಎಂದರು.

‘ಲೀಟರ್‌ಗೆ ₹34 ನೀಡಿ ರೈತರಿಂದ ಹಾಲು ಖರೀದಿಸಲಾಗುತ್ತಿದೆ. ಮಾರಾಟ ಮಾಡುವ ಏಜೆನ್ಸಿಗಳಿಗೆ ₹2 ಕಮಿಷನ್ ನೀಡಲಾಗುತ್ತಿದೆ. ಯಾವುದೇ ಲಾಭವಿಲ್ಲದೆ ರೈತರು ಮತ್ತು ಗ್ರಾಹಕರ ನಡುವೆ ಕೆಎಂಎಫ್ ಸೇತುವೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ಅಮುಲ್ ಹಾಲಿನ ದರ ಲೀಟರ್‌ಗೆ ₹56 ಇದ್ದು, ಅಷ್ಟು ಹಣ ನೀಡಿ ಖರೀದಿ ಮಾಡುವವರು ಯಾರು’ ಎಂದು ಪ್ರಶ್ನಿಸಿದರು.

‘ಯಾವುದೇ ಹಾಲು ಮಾರುಕಟ್ಟೆಗೆ ಬಂದರೂ ನಂದಿನಿ ಹಾಲಿನ ಮಾರಾಟದಲ್ಲಿ ವ್ಯತ್ಯಾಸ ಆಗುವುದಿಲ್ಲ. ಮುಂಬೈ, ದೆಹಲಿ ಸೇರಿ ಹೊರ ರಾಜ್ಯಗಳಿಗೆ ನಂದಿನಿ ಹಾಲನ್ನು ನಾವೂ ಪೂರೈಸುತ್ತಿದ್ದೇವೆ’ ಎಂದು ವಿವರಿಸಿದರು.

‘ಸ್ಪರ್ಧೆ ಎದುರಿಸಲು ಕೆಎಂಎಫ್ ಸಿದ್ಧ’

‘ಅಮುಲ್ ಹಾಲು ಲೀಟರ್‌ಗೆ ದರ ಎಷ್ಟು ಎಂಬುದನ್ನು ಗುರುವಾರ ನೋಡಬೇಕು. ಸ್ಪರ್ಧೆ ಎದುರಿಸಲು ನಾವೂ ಸಿದ್ಧವಾಗಿದ್ದೇವೆ’ ಎಂದು ಬಮೂಲ್ ಅಧ್ಯಕ್ಷ ನರಸಿಂಹಮೂರ್ತಿ ಸ್ಪಷ್ಟಪಡಿಸಿದರು. ‘ಕೆಎಂಎಫ್ ರೀತಿ ಅಮುಲ್ ಕೂಡ ಸಹಕಾರ ತತ್ವದಡಿ ಕಾರ್ಯ ನಿರ್ವಹಿಸುತ್ತಿದೆ. ಎರಡು ಸಾರ್ವಜನಿಕ ಸಂಸ್ಥೆಗಳ ನಡುವೆ ಪೈಪೋಟಿ ಅಗತ್ಯ ಇರಲಿಲ್ಲ’ ಎಂದರು.

ಇಂದು ತಡರಾತ್ರಿ ಹೂವಿನ ಕರಗ; ಧರ್ಮರಾಯ ಸ್ವಾಮಿ ರಥೋತ್ಸವ

ಮೆರವಣಿಗೆಯಲ್ಲಿ ಸಾಗಿದ ಹಸಿ ಕರಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಪಂಗಿ ಕೆರೆಯ ಶಕ್ತಿ ಪೀಠದಲ್ಲಿ ಮಂಗಳವಾರ ತಡರಾತ್ರಿ ಆರಂಭವಾದ ಹಸಿ ಕರಗದ ಸಿದ್ಧತೆ ಹಾಗೂ ಪೂಜೆ ಬುಧವಾರ ಬೆಳಗಿನ ಜಾವ ಪೂರ್ಣಗೊಂಡಿತು. ನಂತರ ಮೆರವಣಿಗೆಯಲ್ಲಿ ಧರ್ಮರಾಯ ಸ್ವಾಮಿ ದೇವಸ್ಥಾನಕ್ಕೆ ಹಸಿ ಕರಗ ಸಾಗಿತು.

ಸಂಪ್ರದಾಯದ ಪ್ರಕಾರ ಧಾರ್ಮಿಕ ಆಚರಣೆಗಳು ಸಂಪಂಗಿ ಕೆರೆಯಲ್ಲಿರುವ ಶಕ್ತಿಪೀಠದಲ್ಲಿ ವಿಜೃಂಭಣೆಯೊಂದಿಗೆ ನಡೆದವು. ಮಂಗಳವಾರ ಬೆಳಿಗ್ಗೆಯಿಂದಲೇ ಸಿದ್ಧತೆಗಳು ನಡೆದು, ಸಂಜೆಯಿಂದಲೇ ವೀರಕುಮಾರರು ಆಗಮಿಸಿದ್ದರು. ತಡರಾತ್ರಿ ಪೂಜೆಗಳು ಆರಂಭವಾಗಿ, ಮುಂಜಾನೆ ಹಸಿ ಕರಗ ಸಿದ್ಧಗೊಂಡಿತು.

ವಿಶೇಷ ಪೂಜೆಯ ನಂತರ, ಹೂವಿನ ವೇಷಭೂಷಣದೊಂದಿಗೆ ಸಿದ್ಧರಾದ ಅರ್ಚಕ ಎ. ಜ್ಞಾನೇಶ್ ಒಂದು ಕೈಯಲ್ಲಿ ಕತ್ತಿ ಹಿಡಿದು, ಸೊಂಟದಲ್ಲಿ ಹಸಿ ಕರಗವನ್ನು ಹೊತ್ತು ಸಾಗಿದರು. ಸಂಪಂಗಿ ಕೆರೆಯ ನಂತರ ಹಡ್ಸನ್ ವೃತ್ತ, ಬಿಬಿಎಂಪಿಯಲ್ಲಿರುವ ಆದಿಶಕ್ತಿ ದೇವಸ್ಥಾನಕ್ಕೆ ಸಾಗಿದ ಹಸಿ ಕರಗದ ಮೆರವಣಿಗೆ ಅಲ್ಲಿ ಪೂಜೆ ಸಲ್ಲಿಸಿತು. ನಂತರ, ಧರ್ಮರಾಯ ಸ್ವಾಮಿ ದೇವಸ್ಥಾನವನ್ನು ತಲುಪಿತು.



ಸಂಪಂಗಿ ಕೆರೆಯಿಂದ ಹಸಿ ಕರಗದ ಮೆರವಣಿಗೆ ಆರಂಭಗೊಂಡು ತಿಗಳರಪೇಟೆಯಲ್ಲಿರುವ ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನಕ್ಕೆ ಬುಧವಾರ ಬೆಳಿಗ್ಗೆ ಸಾಗಿತು. ವೀರಕುಮಾರರು, ದ್ರೌಪದಿಯ ಯೋಧಪುತ್ರರಂತೆ ಪಾಲ್ಗೊಂಡಿದ್ದರು (ಎಡಚಿತ್ರ). ಹಸಿ ಕರಗವನ್ನು ಅರ್ಚಕ ಎ. ಜ್ಞಾನೇಂದ್ರ ಅವರು ಸಂಪಂಗಿ ಕೆರೆ ಶಕ್ತಿಪೀಠದಿಂದ ಬುಧವಾರ ಬೆಳಿಗ್ಗೆ ಹೊತ್ತು ಸಾಗಿದರು

– ಪ್ರಜಾವಾಣಿ ಚಿತ್ರಗಳು: ಕಿಶೋರ್ ಕುಮಾರ್ ಬೋಳಾರ್

ಗುರುವಾರ ರಾತ್ರಿ ಹೂವಿನ ಕರಗ: ಪ್ರಸಿದ್ಧ ದ್ರೌಪದಿದೇವಿ ಕರಗ ಶಕ್ತ್ಯೋತ್ಸವ ಗುರುವಾರ ತಡರಾತ್ರಿ ಧರ್ಮರಾಯ ಸ್ವಾಮಿ ದೇವಸ್ಥಾನದಿಂದ ಹೊರಡಲಿದೆ. ಹಲಸೂರು ಪೇಟೆಯ ಆಂಜನೇಯಸ್ವಾಮಿ, ರಾಮ ದೇವಾಲಯದಲ್ಲಿ ಪೂಜೆ ಸ್ವೀಕರಿಸಿ, ನಗರ್ತಪೇಟೆ, ಸಿದ್ದಣ್ಣ ಗಲ್ಲಿ, ಕಬ್ಬನ್‌ಪೇಟೆ, ಗಾಣಿಗರ ಪೇಟೆ, ದೊಡ್ಡಪೇಟೆಯಿಂದ ಕೆ.ಆರ್. ಮಾರುಕಟ್ಟೆ ತಲುಪಲಿದೆ. ಮಸ್ತಾನ್ ಸಾಬ್ ದರ್ಗಾಕ್ಕೆ ಭೇಟಿ ನೀಡಿ, ಅಲ್ಲಿಂದ ಬಳೇಪೇಟೆ ಹಳೇಗರಡಿ, ಅಣ್ಣಮ್ಮನ ದೇವಾಲಯ, ಕಿಲಾರಿ ರಸ್ತೆ, ಯಲಹಂಕ ಗೇಟ್, ಅವೆನ್ಯೂ ರಸ್ತೆ, ಕುಂಬಾರಪೇಟೆ, ಗೊಲ್ಲರಪೇಟೆ, ತಿಗಳರ ಪೇಟೆಗಳಲ್ಲಿ ಸಾಗಲಿದೆ. ಸೂರ್ಯೋದಯದ ವೇಳೆ ಧರ್ಮರಾಯಸ್ವಾಮಿ ದೇವಸ್ಥಾನ ತಲುಪಲಿದೆ.

ಕಾವೇರಿ ನದಿ ಪಾತ್ರ ಸ್ವಚ್ಛತೆ: ಪುನಃ 15 ದಿನಗಳ ಕಾಲಾವಕಾಶ

ಬೆಂಗಳೂರು: ಕೊಡಗು ಜಿಲ್ಲೆಯ ಭಾಗಮಂಡಲದಲ್ಲಿ ಕಾವೇರಿ ಹಾಗೂ ಕನ್ನಿಕೆ ನದಿಪಾತ್ರದಲ್ಲಿ ಒಳಚರಂಡಿ ನೀರು ಹರಿವಿನಿಂದ ಉಂಟಾಗಿರುವ ಮಾಲಿನ್ಯ ಸ್ವಚ್ಛಗೊಳಿಸುವ ಕಾಮಗಾರಿಯನ್ನು ಪೂರ್ಣಗೊಳಿಸಲು ಕಾವೇರಿ ನೀರಾವರಿ ನಿಗಮ ನಿಯಮಿತಕ್ಕೆ ಪುನಃ 15 ದಿನಗಳ ಕಾಲಾವಕಾಶ ನೀಡಿ ಹೈಕೋರ್ಟ್ ಆದೇಶಿಸಿದೆ.

ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸುವ ಮೇಲ್ಸೇತುವೆ ನಿರ್ಮಾಣ ಯೋಜನೆ ಪ್ರಶ್ನಿಸಿ ಭಾಗಮಂಡಲ ನಿವಾಸಿ ಎಸ್.ಇ.ಜಯಂತ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಕಾವೇರಿ ನಿರಾವರಿ ನಿಗಮದ ಪರ ವಕೀಲರು, ‘ಭಾಗಮಂಡಲದಲ್ಲಿ ಕಾವೇರಿ ಮತ್ತು ಕನ್ನಿಕೆ ನದಿಪಾತ್ರದಲ್ಲಿ ಉಂಟಾಗಿರುವ ಮಾಲಿನ್ಯ ಸ್ವಚ್ಛಗೊಳಿಸುವ ಕಾರ್ಯ ನಡೆಸಲು ಗುತ್ತಿಗೆ ನೀಡಲಾಗಿದೆ. ಕಾಮಗಾರಿ ಪ್ರಗತಿಯಲ್ಲಿದೆ. ಆದರೆ, ನದಿಪಾತ್ರದಲ್ಲಿ ನೀರಿನ ಪ್ರಮಾಣ ಹೆಚ್ಚಿದ್ದರಿಂದ ಕಾಮಗಾರಿಯನ್ನು ನಿಗದಿತ ಅಧಿಯಲ್ಲಿ ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ. ಸದ್ಯ ನೀರಿನ ಪ್ರಮಾಣ ಕಡಿಮೆಯಿದ್ದು, 15 ದಿನಗಳಲ್ಲಿ ಕಾಮಗಾರಿ ಪೂರ್ಣಗೊಳಿಸಲಾಗುವುದು. ಆದ್ದರಿಂದ, 15 ದಿನಗಳ ಕಾಲಾವಕಾಶ ನೀಡಬೇಕು‘ ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, 15 ದಿನಗಳ ಕಾವಲಾವಾಶ ನೀಡಿ ವಿಚಾರಣೆ ಮುಂದೂಡಿತು. ಕಾವೇರಿ ಹಾಗೂ ಕನ್ನಿಕೆ ನದಿಪಾತ್ರದಲ್ಲಿ ಉಂಟಾಗಿರುವ ಮಾಲಿನ್ಯ ಸ್ವಚ್ಛಗೊಳಿಸುವ ಕಾಮಗಾರಿಯನ್ನು ಎರಡು ತಿಂಗಳ ಅವಧಿಯಲ್ಲಿ (ಮಾರ್ಚ್ 24ರೊಳಗೆ) ಪೂರ್ಣಗೊಳಿಸುವಂತೆ ಕಾವೇರಿ ನಿರಾವರಿ ನಿಗಮಕ್ಕೆ 2023ರ ಫೆಬ್ರುವರಿ 6ರಂದು ಹೈಕೋರ್ಟ್ ಆದೇಶಿಸಿತ್ತು.

ಸಿಎಫ್‌ಐ ವಿರುದ್ಧದ ಪ್ರಕರಣ ರದ್ದು

ಬೆಂಗಳೂರು: ಕೊರೊನಾ ನಿಯಮ ಉಲ್ಲಂಘಿಸಿದ ಆರೋಪದಡಿ ನಿಷೇಧಿತ ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ (ಸಿಎಫ್‌ಐ) ಸಂಘಟನೆ ಸದಸ್ಯರ ವಿರುದ್ಧ 2022ರಲ್ಲಿ ದಾಖಲಿಸಲಾಗಿದ್ದ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ಪ್ರಕರಣ ರದ್ದುಪಡಿಸುವಂತೆ ಕೋರಿ ಖಾದರ್ ಬಾಷಾ ಸೇರಿ ಒಟ್ಟು ಎಂಟು ಜನರು ಸಲ್ಲಿಸಿದ್ದ ಅರ್ಜಿಯನ್ನು ಧಾರವಾಡ ಪೀಠದಲ್ಲಿನ ನ್ಯಾಯಮೂರ್ತಿ ಜೆ.ಎಂ.ಖಾಜಿ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಪ್ರಕರಣವನ್ನು ರದ್ದುಪಡಿಸಿ ಆದೇಶಿಸಿದೆ.

‘ಆರೋಪಿಗಳು ಸಭೆ ನಡೆಸಿದ ಸಂದರ್ಭದಲ್ಲಿ ಕೊರೊನಾ ಮೂರನೇ ಅಲೆ ಇತ್ತು. ಸಭೆ ನಡೆಸಿದ ಕಾರಣ ಕೊರೊನಾ ಸೋಂಕು ಹರಡುವ ಸಾಧ್ಯತೆಯಿತ್ತು ಎಂದು ಆರೋಪಿಸಲಾಗಿದೆ. ಆದರೆ, ಸಭೆಯಲ್ಲಿ ಭಾಗಿಯಾಗಿದ್ದವರಾಗಲೀ ಅಥವಾ ಪ್ರೇಕ್ಷಕರಾಗಿದ್ದವರಲ್ಲಿಯಾಗಲೀ ಯಾರಿಗಾದರೂ ಕೊರೊನಾ ಸೋಂಕು ಇತ್ತೇ ಎಂಬುದರ ಬಗ್ಗೆ ತನಿಖಾಧಿಕಾರಿಗಳು ಸೂಕ್ತ ದಾಖಲೆ ಸಂಗ್ರಹಿಸಿಲ್ಲ ಎಂಬ ಅರ್ಜಿದಾರರ ವಾದ ಸರಿಯಾಗಿದೆ. ಹಾಗಾಗಿ, ಇದು ಭಾರತೀಯ ದಂಡ ಸಂಹಿತೆ (ಐಪಿಸಿ) ಕಲಂ 270ರ (ಮಾರಣಾಂತಿಕ ಕಾಯಿಲೆಯ ಸೋಂಕು ಹರಡುವುದು) ಅನ್ವಯ ಶಿಕ್ಷಾರ್ಹ ಅಪರಾಧವಾಗುವುದಿಲ್ಲ. ಅಂತೆಯೇ, ಅರ್ಜಿದಾರರ ವಿರುದ್ಧ ಆರೋಪ ಸಾಬೀತಾಗುವಂತಹ ಯಾವುದೇ ಸಾಕ್ಷ್ಯಾಧಾರಗಳು ಇಲ್ಲ’ ಎಂಬ ಅಭಿಪ್ರಾಯದೊಂದಿಗೆ ನ್ಯಾಯಪೀಠ ಪ್ರಕರಣ ರದ್ದುಗೊಳಿಸಿದೆ.

ಪ್ರಕರಣವೇನು?: ಬಾಗಲಕೋಟೆಯ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ರಾಜ್ಯದ ವಿವಿಧ ಭಾಗದ ಕಾಲೇಜುಗಳ 130ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸಿಎಫ್‌ಐ ಸಭೆ ಹಮ್ಮಿಕೊಂಡಿದ್ದರು. ‘ಕೊರೊನಾ ಮೂರನೇ ಅಲೆಯ ಸಂದರ್ಭದಲ್ಲಿ ಸರ್ಕಾರ ನಿರ್ಬಂಧ ವಿಧಿಸಿದ್ದರೂ ನಿಯಮಗಳನ್ನು ಉಲ್ಲಂಘಿಸಿ ಈ ಸಭೆ ನಡೆಸಲಾಗಿದೆ‘ ಎಂದು ಆರೋಪಿಸಿ ಖಾದರ್ ಬಾಷಾ ಸೇರಿ ಎಂಟು ಜನ ಆರೋಪಿಗಳ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದರು.

ಕದ್ದ ಚಿನ್ನಾಭರಣ ಗುಜರಿ ವ್ಯಾಪಾರಿಗೆ ಮಾರಾಟ!

ಬೆಂಗಳೂರು: ಕಳ್ಳತನವನ್ನೇ ವೃತ್ತಿ ಮಾಡಿಕೊಂಡಿದ್ದ ಪಶ್ಚಿಮ ಬಂಗಾಳ ಮೂಲದ ಆರೋಪಿ ಸುಬ್ರತೋಮಂಡಲ್ (23) ಎಂಬಾತನನ್ನು ಯಶವಂತಪುರ ಪೊಲೀಸರು ಬಂಧಿಸಿದ್ದಾರೆ

ಆರೋಪಿಯು ಮನೆಯೊಂದರಿಂದ 130 ಗ್ರಾಂ ಚಿನ್ನಾಭರಣ ಕದ್ದು ಗುಜರಿ ಅಂಗಡಿಗೆ ಮಾರಾಟ ಮಾಡಿ, ₹30 ಸಾವಿರ ಪಡೆದಿದ್ದ. ಆತ ಮಾರಾಟ ಮಾಡಿದ್ದ ₹ 7.50 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ

ಚಿತ್ರಾವಳಿ

ಶ್ರೀರಾಮಸೇವಾ ಮಂಡಳಿಯು ಹಳೆಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ 85ನೇ ಶ್ರೀರಾಮನವಮಿ ಸಂಗೀತೋತ್ಸವದಲ್ಲಿ ಪಾಲಕಾಡ್ ರಾಮಪ್ರಸಾದ್ ಸಂಗೀತ ಕಛೇರಿಯನ್ನು ಬುಧವಾರ ನಡೆಸಿಕೊಟ್ಟರು.

–ಪ್ರಜಾವಾಣಿ ಚಿತ್ರ

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಬುಧವಾರ ನಡೆದ ಡಾ. ಬಾಬು ಜಗಜೀವನ್ ರಾಮ್ ಅವರ 116ನೇ ಜಯಂತಿ ಕಾರ್ಯಕ್ರಮದಲ್ಲಿ ಡಾ. ದುರ್ಗಾದಾಸ್ ಮತ್ತು ಡಾ. ಮೈಲಹಳ್ಳಿ ರೇವಣ್ಣ ಅವರ ‘ಬಾಬು ಜಗಜೀವನ ರಾಮ್’ ಮತ್ತು ರವೀಂದ್ರ ಕೆ.ವಿ. ಅವರ ‘ನೆಲದ ನಡುವಿನ ದನಿ’, ‘ಕವಲು ಚಿಗುರುವ ಹೊತ್ತು’, ‘ನವಿಲು ಗರಿಯ ಗರ್ಭ’ ಕೃತಿಗಳನ್ನು ಬಿಡುಗಡೆಗೊಳಿಸಿದರು. ಬೆಂಗಳೂರು ವಿಶ್ವವಿದ್ಯಾಲಯ ಕುಲಪತಿ ಜಯಕರ ಎಸ್.ಎಂ., ದೂರಶಿಕ್ಷಣ ನಿರ್ದೇಶನಾಲಯದ ನಿರ್ದೇಶಕ ಡಾ.ಬಿ. ಸಿ.ಮೈಲಾರಪ್ಪ, ರಾಜಪ್ಪ ದಳವಾಯಿ, ದುರ್ಗಾದಾಸ್, ಟಿ.ಎಚ್.ಮೂರ್ತಿ, ಮೌಲ್ಯಮಾಪನ ಕುಲಸಚಿವ ಎಸ್.ಶ್ರೀನಿವಾಸ ಡಾ.ಬಾಬು ಜಗಜೀವನ ರಾಮ್ ಅಧ್ಯಯನ ಕೇಂದ್ರದ ನಿರ್ದೇಶಕ ಬಿ. ಗಂಗಾಧರ ಇದ್ದರು.

ಜನ ಕೇಳಿದಾಗ, ಪ್ರತಿಭಟಿಸಿದಾಗ ಆಗದ ಕಾಮಗಾರಿ • ರಾತ್ರೋರಾತ್ರಿ ರಸ್ತೆ ಫಳಫಳ

ಚುನಾವಣೆ ಡಾಂಬರು: ಇರೋದೆಷ್ಟು ದಿನ?

• ಆರ್. ಮಂಜುನಾಥ್

ರಾಜಧಾನಿ ಕಂಡದ್ದು

ಬೆಂಗಳೂರು: ರಾಜಧಾನಿ ಬೆಂಗಳೂರಿನ ರಸ್ತೆಗಳ ಅವ್ಯವಸ್ಥೆ, ಗುಂಡಿಗಳು, ಚರಂಡಿಗಳಲ್ಲಿ ಹೂಳು, ಹೊರಬರುವ ನೀರು, ಚರಂಡಿ ಮೇಲಿಲ್ಲದ ಸುರಕ್ಷೆ..

ಈ ದುಃಸ್ಥಿತಿಗಳನ್ನು ಸರಿಪಡಿಸಲು ಜನರು ಎಷ್ಟು ಕೇಳಿದರೂ, ಪ್ರತಿಭಟನೆ ಮಾಡಿದರೂ ದುರಸ್ತಿ ಆಗುವುದಿಲ್ಲ. ಆದರೆ, ಚುನಾವಣೆ ಸಂದರ್ಭದಲ್ಲಿ ನಳನಳಿಸುವಂತೆ ಡಾಂಬರು ಹಾಕಲಾಗುತ್ತದೆ. ಇಂತಹ ವೇಗದ ಕಾಮಗಾರಿ ಸಾಮಾನ್ಯ ದಿನಗಳಲ್ಲಿ ಏಕೆ ನಡೆಯುವುದಿಲ್ಲ ಎಂಬುದು ಜನರ ಪ್ರಶ್ನೆ.

ನಗರದಲ್ಲಿ ಇದು ಪ್ರತಿ ಚುನಾವಣೆ ಸಂದರ್ಭದಲ್ಲೂ ಕಂಡುಬರುವ ಚಿತ್ರಣ. ಈ ಬಗ್ಗೆ ನಾಗರಿಕರಲ್ಲಿ ಸಾಕಷ್ಟು ಆಕ್ಷೇಪವಿದೆ. ಕಳೆದ ಹತ್ತು ವರ್ಷಗಳಲ್ಲಿ ನಗರದಲ್ಲಿರುವ 13 ಸಾವಿರ ಕಿಲೋ ಮೀಟರ್ ರಸ್ತೆ ಹಾಗೂ ಪಾದಚಾರಿ ಮಾರ್ಗ, ಚರಂಡಿ ಹಾಗೂ ವಿವಿಧ ಯೋಜನೆಗಳಿಗೆ ವೆಚ್ಚ ಮಾಡಿರುವುದು ಸುಮಾರು ₹25 ಸಾವಿರ ಕೋಟಿ. ಆದರೆ, ಒಮ್ಮೆ ಮಳೆ ಬಂದ ಕೂಡಲೇ ಗುಂಡಿಗಳಾಗುತ್ತವೆ.

ಮಳೆ ಹಾಗೂ ರಸ್ತೆ ಗುಂಡಿಯಿಂದ ನಗರದಲ್ಲಿ ಕಳೆದ ವರ್ಷ ಜನರು ಸಾಕಷ್ಟು ಸಮಸ್ಯೆ ಎದುರಿಸಿದರು. ಅತಿ ಮಳೆಯಿಂದ ಮನೆಗಳಿಗೆ ನೀರು ನುಗ್ಗಿದರೆ, ರಸ್ತೆಯಲ್ಲಿ ನೀರು ನಿಂತು ಗುಂಡಿ ಸೃಷ್ಟಿಯಾಗಿ ಅಪಘಾತಗಳು ಅತಿಯಾದವು. ಸಾವು–ನೋವುಗಳೂ ಆದವು. ಆ ಸಂದರ್ಭದಲ್ಲಿ ನಾಗರಿಕರು ಬಿಬಿಎಂಪಿಗೆ ರಸ್ತೆ ದುರಸ್ತಿ ಮಾಡಲು ಒತ್ತಾಯಿಸಿದರು. 'ಮಳೆ ಮುಗಿಯುವವರೆಗೆ ಯಾವುದೇ ಕೆಲಸವಾಗಲ್ಲ' ಎಂದು ಎಂಜಿನಿಯರ್‌ಗಳು ಸಬೂಬು ಹೇಳಿದರು. ಜನರು ಗುಂಡಿಗಳನ್ನು ತಪ್ಪಿಸಿಕೊಂಡೇ ಸಂಚಾರ ನಡೆಸಿದರು.

'ರಸ್ತೆ ಹಾಳಾಗಿ ಹೋಗಿದೆ. ಸಂಚಾರ ಸಾಧ್ಯವಿಲ್ಲ. ಅತಿಯಾದ ಗುಂಡಿಗಳಾಗಿವೆ, ದುರಸ್ತಿ ಮಾಡಿ ಎಂದು ಮೂರ್ನಾಲ್ಕು ತಿಂಗಳಿನಿಂದ ಮನವಿ ಮಾಡಿಕೊಂಡೆವು. ಆದರೆ, ಯಾವ ಕೆಲಸವೂ ಆಗಲಿಲ್ಲ. ವಿಧಾನಸಭೆ ಚುನಾವಣೆ ಹತ್ತಿರವಾಯಿತು, ನಾವು ಕೇಳದ ರಸ್ತೆಗೂ ಡಾಂಬರು ಬಂದಿದೆ. ರಾತ್ರಿ ಮಲಗಿದ್ದಾಗ ಹಾಳಾಗಿದ್ದ ರಸ್ತೆ, ಬೆಳಿಗ್ಗೆ ಎದ್ದು ನೋಡಿದಾಗ ಡಾಂಬರು ಕಂಡಿದೆ. ಇಷ್ಟೊಂದು ವೇಗವಾಗಿ ಕೆಲಸವಾಗುತ್ತದೆ. ಆದರೆ ನಾವು ಕೇಳಿದಾಗ ಏಕೆ ದುರಸ್ತಿ ಮಾಡಲ್ಲ' ಎಂದು ರಾಜರಾಜೇಶ್ವರಿ ನಗರದ ಶ್ರೀನಿವಾಸ್ ಪ್ರಶ್ನಿಸಿದರು.

'ನಾಗರಿಕರು ಏನು ಕೇಳಿದರೂ ಬಿಬಿಎಂಪಿ ಹಣ ಇಲ್ಲ ಎಂದು ಹೇಳುತ್ತದೆ. ಆದರೆ, ಚುನಾವಣೆ ಸಂದರ್ಭದಲ್ಲಿ ಮಾತ್ರ ಎಲ್ಲ ರೀತಿಯ ಕಾಮಗಾರಿಗೆ ಹಣವೂ ಇರುತ್ತದೆ, ವೇಗವಾಗಿ ಕೆಲಸವೂ ಆಗುತ್ತದೆ. ಈ ರಸ್ತೆ ಡಾಂಬರು ಚುನಾವಣೆ ಮುಗಿಯುವವರೆಗೆ ಇರಲಿ ಎಂಬುದೇ ನಮ್ಮ ಆಶಯ. ಏಕೆಂದರೆ, ಈಗಾಗಲೇ ಮಳೆ ಆರಂಭವಾಗಿದೆ. ಡಾಂಬರು ಕಂಡ ರಸ್ತೆ ಕಿತ್ತುಹೋಗುತ್ತಿರುವ ಉದಾಹರಣೆಯೂ ಇದೆ. ಇಂತಹ ಕಾಮಗಾರಿ ಬೇಕೇ? ಜನರ ಹಣವನ್ನೇಕೆ ಹೀಗೆ ವ್ಯಯ ಮಾಡುತ್ತೀರಿ' ಎಂದು ವಿಜಯನಗರದ ಚಂದ್ರಪ್ಪ ಕೇಳಿದರು.

'ರಸ್ತೆಯಲ್ಲಿ ನೀರು ನಿಲ್ಲದಂತೆ ಕಾಮಗಾರಿ ನಡೆಸಬೇಕು ಎಂಬ ಕನಿಷ್ಠ ಜ್ಞಾನವೂ ಎಂಜಿನಿಯರ್‌ಗಳಿಗೆ ಇಲ್ಲ. ಮಧ್ಯದಲ್ಲಿ ಎತ್ತರ ಇಲ್ಲ, ರಸ್ತೆಯಲ್ಲಿ ನೀರು ನಿಂತು ಡಾಂಬರು ಒಂದೇ ಮಳೆಗೆ ಕಿತ್ತುಹೋಗುತ್ತದೆ. ಜನಪ್ರತಿನಿಧಿಗಳ ಒತ್ತಡಕ್ಕೆ ಮಣಿದು ರಾತ್ರೋರಾತ್ರಿ ಇಂತಹ ಕಾಮಗಾರಿ ಮಾಡುವ ಅಗತ್ಯ ಇದೆಯೇ? ಗುಣಮಟ್ಟದ ಕಾಮಗಾರಿ ಮಾಡಿದರೆ ಜನರು ವರ್ಷಗಟ್ಟಲೆ ನೆಮ್ಮದಿಯಿಂದ ಇರುತ್ತಾರೆ. ಇದು ಅವರಿಗೆ ಬೇಕಿಲ್ಲ ಅನ್ನಿಸುತ್ತೆ' ಎಂದು ಮಹದೇವಪುರದ ಆನಂದ ಹೇಳಿದರು.

ತಾತ್ಕಾಲಿಕ ತುರ್ತು ಶೃಂಗಾರ

ಮಣ್ಣಿನ ವಾಸನೆ ಬಂದರೆ ಮಳೆಗಾಲದ ಆರಂಭ. ಡಾಂಬರು ವಾಸನೆ ಬಂದರೆ ಚುನಾವಣೆ ಬಂತೆಂದೇ ಅರ್ಥ ಎಂಬ ಮಾತಿನಂತೆ ನಗರದ ರಸ್ತೆಗಳನ್ನು ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ತಾತ್ಕಾಲಿಕವಾಗಿ ತುರ್ತು ಶೃಂಗಾರ ಮಾಡಲಾಗಿದೆ. ರಸ್ತೆ ಗುಣಮಟ್ಟವನ್ನು ಮಳೆ ಶುರುವಾದ ತಕ್ಷಣ ಗುಂಡಿಗಳೇ ಹೇಳುತ್ತವೆ. ಚುನಾವಣೆಗೆ ಬಂಡವಾಳ ಹೂಡಿ ಆಯ್ಕೆಯಾಗಿ ಬಂದ ತಕ್ಷಣ ಜೇಬು ತುಂಬಿಸಿಕೊಳ್ಳಲು ರಸ್ತೆ ಕಾಮಗಾರಿಗಳು ಕಾದು ನಿಂತಿರುತ್ತವೆ. ಬಿಡಬ್ಲ್ಯುಎಸ್‌ಎಸ್‌ಬಿ, ಬೆಸ್ಕಾಂಗಳು ರಸ್ತೆಗೆ ಡಾಂಬರು ಹಾಕುವುದನ್ನೇ ಕಾಯುತ್ತಿರುತ್ತಾರೆ. ಇವರದ್ದೆಲ್ಲ ಒಳಒಪ್ಪಂದವಾದಂತೆ. ಬಿಬಿಎಂಪಿಯವರು ರಸ್ತೆ ಮಾಡುತ್ತಿದ್ದಂತೆಯೇ ಇವರೆಲ್ಲ ಅಗೆದುಕೊಂಡು ಬರುತ್ತಾರೆ. ನಂತರ, ಹಾಗೇ ಬಿಟ್ಟು ಹೋಗಿರುತ್ತಾನೆ. ಮತ್ತೆ ರಸ್ತೆ ಡಾಂಬರು ಹಾಕಿ ಅದಕ್ಕೂ ದುಡ್ಡು ಮಾಡಿಕೊಳ್ಳುತ್ತಾರೆ. ಈ ಒಳಒಪ್ಪಂದದ ಪ್ರಕಾರ ಪ್ರತಿ ಆರು ತಿಂಗಳು, ವರ್ಷಕ್ಕೆ ಇಂತಹ ಪ್ರಕ್ರಿಯೆಗಳು ನಡೆಯುತ್ತಲೇ ಇರುತ್ತವೆ. ಇಲಾಖೆಗಳ ನಡುವೆ ಸಮನ್ವಯ ಇಲ್ಲದ್ದೇ ದುಂದು ವೆಚ್ಚಕ್ಕೆ ಮೂಲ ಕಾರಣ.

ಗೌಡಯ್ಯ, ಕಾರ್ಯದರ್ಶಿ, ಜ್ಞಾನಭಾರತಿ ವಾಯುವಿಹಾರಿಗಳ ಸಂಘ

ಲೋಪ ದೋಷಗಳೇ ಕಾರಣ

ರಸ್ತೆ ನಿರ್ಮಿಸುವವರು ಪದವಿ ಪಡೆದ ಎಂಜಿನಿಯರ್‌ಗಳೇ. ಅವರು ಕಲಿಯುವ ಸಂದರ್ಭದಲ್ಲಿ ಎಲ್ಲ ತಂತ್ರಜ್ಞಾನ, ವಿಷಯಗಳನ್ನು ತಿಳಿದುಕೊಂಡಿರುತ್ತಾರೆ. ಅದನ್ನು ವಾಸ್ತವದಲ್ಲಿ ಕಾಮಗಾರಿಯಲ್ಲಿ ತೋರಿಸುವುದಿಲ್ಲ. ತಂತ್ರಜ್ಞಾನ ಅನುಷ್ಠಾನದಲ್ಲಿ ಸಮಸ್ಯೆ ಇದೆ. ಯಾವ ಒತ್ತಡ ಇವರ ಮೇಲೆ ಇರುತ್ತದೋ ಗೊತ್ತಿಲ್ಲ. ಇಂಡಿಯನ್ ರೋಡ್ ಕಾಂಗ್ರೆಸ್ (ಐಆರ್‌ಸಿ) ಪ್ರಕಾರ, ಎಲ್ಲ ಮಾನದಂಡಗಳನ್ನು ಅನುಸರಿಸಬೇಕು. ಆದರೆ, ನಿಗದಿತ ಗ್ರೇಡ್‌ನ ಬಿಟಮಿನ್ ಅನ್ನು ನಿರ್ದಿಷ್ಟ ಪ್ರಮಾಣದಲ್ಲಿ ಅಂದರೆ ಶೇ 5.5ರಲ್ಲಿ ಬಳಸುವುದಿಲ್ಲ. 145 ಡಿಗ್ರಿಯಿಂದ 165 ಡಿಗ್ರಿವರೆಗೆ ಉಷ್ಣಾಂಶ ಇರುವುದಿಲ್ಲ. ಇದರಿಂದ ಜಲ್ಲಿ ಮರಳಿಗೆ ಅಂಟಿಕೊಂಡು ಸದೃಢವಾಗುವುದಿಲ್ಲ. ಮಳೆ ನೀರು ರಸ್ತೆಯಲ್ಲಿ ನಿಲ್ಲದಂತೆಯೂ ಮಾಡುವುದಿಲ್ಲ. ಹೀಗಾಗಿ ಕಳಪೆ ಕಾಮಗಾರಿಯಾಗಿ, ನಾಲ್ಕಾರು ವರ್ಷ ಬಾಳಿಕೆ ಬರಬೇಕಾದ ರಸ್ತೆಗಳು ಒಂದೆರಡು ವರ್ಷಕ್ಕೆ ಹಾಳಾಗುತ್ತವೆ. ಹೆಚ್ಚಿನ ಹಣ ವ್ಯಯ ಮಾಡಲು ಅಥವಾ ಆಗಾಗ್ಗೆ ರಸ್ತೆಗೆ ಡಾಂಬರು ಹಾಕಲು ಈ ರೀತಿ ಮಾಡುತ್ತಾರೆಯೇ ಎಂಬ ಅನುಮಾನವೂ ಇದೆ. ಎಂಜಿನಿಯರ್‌ಗಳ ಕೈಯಲ್ಲೇ ಎಲ್ಲ ಇರುವುದಿಲ್ಲ ಎಂಬುದು ಬಹಿರಂಗ ಸತ್ಯ.

ಶ್ರೀಹರಿ, ಟ್ರಾಫಿಕ್ ತಜ್ಞ

ಮಾದರಿ ಕ್ಷೇತ್ರ: ಮುಂದಿನ ಶಾಸಕರಿಂದ ಜನರ ನಿರೀಕ್ಷೆಗಳೇನು?

ವಿಧಾನಸಭೆ ಚುನಾವಣೆಗೆ ಮತದಾನದ ದಿನ ಹತ್ತಿರವಾಗುತ್ತಿದೆ. ಮುಂದೆ ಆಯ್ಕೆಯಾಗುವ ಶಾಸಕರಿಂದ ಮತದಾರರು ಏನನ್ನು ನಿರೀಕ್ಷಿಸಲಿದ್ದಾರೆ ಎಂಬುದನ್ನು 'ಪ್ರಜಾವಾಣಿ' ಪ್ರಕಟಿಸಲಿದೆ. ನಿಮ್ಮ ಕ್ಷೇತ್ರ ಮಾದರಿಯಾಗಬೇಕಾದರೆ ಏನಾಗಬೇಕು? 50 ಪದದಲ್ಲಿ ಬರೆದು ಏ.7ರ ಮಧ್ಯಾಹ್ನ 2ರೊಳಗೆ ಕಳುಹಿಸಿ.

ಕ್ಷೇತ್ರಗಳು: • ದಾಸರಹಳ್ಳಿ • ಬಸವನಗುಡಿ • ಮಹಾಲಕ್ಷ್ಮಿ ಲೇಔಟ್

96060 38256

ಸೆಲೆಬ್ರಿಟಿ ಮಾತು

'ಜನಪರ ಸರ್ಕಾರ ತರಲು ಎಲ್ಲರೂ ಹಕ್ಕು ಚಲಾಯಿಸಿ'

ಅಕ್ಕೈ ಪದ್ಮಶಾಲಿ
ಸಾಮಾಜಿಕ ಹೋರಾಟಗಾರ್ತಿ

ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದವರು ತಕ್ಷಣ ತಮ್ಮ ಹೆಸರು ಸೇರ್ಪಡೆ ಮಾಡಿಕೊಳ್ಳಬೇಕು. ಜವಾಬ್ದಾರಿಯಿಂದ ಮತದಾನ ಮಾಡಿ, ಸುಸ್ಥಿರ ಸರ್ಕಾರ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಬೇಕು. ಕರ್ನಾಟಕವು ದೇಶದಲ್ಲಿ ಮಾದರಿ ರಾಜ್ಯವಾಗಬೇಕಿದೆ. ಜನಪರ ಸರ್ಕಾರ ತರುವುದಕ್ಕೂ ಎಲ್ಲರೂ ಹಕ್ಕು ಚಲಾಯಿಸಬೇಕು. ಪ್ರವಾಸಕ್ಕೆ ತೆರಳದೇ ಮತಗಟ್ಟೆಗೆ ತೆರಳಿ ಮತದಾನ ಮಾಡಿ.

ಒಂದೇ ದಿನ ₹ 8.37 ಕೋಟಿ ಮೌಲ್ಯದ ಸ್ವತ್ತು ವಶ

ಬೆಂಗಳೂರು: ಚುನಾವಣಾ ಅಕ್ರಮ ತಡೆಗೆ ನೇಮಿಸಿರುವ ವಿವಿಧ ಜಾಗೃತ ದಳಗಳು ಮಂಗಳವಾರ ಒಂದೇ ದಿನ ರಾಜ್ಯದ ವಿವಿಧೆಡೆ ₹ 8.37 ಕೋಟಿ ಮೌಲ್ಯದ ನಗದು ಮತ್ತು ಇತರ ಸ್ವತ್ತುಗಳನ್ನು ವಶಪಡಿಸಿಕೊಂಡಿವೆ.

₹ 4.60 ಕೋಟಿ ನಗದು, ₹ 2.07 ಕೋಟಿ ಮೌಲ್ಯದ 32,946 ಲೀಟರ್ ಮದ್ಯ, ₹ 21.25 ಲಕ್ಷ ಮೌಲ್ಯದ 395 ಗ್ರಾಂ. ಚಿನ್ನ ಹಾಗೂ ₹ 19.08 ಲಕ್ಷ ಮೌಲ್ಯದ 20 ಕೆ.ಜಿ. ಬೆಳ್ಳಿಯನ್ನು ಚುನಾವಣಾ ಅಕ್ರಮ ತಡೆಗೆ ಸಂಬಂಧಿಸಿದ ಕಾರ್ಯಾಚರಣೆಗಳಲ್ಲಿ ಒಂದೇ ದಿನ ವಶಪಡಿಸಿಕೊಳ್ಳಲಾಗಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿ ತಿಳಿಸಿದೆ.

ಮಾರ್ಚ್ 29ರಂದು ಚುನಾವಣಾ ನೀತಿ ಸಂಹಿತೆ ಜಾರಿಯಾದ ದಿನದಿಂದ ಈವರೆಗೆ ಒಟ್ಟು ₹ 69.36 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ₹ 22.75 ಕೋಟಿ ನಗದು, ₹ 24.45 ಕೋಟಿ ಮೌಲ್ಯದ 3.61 ಲಕ್ಷ ಲೀ. ಮದ್ಯ, ₹ 56.03 ಲಕ್ಷ ಮೌಲ್ಯದ 101 ಕೆ.ಜಿ. ಮಾದಕವಸ್ತುಗಳು, ₹ 8.71 ಕೋಟಿ ಮೌಲ್ಯದ 23.08 ಕೆ.ಜಿ. ಚಿನ್ನ, ₹ 84.27 ಕೋಟಿ ಮೌಲ್ಯದ 121.62 ಕೆ.ಜಿ. ಬೆಳ್ಳಿಯನ್ನು ಈವರೆಗೆ ವಶಪಡಿಸಿಕೊಳ್ಳಲಾಗಿದೆ ಎಂದು ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

ನಗದು, ಮದ್ಯ, ಮಾದಕವಸ್ತು, ಚಿನ್ನ–ಬೆಳ್ಳಿ ಮತ್ತು ಉಡುಗೊರೆ ವಸ್ತುಗಳನ್ನು ವಶಪಡಿಸಿಕೊಂಡಿರುವುದಕ್ಕೆ ಸಂಬಂಧಿಸಿದಂತೆ 526 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ ಎಂದು ತಿಳಿಸಿದ್ದಾರೆ.

ಬೆಳಗಾವಿಯ ರಾಜಕಾರಣಿಗಳು ಕನ್ನಡ ದ್ರೋಹಿಗಳು: ವಾಟಾಳ್

ಪ್ರಜಾವಾಣಿ ವಾರ್ತೆ

ವಾಟಾಳ್ ನಾಗರಾಜ್

ಬೆಂಗಳೂರು: 'ಶಿವಾಜಿಯ ಪ್ರತಿಮೆಗೆ ಎರಡೆರಡೂ ಬಾರಿ ಅಭಿಷೇಕ ಮಾಡಿ ಮರಾಠಿಗರನ್ನು ಓಲೈಸುವ ರಾಜಕಾರಣ ಮಾಡುತ್ತಿರುವ ಬೆಳಗಾವಿಯ ಎಲ್ಲ ರಾಜಕಾರಣಿಗಳು ಕನ್ನಡ ದ್ರೋಹಿಗಳು' ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗಾರಾಜ್ ಹೇಳಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು 'ಗಡಿ ಭಾಗದ ರಾಜಕಾರಣಿಗಳು ಶಿವಾಜಿಗೆ ಕೊಡುವ ಆದ್ಯತೆ ಕಿತ್ತೂರ ರಾಣಿ ಚನ್ನಮ್ಮಗೆ ನೀಡುತ್ತಿಲ್ಲ. ಆದ್ದರಿಂದ, ಗಡಿಭಾಗದ ಕನ್ನಡಪರ ಸಂಘಟನೆಗಳ ಮುಖಂಡರು ಚುನಾವಣೆಯಲ್ಲಿ ಸ್ಪರ್ಧಿಸುವ ಮೂಲಕ ಮರಾಠಿಗರ ವಿರುದ್ಧ ಹೋರಾಡಬೇಕು' ಎಂದು ಕರೆ ನೀಡಿದರು.

'ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಕನ್ನಡ ಚಳವಳಿ ವಾಟಾಳ್ ಪಕ್ಷದಿಂದ ಚಾಮರಾಜನಗರ ಕ್ಷೇತ್ರದಿಂದ ನಾನು ಸ್ಪರ್ಧಿಸುತ್ತಿದ್ದೇನೆ. ರಾಜ್ಯದಲ್ಲಿರುವ ಎಲ್ಲ ಕನ್ನಡಪರ ಸಂಘಟನೆಗಳ ಮುಖಂಡರು ಚುನಾವಣೆಗೆ ಸ್ಪರ್ಧಿಸಬೇಕು' ಎಂದು ಕರೆ ನೀಡಿದರು.

'ತತ್ವ, ಸಿದ್ಧಾಂತ ಮೇಲೆ ಚುನಾವಣೆ ನಡೆಯಬೇಕು. ಜಾತಿ, ಭ್ರಷ್ಟಾಚಾರ, ಉಡುಗೊರೆ ಹಂಚಿಕೆಯೇ ಚುನಾವಣೆ ಆಗಬಾರದು. ಕರ್ನಾಟಕದಲ್ಲಿ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಮೂರು ಪಕ್ಷಗಳಲ್ಲಿ ಜಾತಿವಾದಿಗಳು ಮತ್ತು ಭ್ರಷ್ಟರು ಇದ್ದಾರೆ. ಚುನಾವಣೆ ವ್ಯವಸ್ಥೆ ಹದಗೆಟ್ಟಿದೆ. ಚುನಾವಣೆ ಎಂದರೆ ದರೋಡೆ ಎನ್ನುವಂತಾಗಿದೆ' ಎಂದರು.

'ಮಹಾರಾಷ್ಟ್ರದ ನಡೆ ಖಂಡನೀಯ'

'ರಾಜ್ಯದ 865 ಗಡಿ ಗ್ರಾಮಗಳಿಗೆ ಆರೋಗ್ಯ ವಿಮೆ ನೀಡಿರುವ ಮಹಾರಾಷ್ಟ್ರದ ನಡೆ ಖಂಡನೀಯ. ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ್ ಶಿಂಧೆ, ದೇವೇಂದ್ರ ಫಡಣವೀಸ್ ಮತ್ತು ಉದ್ಧವ್ ಠಾಕ್ರೆ ಎಲ್ಲರು ಡಕಾಯಿತರಾಗಬೇಕಿದ್ದವರು ರಾಜಕಾರಣಿಗಳಾಗಿದ್ದಾರೆ. ಮಹಾರಾಷ್ಟ್ರ ಸರ್ಕಾರ ತನ್ನ ಆದೇಶವನ್ನು ಕೂಡಲೇ ಹಿಂಪಡೆಯಬೇಕು' ಎಂದು ವಾಟಾಳ್ ನಾಗರಾಜ್ ಆಗ್ರಹಿಸಿದರು.

ಇಂದಿರಾ ಚಿತ್ರಕ್ಕೆ ಮುಸುಕು

ವಿಧಾನಸಭೆ ಚುನಾವಣೆ ನೀತಿ ಸಂಹಿತೆ ಕಾರಣಕ್ಕಾಗಿ ಚಿಕ್ಕಲಸಂದ್ರದ ಇಂದಿರಾ ಕ್ಯಾಂಟೀನ್‌ನಲ್ಲಿ ಇಂದಿರಾ ಗಾಂಧಿ ಅವರ ಭಾವಚಿತ್ರವನ್ನು ಬಿಬಿಎಂಪಿ ಸಿಬ್ಬಂದಿ ಕಾಗದದಿಂದ ಮುಚ್ಚಿದರು

– ಪ್ರಜಾವಾಣಿ ಚಿತ್ರ

'ಹಣ ಸಾಗಿಸಲು ಬಿಜೆಪಿಗೆ ಐಟಿ, ಇ.ಡಿ ರಕ್ಷಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿಯವರು ತಮ್ಮ ಒಬ್ಬೊಬ್ಬ ಅಭ್ಯರ್ಥಿಗೆ ₹ 10 ಕೋಟಿ ಕೊಡುತ್ತಿದ್ದಾರೆ. ಅವರು ಈ ಹಣ ಸಾಗಿಸಲು ಐಟಿ, ಇ.ಡಿ ರಕ್ಷಣೆ ಪಡೆಯುತ್ತಾರೆ' ಎಂದು ಕಾಂಗ್ರೆಸ್ ಶಾಸಕ ದಿನೇಶ್ ಗುಂಡೂರಾವ್ ಆರೋಪಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಬಿಜೆಪಿಯವರು ಪೊಲೀಸ್ ವಾಹನದಲ್ಲೇ ಹಣ ಸಾಗಿಸಬಹುದು' ಎಂದು ಅವರು ಹೇಳಿದರು.

'ಕಳೆದ ಚುನಾವಣೆ ವೇಳೆ ಯಾರ ಮೇಲೆ ಐಟಿ, ಇಡಿ ದಾಳಿ ನಡೆದಿದೆ ಎನ್ನುವುದನ್ನು ನೋಡಿದ್ದೇವೆ. ಐಟಿ, ಇ.ಡಿ ದಾಳಿ ಕೇವಲ ಕಾಂಗ್ರೆಸ್, ಜೆಡಿಎಸ್ ನಾಯಕರ ಮೇಲೆ ಮಾತ್ರ ನಡೆಯುತ್ತದೆ' ಎಂದು ದೂರಿದ ಅವರು, 'ಬಿಜೆಪಿ ಅಭ್ಯರ್ಥಿಗಳ ಮನೆಗಳ ಮೇಲೆ ದಾಳಿ ನಡೆಸಿದ್ದು ಎಲ್ಲೂ ಕಾಣಿಸಲೇ ಇಲ್ಲ' ಎಂದರು

'ಐಟಿ, ಇ.ಡಿ ಬಿಜೆಪಿ ಪ್ರೈವೇಟ್ ಡಿಪಾರ್ಟ್‌ಮೆಂಟ್ ಆಗಿದೆ. ಸೋಲುವ ಭೀತಿಯಿಂದ ವಿರೋಧ ಪಕ್ಷಗಳ ಅಭ್ಯರ್ಥಿಗಳ ಮೇಲೆ ದಾಳಿ ನಡೆಸಿ ಕೆಟ್ಟ ಹೆಸರು ಬರುವಂತೆ ಬಿಜೆಪಿಯವರು ಮಾಡುತ್ತಾರೆ. ಆ ಮೂಲಕ, ಅಭ್ಯರ್ಥಿಗಳನ್ನು ಮಾನಸಿಕವಾಗಿ ಕುಗ್ಗುವಂತೆ ಮಾಡುತ್ತಾರೆ' ಎಂದೂ ಹೇಳಿದರು.

ಬಿಜೆಪಿ ಸೇರಲು ಸಿನಿಮಾ ತಾರೆಗಳಿಗೆ ಇ.ಡಿ, ಐ.ಟಿ ಒತ್ತಡ: ಸುರ್ಜೇವಾಲಾ

ನವದೆಹಲಿ: ಸಿನಿಮಾ ನಟರು ಮತ್ತು ನಟಿಯರು ಪಕ್ಷ ಸೇರುವಂತೆ ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ಆದಾಯ ತೆರಿಗೆ (ಐ.ಟಿ) ಇಲಾಖೆ ಮೂಲಕ ಬಿಜೆಪಿ ಒತ್ತಡ ಹೇರುತ್ತಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಉಸ್ತುವಾರಿ ರಣದೀಪ್ ಸುರ್ಜೇವಾಲಾ ಬುಧವಾರ ಆರೋಪಿಸಿದರು.

ನಟ 'ಕಿಚ್ಚ' ಸುದೀಪ್ ಬಿಜೆಪಿಗೆ ಬೆಂಬಲ ಘೋಷಿಸಿರುವ ಬಗ್ಗೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಕರ್ನಾಟಕದ ಚುನಾವಣೆಯು ಸಿನಿಮಾ ಅಲ್ಲ ಮತ್ತು ನಟನೆಯೂ ಅಲ್ಲ. ಇದು ರೀಲ್ ಅಂತೂ ಅಲ್ಲ. ಚಿತ್ರಮಂದಿರದಲ್ಲಿ 3 ತಾಸು ಕುಳಿತು ಸಿನಿಮಾ ನೋಡಿದಂತೆಯೂ ಅಲ್ಲ. ಆರೂವರೆ ಕೋಟಿ ಕನ್ನಡಿಗರ ಜೀವನ ಈ ಚುನಾವಣೆ ಮೇಲೆ ನಿಂತಿದೆ. ಬಿಜೆಪಿಯು ಸೋಲಿನ ಭೀತಿಯಿಂದಾಗಿ ಚಿತ್ರರಂಗದವರನ್ನು ಪಕ್ಷ ಸೇರುವಂತೆ ಒತ್ತಡ ಹೇರುತ್ತಿದೆ' ಎಂದು ವ್ಯಂಗ್ಯವಾಡಿದರು.

ಅಧಿಕಾರಿಗಳಿಂದ 232 ಕುಕ್ಕರ್ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರಿಗೆ ಹಂಚಿಕೆ ಮಾಡಲು ಆರ್.ಟಿ. ನಗರದ ಮನೆಯಲ್ಲಿ ದಾಸ್ತಾನು ಮಾಡಿದ್ದ 232 ಕುಕ್ಕರ್‌ಗಳನ್ನು ಪೊಲೀಸರು ಹಾಗೂ ಚುನಾವಣೆ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

ಕುಕ್ಕರ್ ಬಾಕ್ಸ್‌ಗಳ ಮೇಲೆ ಅಖಂಡ ಶ್ರೀನಿವಾಸಮೂರ್ತಿ ಅವರ ಭಾವಚಿತ್ರವಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚುನಾವಣೆ ಅಧಿಕಾರಿಗಳು ಜಪ್ತಿ ಮಾಡಿದ ಕುಕ್ಕರ್‌ಗಳು

ಸಾಲದ ಹೊರೆ ಹೊರಿಸುವುದಿಲ್ಲ: ಎಚ್‌ಡಿಕೆ

ಬೆಂಗಳೂರು: ಜೆಡಿಎಸ್ ಅಧಿಕಾರಕ್ಕೆ ಬಂದರೆ ಪಂಚರತ್ನ ಯೋಜನೆಗಳ ಅನುಷ್ಠಾನಕ್ಕಾಗಿ ಯಾವುದೇ ಹೊಸ ತೆರಿಗೆ ಹೇರುವುದಿಲ್ಲ, ಸಾಲವನ್ನೂ ತರುವುದಿಲ್ಲ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಗಾಂಧಿನಗರ ವಿಧಾನಸಭಾ ಕ್ಷೇತ್ರದಲ್ಲಿ ಬುಧವಾರ ಪಂಚರತ್ನ ಯಾತ್ರೆಯಲ್ಲಿ ಮಾತನಾಡಿದ ಅವರು, 'ಪಂಚರತ್ನ ಯೋಜನೆಗಳು ರಾಜ್ಯದ ಜನರ ಜೀವನದಲ್ಲಿ ಮಹತ್ತರ ಬದಲಾವಣೆ ತರಲಿವೆ. ನಗರದಲ್ಲಿ ಇರುವ ಬಡತನದ ಸಮಸ್ಯೆ ಸೇರಿದಂತೆ ಅನೇಕ ಸವಾಲುಗಳನ್ನು ಎದುರಿಸಿ ಮುನ್ನಡೆಯಲು ಈ ಯೋಜನೆಗಳು ಸಹಕಾರಿಯಾಗಲಿವೆ. 25 ವರ್ಷ ಅಧಿಕಾರ ಕೊಟ್ಟರೆ ಅಮೃತ ಕಾಲ ತರುವುದಾಗಿ ಬಿಜೆಪಿಯವರು ಹೇಳುತ್ತಾರೆ. ನಾನು ಹಾಗೆ ಕೇಳುವುದಿಲ್ಲ. ಒಂದು ಬಾರಿ ನನಗೆ ಅವಕಾಶ ಕೊಡಿ, ಎಲ್ಲರ ಬದುಕು ಹಸನು ಮಾಡುವೆ' ಎಂದರು.

ಕುಮಾರಸ್ವಾಮಿ ಬುಧವಾರ ಬೆಳಿಗ್ಗೆ ಮಾಗಡಿ ರಸ್ತೆ, ಓಕಳಿಪುರ, ಶ್ರೀರಾಮಪುರ ಸೇರಿದಂತೆ ಗಾಂಧಿನಗರ ವಿಧಾನ ಸಭಾ ಕ್ಷೇತ್ರದ ವಿವಿಧೆಡೆ ಯಾತ್ರೆ ನಡೆಸಿ, ಮತ ಯಾಚಿಸಿದರು. ಗಾಂಧಿನಗರ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ನಾರಾಯಣಸ್ವಾಮಿ ಜತೆಗಿದ್ದರು. ಸಂಜೆ ಸಿಸಿಬಿ ಕಚೇರಿ ಎದುರಿನಿಂದ ಯಾತ್ರೆ ಆರಂಭಿಸಿದ ಕುಮಾರಸ್ವಾಮಿ, ಚಾಮರಾಜಪೇಟೆ ವಿವಿಧ ಕ್ಷೇತ್ರದಲ್ಲಿ ಸಂಚರಿಸಿದರು. ಪಕ್ಷದ ಮುಖಂಡರಾದ ಇಮ್ರಾನ್ ಪಾಷಾ, ಗೋವಿಂದರಾಜು ಜತೆಗಿದ್ದರು.

ಪಂಪನ ಪ್ರತಿಮೆ ಸ್ಥಾಪನೆಗೆ ಕ್ರಮ

ಬೆಂಗಳೂರು: ಗಣೇಶ್ ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ಪಂಪ ಮಹಾಕವಿ ಪ್ರತಿಮೆ ಸ್ಥಾಪನೆಗೆ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಮುಂದಾಗಿದ್ದು, ಈ ಬಗ್ಗೆ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರು ಬಿಬಿಎಂಪಿ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

ಪರಿಷತ್ತಿನ ಕಚೇರಿಯ ಮುಂಭಾಗದ ತಡೆಗೋಡೆಗೆ ಹೊಂದಿಕೊಂಡು ಪ್ರತಿಮೆ ಸ್ಥಾಪನೆಗೆ ಅವಕಾಶ ನೀಡುವಂತೆ, ಪಂಪ ಮಹಾಕವಿ ರಸ್ತೆಯನ್ನು ವಿಶೇಷ ರಸ್ತೆಯೆಂದು ಪರಿಗಣಿಸಿ, ಪ್ರೇಕ್ಷಣೀಯ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಪತ್ರದಲ್ಲಿ ಮನವಿ ಮಾಡಿದ್ದಾರೆ.

'ಪಂಪ ಮಹಾಕವಿ ರಸ್ತೆಯಲ್ಲಿ ಪಂಪನ ಪುತ್ಥಳಿ ಸ್ಥಾಪಿಸುವ ಮೂಲಕ ಕನ್ನಡ ಇತಿಹಾಸ ಸಾರುವ ರಸ್ತೆಯನ್ನಾಗಿ ಮೇಲ್ದರ್ಜೆಗೆ ಏರಿಸಬೇಕು ಎಂಬುದು ಪರಿಷತ್ತಿನ ಉದ್ದೇಶ. ಮಿಂಟೊ ಕಣ್ಣಿನ ಆಸ್ಪತ್ರೆಯಿಂದ ನ್ಯಾಷನಲ್ ಕಾಲೇಜು ರಸ್ತೆಯ ತುದಿಯವರೆಗೆ ಇರುವ ಈ ರಸ್ತೆಯನ್ನು ಆಧುನೀಕರಣಗೊಳಿಸಿ, ಕನ್ನಡಮಯ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಬೇಕು ಎಂಬುದು ನಮ್ಮ ಆಶಯ' ಎಂದಿದ್ದಾರೆ.

'ಘೋಷ ವಾಕ್ಯ ಕೈಬಿಟ್ಟಿಲ್ಲ': 'ಪರಿಷತ್ತಿನ ಆವರಣದ ಕಮಾನಿನ ಮೇಲೆ ಇದ್ದ 'ಮನುಷ್ಯಜಾತಿ ತಾನೊಂದೆ ವಲಂ' ಎನ್ನುವ ಘೋಷ ವಾಕ್ಯವನ್ನು ಪಂಪನ ಪ್ರತಿಮೆಯ ಬಳಿ ಉಳಿಸಿಕೊಳ್ಳಲಾಗುವುದು. ಇದರ ಜೊತೆಗೆ ವಿಶ್ವ ಮಾನವತ್ವ ಸಾರಿದ ಕುವೆಂಪು ಅವರ 'ಎಲ್ಲಾದರೂ ಇರು ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು' ಎನ್ನುವ ಘೋಷ ವಾಕ್ಯವನ್ನೂ ಸೇರ್ಪಡೆ ಮಾಡಲಾಗುವುದು' ಎಂದು ಸ್ಪಷ್ಟಪಡಿಸಿದ್ದಾರೆ.

ಪಿಂಚಣಿದಾರರ ಸಭೆ: 27ಕ್ಕೆ ಪ್ರತಿಭಟನೆಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಲ್‌ಬಾಗ್ ಆವರಣದಲ್ಲಿ ಇತ್ತೀಚೆಗೆ ಜರುಗಿದ 'ಇಪಿಎಸ್-95' ಪಿಂಚಣಿದಾರರ ಸಭೆಯಲ್ಲಿ ಏಪ್ರಿಲ್ 27ರಂದು ಇಪಿಎಫ್‌ಒ ಅಧಿಕಾರಿಗಳು ಹಮ್ಮಿಕೊಂಡಿರುವ 'ಆಪ್ ಕೆ ನಿಕಟ್' ಸಭೆಯಲ್ಲಿ ಪ್ರತಿಭಟನೆ ಮಾಡಲು ಒಮ್ಮತದ ನಿರ್ಣಯ ಕೈಗೊಳ್ಳಲಾಯಿತು.

ಆಧಾರ್ ಕಾರ್ಡ್ ಲಿಂಕ್ ಸೇರಿ ವಿವಿಧ ಸಮಸ್ಯೆಗಳನ್ನು ಬಗೆಹರಿಸಲು ಇಪಿಎಫ್‌ಒ ಅಧಿಕಾರಿಗಳು ಸರಿಯಾಗಿ ಸ್ಪಂದಿಸುತ್ತಿಲ್ಲ ಎಂದು ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು.

ಪಿಂಚಣಿದಾರರಿಗೆ ಕನಿಷ್ಠ ಪಿಂಚಣಿ, ಭತ್ಯೆ ಹಾಗೂ ವೈದ್ಯಕೀಯ ಸೌಲಭ್ಯ ನೀಡಬೇಕೆಂದು ರಾಷ್ಟ್ರೀಯ ಸಂಘರ್ಷ ಸಮಿತಿಯ ಅಧ್ಯಕ್ಷರಾದ ಅಶೋಕ್ ರಾವತ್ ಕರೆ ನೀಡಿದ್ದಾರೆ ಎಂದು ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಎಸ್ ನಿವೃತ್ತ ನೌಕರರ ಸಂಘದ ಕಾರ್ಯಾಧ್ಯಕ್ಷ ನಂಜುಂಡೇಗೌಡ ಹೇಳಿದರು.

ಇಪಿಎಸ್ ನಿವೃತ್ತರು ಆನ್‌ಲೈನ್ ಅರ್ಜಿ ಸಲ್ಲಿಸಲು ಮೇ 3 ಕೊನೆಯ ದಿನವಾಗಿದ್ದು, ಎಲ್ಲ ಸದಸ್ಯರು ಅರ್ಜಿ ಸಲ್ಲಿಸಬೇಕು ಎಂದು ತಿಳಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಡೊಲಪ್ಪ ಇದ್ದರು.

ಲಾಲ್‌ಬಾಗ್ ಆವರಣದಲ್ಲಿ ಇತ್ತೀಚೆಗೆ ಪಿಂಚಣಿದಾರರ ಸಭೆ ನಡೆಯಿತು

ನಗರದಲ್ಲಿ ಇಂದು

ಮುತ್ಯಾಲಮ್ಮ ದೇವಿಯ ರಥೋತ್ಸವ: ಬೆಳಿಗ್ಗೆ 8ಕ್ಕೆ ಅಮ್ಮನ ತವರೂರು (ಪಾಟರಿಟೌನ್) ಮಡಲಕ್ಕಿ ಉತ್ಸವ, ಮಧ್ಯರಾತ್ರಿ 12ಕ್ಕೆ ಜಲಜಮ್ಮ ದೇವಿಯ ಉತ್ಸವ, ಆಯೋಜನೆ ಮತ್ತು ಸ್ಥಳ: ಮುತ್ಯಾಲಮ್ಮ ದೇವಿ ಟೆಂಪಲ್ ಟ್ರಸ್ಟ್, ಕೆ ಸ್ಟ್ರೀಟ್ ಸೆಪ್ಪಿಂಗ್ ರಸ್ತೆ, ಶಿವಾಜಿನಗರ

ಚಂದ್ರ ಚೌಡೇಶ್ವರಿ ದೇವಿಯ ರಥೋತ್ಸವ: ಆಯೋಜನೆ ಮತ್ತು ಸ್ಥಳ: ರಾಮಲಿಂಗೇಶ್ವರ ಚಂದ್ರ ಚೌಡೇಶ್ವರಿ ದೇವಸ್ಥಾನ, ಚೌಡೇಶ್ವರಿ ಗುಡಿ ಬೀದಿ, ಬೆಳಿಗ್ಗೆ 8.58

ನ್ಯಾ. ಅರವಿಂದ್ ಕುಮಾರ್

ನ್ಯಾಯಮೂರ್ತಿ ಅರವಿಂದ್ ಕುಮಾರ್ ಅವರಿಗೆ ಸನ್ಮಾನ ಕಾರ್ಯಕ್ರಮ: ಅತಿಥಿಗಳು: ನ್ಯಾಯಮೂರ್ತಿ ಪ್ರಸನ್ನ ಬಿ. ವರಾಳೆ, ಪ್ರಭುಲಿಂಗ್ ಕೆ. ನಾವದಗಿ, ವಿವೇಕ್ ಸುಬ್ಬಾರೆಡ್ಡಿ, ಆಯೋಜನೆ: ದಿ ಅಡ್ವೊಕೇಟ್ಸ್ ಅಸೋಸಿಯೇಷನ್, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಸಂಜೆ 5.30

'ಹಳಗನ್ನಡ ಮತ್ತು ಮಧ್ಯಕಾಲೀನ ಕನ್ನಡ ಕಾವ್ಯ' ತರಗತಿಗಳ ಉದ್ಘಾಟನೆ: ಪಿ.ವಿ. ನಾರಾಯಣ, ಉಪಸ್ಥಿತಿ: ಆರ್. ಲಕ್ಷ್ಮೀನಾರಾಯಣ, ಕೆ.ಆರ್. ಗಣೇಶ್, ವಿಜಯಾ ಸುಬ್ಬರಾಜ್, ರಾಜಪ್ಪ ದಳವಾಯಿ, ಚಂದ್ರಶೇಖರ ನಾದೂರು, ಎನ್.ಆರ್. ಲಲಿತಾಂಬ, ಶ್ಯಾಮಲಾ ಪ್ರಕಾಶ್, ಶಾಂತರಾಜು, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನದ ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

ಮಹಾದೇವಿ ಅಕ್ಕನವರಿಗೆ ವಚನ ಪ್ರಣಾಮ: ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಅತಿಥಿ: ಡಿ. ಚೆನ್ನಮಲ್ಲಯ್ಯ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಬಸವ ಮಂಟಪ, ಬಸವೇಶ್ವರ ಉದ್ಯಾನ, ಕೆ.ಸಿ. ಎಚ್‌ಎಸ್. ಲೇಔಟ್, ಕೆಂಚನಪುರ ಕ್ರಾಸ್, ಸಂಜೆ 5.30

ಭಜನೆ, ಪ್ರವಚನ, ಹರಿನಾಮ ಸಂಕೀರ್ತನೆ: ಹರಿನಾಮ ಸಂಕೀರ್ತನೆ: ಸುಷ್ಮಾ ಶ್ರೇಯಸ್, ಆಯೋಜನೆ ಮತ್ತು ಸ್ಥಳ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಸೀತಾಪತಿ ಅಗ್ರಹಾರ, ಸಂಜೆ 6.30ರಿಂದ

ಗಿರೀಶ ಕಾರ್ನಾಡರ 'ತುಘಲಕ್' ನಾಟಕ ಪ್ರದರ್ಶನ: ವಿನ್ಯಾಸ: ಎಂ.ಎಸ್. ಸತ್ಯು, ನಿರ್ದೇಶನ: ಎಸ್. ಸುರೇಂದ್ರನಾಥ್, ಆಯೋಜನೆ: ಭೂಮಿಜಾ, ಸ್ಥಳ: ರಂಗಶಂಕರ, ಸಂಜೆ 7.30

ರಾಮೋತ್ಸವ ವಿಶೇಷ

ಶ್ರೀರಾಮೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ, ಕೊಳಲು: ಪ್ರಮುಖ್ ಎಂ. ಎಸ್., ಪಿಟೀಲು: ಜನಾರ್ದನ್ ಶ್ರೀನಾಥ್, ಮೃದಂಗ: ವಿನಯ್ ಎಂ. ನಾಗರಾಜನ್, ಘಟ: ಶ್ರೀನಿಧಿ ಆರ್. ಕೌಂಡಿನ್ಯ, ಖಂಜೀರಾ: ಶ್ರೀಧರ್ ಶಿವಶಂಕರ್, ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಗಾಯನ: ಜಯತೀರ್ಥ ಮೇವುಂಡಿ, ತಬಲಾ: ಗುರುಮೂರ್ತಿ ವೈದ್ಯ, ಹಾರ್ಮೋನಿಯಂ: ಅಶ್ವಿನಿ ವಲವಾಲ್ಕರ್, ಆಯೋಜನೆ ಮತ್ತು ಸ್ಥಳ: ಶ್ರೀರಾಮಮಂದಿರಂ ಟ್ರಸ್ಟ್, ನರಸಿಂಹರಾಜ ಕಾಲೊನಿ, ಸಂಜೆ 4.30ರಿಂದ

ಶ್ರೀರಾಮೋತ್ಸವ: ಬೆಳಿಗ್ಗೆ 9.30ಕ್ಕೆ ಸತ್ಯನಾರಾಯಣ ಸ್ವಾಮಿ ಪೂಜೆ, ನೃತ್ಯ: ನಾಗಶ್ರೀ ಮತ್ತು ಸಾತ್ವಿಕ್, ಸಂಗೀತ ಕಛೇರಿ: ಬೆಂಗಳೂರ ಸಹೋದರರು, ಹರಿಹರನ್ ಎಂ.ಬಿ., ಅಶೋಕ್ ಎಸ್. ಪಿಟೀಲು: ಮಾಥುರ್ ವಿಶ್ವಜಿತ್, ಮೃದಂಗ: ಸಿ. ಚೆಲುವರಾಜು, ಘಟ: ಎನ್. ಗುರುಮೂರ್ತಿ, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಸೇವಾ ಮಂಡಳಿ, ರಾಜಾಜಿನಗರ, ಸಂಜೆ 5.30ರಿಂದ

ಸಿಕ್ಕಿಲ್ ಗುರುಚರಣ್

ಶ್ರೀರಾಮ ನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಶ್ವೇತಾ ಡೊಂಗ್ರೆ ಮತ್ತು ತಂಡ, ಸಂಗೀತ ಕಛೇರಿ: ಸಿಕ್ಕಿಲ್ ಗುರುಚರಣ್, ಪಿಟೀಲು: ಸ್ಮಿತಾ ಎಚ್.ಎಂ., ಮೃದಂಗ: ಬೆಂಗಳೂರು ವಿ. ಪ್ರವೀಣ್, ಘಟ: ಸುಕನ್ಯಾ ರಾಮಗೋಪಾಲ್, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲಾ ಆವರಣ, ಚಾಮರಾಜಪೇಟೆ, ಸಂಜೆ 5ರಿಂದ

30ನೇ ಶ್ರೀರಾಮನವಮಿ ಸಂಗೀತೋತ್ಸವ: ಭರತನಾಟ್ಯ ಪ್ರದರ್ಶನ: ಜಸ್ಮಿತಾ ಎಸ್., ಗಾಯನ: ವೃಂದಾ ಆಚಾರ್ಯ, ವ್ಯಾಖ್ಯಾನ: ಕೃಷ್ಣರಾಜ ಕುತ್ಪಾಡಿ, ಪಿಟೀಲು: ಸಿಂಧು ಸುಚೇತನ್, ಮೃದಂಗ: ಅನಿರುದ್ಧ ಎಸ್. ಭಟ್, ಘಟ: ಶರತ್ ಕೌಶಿಕ್, ಆಯೋಜನೆ ಹಾಗೂ ಸ್ಥಳ: ಶ್ರೀ ವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 5.15 ರಿಂದ

ರಾಮನವಮಿ ಕಾರ್ಯಕ್ರಮ: ಭರತನಾಟ್ಯ ಪ್ರದರ್ಶನ: ಲಲಿತಾ ವಿ. ಮತ್ತು ತಂಡ, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

ಶ್ರೀರಾಮನವಮಿ ಸಂಗೀತೋತ್ಸವ: ವೀಣೆ: ಡಿ. ಬಾಲಕೃಷ್ಣ, ಕೊಳಲು: ವಿ. ವಂಶಿಧರ್, ಮೃದಂಗ: ಆನೂರು ಅನಂತ ಕೃಷ್ಣ ಶರ್ಮಾ, ಘಟ: ಎಸ್.ಎನ್. ನಾರಾಯಣಮೂರ್ತಿ, ಆಯೋಜನೆ: ಶೇಷಾದ್ರಿಪುರ ರಾಮಸೇವಾ ಸಮಿತಿ, ಸ್ಥಳ: ರಾಷ್ಟ್ರಕವಿ ಕುವೆಂಪು ರಂಗಮಂದಿರ, ಶೇಷಾದ್ರಿಪುರ ಕಾಲೇಜಿನ ಆವರಣ, ಶೇಷಾದ್ರಿಪುರ, ಸಂಜೆ 6.30

ಶ್ರೀರಾಮೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ, ಗಾಯನ: ಅಭಿಷೇಕ್ ಎನ್.ಎಸ್., ಪಿಟೀಲು: ಗೋವಿಂದ ಮಾಧವ, ಮೃದಂಗ: ಸಚಿನ್ ಪ್ರಕಾಶ್, ಆಯೋಜನೆ ಮತ್ತು ಸ್ಥಳ: ಜಯರಾಮ ಸೇವಾ ಮಂಡಳಿ, ಜಯನಗರ, ಸಂಜೆ 6.30

ಸ್ಪರ್ಧಾ ವಾಣಿ

ಗಡಿ ಗ್ರಾಮಗಳ ಅಭಿವೃದ್ಧಿಗೆ

‘ವೈಬ್ರಂಟ್ ವಿಲೇಜಸ್ ಪ್ರೋಗ್ರಾಂ’

ಸಾಂದರ್ಭಿಕ ಚಿತ್ರ

ಐಎಎಸ್, ಕೆಎಎಸ್ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪ್ರಚಲಿತ ವಿದ್ಯಮಾನಗಳ ಕುರಿತು ಪ್ರಬಂಧ ರಚಿಸುವ ಪ್ರಶ್ನೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಬಂಧಕ್ಕೆ ಉಪಯುಕ್ತವಾಗುವ ಪ್ರಚಲಿತ ವಿದ್ಯಮಾನವನ್ನು ಇಲ್ಲಿ ಕೊಡಲಾಗಿದೆ.

ಆರ್.ಬಿ.ಗುರುಬಸವರಾಜ

ಪ್ರಬಂಧ

ದೇಶದ ಗಡಿ ಭಾಗದಲ್ಲಿರುವ ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ರೂಪಿಸಿರುವ ವಿಶೇಷ ಯೋಜನೆ ‘ವೈಬ್ರಂಟ್ ವಿಲೇಜಸ್ ಪ್ರೋಗ್ರಾಂ’. ಗಡಿ ಭಾಗದ ಹಳ್ಳಿಗಳ ಜನರು ವಲಸೆ ಹೋಗುವುದನ್ನು ತಪ್ಪಿಸುವುದು, ಗಡಿ ಭದ್ರತೆಯನ್ನು ಹೆಚ್ಚಿಸುವುದು ಈ ಯೋಜನೆಯ ಉದ್ದೇಶವಾಗಿದೆ.

ವೈಬ್ರಂಟ್ ವಿಲೇಜಸ್ ಪ್ರೋಗ್ರಾಂ – ಯೋಜನೆಯಡಿ ಭಾರತದ ಉತ್ತರ ಭಾಗದಲ್ಲಿರುವ ಗಡಿ ಗ್ರಾಮಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಈ ಗಡಿ ಗ್ರಾಮಗಳಲ್ಲಿ ವಸತಿ ಯೋಜನೆ, ರಸ್ತೆ ಸಂಪರ್ಕ ಸೇರಿದಂತೆ ವಿವಿಧ ಮೂಲಸೌಕರ್ಯಗಳನ್ನು ಹೆಚ್ಚಿಸುವುದು. ಈ ಮೂಲಕ ಅಲ್ಲಿನ ಜನರ ವಲಸೆ ತಪ್ಪಿಸುವುದು. ಜೊತೆಗೆ, ಗಡಿ ಭದ್ರತಾ ಸೇವೆಯನ್ನು ಬಲವರ್ಧನೆಗೊಳಿಸುವುದು. ಗಡಿ ಗ್ರಾಮಗಳಲ್ಲಿ ವಾಸಿಸುವ ಜನರ ಜೀವನದ ಗುಣಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವುದಾಗಿದೆ.

ಇತ್ತೀಚೆಗೆ ಕೇಂದ್ರ ಸಚಿವ ಸಂಪುಟ ‘ವೈಬ್ರಂಟ್ ವಿಲೇಜಸ್ ಪ್ರೋಗ್ರಾಂ’ಗೆ ಅನುಮೋದನೆ ನೀಡಿದ್ದು, ಇದು 2022-23ರಿಂದ 2025-26ರ ಹಣಕಾಸು ವರ್ಷಗಳ ಯೋಜನೆಯಾಗಿದೆ.

ಯೋಜನೆಯ ವ್ಯಾಪ್ತಿ

- ದೇಶದ ಉತ್ತರ ಭಾಗದ ಗಡಿಯಲ್ಲಿರುವ 16 ರಾಜ್ಯಗಳಲ್ಲಿನ 117 ಗಡಿ ಜಿಲ್ಲೆಗಳು ಮತ್ತು 2 ಕೇಂದ್ರಾಡಳಿತ ಪ್ರದೇಶಗಳ 460 ಗಡಿ ಬ್ಲಾಕ್‌ಗಳಲ್ಲಿರುವ ಹಳ್ಳಿಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಈ ವ್ಯಾಪ್ತಿಯಲ್ಲಿ ಅರುಣಾಚಲ ಪ್ರದೇಶ, ಅಸ್ಸಾಂ, ಬಿಹಾರ, ಗುಜರಾತ್, ಹಿಮಾಚಲ ಪ್ರದೇಶ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ಪಂಜಾಬ್, ರಾಜಸ್ಥಾನ, ಸಿಕ್ಕಿಂ, ತ್ರಿಪುರಾ, ಉತ್ತರ ಪ್ರದೇಶ, ಉತ್ತರಾಖಂಡ, ಪಶ್ಚಿಮ ಬಂಗಾಳ, ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್‌ಗಳ 3,488 ಗಡಿ ಪ್ರದೇಶಗಳಿವೆ.
- 2,963 ಗ್ರಾಮಗಳು ಯೋಜನೆ ವ್ಯಾಪ್ತಿಗೆ ಒಳಪಡಲಿವೆ. ಅವುಗಳಲ್ಲಿ 663 ಗ್ರಾಮಗಳು ಮೊದಲ ಹಂತದ ಕಾರ್ಯ ವ್ಯಾಪ್ತಿಯಲ್ಲಿವೆ.
- ಗ್ರಾಮ ಪಂಚಾಯ್ತಿಗಳ ನೆರವಿನೊಂದಿಗೆ ಜಿಲ್ಲಾಡಳಿತದಿಂದ ವೈಬ್ರಂಟ್ ವಿಲೇಜ್ ಕಾರ್ಯಕ್ರಮದ ಕ್ರಿಯಾ ಯೋಜನೆಗಳನ್ನು ರಚಿಸಲಾಗುತ್ತಿದೆ.

ಕಾರ್ಯಚಟುವಟಿಕೆಗಳು

- ಉತ್ತರ ಭಾರತದ ಗಡಿಯಲ್ಲಿರುವ ಗಡಿ ಗ್ರಾಮಗಳ ಸ್ಥಳೀಯ ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳ ಆಧಾರದ ಮೇಲೆ ಆರ್ಥಿಕ ವಲಯಗಳನ್ನು ಗುರುತಿಸಿ ಮತ್ತು ಅಭಿವೃದ್ಧಿಪಡಿಸುವುದು.
- ಸಾಮಾಜಿಕ ಉದ್ಯಮಶೀಲತೆಯನ್ನು ಉತ್ತೇಜಿಸುವ ಮೂಲಕ ‘ಹಬ್ ಮತ್ತು ಸ್ಪೋಕ್ ಮಾಡೆಲ್’ನಲ್ಲಿ ಬೆಳವಣಿಗೆ ಕೇಂದ್ರಗಳ ಅಭಿವೃದ್ಧಿ, ಕೌಶಲ ಅಭಿವೃದ್ಧಿ ಮತ್ತು ಉದ್ಯಮಶೀಲತೆಯ ಮೂಲಕ ಯುವಕರು ಮತ್ತು ಮಹಿಳೆಯರನ್ನು ಸಬಲೀಕರಣಗೊಳಿಸುವುದು.
- ಸ್ಥಳೀಯ ಸಾಂಸ್ಕೃತಿಕ, ಸಾಂಪ್ರದಾಯಕ ಜ್ಞಾನ ಮತ್ತು ಪರಂಪರೆಯ ಪ್ರಚಾರದ ಮೂಲಕ ಪ್ರವಾಸೋದ್ಯಮ ಅಭಿವೃದ್ಧಿ.
- ಸಮುದಾಯ ಆಧಾರಿತ ಸಂಸ್ಥೆಗಳು, ಸಹಕಾರ ಸಂಸ್ಥೆಗಳು, ಎನ್‌ಜಿಒಗಳ ಮೂಲಕ ‘ಒಂದು ಗ್ರಾಮ-ಒಂದು ಉತ್ಪನ್ನ’ ಪರಿಕಲ್ಪನೆಯ ಮೇಲೆ ಸುಸ್ಥಿರ ಕೃಷಿಗೆ ಒತ್ತು.

ಯೋಜನೆಯ ಮಹತ್ವ

- ಕಡಿಮೆ ಜನಸಂಖ್ಯೆ, ಸೀಮಿತ ಸಂಪರ್ಕವಿರುವ ಮತ್ತು ಮೂಲಸೌಕರ್ಯಗಳಿಲ್ಲದ ಗಡಿ ಗ್ರಾಮಗಳನ್ನು ಗುರುತಿಸಿ ಅಭಿವೃದ್ಧಿಪಡಿಸುವುದು.
- ಇದರಲ್ಲಿ ಗಡಿಯ ಭದ್ರತೆ ಸುಧಾರಣೆ. ಗಡಿ ಪ್ರದೇಶಗಳಲ್ಲಿ ಜನರು ತಮ್ಮ ಮೂಲಸ್ಥಳಗಳಲ್ಲೇ ಉಳಿಯಲು ಉತ್ತೇಜನ. ಈ ಮೂಲಕ ಗ್ರಾಮಗಳಿಂದ ವಲಸೆ ಹೋಗದಂತೆ ತಡೆಯುವುದು.
- ಅಗತ್ಯ ಮೂಲಸೌಕರ್ಯಗಳ ಅಭಿವೃದ್ಧಿ ಮತ್ತು ಜೀವನೋಪಾಯದ ಅವಕಾಶಗಳ ಸೃಷ್ಟಿಗೆ ಆರ್ಥಿಕ ನೆರವು ಒದಗಿಸುವುದು.
- ಪ್ರತಿ ಹಳ್ಳಿಯಲ್ಲಿ ಸುಸ್ಥಿರ ಕೃಷಿ, ಡೇರಿ ಮತ್ತು ಮೀನುಗಾರಿಕೆ ಸಹಕಾರಿ ಸಂಘಗಳನ್ನು ಅಭಿವೃದ್ಧಿಪಡಿಸುವ ಗುರಿ ಹೊಂದಿದೆ.

ಯೋಜನೆಗೆ ಹಣ ಬಿಡುಗಡೆ

ಕೇಂದ್ರ ಸಚಿವ ಸಂಪುಟವು ಈ ಯೋಜನೆ ಕಾರ್ಯಾರಂಭಕ್ಕಾಗಿ ಏಳು ಹೊಸ ಇಂಡೊ-ಟಿಬೆಟಿಯನ್ ಬಾರ್ಡರ್ ಪೊಲೀಸ್ (ITBP) ಬೆಟಾಲಿಯನ್‌ಗಳನ್ನು ಹೆಚ್ಚಿಸಲು ಅನುಮೋದನೆ ನೀಡಿದೆ. ಹಾಗೆಯೇ ಚೀನಾ ಗಡಿಯಲ್ಲಿ ಸಾಮಾಜಿಕ ಮತ್ತು ಭದ್ರತಾ ಚೌಕಟ್ಟನ್ನು ಹೆಚ್ಚಿಸಲು ಅನುಮೋದನೆ ನೀಡಿದೆ.

ಮೊದಲ ಹಂತದಲ್ಲಿ ₹4,800 ಕೋಟಿ ಬಿಡುಗಡೆ ಮಾಡಿದೆ. ಈ ಹಣದಲ್ಲಿ ₹2,500 ಕೋಟಿ ಮೊತ್ತವನ್ನು ರಸ್ತೆಗಳ ಅಭಿವೃದ್ಧಿಗೆ ಖರ್ಚು ಮಾಡಲಾಗುತ್ತಿದೆ.

ಇದರ ಭಾಗವಾಗಿ ಲಡಾಖ್‌ಗೆ ಸರ್ವಋತು ಸಂಪರ್ಕ ಕಲ್ಪಿಸುವ ಮನಾಲಿ-ದರ್ಚಾ-ಪಡುಮ್-ನಿಮ್ಮುಗಳ ನಡುವೆ 4.1 ಕಿ.ಮೀ. ಶಿಂಕು-ಲಾ ಸುರಂಗ ನಿರ್ಮಿಸಲು ಯೋಜಿಸಿದೆ. ಇದರ ಒಟ್ಟು ವೆಚ್ಚ ₹1,681 ಕೋಟಿ. ಈ ಸುರಂಗ ಡಿಸೆಂಬರ್ 2025ರೊಳಗೆ ಪೂರ್ಣಗೊಳ್ಳಲಿದೆ. ದೇಶದ ಭದ್ರತೆ ಮತ್ತು ಸುರಕ್ಷತೆಗೆ ಸಂಬಂಧಿಸಿದಂತೆ ಇದು ಬಹಳ ಮುಖ್ಯವಾಗಿದೆ. ಸುರಂಗವು ಈ ಪ್ರದೇಶದ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗುತ್ತದೆ ಮತ್ತು ಪ್ರವಾಸೋದ್ಯಮ, ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಉತ್ತೇಜನ ನೀಡುತ್ತದೆ.

ಯೋಜನೆಯ ಮುನ್ನೋಟ

ಗಡಿ ಗ್ರಾಮಗಳಲ್ಲಿ ಸರ್ವಋತು ರಸ್ತೆ ನಿರ್ಮಾಣವಾಗಲಿದೆ. ಕುಡಿಯುವ ನೀರು, 24x7 ವಿದ್ಯುತ್ ಸಂಪರ್ಕ (ಸೌರ ಮತ್ತು ಪವನ ಶಕ್ತಿ), ಮೊಬೈಲ್ ಮತ್ತು ಇಂಟರ್ನೆಟ್ ಸಂಪರ್ಕ ಸೌಲಭ್ಯಗಳನ್ನು ಕಲ್ಪಿಸಲಾಗುತ್ತದೆ. ಬಹೂಪಯೋಗಿ ಕೇಂದ್ರಗಳು ಮತ್ತು ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳು ಸ್ಥಾಪನೆಗೊಳ್ಳಲಿವೆ. ಪ್ರತಿ ಹಳ್ಳಿಯಲ್ಲಿ ಸುಸ್ಥಿರ ಕೃಷಿ, ಡೇರಿ ಮತ್ತು ಮೀನುಗಾರಿಕೆ ಸಹಕಾರಿ ಸಂಘಗಳನ್ನು ಅಭಿವೃದ್ಧಿಪಡಿಸುವ ಗುರಿ ಇದೆ. ಇದನ್ನು ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (NABARD), ರಾಷ್ಟ್ರೀಯ ಡೇರಿ ಅಭಿವೃದ್ಧಿ ಮಂಡಳಿ (NDDB), ಮತ್ತು ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಯು ಬೆಂಬಲಿಸುತ್ತವೆ. ITBPಯ ಪ್ರಸ್ತುತ ಬಲವನ್ನು 88,000 ರಿಂದ 97,000ಕ್ಕೆ ಹೆಚ್ಚಿಸುತ್ತದೆ.

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.com ಭೇಟಿ ಕೊಡಿ

ಉದ್ಯೋಗ ವಾರ್ತೆ

ಎಸ್‌ಎಸ್‌ಸಿಯಲ್ಲಿ 7500 ಹುದ್ದೆಗಳು

ಕೇಂದ್ರ ಸರ್ಕಾರದ ವಿವಿಧ ಸಚಿವಾಲಯ/ವಿಭಾಗಗಳ/ಸಂಸ್ಥೆಗಳಲ್ಲಿ ಖಾಲಿ ಇರುವ 7500 ಗ್ರೂಪ್ ‘ಬಿ’ ಮತ್ತು ಗ್ರೂಪ್ ‘ಸಿ’ ಹುದ್ದೆಗಳ ಭರ್ತಿಗಾಗಿ ಕೇಂದ್ರ ಸಿಬ್ಬಂದಿ ನೇಮಕಾತಿ ಆಯೋಗವು(ಎಸ್‌ಎಸ್‌ಸಿ) ಅರ್ಜಿ ಆಹ್ವಾನಿಸಿದೆ. ಎಸ್‌ಎಸ್‌ಸಿ, ಕಂಬೈನ್ಡ್ ಗ್ರಾಜುಯೇಟ್ ಲೆವೆಲ್ ಎಕ್ಸಾಮಿನೇಷನ್(ಎಸ್‌ಎಸ್‌ಸಿ- ಸಿಜಿಎಲ್) ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಿದೆ. ಈ ಪರೀಕ್ಷೆಗೆ ಸಂಬಂಧಿಸಿದಂತೆ ಅಧಿಕೃತ ಅಧಿಸೂಚನೆ ಹೊರಡಿಸಿದೆ.

ಯಾವ್ಯಾವ ಹುದ್ದೆಗಳು ?: ಸಿಎಜಿ (ಭಾರತೀಯ ಲೆಕ್ಕಪತ್ರ ಮತ್ತು ಲೆಕ್ಕ ಪರಿಶೋಧನೆ) ಅಸಿಸ್ಟೆಂಟ್ ಆಡಿಟ್ ಆಫೀಸರ್, ಅಸಿಸ್ಟೆಂಟ್ ಅಕೌಂಟ್ಸ್ ಆಫೀಸರ್, ಅಸಿಸ್ಟೆಂಟ್ ಸೆಕ್ಷನ್ ಆಫೀಸರ್(ಸೆಂಟ್ರಲ್ ಸೆಕ್ರೆಟರಿಯೇಟ್ ಸರ್ವಿಸ್, ಇಂಟೆಲಿಜೆನ್ಸ್ ಬ್ಯೂರೊ, ರೈಲ್ವೆ ಇಲಾಖೆ, ವಿದೇಶಾಂಗ ಸಚಿವಾಲಯ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ಸೇರಿದಂತೆ ಇತರೆ ಇಲಾಖೆಗಳು). ಜ್ಯೂನಿಯರ್ ಸ್ಟ್ಯಾಟಿಸ್ಟಿಕಲ್ ಆಫೀಸರ್, ಸ್ಟ್ಯಾಟಿಸ್ಟಿಕಲ್ ಇನ್ವೆಸ್ಟಿಗೇಟರ್, ಇನ್‌ಕಮ್ ಟ್ಯಾಕ್ಸ್ ಇನ್‌ಸ್ಪೆಕ್ಟರ್, ಇನ್‌ಸ್ಪೆಕ್ಟರ್ (ಸೆಂಟ್ರಲ್ ಎಕ್ಸೈಸ್), ಅಸಿಸ್ಟೆಂಟ್ ಎನ್‌ಫೋರ್ಸ್‌ಮೆಂಟ್ ಆಫೀಸರ್(ಜಾರಿ ನಿರ್ದೇಶನಾಲಯ, ಕಂದಾಯ ನಿರ್ದೇಶನಾಲಯ) ಸೇರಿದಂತೆ ವಿವಿಧ ಇಲಾಖೆ, ಸಚಿವಾಲಯಗಳಲ್ಲಿ ಖಾಲಿ ಇರುವ 7500 ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಿದೆ.

ವಿದ್ಯಾರ್ಹತೆ: ಅಸಿಸ್ಟೆಂಟ್ ಆಡಿಟ್ ಆಫೀಸರ್/ಅಸಿಸ್ಟೆಂಟ್ ಅಕೌಂಟ್ಸ್ ಆಫೀಸರ್ – ಈ ಹುದ್ದೆಗಳಿಗೆ ಪದವಿ ಜೊತೆಗೆ, ಚಾರ್ಟೆಡ್ ಅಕೌಂಟೆಂಟ್ ಅಥವಾ ಕಾಸ್ಟ್ ಆ್ಯಂಡ್ ಮ್ಯಾನೇಜ್‌ಮೆಂಟ್ ಅಕೌಂಟ್ ಅಥವಾ ಕಂಪನಿ ಸೆಕ್ರೆಟರಿ ಅಥವಾ ಎಂ.ಕಾಂ ಅಥವಾ ಬ್ಯುಸಿನೆಸ್ ಸ್ಟಡೀಸ್ ಅಥವಾ ಎಂಬಿಎ(ಹಣಕಾಸು) ಅಥವಾ ಎಂಬಿಇ ಪದವಿ ಪಡೆದಿರುವುದು ಕಡ್ಡಾಯ.

ಸಹಾಯಕ ಸಾಂಖ್ಯಿಕ ಅಧಿಕಾರಿ(ಜ್ಯೂನಿಯರ್ ಸ್ಟ್ಯಾಸ್ಟಿಕಲ್ ಆಫೀಸರ್) ಹುದ್ದೆಗೆ, ಯಾವುದೇ ಪದವಿ ಪಡೆದಿರುವ ಜೊತೆಗೆ, 12ನೇ ತರಗತಿಯಲ್ಲಿ ಗಣಿತ ವಿಷಯದಲ್ಲಿ ಶೇ 60ರಷ್ಟು ಅಂಕ ಪಡೆದಿರಬೇಕು. ಅಥವಾ ಸಂಖ್ಯಾಶಾಸ್ತ್ರ ವಿಷಯದೊಂದಿಗೆ ಯಾವುದೇ ಪದವಿಯನ್ನು ಪೂರೈಸಿರಬೇಕು.

ಸ್ಟ್ಯಾಟಿಸ್ಟಿಕಲ್ ಇನ್‌ವೆಸ್ಟಿಗೇಟರ್ ಗ್ರೇಡ್–II – ಈ ಹುದ್ದೆಗೆ, ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಸಂಖ್ಯಾಶಾಸ್ತ್ರ ವಿಷಯವನ್ನೊಳಗೊಂಡ ಪದವಿ ಪಡೆದಿರಬೇಕು. ಪದವಿಯ ಆರು ಸೆಮಿಸ್ಟರ್‌ನಲ್ಲಿ (ಮೂರು ವರ್ಷ) ಸಂಖ್ಯಾಶಾಸ್ತ್ರ ವಿಷಯವನ್ನು ಅಧ್ಯಯನ ಮಾಡಿರಬೇಕು.

ಸಂಶೋಧನಾ ಸಹಾಯಕ ಹುದ್ದೆ (ಎನ್‌ಎಚ್‌ಆರ್‌ಸಿ): ಪದವಿಯ ಜೊತೆಗೆ, ಸಂಶೋಧನಾ ಕಾರ್ಯದಲ್ಲಿ ಒಂದು ವರ್ಷ ಅನುಭವವಿರಬೇಕು ಅಥವಾ ಕಾನೂನು ಅಥವಾ ಮಾನವಹಕ್ಕುಗಳ ವಿಷಯದಲ್ಲಿ ಪದವಿ ಪಡೆದಿರಬೇಕು.

ಉಳಿದ ಎಲ್ಲ ಹುದ್ದೆಗಳಿಗೆ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿ ಪೂರ್ಣಗೊಳಿಸಿರಬೇಕು.

ಗಮನಿಸಿ: ಅಂತಿಮ ಹಂತದ ಪದವಿ ಕಲಿಯುತ್ತಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದು(ಆಗಸ್ಟ್ 1, 2023ರೊಳಗೆ ಪದವಿ ಪೂರೈಸುವಂತಿರಬೇಕು).

ಅರ್ಜಿ ಸಲ್ಲಿಕೆ ಪ್ರಕ್ರಿಯೆ : ಆನ್‌ಲೈನ್ ಮೂಲಕವೇ ಅರ್ಜಿ ಸಲ್ಲಿಸಬೇಕು. www.ssc.nic.in ಜಾಲತಾಣದ ಮೂಲಕ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದೆ. ಮೇ 7, 2023 ಅರ್ಜಿ ಸಲ್ಲಿಕೆಗೆ ಕೊನೆ ದಿನ.

ಅರ್ಜಿ ಶುಲ್ಕ: ₹100 ಅರ್ಜಿ ಶುಲ್ಕ ನಿಗದಿಪಡಿಸಲಾಗಿದೆ. ಎಸ್‌ಸಿ, ಎಸ್‌ಟಿ, ಅಂಗವಿಕಲರು ಮತ್ತು ಮಾಜಿ ಸೈನಿಕ ಅಭ್ಯರ್ಥಿಗಳಿಗೆ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ.

ಪರೀಕ್ಷೆ ನಡೆಯುವ ದಿನಾಂಕ : ಶ್ರೇಣಿ-I (ಕಂಪ್ಯೂಟರ್ ಆಧಾರಿತ ಪರೀಕ್ಷೆ) – ಜುಲೈ, 2023, ಶ್ರೇಣಿ-II (ಕಂಪ್ಯೂಟರ್ ಆಧಾರಿತ ಪರೀಕ್ಷೆ) – ದಿನಾಂಕ ನಿಗದಿಯಾಗಿಲ್ಲ.

(ಇವೆರಡೂ ತಾತ್ಕಾಲಿಕ ವೇಳಾಪಟ್ಟಿಯಾಗಿದ್ದು, ಅಂತಿಮ ದಿನಾಂಕವನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ)

ಪರೀಕ್ಷಾ ಕೇಂದ್ರಗಳು

ರಾಜ್ಯದ ವಿವಿಧೆಡೆ ಪರೀಕ್ಷಾ ಕೇಂದ್ರಗಳು ಇರಲಿವೆ. ಬೆಳಗಾವಿ , ಬೆಂಗಳೂರು, ಹುಬ್ಬಳ್ಳಿ , ಕಲಬುರ್ಗಿ, ಮಂಗಳೂರು, ಮೈಸೂರು, ಶಿವಮೊಗ್ಗ, ಉಡುಪಿಯಲ್ಲಿ ಪರೀಕ್ಷೆ ನಡೆಯಲಿದೆ. ವಿದ್ಯಾರ್ಹತೆ, ಅರ್ಜಿ ಸಲ್ಲಿಕೆ ಪ್ರಕ್ರಿಯೆ, ಅಧಿಸೂಚನೆ ಹಾಗೂ ಇನ್ನಿತರ ಹೆಚ್ಚಿನ ಮಾಹಿತಿಗೆwww.ssc.nic.in (Microsoft Word - Draft_Notice_CGLE_2023_03_04_2023) ಜಾಲತಾಣಕ್ಕೆ ಭೇಟಿ ಕೊಡಿ.

ಪಿಯುಸಿ- ಸಿಇಟಿ ಪರೀಕ್ಷೆ ದಿಕ್ಸೂಚಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

PHYSICS

22) A point positive charge is brought near an isolated conducting sphere as in the figures given below. The electric field is best given by



a) Fig (i) b) Fig (ii)
c) Fig (iii) d) Fig (iv)

Ans:- (a)

23) First overtone frequency of a closed pipe of length ‘l_1’ is equal to the 2nd harmonic frequency of an open pipe of length ‘l_2’. The ratio l_1 / l_2 =

a) 3 / 4 b) 4 / 3
c) 3 / 2 d) 2 / 3

Ans: (a)

Expln:- First overtone frequency for closed Organ pipe $f = 3V / 4L_1$

Frequency for open pipe $f = 2V / 2L_2$

$\Rightarrow L_1 / L_2 = 3 / 4$

24) A hemisphere is uniformly charged positively. The electric field at a point on a diameter away from the centre is directed -

a) perpendicular to the diameter
b) parallel to the diameter
c) at an angle tilted towards the diameter
d) at an angle tilted away from the diameter.

Ans:-a

25) The resistance R = V / I where V = (100 ± 5) V and I = (10 ± 0.2) A. The percentage error in R is

a) 5.2% b) 4.8%
c) 7% d) 3%

Ans: (c)

$R = V / I$

$V = (100 \pm 5)$ V and $I = (10 \pm 0.2)$ A

$R = 100 / 10 = 10$

$\Delta R / R = \pm [(\Delta V / V) + (\Delta I / I)]$

$[\Delta R / R] * 100 = \pm [(\Delta V / V) * 100 + (\Delta I / I) * 100]$

$= \pm [(5 / 100) * 100 + (0.2 / 10) * 100]$

$R = \pm 7\ \%$

26) A circular coil of radius 10 cm and 100 turns carries a current 1 A. What is the magnetic moment of the coil?

a) 3.142 m^2 b) 3.142 x 10^4 A m^2
c) 3 A m^2 d) 10^4 A m^2

Soln: (a): Here,

Radius, r = 10 cm = 10 x 10^{-2} m

Number of turns, N = 100 Current, I=1 A

Area of the coil, $A = \pi r^2$

Magnetic moment of the coil, M = NIA = NI πr^2

= 100 x 1 x 3.142 x (10 x 10^{-2})2 A m^2

= 3.142 A m^2

27) Electric field intensity due to uniformly charged thin infinite non-conducting plane sheet of surface charge density σ at a distance r is

a) $\frac{\sigma}{\epsilon_0}$ b) $\frac{\sigma}{2\epsilon_0}$

c) $\frac{\sigma}{2r}$ d) $\frac{\sigma}{2\epsilon_0 r}$

Ans : —b

28) A susceptibility of a certain magnetic material is 400. What is the class of the magnetic material?

a) Ferromagnetic b) diamagnetic
c) Ferroelectric d) Paramagnetic

Soln: (a) As susceptibility is large and positive, the given material is ferromagnetic.

29) Pressure of an ideal gas is increased by keeping the temperature constant. The kinetic energy of molecules

a) Decreases b) Increases
c) Remains the same
d) Increases or decreases depending on the nature of gas

Ans: (c)

PV = nRT

Hence P ∝ V

Temperature is constant and there is no change in Kinetic energy of molecules.

CHEMISTRY

33) What is the coordination number in a square close packed structure in two dimensions?

a) 2 b) 3
c) 4 d) 6

Ans:-C

34) Which kind of defects are introduced by doping?

a) Dislocation defect b) Schottky defects
c) Frenkel defects d) Electronic defects

Ans:-d

35) Which of the following aqueous solutions should have the highest boiling point?

a) 1.0 M NaOH b) 1.0 M Na_2SO_4
c) 1.0 M NH_4NO_3 d) 1.0 M KNO_3

Answer: (b)

Expln:- Colligative properties of solutions are properties that depend upon the concentration of solute molecules or ions but not the identity of the solute. Concentrations of all the solutions are the same given one. So, colligative property (elevation in boiling point) depends only on the number of ions or molecules. The boiling point increases as the number of ions increases in the aqueous solutions.

1M NaOH gives the number of ions = 2
1M Na_2SO_4 gives the number of ions = 3
1M NH_4SO_4 gives the number of ions = 2
1M KNO_3 gives the number of ions = 2

So, 1M Na_2SO_4 has the maximum boiling point among them all.

36) Which of the following statements is not true?

a) Paramagnetic substances are weakly attracted by magnetic field.
b) Ferromagnetic substances cannot be magnetized permanently.
c) The domains in antiferromagnetic substances are oppositely oriented with respect to each other.
d) pairing of electrons cancels their magnetic moment in the diamagnetic substances.

Ans:-b

37) Which of the following is not true about the ionic solids?

a) Bigger ions from the close packed structure.
b) smaller ions occupy either the tetrahedral or the octahedral voids depending upon their size.
c) occupation of all the voids is not necessary.
d) The fraction of octahedral or tetrahedral voids occupied depends upon the radii of the ions occupying the voids.

Ans:-d

38) 50 cm^3 of 0.04 M $K_2Cr_2O_7$ in acidic medium oxidizes sample of H_2S gas to sulphar. Volume of 0.03 M $KMnO_4$ required to oxidize the same amount of H_2S gas to sulphar, in acidic medium is

(a) 60 cm^3 (b) 80 cm^3
(c) 90cm^3 (d) 120 cm^3

Soln: (b): $K_2Cr_2O_7$ and $KMnO_4$ both are good oxidizing agents in acidic medium. The reaction is as follows:

$Cr_2O_7^{2-} + 14H^+ + 6e^- \rightarrow 2Cr^{3+} + 7H_2O$

$MnO_4^{2-} + 8H^+ + 5e^- \rightarrow Mn^{2+} + 4H_2O$

Normality of $Cr_2O_7^{2-}$ = Molarity x no. of Eletrins involved

= 0.04 x 6 = 0.24 N

Normality of MnO_4^- = Molarity x no. of Electrons involved

= 0.03 x 5 = 0.15 N

$N_1V_1 = N_2V_2$

$(K_2Cr_2O_7)$ (Km_nO_4)

$\Rightarrow$ 0.24 x 50 = 0.15 x V2

$V_2 = \frac{0.24 \times 50}{0.15} = 80\ cm^3$

39) The pair of compounds having identical shapes for their molecules is

(a) CH_4, SF_4 (b) BCl_2, ClF_3
(c) XeF_2, $ZnCl_2$ (d) SI_2, Co_2

Soln: (c): XeF_2 is linear in shape with 2 bond pairs and 3 lone pairs of electrons.

$ZnCl_2$ is also linear in shape with 2 bond pairs of electrons.

40) The compound that reacts the fastest with sodium methoxide is



Soln: (a): Electron withdrawing groups ($-NO_2$) increase the reactivity of the aryl halide(-ArCI). Hence, 2.4 -dinitrochlorobenzene reacts fastest.

‘ನಮ್ಮ ಮೆಟ್ರೊ’ದಲ್ಲಿ ಗುತ್ತಿಗೆ ಆಧಾರಿತ ಉದ್ಯೋಗ

ಬೆಂಗಳೂರು ಮೆಟ್ರೊ ರೈಲು ಕಾರ್ಪೊರೇಷನ್(ಬಿಎಂಆರ್‌ಸಿಎಲ್), ಭದ್ರತಾ ವಿಭಾಗ ಹಾಗೂ ಅಗ್ನಿಶಾಮಕ ವಿಭಾಗಗಳಲ್ಲಿ ಖಾಲಿ ಇರುವ ಅರವತ್ತಕ್ಕೂ ಹೆಚ್ಚು ಗುತ್ತಿಗೆ ಆಧಾರಿತ ಹುದ್ದೆಗಳ ಭರ್ತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ.

ಯಾವ ವಿಭಾಗ, ಎಷ್ಟು ಹುದ್ದೆ: ಡೆಪ್ಯೂಟಿ ಚೀಫ್ ಫೈಯರ್ ಫೀಸರ್- 1 ಹುದ್ದೆ, ಫೈಯರ್ ಮ್ಯಾನ್- 25 ಹುದ್ದೆಗಳು, ಡೆಪ್ಯುಟಿ ಚೀಫ್ ಸೆಕ್ಯುರಿಟಿ ಆಫೀಸರ್- 1 ಹಾಗೂ ಅಸಿಸ್ಟೆಂಟ್ ಸೆಕ್ಯುರಿಟಿ ಆಫೀಸರ್ -38 ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಿದೆ.

ವಿದ್ಯಾರ್ಹತೆ: ಪಿಯುಸಿ(12 ನೇ ತರಗತಿ) ಹಾಗೂ ಬಿ.ಎಸ್ಸಿ ಪದವಿ ಪೂರೈಸಿರಬೇಕು(ಹುದ್ದೆಗಳಿಗೆ ಅನುಗುಣವಾಗಿ ವಿದ್ಯಾರ್ಹತೆಯನ್ನು ನಿಗದಿಪಡಿಸಲಾಗಿದೆ)

ವಯೋಮಿತಿ: ಕನಿಷ್ಠ 25 ವರ್ಷ ಗರಿಷ್ಠ 62 ವರ್ಷಗಳು (ಹುದ್ದೆಗಳಿಗೆ ಅನುಗುಣವಾಗಿ ವಯೋಮಿತಿಯನ್ನು ನಿಗದಿಪಡಿಸಲಾಗಿದೆ)

ವೇತನ: ₹25 ಸಾವಿರದಿಂದ ₹60 ಸಾವಿರದವರೆಗೆ (ಹುದ್ದೆಗಳಿಗೆ ಅನುಗುಣವಾಗಿ ವೇತನ ವ್ಯತ್ಯಾಸವಾಗುತ್ತದೆ)

ಆಯ್ಕೆ ಪ್ರಕ್ರಿಯೆ: ಅಭ್ಯರ್ಥಿಗಳನ್ನು ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುತ್ತದೆ. ಅರ್ಜಿಗಳನ್ನು ಆನ್‌ಲೈನ್ ಅಥವಾ ಆಫ್‌ಲೈನ್‌ನಲ್ಲಿ ಸಲ್ಲಿಸಬಹುದು. ಆಫ್‌ಲೈನ್ ನಲ್ಲಿ ಅರ್ಜಿ ಸಲ್ಲಿಸುವವರು ಈ ಕೆಳಗಿನ ವಿಳಾಸಕ್ಕೆ ಅರ್ಜಿ ಸಲ್ಲಿಸಬೇಕು;

ಜನರಲ್ ಮ್ಯಾನೇಜರ್ (HR), ಬೆಂಗಳೂರು ಮೆಟ್ರೊ ರೈಲು ಕಾರ್ಪೊರೇಷನ್ ಲಿಮಿಟೆಡ್, 3ನೇ ಮಹಡಿ,BMTC ಕಾಂಪ್ಲೆಕ್ಸ್, K.H. ರಸ್ತೆ ಶಾಂತಿನಗರ, ಬೆಂಗಳೂರು - 560027

ಅರ್ಜಿ ಸಲ್ಲಿಕೆ ವಿವರ: ಮಾರ್ಚ್ 21 ರಿಂದ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದೆ. ಏಪ್ರಿಲ್ 20, 2023 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಕೆಗೆ ಕೊನೆ ದಿನ. ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನ ಏಪ್ರಿಲ್ 22, 2023. ಹೆಚ್ಚಿನ ಮಾಹಿತಿ ಮತ್ತು ಅಧಿಸೂಚನೆಗಾಗಿ https://kannada.bmrc.co.in ಜಾಲತಾಣಕ್ಕೆ ಭೇಟಿ ನೀಡಬಹುದು.

ಆರೋಗ್ಯ ವಿಮೆಗಾಗಿ 'ನಾನು ಮರಾಠಿ ಭಾಷಿಕ' ಎಂದು ಬರೆದುಕೊಡುವುದು ಕಡ್ಡಾಯ

ಸ್ವಯಂ ಘೋಷಣಾ ಪತ್ರ 'ಮಹಾ' ಹುನ್ನಾರ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮಹಾರಾಷ್ಟ್ರ ಸರ್ಕಾರ ಜಾರಿಗೆ ತಂದಿರುವ 'ಮಹಾತ್ಮ ಜ್ಯೋತಿರಾವ್ ಫುಲೆ ಜನಾರೋಗ್ಯ ಯೋಜನೆ' ಫಲಾನುಭವಿ ಆಗಲು 'ನಾನು ಮರಾಠಿ ಭಾಷಿಕ' ಎಂಬ ಸ್ವಯಂಘೋಷಣಾ ಪತ್ರ ಬರೆದು ಕೊಡುವುದು ಕಡ್ಡಾಯ. ಕರ್ನಾಟಕ ಗಡಿಯೊಳಗಿರುವ 865 ಗ್ರಾಮಗಳ ನಿವಾಸಿಗಳಿಗೆ ಮಾತ್ರ ಈ ಘೋಷಣಾ ಪತ್ರ ಕಡ್ಡಾಯ ಮಾಡಲಾಗಿದೆ.

ಈ ಆರೋಗ್ಯ ವಿಮೆ ಮರಾಠಿ ಹಾಗೂ ಮರಾಠಿಯೇತರ ಭಾಷಿಕರಿಗೂ ಅನ್ವಯ ಎಂದು ಅಲ್ಲಿನ ಸರ್ಕಾರ ನಿಯಮಾವಳಿ ಮಾಡಿದೆ. ಇದರೊಂದಿಗೆ 'ಮರಾಠಿ ಭಾಷಿಕ' ಎಂದು ಘೋಷಣಾ ಪತ್ರ ಕಡ್ಡಾಯಗೊಳಿಸಿದೆ. ಅನ್ಯ ಭಾಷಿಕರು ಸಹ ತಾವು ಮರಾಠಿಗರು ಎಂದು ಒಪ್ಪಿಕೊಂಡು ಘೋಷಣಾ ಪತ್ರ ಬರೆದುಕೊಡಲು ಅವಕಾಶ ನೀಡಲಾಗಿದೆ.

'ಕರ್ನಾಟಕ– ಮಹಾರಾಷ್ಟ್ರ ಗಡಿ ವಿವಾದ ಸುಪ್ರೀಂಕೋರ್ಟ್‌ನಲ್ಲಿದೆ. ಕೋರ್ಟಿನಲ್ಲಿ ಕರ್ನಾಟಕದ ವಿರುದ್ಧ ಹಾಗೂ ಮಹಾರಾಷ್ಟ್ರದ ಪರವಾಗಿ ಜನರ ದಾಖಲೆ ಸೃಷ್ಟಿಸುವ ಹುನ್ನಾರ ಇದರ ಹಿಂದಿದೆ. ವಿವಾದಕ್ಕೆ ಒಳಪಟ್ಟ 865 ಗ್ರಾಮಗಳ ನಿವಾಸಿಗಳೆಲ್ಲ ಮರಾಠಿಗರು ಹಾಗೂ ಮಹಾರಾಷ್ಟ್ರದ ನಾಗರಿಕರು ಎಂಬುದನ್ನು ಸಾಧಿಸಲು ಏಕನಾಥ ಶಿಂದೆ ಸರ್ಕಾರ ಹೊಂಚು ಹಾಕಿದೆ' ಎಂಬ ದೂರುಗಳು ಕೇಳಿಬಂದಿವೆ.

ಆರೋಗ್ಯ ವಿಮೆಗಾಗಿ ಮಹಾರಾಷ್ಟ್ರ ಸರ್ಕಾರ ನೀಡಿದ 'ನಾನು ಮರಾಠಿ ಭಾಷಿಕ' ಎಂಬ ಸ್ವಯಂ ಘೋಷಣಾ ಪತ್ರ

'ಮಹಾರಾಷ್ಟ್ರ– ಕರ್ನಾಟಕ ಗಡಿ ಭಾಗದ ನಾಗರಿಕರಿಗಾಗಿ ಮಹತ್ವಪೂರ್ಣ ಆರೋಗ್ಯ ವಿಮೆಯ ನಿರ್ಣಯ' ಎಂದು ಏಕನಾಥ ಶಿಂದೆ ಸರ್ಕಾರ ಹೊರಡಿಸಿದ ಕರಪತ್ರ

ರಾಜ್ಯದ ಗಡಿಯೊಳಗಿರುವ 865 ಹಳ್ಳಿಗಳಿಗೆ ಮಹಾರಾಷ್ಟ್ರ ವಿಮೆ ಜಾರಿ ಮಾಡಿರುವ ಕ್ರಮ ಉದ್ಧಟತನದ್ದು. ಈ ಆದೇಶ ತಕ್ಷಣ ವಾಪಸ್ ಪಡೆಯದಿದ್ದರೆ ಪರಿಣಾಮ ನೆಟ್ಟಗಿರದು
ಸಿದ್ದರಾಮಯ್ಯ
ವಿಧಾನಸಭೆ ವಿರೋಧ ಪಕ್ಷದ ನಾಯಕ

ಮಹಾರಾಷ್ಟ್ರ ಎಲ್ಲೆ ಮೀರಿ ವರ್ತಿಸುತ್ತಿದೆ. ಕೇಂದ್ರದ ಬಿಜೆಪಿ ಸರ್ಕಾರ ಶಿಂದೆ ಸೂತ್ರದ ರಾಜಕಾರಣಕ್ಕೆ ಕರ್ನಾಟಕವನ್ನು ಬಲಿ ಕೊಡುತ್ತಿದೆಯೆ ಎನ್ನುವ ಅನುಮಾನ ಕಾಡುತ್ತಿದೆ
ಎಚ್‌.ಡಿ. ಕುಮಾರಸ್ವಾಮಿ
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

'ವಿವಾದಕ್ಕೆ ಒಳಗಾದ ಗ್ರಾಮದವರಾಗಿದ್ದರೂ ನಾವು ಮರಾಠಿಗರು' ಎಂಬುದನ್ನು ದಾಖಲೀಕರಿಸುತ್ತಿರುವುದು ಅಪಾಯಕಾರಿ. ಬೊಮ್ಮಾಯಿ ಈಗಲಾದರೂ ಎಚ್ಚೆತ್ತುಕೊಳ್ಳಬೇಕು
ಅಶೋಕ ಚಂದರಗಿ,
ಹೋರಾಟಗಾರ

ಘೋಷಣಾ ಪತ್ರದಲ್ಲಿ ಏನಿದೆ?

'ನಾನು, ಮಹಾರಾಷ್ಟ್ರ ಸರ್ಕಾರ ದಾವೆ ಹೂಡಿದ ಗ್ರಾಮದ ರಹವಾಸಿಯಾಗಿದ್ದೇನೆ. ನಾನು ಮತ್ತು ನನ್ನ ಕುಟುಂಬದವರು ಇಂತಿಷ್ಟು ವರ್ಷಗಳಿಂದ ಇಲ್ಲಿ ವಾಸವಿದ್ದು, ಮರಾಠಿ ಭಾಷಿಕರಾಗಿದ್ದೇವೆ. ನಾನು ನೀಡಿದ ಮಾಹಿತಿ ಸತ್ಯ ಎಂದು ಪ್ರಮಾಣ ಮಾಡುತ್ತೇನೆ. ಇಲ್ಲಿನ ಮಾಹಿತಿ ಸುಳ್ಳಾಗಿದ್ದರೆ ಕಾಯ್ದೆ ಪ್ರಕಾರ ಮಹಾರಾಷ್ಟ್ರ ಸರ್ಕಾರ ನಮ್ಮ ವಿರುದ್ಧ ಕ್ರಮ ಜರುಗಿಸಬಹುದು' ಎಂದು ಈ ಪತ್ರದಲ್ಲಿದೆ.

ಕುಟುಂಬದ ಸದಸ್ಯರ ಸಂಖ್ಯೆ, ಹೆಸರು, ಸ್ಥಾನ, ಆಧಾರ್ ಸಂಖ್ಯೆಯ ವಿವರಗಳನ್ನೂ ಕೇಳಲಾಗಿದೆ. ವಿಮೆಯ ಅರ್ಜಿಯ ಜತೆಗೆ ಸ್ವಯಂಘೋಷಣಾ ಪತ್ರವನ್ನೂ ಮಹಾರಾಷ್ಟ್ರ ಸರ್ಕಾರ ಬಿಡುಗಡೆ ಮಾಡಿದೆ.

ಗಡಿ ಗ್ರಾಮಗಳಲ್ಲಿ ಮಹಾರಾಷ್ಟ್ರದ ಆರೋಗ್ಯ ಇಲಾಖೆಯ ಸಿಬ್ಬಂದಿ ಹಾಗೂ ಅಂಗನವಾಡಿ ಕಾರ್ಯಕರ್ತೆಯರನ್ನು ಕಳುಹಿಸಿ ಸಮೀಕ್ಷೆ ನಡೆಸಲು ಸಿದ್ಧತೆ ಮಾಡಲಾಗಿದೆ.

ಕೆಪಿಎಸ್‌ಸಿ: ಮುಸುಕಿನ ಗುದ್ದಾಟ

ಕಾರ್ಯದರ್ಶಿ ವರ್ತನೆಗೆ ಅಧ್ಯಕ್ಷ, ಸದಸ್ಯರ ಆಕ್ಷೇಪ ● ಸಿಎಸ್‌ಗೆ ದೂರು

● ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ವಿವಿಧ ಹುದ್ದೆಗಳಿಗೆ ಅಭ್ಯರ್ಥಿಗಳ ನೇಮಕಾತಿ, ಸಂದರ್ಶನ, ಆಯ್ಕೆ ಪಟ್ಟಿ ಬಿಡುಗಡೆ ಮತ್ತಿತರ ವಿಷಯಗಳಲ್ಲಿ ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಕಾರ್ಯದರ್ಶಿ ಸುರಳ್ಕರ್ ವಿಕಾಸ್ ಕಿಶೋರ್ ಮತ್ತು ಆಯೋಗದ ಅಧ್ಯಕ್ಷ, ಸದಸ್ಯರ ಮಧ್ಯೆ ಹಲವು ದಿನಗಳಿಂದ ನಡೆಯುತ್ತಿದ್ದ ಮುಸುಕಿನ ಗುದ್ದಾಟ ಇದೀಗ ರಾಜ್ಯ ಸರ್ಕಾರದ ಅಂಗಳ ತಲುಪಿದೆ.

'ಕಾರ್ಯದರ್ಶಿ ತಾವೇ ಆಯೋಗ ಎಂಬಂತೆ ಕಾರ್ಯನಿರ್ವಹಿಸುತ್ತಿದ್ದಾರೆ' ಎಂಬ ಆರೋಪ ಹೊರಿಸಿ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರಿಗೆ ಕೆಪಿಎಸ್‌ಸಿ ಅಧ್ಯಕ್ಷ ಮತ್ತು ಸದಸ್ಯರು ಮಾರ್ಚ್ 28ರಂದು 49 ಪುಟಗಳ ಪತ್ರ ಬರೆದಿದ್ದಾರೆ. ಆಯೋಗದ ಅಧ್ಯಕ್ಷ ಶಿವಶಂಕರಪ್ಪ ಎಸ್. ಸಾಹುಕಾರ್ ಮತ್ತು ಒಂಬತ್ತು ಸದಸ್ಯರು ಪತ್ರಕ್ಕೆ ಸಹಿ ಹಾಕಿದ್ದಾರೆ. ಸದಸ್ಯರಾದ ವಿಜಯಕುಮಾರ್ ಡಿ. ಕುಚನೂರೆ ಮತ್ತು ಪ್ರೊ. ರಂಗರಾಜ ಸಹಿ ಹಾಕಿಲ್ಲ. ರಂಗರಾಜ ಅವರು ಅನಾರೋಗ್ಯ ಕಾರಣದಿಂದ ಹಲವು ತಿಂಗಳುಗಳಿಂದ ಆಯೋಗದ ಸಭೆಗಳಿಗೆ ಹಾಜರಾಗಿಲ್ಲ.

ಅಲ್ಲದೆ, ಮುಖ್ಯ ಕಾರ್ಯದರ್ಶಿ ಅವರನ್ನು ಭೇಟಿ ಮಾಡಿದ ಅಧ್ಯಕ್ಷ ಮತ್ತು ಸದಸ್ಯರು, ನೇಮಕಾತಿ ಪ್ರಕ್ರಿಯೆ ಕುರಿತಂತೆ ಅಭ್ಯರ್ಥಿಗಳ ಜೊತೆ ಯೂಟ್ಯೂಬ್ ಸಂವಹನ, ಟ್ವೀಟ್, ಆಯೋಗದ ಅನುಮೋದನೆ ಪಡೆಯದೆ ತಾತ್ಕಾಲಿಕ ಆಯ್ಕೆ ಪಟ್ಟಿ ಮತ್ತು ಇತರ ಹುದ್ದೆಗಳ ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಕಾರ್ಯದರ್ಶಿಯ ಕಾರ್ಯವೈಖರಿಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕಾರ್ಯದರ್ಶಿ ಅವರನ್ನು ಕರೆಸಿ ಮುಖ್ಯ ಕಾರ್ಯದರ್ಶಿ ಕೆಲ ಸಲಹೆಗಳನ್ನು ನೀಡಿದ್ದಾರೆ ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ.

ಕೆಪಿಎಸ್‌ಸಿಯಲ್ಲಿ ನಡೆಯುತ್ತಿರುವ ಈ ಗುದ್ದಾಟದ ಪರಿಣಾಮ ಕೆಲವು ಹುದ್ದೆಗಳ ಅಧಿಸೂಚನೆ ಪ್ರಕಟಣೆ, ಸಿದ್ಧವಾಗಿರುವ ತಾತ್ಕಾಲಿಕ ಅರ್ಹತಾ ಪಟ್ಟಿ, ಹೆಚ್ಚುವರಿ ಆಯ್ಕೆ ಪಟ್ಟಿಗೆ ಆಯೋಗದ ಅನುಮೋದನೆ ಸಿಕ್ಕಿಲ್ಲ. ಅಲ್ಲದೆ, ಬುಧವಾರ (ಏ. 5) ನಡೆಯಬೇಕಿದ್ದ ಆಯೋಗದ ಸಭೆ ಕೂಡಾ ರದ್ದಾಗಿದೆ.

ಪತ್ರದಲ್ಲಿ ಏನಿದೆ?: 'ಆಯೋಗವು ನೇಮಕಾತಿ ಪ್ರಕ್ರಿಯೆ ನಡೆಸುತ್ತದೆ. ಇದಕ್ಕೆ ಸಂಬಂಧಿಸಿದ ನಿಯಮಗಳಲ್ಲಿ ಗೊಂದಲ ಕಂಡು ಬಂದಲ್ಲಿ ಸರ್ಕಾರದಿಂದ ಸ್ಪಷ್ಟೀಕರಣ, ತಿದ್ದುಪಡಿ ಕೋರುವ ಬಗ್ಗೆ ಸಭೆ ನಿರ್ಣಯಿಸುತ್ತದೆ. ಇದನ್ನಾಧರಿಸಿ ಆಯೋಗದ ಕಾರ್ಯದರ್ಶಿ ಸರ್ಕಾರಕ್ಕೆ ಪತ್ರ ಬರೆಯುತ್ತಾರೆ. ಇತ್ತೀಚಿನ ದಿನಗಳಲ್ಲಿ ಆಯೋಗದ ಗಮನಕ್ಕೆ ತರದೇ, ಆಯೋಗದ ಸಭೆಯಲ್ಲಿ ಚರ್ಚಿಸದ ವಿಷಯದ ಬಗ್ಗೆ ಕಾರ್ಯದರ್ಶಿಯೇ ಆಯೋಗದ ಹೆಸರಿನಲ್ಲಿ ಸರ್ಕಾರದಿಂದ ಸ್ಪಷ್ಟೀಕರಣ ಪಡೆಯುತ್ತಿದ್ದಾರೆ' ಎಂದು ಆರೋಪಿಸಲಾಗಿದೆ.

'ಆಯೋಗದ ಸದಸ್ಯರನ್ನು ಒಳಗೊಂಡ ಉಪ ಸಮಿತಿ ರಚಿಸಲು ಒಪ್ಪದೇ ಸರ್ಕಾರಕ್ಕೆ ಪತ್ರ ಬರೆದು ಸ್ಪಷ್ಟೀಕರಣ ಕೋರಲಾಗಿದೆ. 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ನೇಮಕಾತಿ ಪ್ರಕ್ರಿಯೆಯಲ್ಲಿ ಕರ್ತವ್ಯಲೋಪ ಎಸಗಿದ್ದಾರೆ ಎನ್ನಲಾದ ನೌಕರರ ವಿರುದ್ಧ ಇಲಾಖಾ ವಿಚಾರಣೆ ನಡೆಸಿದ ಬಳಿಕ ದೋಷಮುಕ್ತರನ್ನಾಗಿಸಿ 2022ರ ನ. 10ರಂದು ಆದೇಶ ಹೊರಡಿಸಿದ್ದರೂ, ಮತ್ತೊಮ್ಮೆ ಇಲಾಖಾ ವಿಚಾರಣೆಗೆ ಮಾರ್ಚ್ 18ರಂದು ಆದೇಶ ಹೊರಡಿಸಲಾಗಿದೆ. ಲೋಕೋಪಯೋಗಿ ಇಲಾಖೆಯ ಕಿರಿಯ ಎಂಜಿನಿಯರ್ ನೇಮಕಾತಿಯ ತಾತ್ಕಾಲಿಕ ಆಯ್ಕೆ ಪಟ್ಟಿ ಮತ್ತು ಇತರ ಹುದ್ದೆಗಳ ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ಆಯೋಗದ ಅನುಮೋದನೆ ಪಡೆಯದೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಆಯೋಗಕ್ಕೆ ಕಳುಹಿಸಿರುವ ಕಡತಗಳ ಪಟ್ಟಿಯನ್ನೂ ಕಾರ್ಯದರ್ಶಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವುದು ನಿಯಮ ವಿರುದ್ಧವಾಗಿದೆ' ಎಂದೂ ಪತ್ರದಲ್ಲಿದೆ.

'ಲೋಕೋಪಯೋಗಿ ಇಲಾಖೆಯ ಸಹಾಯಕ ಎಂಜಿನಿಯರ್ ಹುದ್ದೆಗಳ ನೇಮಕಾತಿಗೆ ಸಂದರ್ಶನ ನಡೆಸುವ ಬಗ್ಗೆ ನಿಯಮಗಳಲ್ಲಿ ಸ್ಪಷ್ಟತೆ ಇದ್ದರೂ, ಸರ್ಕಾರದಿಂದ ಸ್ಪಷ್ಟೀಕರಣ ಕೋರಲಾಗಿದೆ. ಆಯೋಗಕ್ಕೆ ಮಂಜೂರಾಗಿರುವ ಹುದ್ದೆಗಳಿಗೆ ಆಯೋಗದ ಅನುಮೋದನೆ ಪಡೆಯದೇ ಅಧಿಸೂಚನೆ ಜಾರಿ ಮಾಡಿದ್ದಾರೆ. ಈ ಅಂಶಗಳಷ್ಟೇ ಅಲ್ಲದೆ, ಇನ್ನೂ ಹಲವು ವಿಷಯಗಳ ಬಗ್ಗೆ ಕಾರ್ಯದರ್ಶಿಯವರು ಆಯೋಗದ ಅನುಮೋದನೆ ಪಡೆಯದೆ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಕಾರ್ಯದರ್ಶಿ ಸ್ವಯಂ ಆಯೋಗದಂತೆ ಕಾರ್ಯನಿರ್ವಹಿಸುತ್ತಿರುವುದು ನಿಯಮದ ಪ್ರಕಾರ ಸರಿಯಲ್ಲ. ಹೀಗಾಗಿ, ಕಾರ್ಯದರ್ಶಿಯವರಿಂದ ಬರುವ ಪತ್ರಗಳನ್ನು ಪರಿಶೀಲಿಸಿ, ಆಯೋಗದ ಅನುಮೋದನೆ ಪಡೆದಿರುವ ವಿಷಯಗಳಿದ್ದಲ್ಲಿ ಮಾತ್ರ ಕ್ರಮ ಕೈಕೊಳ್ಳಬೇಕು. ಅಲ್ಲದೆ, ಕಾರ್ಯದರ್ಶಿಗೆ ಸೂಕ್ತ ತಿಳುವಳಿಕೆ ನೀಡಬೇಕು' ಎಂದೂ ಪತ್ರದಲ್ಲಿದೆ.

ನೇಮಕಾತಿ ಪ್ರಕ್ರಿಯೆಗಳಲ್ಲಿ ಅಭ್ಯರ್ಥಿಗಳಲ್ಲಿ ವಿಶ್ವಾಸ ಮೂಡಿಸಲು ಮತ್ತು ಅವರ ಒಳಿತಿಗೆ ಪೂರಕವಾಗಿ ನಾನು ಕರ್ತವ್ಯನಿರ್ವಹಿಸುತ್ತಿದ್ದೇನೆ.
ಸುರಳ್ಕರ್ ವಿಕಾಸ್ ಕಿಶೋರ್
ಕಾರ್ಯದರ್ಶಿ, ಕೆಪಿಎಸ್‌ಸಿ

ಇದು ಆಯೋಗದ ಆಂತರಿಕ ವಿಷಯ. ಆಯೋಗದ ವಿಷಯಗಳನ್ನು ಮಾಧ್ಯಮಕ್ಕೆ ಕೊಡುವುದಾಗಲಿ, ನೀವು ಕೇಳುವುದಾಗಲಿ ಸರಿ ಇರಲ್ಲ.
ಶಿವಶಂಕರಪ್ಪ ಎಸ್. ಸಾಹುಕಾರ್
ಅಧ್ಯಕ್ಷ, ಕೆಪಿಎಸ್‌ಸಿ

₹2.5 ಲಕ್ಷ ಲಂಚ: ಕೃಷಿ ಇಲಾಖೆ ಎ.ಡಿ, ಅಧಿಕಾರಿ ಲೋಕಾಯುಕ್ತ ಬಲೆಗೆ

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ: ಕೃಷಿ ಉಪಕರಣಗಳನ್ನು ಪೂರೈಸಿದ್ದ ಬಿಲ್ ಮಂಜೂರು ಮಾಡಲು ₹ 2.5 ಲಕ್ಷ ಲಂಚ ಪಡೆಯುತ್ತಿದ್ದ ಇಲ್ಲಿನ ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಪ್ರವೀಣ್ ಕುಮಾರ್, ತಾಂತ್ರಿಕ ಕೃಷಿ ಅಧಿಕಾರಿ ಸತೀಶ್ ಮತ್ತು ಹೊರಗುತ್ತಿಗೆಯ ಗ್ರೂಪ್ ಡಿ ನೌಕರ ಅರುಣ್ ಅವರು ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಗುಂಡ್ಲುಪೇಟೆಯ ಎಸ್.ಆರ್.ಟ್ರೇಡರ್ಸ್ ಮಾಲೀಕ ಕುಮಾರಸ್ವಾಮಿ ಮಾರ್ಚ್ 31ರಂದು ಪೊಲೀಸರಿಗೆ ದೂರು ನೀಡಿದ್ದರು.

ಬಿಲ್ ಮಂಜೂರು ಮಾಡಲು ಕೃಷಿ ಅಧಿಕಾರಿ ಸತೀಶ್ ₹1.5 ಲಕ್ಷ, ಸಹಾಯಕ ನಿರ್ದೇಶಕ ಪ್ರವೀಣ್ ಕುಮಾರ್ ಅವರು ₹ 1 ಲಕ್ಷ ಲಂಚವನ್ನು ಕೇಳಿದ್ದರು. ಬುಧವಾರ ಸಂಜೆ 4.10ರ ಸುಮಾರಿಗೆ ಇಬ್ಬರು ಕೇಳಿದ್ದ ಮೊತ್ತವನ್ನು ಡಿ ಗ್ರೂಪ್ ನೌಕರ ಅರುಣ್ ಕುಮಾರಸ್ವಾಮಿ ಮೂಲಕ ಪಡೆಯುತ್ತಿದ್ದಾಗ ಲೋಕಾಯುಕ್ತ ಪೊಲೀಸರು ಕಾರ್ಯಾಚರಣೆ ನಡೆಸಿ, ಮೂವರನ್ನೂ ಬಂಧಿಸಿ, ಹಣವನ್ನು ವಶಕ್ಕೆ ಪಡೆದರು.

ಲೋಕಾಯುಕ್ತ ಎಸ್‌ಪಿ ಸುರೇಶ್‌ಬಾಬು ಮಾರ್ಗದರ್ಶನದಲ್ಲಿ ಡಿವೈಎಸ್‌ಪಿ ಮ್ಯಾಥ್ಯೂ ಥಾಮಸ್, ಇನ್‌ಸ್ಪೆಕ್ಟರ್‌ಗಳಾದ ಶಶಿಕುಮಾರ್, ರವಿಕುಮಾರ್ ಕಾರ್ಯಾಚರಣೆ ನಡೆಸಿದ್ದರು.

ಪ್ರವೀಣ್ ಕುಮಾರ್

ಸತೀಶ್

ಅರುಣ್

ನಿಧನ ವಾರ್ತೆ

ಕೃಷಿ ತಜ್ಞ ಡಾ. ಎಲ್‌.ಸಿ. ಸೋನ್ಸ್



ಮೂಡುಬಿದಿರೆ (ದಕ್ಷಿಣ ಕನ್ನಡ): ಕೃಷಿ ತಜ್ಞ, ಮೂಡುಬಿದಿರೆ ಬನ್ನಡ್ಕದ ಸೋನ್ಸ್ ಫಾರ್ಮ್‌ನ ಡಾ.ಎಲ್.ಸಿ. ಸೋನ್ಸ್ (89) ಬುಧವಾರ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು, ಪುತ್ರಿ, ಸಹೋದರ ಐ.ವಿ. ಸೋನ್ಸ್ ಇದ್ದಾರೆ.

ರಂಬುಟಾನ್, ಡುರಿಯನ್, ಲ್ಯಾಂಗ್‌ಸಾಟ್, ಎಗ್ ಫ್ರೂಟ್ (ದಕ್ಷಿಣ ಅಮೆರಿಕ), ಡೀಸೆಲ್ ಟ್ರೀ (ಅಮೆಜಾನ್ ಕಾಡು) ಸೇರಿದಂತೆ ಅನೇಕ ವಿದೇಶಿ ಹಣ್ಣುಗಳನ್ನು ನಾಲ್ಕೈದು ದಶಕಗಳ ಹಿಂದೆ ಈ ಪ್ರದೇಶಕ್ಕೆ ಪರಿಚಯಿಸಿದ ಕೀರ್ತಿ ಸೋನ್ಸ್ ಅವರದು. ಸೋನ್ಸ್ ಫಾರ್ಮ್ ಅನಾನಸ್, ಮಾವು ಮತ್ತು ವಿವಿಧ ತಳಿಯ ಬಿದಿರುಗಳಿಗೆ ಹೆಸರುವಾಸಿಯಾಗಿದೆ.

ಕೃಷಿಯ ಜೊತೆಗೆ ಸಾಮಾಜಿಕವಾಗಿ ಗುರುತಿಸಿಕೊಂಡಿದ್ದ ಅವರು ಅಮೆರಿಕನ್ ಸೊಸೈಟಿ ಆಫ್ ಡೌಸರ್ ಸದಸ್ಯರಾಗಿ, ಬ್ರಿಟಿಷ್ ಸೊಸೈಟಿ ಆಫ್ ಡೌಸರ್ ಅಜೀವ ಸದಸ್ಯರಾಗಿ, ಮೂಡುಬಿದಿರೆ ಕಡಲಕೆರೆ ನಿಸರ್ಗಧಾಮದ ಸಲಹೆಗಾರರಾಗಿ ಹಲವಾರು ಅಭಿವೃದ್ಧಿ ಕಾರ್ಯಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಕೃಷಿ ಮತ್ತು ಆರೋಗ್ಯ ಜಾಗೃತಿ ಮೂಡಿಸಲು ಅಲ್ಫ್ರೆಡ್ ಸೋನ್ಸ್ ಫೌಂಡೇಷನ್ ಸ್ಥಾಪಿಸಿದ್ದರು. ಇಸ್ರೇಲ್‌ನಲ್ಲಿ ನಡೆದ ವಿಶ್ವ ನೀರಾವರಿ ಸಮ್ಮೇಳನದಲ್ಲಿ ಭಾಗವಹಿಸಿ, ಅವುಗಳ ಮಾದರಿಯನ್ನು ತಮ್ಮ ಊರಿನಲ್ಲಿ ಪ್ರಯೋಗಿಸಿದ್ದರು.

ಡಾ. ಸೋನ್ಸ್ ಅವರಿಗೆ ಕರ್ನಾಟಕ ಸರ್ಕಾರದ 'ಅತ್ಯುತ್ತಮ ತೋಟಗಾರಿಕಾ ತಜ್ಞ' ಸೇರಿ ಹಲವು ಪ್ರಶಸ್ತಿಗಳು ದೊರೆತಿವೆ. ಏಪ್ರಿಲ್ 4ರಂದು (ಮಂಗಳವಾರ) ತಮ್ಮ 89ನೇ ವರ್ಷದ ಜನ್ಮ ದಿನವನ್ನು ಅವರು ಆಚರಿಸಿಕೊಂಡಿದ್ದರು.

ಸೋನ್ಸ್ ಅವರ ಅಂತ್ಯಸಂಸ್ಕಾರವು ಏ.7ರಂದು ಸಂಜೆ 5 ಗಂಟೆಗೆ ನಡೆಯಲಿದ್ದು, ಅಂದು ಬೆಳಿಗ್ಗೆಯಿಂದ ಸೋನ್ಸ್ ಫಾರ್ಮ್ ಆವರಣದಲ್ಲಿ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿಜ್ಞಾನಿ ಸಿ.ಆರ್. ಸತ್ಯ

ಬೆಂಗಳೂರು: ರಾಕೆಟ್ ವಿಜ್ಞಾನದಲ್ಲಿ ಪರಿಣತರಾಗಿದ್ದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಮಾಜಿ ವಿಜ್ಞಾನಿ ಸಿ.ಆರ್. ಸತ್ಯ (80) ಅವರು ನಗರದಲ್ಲಿ ಮಂಗಳವಾರ ರಾತ್ರಿ ನಿಧನರಾದರು.

ಅವರು ಕನ್ನಡ ಸಾಹಿತ್ಯದಲ್ಲಿ ಚಿರಪರಿಚಿತರಾದ ಎ.ಆರ್. ಕೃಷ್ಣಶಾಸ್ತ್ರಿ ಅವರ ಮೊಮ್ಮಗ. ವಿಜ್ಞಾನ ಲೇಖಕರೂ ಆಗಿದ್ದ ಸತ್ಯ ಅವರು, ವಯೋಸಹಜ ಅನಾರೋಗ್ಯದಿಂದ ಇಲ್ಲಿನ ಬ್ಯಾಪಿಸ್ಟ್ ಆಸ್ಪತ್ರೆಗೆ ದಾಖಲಾಗಿದ್ದರು. ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ಆರ್.ಟಿ. ನಗರದಲ್ಲಿರುವ ನಿವಾಸದಲ್ಲಿ ಗುರುವಾರ ಬೆಳಿಗ್ಗೆ 8 ಗಂಟೆಯಿಂದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಬಳಿಕ ಅಂತ್ಯಸಂಸ್ಕಾರ ನಡೆಯಲಿದೆ.

ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ಪರಿಣತರಾದ ಇವರು, 50 ವರ್ಷಗಳಿಗೂ ಅಧಿಕ ಅವಧಿ ಇಸ್ರೊ ಮತ್ತು ಟಾಟಾ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ್ದಾರೆ. ಕನ್ನಡ, ಇಂಗ್ಲಿಷ್‌ನಲ್ಲಿ ಇವರು ಬರೆದಿರುವ ವೈಜ್ಞಾನಿಕ ಲೇಖನಗಳು ವಿವಿಧ ನಿಯತಕಾಲಿಕೆ ಹಾಗೂ ಪುಸ್ತಕಗಳ ರೂಪದಲ್ಲಿ ಪ್ರಕಟಗೊಂಡಿವೆ.

'ಇವರು ಬರೆದಿರುವ 'ತ್ರಿಮುಖಿ', 'ಡಾ.ಯು.ಆರ್. ರಾವ್', 'ಅಳಿವಿಲ್ಲದ ಸ್ಥಾವರ' ಕೃತಿಗಳು ಕನ್ನಡದ ವಿಜ್ಞಾನ ಸಾಹಿತ್ಯ ಲೋಕದಲ್ಲಿ ತಮ್ಮದೇ ಆದ ಛಾಪು ಮೂಡಿಸಿವೆ. ಅವರು ರಚಿಸಿದ ಶಿಶು ಗೀತೆ 'ಆಚೆ ಮನೆ ಸುಬ್ಬಮ್ಮನಿಗೆ ಏಕಾದಶಿ ಉಪವಾಸ...' ಜನಪ್ರಿಯವಾಗಿದೆ.

1942 ಆಗಸ್ಟ್ 15ರಂದು ಮೈಸೂರಿನಲ್ಲಿ ಜನಿಸಿದ ಸಿ.ಆರ್. ಸತ್ಯ, ಬೆಂಗಳೂರಿನ ಬಿಎಂಎಸ್ ಕಾಲೇಜಿನಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವಿ ಪಡೆದು, ಉನ್ನತ ವ್ಯಾಸಂಗವನ್ನು ಬಾಂಬೆ ಅಣು ಸಂಶೋಧನಾ ಸಂಸ್ಥೆಯಲ್ಲಿ ನಡೆಸಿದ್ದರು. ಕೇರಳದ ಥುಂಬಾ ರಾಕೆಟ್ ಉಡಾವಣಾ ಕೇಂದ್ರದಲ್ಲಿ ವೃತ್ತಿ ಜೀವನ ಆರಂಭಿಸಿದ್ದರು. ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಮಾರ್ಗದರ್ಶನದಲ್ಲಿ ಕೆಲಸ ಮಾಡಿದ ಅವರು, ರಾಕೆಟ್ ತಂತ್ರಜ್ಞಾನ ಅಭಿವೃದ್ಧಿಗೆ ಕೊಡುಗೆ ನೀಡಿದರು. 1960ರ ದಶಕದಲ್ಲಿ ಮೊಟ್ಟ ಮೊದಲ 'ರಾಕೆಟ್ ನೋಸ್ ಕೋನ್' ಅನ್ನು ಸೈಕಲ್ ಮೇಲೆ ಕಟ್ಟಿಕೊಂಡು ಹೋಗುತ್ತಿರುವ ಫೋಟೊ ಇಸ್ರೊದ ಅವಿಸ್ಮರಣೀಯ ಚಿತ್ರಗಳಲ್ಲಿ ಒಂದಾಗಿದೆ. ಈ ಫೋಟೊದಲ್ಲಿರುವ ಇಬ್ಬರು ವ್ಯಕ್ತಿಗಳಲ್ಲಿ ಸತ್ಯ ಅವರೂ ಒಬ್ಬರಾಗಿದ್ದಾರೆ.

ಇಸ್ರೊದಲ್ಲಿ ಸೇವೆ ಸಲ್ಲಿಸಿದ ಅವರು, ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ ಸಂಸ್ಥೆಗೆ ಉಪಾಧ್ಯಕ್ಷರಾಗಿದ್ದರು. ಹಾಸ್ಯ ಪತ್ರಿಕೆ 'ಅಪರಂಜಿ'ಗೆ ಸತತ 30 ವರ್ಷ ಹಾಸ್ಯ ಲೇಖನ ಬರೆದಿದ್ದರು. ಕೇರಳದ ಥುಂಬಾ ರಾಕೆಟ್ ಉಡಾವಣಾ ಕೇಂದ್ರದಲ್ಲಿ ಅವರು ಕನ್ನಡದ ಸಂಘವನ್ನೂ ಸ್ಥಾಪಿಸಿದ್ದರು. ಪರಿಸರ ಜಾಗೃತಿ ಕಾರ್ಯದಲ್ಲಿಯೂ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದ ಅವರು, ಹೆಬ್ಬಾಳ ಕೆರೆಯ ಅಭಿವೃದ್ಧಿಗೆ ಕಾರಣವಾಗಿದ್ದರು.

ತಿರುವನಂತಪುರದಲ್ಲಿ ಅನಂತಪದ್ಮನಾಭ ಸ್ವಾಮಿ ದೇವಸ್ಥಾನದ ಕಲ್ಲುಗಳ ಮೇಲೆ ನಡೆಸಿದ ಸಂಶೋಧನೆಯ ಬಗ್ಗೆ ಅವರು ಬರೆದ 'ಅಳಿವಿಲ್ಲದ ಸ್ಥಾವರ' ಪುಸ್ತಕಕ್ಕೆ ಕರ್ನಾಟಕ ಸಾಂಸ್ಕೃತಿಕ ಅಕಾಡಮಿ ಪುರಸ್ಕಾರ, ಇಂಗ್ಲಿಷ್ ಅನುವಾದ 'ಸೆಂಟಿನಲ್ಸ್ ಆಫ್ ಗ್ಲೋರಿ' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುರಸ್ಕಾರ ಸೇರಿ ವಿವಿಧ ಪ್ರಶಸ್ತಿಗಳು ಸಂದಿವೆ.

ರಾಜಸ್ಥಾನದಲ್ಲಿ ಸೆರೆಸಿಕ್ಕ ಆರೋಪಿಗಳು

ಒಂದನೇ ಪುಟದಿಂದ...

ಪ್ರಕರಣಕ್ಕೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಾಗುತ್ತಿದ್ದಂತೆಯೇ ಅಂದೇ ಮಧ್ಯಾಹ್ನ ಆರೋಪಿಗಳು ಪರಾರಿಯಾಗಿದ್ದರು. ಹುಬ್ಬಳ್ಳಿ, ಬೆಳಗಾವಿ ಮೂಲಕ ಮಹಾರಾಷ್ಟ್ರಕ್ಕೆ ತೆರಳಿದ್ದರು. ಅಲ್ಲಿಂದ ಗುಜರಾತ್‌ನಲ್ಲಿ ಸುತ್ತಾಡಿ ರಾಜಸ್ಥಾನ ತಲುಪಿದ್ದರು.

ಆರೋಪಿಗಳು ರಾಜ್ಯದ ಗಡಿ ದಾಟಿರುವುದು ಖಾತ್ರಿಯಾಗುತ್ತಲೇ ರಾಮನಗರ ಪೊಲೀಸರ ತಂಡ ಅವರ ಬೆನ್ನು ಹತ್ತಿತ್ತು. ನಂತರದಲ್ಲಿ ಮಹಾರಾಷ್ಟ್ರ, ಗುಜರಾತ್ ಹಾಗೂ ರಾಜಸ್ಥಾನ ಪೊಲೀಸರ ಜೊತೆ ನಿರಂತರ ಸಂಪರ್ಕದಲ್ಲಿತ್ತು. ಗುಜರಾತ್ ಗಡಿಯಲ್ಲಿ ಪೊಲೀಸರ ಕೈಯಿಂದ ಸ್ವಲ್ಪದರಲ್ಲಿಯೇ ತಪ್ಪಿಸಿಕೊಂಡಿದ್ದ ಆರೋಪಿಗಳು ನಂತರ ರಾಜಸ್ಥಾನದ ಬಾನ್ಸವಾಡ ಜಿಲ್ಲೆಯಲ್ಲಿ ಸೆರೆ ಸಿಕ್ಕಿದ್ದಾರೆ.

ಆರೋಪಿಗಳನ್ನು ಬಾನ್ಸವಾಡದಲ್ಲಿ ಟ್ರಾನ್ಸಿಟ್ ಕಸ್ಟಡಿಗೆ ಪಡೆದು ವಿಮಾನದ ಮೂಲಕ ಕರೆತರಲಾಗುತ್ತಿದೆ ಎಂದು ರಾಮನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ ಮಾಹಿತಿ ನೀಡಿದರು.

11 ಪ್ರಕರಣ: ಪ್ರಕರಣದ ಪ್ರಮುಖ ಆರೋಪಿ ಪುನೀತ್ ಕೆರೆಹಳ್ಳಿ ವಿರುದ್ಧ ಈಗಾಗಲೇ ವಿವಿಧ ಠಾಣೆಗಳಲ್ಲಿ ಹಲ್ಲೆ, ಬೆದರಿಕೆ ಸೇರಿದಂತೆ 11ಕ್ಕೂ ಹೆಚ್ಚು ಪ್ರಕರಣ ದಾಖಲಾಗಿವೆ.

'ರಾಷ್ಟ್ರ ರಕ್ಷಣಾ ಪಡೆ ಎಂಬ ಸಂಘಟನೆ ಕಟ್ಟಿಕೊಂಡಿದ್ದ ಆರೋಪಿ ಜಾನುವಾರು ಸಾಗಣೆದಾರರ ಮೇಲೆ ದಾಳಿ ನಡೆಸುವುದು ಹಾಗೂ ಪ್ರತಿಭಟನೆ ಮಾಡುವುದನ್ನು ಕಸುಬಾಗಿಸಿಕೊಂಡಿದ್ದ' ಎಂದು ಎಸ್.ಪಿ. ವಿವರಿಸಿದರು.

ಈ ಪ್ರಕರಣದಲ್ಲಿ ಆರೋಪಿಗಳು ಪರಾರಿಯಾಗಲು ಸಹಾಯ ಮಾಡಿದವರ ಮೇಲೂ ಕ್ರಮ ಕೈಗೊಳ್ಳಲಾಗುವುದು. ಆರೋಪಿಗಳ ಪತ್ತೆಗೆ ಶ್ರಮಿಸಿದ ಪೊಲೀಸರ ತಂಡಕ್ಕೆ ₹1 ಲಕ್ಷ ಬಹುಮಾನ ನೀಡುವುದಾಗಿ ಅವರು ಘೋಷಿಸಿದರು.

ಪ್ರಕರಣದಲ್ಲಿ ಬಂಧಿಸಲಾದ ಆರೋಪಿಗಳು (ಎಡದಿಂದ): ಸುರೇಶ್‌ಕುಮಾರ್, ಪಿಲ್ಲಿಂಗ್ ಅಂಬಿಗಾರ, ಪುನೀತ್ ಕೆರೆಹಳ್ಳಿ, ಪವನ್‌ಕುಮಾರ್ ಹಾಗೂ ಗೋಪಿ

ತ್ವರಿತಗತಿಯಲ್ಲಿ ತನಿಖೆ ನಡೆದು ಆರೋಪಿಗಳಿಗೆ ಶಿಕ್ಷೆಯಾಗಬೇಕು. ಪುನೀತ್ ಕೆರೆಹಳ್ಳಿಗೆ ಬಿಜೆಪಿ ಸಂಪರ್ಕವಿದ್ದು ತನಿಖೆಯನ್ನು ದಾರಿ ತಪ್ಪಿಸುವ ಸಾಧ್ಯತೆ ಇದೆ
ಯೂನುಸ್ ಪಾಷಾ
ಇದ್ರೀಷ್ ಪಾಷಾ ಸಹೋದರ

ಮತೀಯ ಗೂಂಡಾಗಿರಿ: ಎಸ್‌.ಪಿ ಎಚ್ಚರಿಕೆ

ಜಾನುವಾರು ಸಾಗಣೆ ಸೇರಿದಂತೆ ಯಾವುದೇ ರೀತಿಯ ಅಕ್ರಮ ಚಟುವಟಿಕೆ ಕಂಡುಬಂದಲ್ಲಿ ಸಾರ್ವಜನಿಕರು ಪೊಲೀಸ್ ಕಂಟ್ರೋಲ್ ರೂಂ ಇಲ್ಲವೇ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು. ಅದನ್ನು ಬಿಟ್ಟು ಮತೀಯ ಗೂಂಡಾಗಿರಿ ಮತ್ತು ಕೋಮು ಸೌಹಾರ್ದಕ್ಕೆ ಧಕ್ಕೆ ತಂದರೆ ಅಂತಹವರ ವಿರುದ್ಧ ಮುಲಾಜಿಲ್ಲದೆ ಕ್ರಮ ಜರುಗಿಸಲಾಗುವುದು ಎಂದು ಎಸ್‌.ಪಿ ಕಾರ್ತಿಕ್ ರೆಡ್ಡಿ ಅವರು ಎಚ್ಚರಿಸಿದರು.

ಕಾರಿನಲ್ಲಿ ಪ್ರಯಾಣ

ಆರೋಪಿಗಳು ಒಟ್ಟಾಗಿ ಕರ್ನಾಟಕ ನೋಂದಣಿ ಸಂಖ್ಯೆಯ ಕಾರಿನಲ್ಲಿ ಪ್ರಯಾಣಿಸುತ್ತಿದ್ದರು. ಮೊದಲ ಎರಡು ದಿನ ಮೊಬೈಲ್ ಫೋನ್ ಸ್ವಿಚ್ ಆಫ್ ಮಾಡಿಕೊಂಡಿದ್ದ ಪುನೀತ್, ಬೆಳಗಾವಿ ಮೂಲಕ ಮಹಾರಾಷ್ಟ್ರ ತಲುಪುತ್ತಲೇ ಅಲ್ಲಿ ವಿಡಿಯೊ ಮಾಡಿ ತಾನು ಪೊಲೀಸರ ಮುಂದೆ ವಿಚಾರಣೆಗೆ ಹಾಜರಾಗಲು ಸಿದ್ಧ. ಆದರೆ ಈವರೆಗೆ ಪೊಲೀಸರಿಂದ ಯಾವುದೇ ಕರೆ ಬಂದಿಲ್ಲ ಎಂದು ಹೇಳಿದ್ದರು. ಬೇಕಂತಲೇ ಪೊಲೀಸರು ಎಫ್‌ಐಆರ್ ತಿದ್ದಿದ್ದಾರೆ ಎಂದು ಆರೋಪಿಸಿದ್ದರು.

'ಆರೋಪಿಗಳನ್ನು ಏ. 1ರಿಂದಲೇ ಬೆನ್ನು ಹತ್ತಿದ್ದೆವು. ಅವರು ಆರೋಪಿಸಿದಂತೆ ಎಫ್‌ಐಆರ್ ತಿದ್ದಲಾಗದು. ಒಮ್ಮೆ ದಾಖಲಾದರೆ ಅದನ್ನು ಬದಲಿಸಲು ಯಾರಿಗೂ ಅವಕಾಶ ಇಲ್ಲ' ಎಂದು ಎಸ್‌.ಪಿ. ಸ್ಪಷ್ಟನೆ ನೀಡಿದರು.

ನ್ಯಾಯಸಮ್ಮತ ತನಿಖೆಗೆ ಮನವಿ

ಇಡೀ ಪ್ರಕರಣದ ತನಿಖೆಯನ್ನು ನ್ಯಾಯಸಮ್ಮತ ರೀತಿಯಲ್ಲಿ ನಡೆಸಬೇಕು ಎಂದು ಆಗ್ರಹಿಸಿ ಮಂಡ್ಯದ ಮುಸ್ಲಿಂ ಮುಖಂಡರು ಬುಧವಾರ ರಾಜ್ಯಸಭೆಯ ಮಾಜಿ ಸದಸ್ಯ ಕೆ. ರೆಹಮಾನ್ ಖಾನ್ ನೇತೃತ್ವದಲ್ಲಿ ರಾಮನಗರ ಎಸ್‌.ಪಿ. ಕಾರ್ತಿಕ್ ರೆಡ್ಡಿ ಅವರಿಗೆ ಮನವಿ ಸಲ್ಲಿಸಿದರು.

'ಇದ್ರಿಷ್ ದೇಹದ ಮೇಲಿನ ಕಲೆಗಳನ್ನು ನೋಡಿದರೆ ಅದು ಖಂಡಿತ ಕೊಲೆಯೇ. ಈಗಾಗಲೇ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದು, ಅವರ ಮೇಲೆ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ರಾಜ್ಯದಲ್ಲಿ ಕೋಮು ಸೌಹಾರ್ದ ಕದಡಲು ಯತ್ನಿಸುತ್ತಿರುವವರಿಗೆ ಇದೊಂದು ಪಾಠವಾಗಬೇಕು' ಎಂದು ಕೋರಿದರು.

ನೆಟ್ಟಾರು ಕುಟುಂಬಕ್ಕೆ ಬಿಜೆಪಿಯಿಂದ ₹ 80ಲಕ್ಷ ವೆಚ್ಚದಲ್ಲಿ ಮನೆ ನಿರ್ಮಾಣ

'ಪ್ರವೀಣ್' ಮನೆ ಗೃಹಪ್ರವೇಶ 27ರಂದು

ಪ್ರಜಾವಾಣಿ ವಾರ್ತೆ

ಸುಳ್ಯ (ದಕ್ಷಿಣ ಕನ್ನಡ): ಹತ್ಯೆಯಾಗಿರುವ ಬಿಜೆಪಿ ಯುವಮೋರ್ಚಾ ಜಿಲ್ಲಾ ಕಾರ್ಯಕಾರಿಣಿ ಸದಸ್ಯರಾಗಿದ್ದ ಪ್ರವೀಣ್ ನೆಟ್ಟಾರು ಅವರ ಕುಟುಂಬದವರಿಗೆ ಬಿಜೆಪಿಯಿಂದ ನಿರ್ಮಿಸುತ್ತಿರುವ ಮನೆಯ ಗೃಹ ಪ್ರವೇಶ ಇದೇ 27ರಂದು ನಡೆಯಲಿದೆ.

ಪ್ರವೀಣ್ ಕುಟುಂಬದವರು ನೆಟ್ಟಾರುವಿನಲ್ಲಿ ವಾಸಿಸುತ್ತಿದ್ದ ಹಳೆ ಮನೆಯನ್ನು ಕೆಡವಿ ಅದೇ ಜಾಗದಲ್ಲಿ ಸುಮಾರು ₹ 80 ಲಕ್ಷ ವೆಚ್ಚದಲ್ಲಿ ಹೊಸ ಮನೆ ನಿರ್ಮಿಸಲಾಗಿದೆ.

'ಕಟ್ಟಡ ಕಾಮಗಾರಿಯನ್ನು ನಾಲ್ಕೇ ತಿಂಗಳುಗಳಲ್ಲಿ ಬಹುತೇಕ ಪೂರ್ಣಗೊಳಿಸಲಾಗಿದೆ. ಆರಂಭದಲ್ಲಿ ₹ 65 ಲಕ್ಷ ವೆಚ್ಚದಲ್ಲಿ ಮನೆ ನಿರ್ಮಿಸಲು ಯೋಜನೆ ರೂಪಿಸಲಾಗಿತ್ತು. ಬಳಿಕ ಮನೆಗೆ ಹೆಚ್ಚುವರಿ ಪ್ರದೇಶ ಸೇರಿಸಲಾಗಿದೆ. ಆವರಣ ಗೋಡೆಯನ್ನೂ ನಿರ್ಮಿಸಲಾಗಿದೆ. ಹಾಗಾಗಿ ಮೊದಲು ಯೋಜಿಸಿದ್ದಕ್ಕಿಂತ ಹೆಚ್ಚು ಹಣ ಖರ್ಚಾಗಿದೆ' ಎಂದು ಮುಗರೋಡಿ ಕನ್ಸ್‌ಸ್ಟ್ರಕ್ಷನ್ಸ್‌ನ ಸೈಟ್ ಎಂಜಿನಿಯರ್ ಕೀರ್ತಿಕ್ ತಿಳಿಸಿದರು.

ಪ್ರವೀಣ್ ತಂದೆ-ತಾಯಿ ಮನೆಯ ಪಕ್ಕದಲ್ಲೇ ಇರುವ ಸಂಬಂಧಿಕರ ಮನೆಯಲ್ಲಿ ನೆಲೆಸಿದ್ದಾರೆ.

ಬಿಜೆಪಿ ನೇತೃತ್ವ: 'ಈ ಮನೆ ನಿರ್ಮಾಣಕ್ಕೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರ ನೇತೃತ್ವದಲ್ಲೇ ಹಣಕಾಸು ವ್ಯವಸ್ಥೆ ಮಾಡಲಾಗಿದೆ. ಸ್ಥಳೀಯವಾಗಿ ಬಿಜೆಪಿ ಮುಖಂಡ ಆರ್.ಕೆ.ಭಟ್ ಕುರುಂಬಡೇಲು ಕಾಮಗಾರಿಯ ಉಸ್ತುವಾರಿ ನೋಡಿಕೊಂಡಿದ್ದಾರೆ' ಎಂದು ಬೆಳ್ಳಾರೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಚಂದ್ರಶೇಖರ ಪನ್ನೆ ತಿಳಿಸಿದರು.

ಹೀಗಿದೆ ಮನೆ: ಸುಮಾರು 2,500 ಚದರ ಅಡಿ ವಿಸ್ತೀರ್ಣದ ಮನೆಯಲ್ಲಿ ಸಿಟ್‌ಔಟ್, ದೇವರ ಕೋಣೆ, ದೊಡ್ಡ ಹಾಲ್, ಮೂರು ಮಲಗುವ ಕೋಣೆ ಇವೆ. ಒಳಾಂಗಣವನ್ನು ಪಿಒಪಿಯಿಂದ ಅಲಂಕರಿಸಲಾಗಿದೆ. ಮನೆಗೆ ಸುಸಜ್ಜಿತ ರಸ್ತೆ, ಆವರಣ ಗೋಡೆ ನಿರ್ಮಾಣ ಮಾಡಲಾಗಿದೆ.

ಬಿಜೆಪಿಯ ದಕ್ಷಿಣ ಕನ್ನಡ ಜಿಲ್ಲಾ ಯುವ ಮೋರ್ಚಾ ಕಾರ್ಯಕಾರಿಣಿ ಸದಸ್ಯರಾಗಿದ್ದ ಪ್ರವೀಣ್ ಸಂಘ ಪರಿವಾರದ ಚಟುವಟಿಕೆಗಳಲ್ಲೂ ತೊಡಗಿಸಿಕೊಂಡಿದ್ದರು. ಮದುವೆ ಆದ ಬಳಿಕವೂ ಅವರ ಕುಟುಂಬ ಹಳೆ ಮನೆಯಲ್ಲಿ ವಾಸಿಸುತ್ತಿತ್ತು. ಹೊಸ ಮನೆ ಕಟ್ಟಿಸಲು ಮುಂದಾಗಿದ್ದ ಅವರು ಈ ಸಲುವಾಗಿ ಮನೆ ಎದುರಿನ ಜಾಗವನ್ನು ಸಮತಟ್ಟು ಮಾಡಿಸಿದ್ದರು. ಜೀವನೋಪಾಯಕ್ಕಾಗಿ ಬೆಳ್ಳಾರೆಯಲ್ಲಿ ಚಿಕನ್ ಸೆಂಟರ್ ಆರಂಭಿಸಿದ್ದರು. 2022ರ ಜುಲೈ 26ರಂದು ಬೆಳ್ಳಾರೆಯಲ್ಲಿ ಅವರ ಹತ್ಯೆ ನಡೆದಿತ್ತು. ಅವರ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದ್ದ ಬಿಜೆಪಿ ಮುಖಂಡರು ಪಕ್ಷದ ವತಿಯಿಂದ ಮನೆಯನ್ನು ನಿರ್ಮಿಸಿ ಕೊಡುವುದಾಗಿ ಭರವಸೆ ನೀಡಿದ್ದರು.

ಬೆಳ್ಳಾರೆ ಸಮೀಪದ ನೆಟ್ಟಾರುವಿನಲ್ಲಿ ಪ್ರವೀಣ್ ನೆಟ್ಟಾರು ಅವರ ಕುಟುಂಬಕ್ಕೆ ಬಿಜೆಪಿ ವತಿಯಿಂದ ನಿರ್ಮಿಸಿರುವ ಹೊಸ ಮನೆಗೆ ಅಂತಿಮ ಸ್ಪರ್ಶ ನೀಡುವ ಕೆಲಸ ನಡೆಯುತ್ತಿದೆ —ಪ್ರಜಾವಾಣಿ ಚಿತ್ರ

ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು

ಹಾಸನ ಕ್ಷೇತ್ರದ ಟಿಕೆಟ್ ಕುರಿತು ಎಚ್‌.ಡಿ. ದೇವೇಗೌಡರ ಕುಟುಂಬದಲ್ಲಿ ನಡೆಯುತ್ತಿರುವ ತಿಕ್ಕಾಟ, ರಾಜ್ಯದ ಇತರೆಡೆ ಚುನಾವಣೆಯಲ್ಲಿ ಜೆಡಿಎಸ್ ಪಕ್ಷದ ಮೇಲೆ ಪರಿಣಾಮ ಬೀರಲಿದೆ ಎಂದು ಭಾವಿಸುವಿರಾ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ
ಹೌದು 100%

ಬಹು ಮಾಧ್ಯಮ ಪ್ರಜಾವಾಣಿ @75
www.prajavani.net

ಇಂದು
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ನಾಳೆ
ಪ್ರಜಾವಾಣಿ ಫೇಸ್‌ಬುಕ್ ಪುಟದಲ್ಲಿ ನೇರಪ್ರಸಾರ
ವಿಶ್ವ ಆರೋಗ್ಯ ದಿನಾಚರಣೆ LIVE
ವೈದ್ಯರೊಂದಿಗೆ ಮಾತುಕತೆ
ಕೋವಿಡ್ ಹೆಚ್ಚಳ, ಬಿರು ಬಿಸಿಲು, ಕೆಲವೆಡೆ ಮಳೆ - ಈ ಸಂದರ್ಭದಲ್ಲಿ ಆರೋಗ್ಯದ ರಕ್ಷಣೆ ಬಗೆಗೆ ಓದುಗರ ಸಂದೇಹಗಳಿಗೆ ಉತ್ತರಿಸಲಿದ್ದಾರೆ
ಡಾ.ಸುದರ್ಶನ್ ಕೆ.ಎಸ್.
ಸಂಜೆ 4 ರಿಂದ
Prajavani.net

ರಾಜ್ಯದ ಕೆಲವೆಡೆ ಮಳೆ ಮುಂದುವರಿಕೆ

ಬೆಂಗಳೂರು: ಕರಾವಳಿಯ ಎಲ್ಲಾ ಜಿಲ್ಲೆಗಳು ಸೇರಿ ರಾಜ್ಯದ ವಿವಿಧೆಡೆ ಎರಡು ದಿನ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಉತ್ತರ ಒಳನಾಡಿನ ಬೀದರ್, ಕಲಬುರಗಿ, ವಿಜಯಪುರ, ಯಾದಗಿರಿ, ಬಾಗಲಕೋಟೆ, ರಾಯಚೂರು ಹಾಗೂ ದಕ್ಷಿಣ ಒಳನಾಡಿನ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬಳ್ಳಾರಿ, ಚಾಮರಾಜನಗರ, ಕೋಲಾರ, ರಾಮನಗರ, ಕೊಡಗಿನ ಒಂದೆರಡು ಕಡೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಕರಾವಳಿಯ ಎಲ್ಲ ಜಿಲ್ಲೆಗಳಲ್ಲಿ ಒಂದೆರಡು ಕಡೆ ಮಳೆಯಾಗಲಿದೆ. ಒಳನಾಡಿನ ಉಳಿದ ಜಿಲ್ಲೆಗಳಲ್ಲಿ ಒಣಹವೆ ಇರಲಿದೆ ಎಂದು ಇಲಾಖೆ ಹೇಳಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಂಜೆ ಅಥವಾ ರಾತ್ರಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಗರಿಷ್ಠ ಉಷ್ಣಾಂಶ 34 ಮತ್ತು ಕನಿಷ್ಠ ಉಷ್ಣಾಂಶ 22 ಡಿಗ್ರಿ ಸೆಲ್ಸಿಯಸ್ ಇರಲಿದೆ ಎಂದು ಹೇಳಿದೆ.

ಸಿಡಿಲಿಗೆ 12 ಮೇಕೆ ಬಲಿ (ಹನೂರು–(ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಶೆಟ್ಟಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚೆನ್ನೂರಿನ ಹೊರ ವಲಯದಲ್ಲಿ ಬುಧವಾರ ಸಂಜೆ ಸಿಡಿಲು ಬಡಿದು 12 ಮೇಕೆಗಳು ಮೃತಪಟ್ಟವು.

'ಗುಡುಗು–ಸಿಡಿಲಿನಿಂದ ಸುರಿದ ಮಳೆಯಿಂದಾಗಿ ಆಗಿರುವ ನಷ್ಟಕ್ಕೆ ಪರಿಹಾರ ನೀಡಬೇಕು' ಎಂದು ಮಾಲೀಕ ವೆಂಕಟಬೋವಿ ಪರಿಹಾರಕ್ಕೆ ಆಗ್ರಹಿಸಿದ್ದಾರೆ. 'ಸ್ಥಳ ಪರಿಶೀಲನೆ ವರದಿ ಪಡೆದು ಪರಿಹಾರ ದೊರಕಿಸಲಾಗುವುದು' ಎಂದು ತಹಶೀಲ್ದಾರ್ ಗುರುಪ್ರಸಾದ್ 'ಪ್ರಜಾವಾಣಿ'ಗೆ ತಿಳಿಸಿದರು.

ನಾಪೋಕ್ಲು (ಕೊಡಗು ಜಿಲ್ಲೆ): ಪಟ್ಟಣ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಾದ ಬಲ್ಲಮಾವಟಿ, ನೆಲಜಿ, ಕಕ್ಕಬ್ಬೆ ವ್ಯಾಪ್ತಿಯಲ್ಲಿ ಬುಧವಾರ ಮಧ್ಯಾಹ್ನ ಗುಡುಗು ಸಹಿತ ಮಳೆಯಾಗಿದ್ದು, ಕೋಟೇರಿ ಗ್ರಾಮದಲ್ಲಿ ಆಲಿಕಲ್ಲು ಸಹಿತ ಮಳೆ ಸುರಿದಿದೆ. ಬಿಸಿಲ ತಾಪಕ್ಕೆ ಕಂಗಾಲಾಗಿದ್ದ ಬೆಳೆಗಾರರಲ್ಲಿ ಮಳೆ ಸಂತಸ ತಂದಿದೆ.

ಚೆರಿಯಪರಂಬುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದ ಅಪ್ಪಚೆಟ್ಟೋಳಂಡ ಕಪ್ ಹಾಕಿ ನಮ್ಮೆಯ ಮರುವಂಡ ಮತ್ತು ಕುಪ್ಪಣ್ಣ ತಂಡಗಳ ನಡುವಿನ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯವನ್ನು ಮಳೆಯಿಂದಾಗಿ ಮುಂದೂಡಲಾಗಿದೆ. ಈ ಎರಡು ತಂಡಗಳ ನಡುವೆ ಗುರುವಾರ ಪಂದ್ಯ ನಡೆಯಲಿದೆ.

ಸುಬ್ರಹ್ಮಣ್ಯ: ಭಾರಿ ಮಳೆ

ಸುಬ್ರಹ್ಮಣ್ಯ: ದಕ್ಷಿಣ ಕನ್ನಡ ಜಿಲ್ಲೆಯ ಕುಕ್ಕೆ ಸುಬ್ರಹ್ಮಣ್ಯ ಸುತ್ತಮುತ್ತಲಿನ ಪ್ರದೇಶದಲ್ಲಿ ಬುಧವಾರ ಸಂಜೆ ಸುಮಾರು ಅರ್ಧ ಗಂಟೆ ಬಿರುಸಿನ ಮಳೆಯಾಗಿದೆ. ಸಂಜೆ 4.50 ರಿಂದ 5.20ರವರೆಗೆ ಕಾಲ ಗುಡುಗು ಸಿಡಿಲಿನಿಂದ ಕೂಡಿದ ಮಳೆಯಾಗಿದೆ. ಬಿಸಿಲಿನ ಝಳದಿಂದ ಹೈರಾಣಾಗಿದ್ದ ಜನತೆಗೆ ಮಳೆ ತಂಪೆರೆಯಿತು. ಈ ಪ್ರದೇಶದ ಅಡಿಕೆ ತೋಟಗಳಿಗೂ ಪ್ರಯೋಜನವಾಗಿದೆ.

ಮಂಗನಕಾಯಿಲೆ: ವ್ಯಕ್ತಿ ಸಾವು

ಶಿವಮೊಗ್ಗ: ಮಂಗನಕಾಯಿಲೆ (ಕ್ಯಾಸನೂರ್ ಫಾರೆಸ್ಟ್ ಡಿಸೀಸ್–ಕೆಎಫ್‌ಡಿ) ಸೋಂಕಿಗೆ ಒಳಗಾಗಿದ್ದ ತೀರ್ಥಹಳ್ಳಿ ತಾಲ್ಲೂಕಿನ ಬಾಳೆಬೈಲು ಗ್ರಾಮದ 54 ವರ್ಷದ ವ್ಯಕ್ತಿಯೊಬ್ಬರು ಇಲ್ಲಿನ ಮೆಗ್ಗಾನ್ ಆಸ್ಪತ್ರೆಯಲ್ಲಿ ಬುಧವಾರ ಮೃತಪಟ್ಟಿದ್ದಾರೆ.

ಸಿವಿಲ್ ಕಾಮಗಾರಿ ಗುತ್ತಿಗೆ ಕೆಲಸ ಮಾಡುತ್ತಿದ್ದ ಅವರನ್ನು ಅನಾರೋಗ್ಯದ ಕಾರಣ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಕೆಎಫ್‌ಡಿ ಸೋಂಕಿನ ಲಕ್ಷಣಗಳು ಕಂಡುಬಂದ ಕಾರಣ ರಕ್ತದ ತಪಾಸಣೆ ನಡೆಸಿದಾಗ ಸೋಂಕು ದೃಢಪಟ್ಟಿತ್ತು ಎನ್ನಲಾಗಿದೆ. ನಂತರ ಅವರನ್ನು ಸೋಮವಾರ ಮಣಿಪಾಲ್‌ನಿಂದ ಕರೆತಂದು ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲಾಗಿತ್ತು.

'ಮಧುಮೇಹ, ಅಧಿಕ ರಕ್ತದೊತ್ತಡ ಕಾರಣ ಆರೋಗ್ಯ ಉಲ್ಬಣಿಸಿ ರೋಗಿ ಮೃತಪಟ್ಟಿದ್ದಾರೆ. ಕೆಎಫ್‌ಡಿ ಲಕ್ಷಣಗಳು ಕಂಡುಬಂದಿದೆ. ಇದೊಂದು ಶಂಕಿತ ಪ್ರಕರಣವಾಗಿದೆ' ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ರಾಜೇಶ್ ಸುರಗಿಹಳ್ಳಿ ತಿಳಿಸಿದ್ದಾರೆ.

AUCTION NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) CB_BOLERO PICK UP Refrigerated
YOM – 2022
Reg No – KA12C0245

2) CB_LPT_TATA ULTRA 1512 _FULLY_BUILT_GOODS
YOM – 2022
Reg No – Unregistered

UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"

INTERESTED PARTIES CAN GIVE THEIR QUOTATIONS (ONLINE/ OFF LINE) WITHIN 15 DAYS FROM THIS PAPER PUBLICATION i.e. from 06.04.2023

(Please note that closing Auction date would not be a Weekly off / Holiday)

BRANCH ADDRESS:
KOTAK MAHINDRA BANK LTD.,
22, MG ROAD, BANGALORE
KARNATAKA – 560001
OR
Contact: Pradeep. S
Kotak Mahindra Bank Ltd.
Contact / 080 - 61564249

ಸಂಕ್ಷಿಪ್ತ ಸುದ್ದಿ

ಆರಗ ಸನ್ಮಾನ ಸಮಾರಂಭ ಮೊಟಕು

ತೀರ್ಥಹಳ್ಳಿ: ಗೃಹ ಸಚಿವ ಆರಗ ಜ್ಞಾನೇಂದ್ರ ಅವರಿಗೆ ಅಭಿನಂದನೆ ಸಲ್ಲಿಸಲು ಸಮೀಪದ ಕುರುವಳ್ಳಿಯಲ್ಲಿ ವಿಶ್ವಕರ್ಮ ಸಮಾಜದಿಂದ ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮವು ಮಾದರಿ ನೀತಿ ಸಂಹಿತೆ ಉಲ್ಲಂಘನೆ ಸಂಬಂಧ ಮೊಟಕುಗೊಂಡಿತು.

ಗ್ರಾಮದ ವಿಶ್ವಕರ್ಮ ಸಮುದಾಯ ಭವನದಲ್ಲಿ ಸಮಾರಂಭ ನಡೆಯುತ್ತಿದ್ದಾಗಲೇ ಬಂದ ಚುನಾವಣಾಧಿಕಾರಿಗಳು, ಅನುಮತಿ ಪಡೆಯದೇ ಮಾದರಿ ನೀತಿ ಸಂಹಿತೆ ಉಲ್ಲಂಘಿಸಿ ಸಭೆ ನಡೆಸಲಾಗುತ್ತಿದೆ ಎಂದು ದೂರಿದರು. ಅಲ್ಲದೇ, ಸಚಿವರಿಗೆ ಅಭಿನಂದನೆ ಸಲ್ಲಿಸುವ ಕಾರ್ಯಕ್ರಮವು ಮತದಾರರ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ತಿಳಿಸಿದ್ದರಿಂದ ಸಮಾರಂಭ ಮೊಟಕುಗೊಂಡಿತು.

ಕೆಆರ್‌ಎಸ್: 72 ಅಭ್ಯರ್ಥಿಗಳ 2ನೇ ಪಟ್ಟಿ ಪ್ರಕಟ

ಬೆಂಗಳೂರು: ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ (ಕೆಆರ್‌ಎಸ್‌ಪಿ) ರಾಜ್ಯ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸುವ ತನ್ನ 72 ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಗುರುವಾರ ಬಿಡುಗಡೆ ಮಾಡಿದೆ.

ವಾರದ ಹಿಂದೆ 47 ಅಭ್ಯರ್ಥಿಗಳ ಮೊದಲ ಪಟ್ಟಿ ಘೋಷಿಸಿತ್ತು. ಒಂದು ವರ್ಷದಿಂದ ನಿರಂತರವಾಗಿ ಅಭ್ಯರ್ಥಿಗಳನ್ನು ಗುರುತಿಸುವ ಕೆಲಸವನ್ನು ಪಕ್ಷ ಮಾಡುತ್ತಾ ಬಂದಿದೆ. ಇಲ್ಲಿಯವರೆಗೆ 300ಕ್ಕೂ ಹೆಚ್ಚು ಆಕಾಂಕ್ಷಿಗಳ ಸಂದರ್ಶನ ನಡೆಸಲಾಗಿದೆ. 11 ಮಹಿಳಾ ಅಭ್ಯರ್ಥಿಗಳು ಸೇರಿದಂತೆ 119 ಅಭ್ಯರ್ಥಿಗಳನ್ನು ಅಂತಿಮಗೊಳಿಸಲಾಗಿದೆ. ಉಳಿದ ಕ್ಷೇತ್ರಗಳ ಪಟ್ಟಿಯನ್ನೂ ಶೀಘ್ರ ಬಿಡುಗಡೆ ಮಾಡಲಾಗುವುದು ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಸಿ.ಎನ್. ದೀಪಕ್ ಹೇಳಿದ್ದಾರೆ.

‘ಭಿಕ್ಷಾಪಾತ್ರೆ ಹಿಡಿದು ಬಂದ ಬಣಕಾರ’

ರಟ್ಟೀಹಳ್ಳಿ (ಹಾವೇರಿ ಜಿಲ್ಲೆ): ‘ಜನಬಲ, ತತ್ವ ಆಧಾರಿತ ರಾಜಕಾರಣಕ್ಕೆ ಕಾಂಗ್ರೆಸ್‌ನಲ್ಲಿ ಮನ್ನಣೆಯಿಲ್ಲ. ಹಣ ಬಲ, ತೋಳ್ಬಲ ಇರುವವರಿಗೆ ಆದ್ಯತೆ ನೀಡಲಾಗುತ್ತಿದೆ. ಪಕ್ಷದ ಜಾತ್ಯತೀತ ನೀತಿ ಒಪ್ಪದ ವ್ಯಕ್ತಿಗೆ ಕಾಂಗ್ರೆಸ್ ಟಿಕೆಟ್ ನೀಡುತ್ತಿದೆ’ ಎಂದು ಮಾಜಿ ಶಾಸಕ ಬಿ.ಹೆಚ್. ಬನ್ನಿಕೋಡ ಬೇಸರ ವ್ಯಕ್ತಪಡಿಸಿದರು.

ತಾಲ್ಲೂಕಿನ ಖಂಡೇಬಾಗೂರು ಗ್ರಾಮದಲ್ಲಿ ಬುಧವಾರ ಅಭಿಮಾನಿಗಳ ಸಭೆಯಲ್ಲಿ ಮಾತನಾಡಿದ ಅವರು, ‘ನಾನು ಹಣಕ್ಕಾಗಿ, ಅಧಿಕಾರಕ್ಕಾಗಿ ರಾಜಕೀಯ ಮಾಡಿಲ್ಲ. ತಾಲ್ಲೂಕಿನ ಸಮಗ್ರ ಅಭಿವೃದ್ಧಿಯೇ ನನ್ನ ಆದ್ಯತೆ’ ಎಂದರು.

‘ತಾಲ್ಲೂಕಿನಲ್ಲಿ ಕಾಂಗ್ರೆಸ್ ಅನ್ನು ಹಲವಾರು ವರ್ಷಗಳಿಂದ ಕಟ್ಟಿ ಬೆಳೆಸಿದ್ದೇನೆ. ಇದೀಗ ಬಿಜೆಪಿಯಿಂದ ಬಂದ ಯು.ಬಿ. ಬಣಕಾರ ಅವರಿಗೆ ಪಕ್ಷ ಟಿಕೆಟ್ ಘೋಷಣೆ ಮಾಡಿರುವುದು ನೋವುಂಟು ಮಾಡಿದೆ. ‘ಬಿಜೆಪಿ ನಾನು ಕಟ್ಟಿದ ಮನೆ’ ಎನ್ನುತ್ತಿದ್ದ ಬಣಕಾರ ಈಗ, ಇನ್ನೊಬ್ಬರು ಕಟ್ಟಿದ ಮನೆಗೆ ಭಿಕ್ಷೆ ಪಾತ್ರೆ ಹಿಡಿದು ಬಂದಿದ್ದಾರೆ. 1978ರಲ್ಲಿ ನಿಮ್ಮ ತಂದೆಯನ್ನು ಸೋಲಿಸಿದಂತೆ, ಈ ಚುನಾವಣೆಯಲ್ಲಿ ನಿನ್ನನ್ನು ಸೋಲಿಸುತ್ತೇನೆ. ಇದು ನನ್ನ ಚಾಲೆಂಜ್’ ಎಂದು ಏಕವಚನದಲ್ಲಿ ಸವಾಲು ಹಾಕಿದರು.

‘ಕೃಷಿ ಸಚಿವ ಬಿ.ಸಿ.ಪಾಟೀಲ ಅವರು ಇತ್ತೀಚೆಗೆ ನನ್ನ ಮನೆಗೆ ಭೇಟಿ ನೀಡಿ, ಚುನಾವಣೆಯಲ್ಲಿ ಬೆಂಬಲಿಸುವಂತೆ ವಿನಂತಿಸಿದ್ದಾರೆ. ಏ.13ರಂದು ನನ್ನ ಅಭಿಮಾನಿಗಳೊಂದಿಗೆ ಚರ್ಚಿಸುತ್ತೇನೆ. ನಂತರ ನನ್ನ ಮುಂದಿನ ರಾಜಕೀಯ ನಡೆ ಇರಲಿದೆ ಎಂದು ತಿಳಿಸಿದ್ದೇನೆ’ ಎಂದರು.

ಶಾಸಕ ವಿರುದ್ಧ ಎಫ್‌ಐಆರ್

ಕಾರಟಗಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಬಸವಣ್ಣಕ್ಯಾಂಪ್‌ನ ಉಣ್ಣಿ ಬಸವೇಶ್ವರ ದೇವಾಲಯದಲ್ಲಿ ಬಿಜೆಪಿ ಧ್ವಜದ ಸಮೇತ ಸಭೆ ನಡೆಸಿ ಚುನಾವಣೆ ನೀತಿ ಸಂಹಿತೆ ಉಲ್ಲಂಘಿಸಿದ ಆರೋಪದ ಮೇಲೆ ಶಾಸಕ ಬಸವರಾಜ ದಢೇಸುಗೂರು ವಿರುದ್ಧ ಕಾರಟಗಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ನೀತಿ ಸಂಹಿತೆ ಜಾರಿಯಲ್ಲಿದ್ದರೂ ಪೂಜೆ ಸಲ್ಲಿಸಿದ ಬಳಿಕ 30ರಿಂದ 40 ಜನರನ್ನು ಸೇರಿಸಿ ಸಭೆ ನಡೆಸಿದ್ದಾರೆ ಎಂದು ಚುನಾವಣಾಧಿಕಾರಿ ತಿಳಿಸಿದ್ದಾರೆ

ದೊಡ್ಡ ಹುದ್ದೆ ಬಿಟ್ಟರು, ರಾಜಕೀಯಕ್ಕೆ ಬಂದರು

• ಸಂತೋಷ ಈ. ಚಿನಗುಡಿ

ಬೆಳಗಾವಿ: ನ್ಯಾಯಾಂಗ, ಕಾರ್ಯಾಂಗ ಬಿಟ್ಟು ಶಾಸಕಾಂಗ ಸೇರಲು ಬಯಸಿದ ಮೂವರು ಚುನಾವಣೆಯಲ್ಲಿ ವಿಶೇಷ ಗಮನ ಸೆಳೆದಿದ್ದಾರೆ. ಶಾಸಕನಾಗಬೇಕು ಎಂಬ ಉದ್ದೇಶದಿಂದ ಸರ್ಕಾರದ ದೊಡ್ಡ ಹುದ್ದೆಗಳಿಗೆ ಸ್ವಯಂ ನಿವೃತ್ತಿ ಪಡೆದಿದ್ದಾರೆ.

ತಮಿಳುನಾಡಿನಲ್ಲಿ ಐಎಎಸ್ ಅಧಿಕಾರಿಯಾಗಿದ್ದ ಶಂಭು ಕೃಷ್ಣ ಕಲ್ಲೋಳಿಕರ, ರಾಜ್ಯದ ವಿವಿಧೆಡೆ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿದ್ದ ಬಾಬಾಸಾಹೇಬ ಜಿನರಾಳಕರ ಹಾಗೂ ವಿಜಯಪುರದಲ್ಲಿ ಸಿಪಿಐ ಆಗಿದ್ದ ಬಸವರಾಜ ಬೀಸನಕೊಪ್ಪ ಅಧಿಕಾರ ಬಿಟ್ಟು ರಾಜಕಾರಣಕ್ಕೆ ಇಳಿದವರು.

ಕಾಂಗ್ರೆಸ್ ತತ್ವಕ್ಕೆ ಬೆಲೆ ಕೊಟ್ಟು ಬಂದಿದ್ದೇನೆ. ಪಕ್ಷದ ಅಭ್ಯರ್ಥಿ ಗೆಲ್ಲಿಸಲು ಮುಂದಾಗುತ್ತೇನೆ. ಮುಂದೆ ದೊಡ್ಡ ಹುದ್ದೆ ಕೊಡುವ ಭರವಸೆ ನೀಡಿದ್ದಾರೆ
ಬಾಬಾಸಾಹೇಬ ಜಿನರಾಳಕರ
ನಿವೃತ್ತ ಜಿಲ್ಲಾ- ಸೆಷನ್ಸ್ ನ್ಯಾಯಾಧೀಶ

ಚುನಾವಣೆಯಲ್ಲಿ ಸ್ಪರ್ಧಿಸಬೇಕೆಂದು ನಿರ್ಧರಿಸಿದ್ದೇನೆ. ಕಾಂಗ್ರೆಸ್ ಟಿಕೆಟ್ ಸಿಗುವ ಭರವಸೆ ಇದೆ. ಸಿಗದಿದ್ದರೂ ನಾನು ರಾಯಬಾಗದ ಕಣದಲ್ಲಿರುತ್ತೇನೆ
ಶಂಭು ಕೃಷ್ಣ ಕಲ್ಲೋಳಿಕರ
ನಿವೃತ್ತ ಜಿಲ್ಲಾಧಿಕಾರಿ

2018ರಲ್ಲಿಯೇ ಸ್ಪರ್ಧಿಸುವ ಇರಾದೆ ಇತ್ತು. ಈಗ ಕಾಲ ಕೂಡಿ ಬಂದಿದೆ. ಅಥಣಿ ಕ್ಷೇತ್ರದಲ್ಲಿ ಈ ಹಿಂದಿನ ಶಾಸಕರೂ ಅಭಿವೃದ್ಧಿ ಮಾಡಿದ್ದಾರೆ. ಇನ್ನಷ್ಟು ಮಾಡುವುದು ನನ್ನ ಬಯಕೆ
ಬಸವರಾಜ ಬೀಸನಕೊಪ್ಪ ನಿವೃತ್ತ ಸಿಪಿಐ

ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ: 1991ರ ಐಎಎಸ್ ಬ್ಯಾಚಿನ ಅಧಿಕಾರಿ ಶಂಭು ಕೃಷ್ಣ ಕಲ್ಲೋಳಿಕರ. ಕೇಂದ್ರ ಸರ್ಕಾರ, ಪಶ್ಚಿಮ ಬಂಗಾಳ ಹಾಗೂ ತಮಿಳುನಾಡು ಸರ್ಕಾರಗಳ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ್ದಾರೆ.

1996ರಿಂದ ತಮಿಳುನಾಡಿನ ಎರಡು ಜಿಲ್ಲೆಗಳ ಜಿಲ್ಲಾಧಿಕಾರಿಯಾಗಿ, ರಾಜ್ಯಪಾಲರ ಕಾರ್ಯದರ್ಶಿಯಾಗಿ, ವಿವಿಧ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಆಗಿ ಕೆಲಸ ಮಾಡಿದ್ದರು. ನಂತರ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ನಿರ್ದೇಶಕ, ಕೇಂದ್ರ ಔಷಧೀಯ ಮಂತ್ರಾಲಯದ ಜಂಟಿ ಕಾರ್ಯದರ್ಶಿ ಆಗಿದ್ದರು. ಇನ್ನೂ ಎರಡು ವರ್ಷ ಸೇವಾವಧಿ ಇದ್ದಾಗ 2022ರ ನವೆಂಬರ್‌ನಲ್ಲಿ ಸ್ವಯಂ ನಿವೃತ್ತಿ ಹೊಂದಿದ್ದಾರೆ.

ರಾಯಬಾಗ ತಾಲ್ಲೂಕಿನ ಯಬರಟ್ಟಿ ಗ್ರಾಮದವರಾದ ಶಂಭು, ಪರಿಶಿಷ್ಟ ಜಾತಿಗೆ ಮೀಸಲಾದ ರಾಯಬಾಗ ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ.

ಭರವಸೆ ಹುಸಿ: ಬಾಬಾಸಾಹೇಬ ಜಿನರಾಳಕರ ಹುಕ್ಕೇರಿ ತಾಲ್ಲೂಕಿನ ಹತ್ತರಗಿಯವರು. ರಾಜ್ಯದ ವಿವಿಧೆಡೆ ಸಿವಿಲ್ ನ್ಯಾಯಾಧೀಶರಾಗಿ, ಬೆಂಗಳೂರು, ಹುಬ್ಬಳ್ಳಿ, ತುಮಕೂರಿನಲ್ಲಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದ್ದಾರೆ. 2020ರಲ್ಲಿ ಸ್ವಯಂ ನಿವೃತ್ತಿ ಪಡೆದು ಕುಡಚಿ ವಿಧಾನಭಾ ಕ್ಷೇತ್ರದಲ್ಲಿ ಸಮಾಜ ಕಾರ್ಯಗಳಲ್ಲಿ ತೊಡಗಿದ್ದಾರೆ. ಭಾರತ್ ಜೋಡೊ ಯಾತ್ರೆಯಲ್ಲಿ ನಿರಂತರ ಪಾಲ್ಗೊಂಡಿದ್ದರು.

ಕುಡಚಿ ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರ. ಹಾಲಿ ಶಾಸಕ ಪಿ.ರಾಜೀವ್ ಕೂಡ ಪಿಎಸ್‌ಐ ಹುದ್ದೆಗೆ ರಾಜೀನಾಮೆ ಕೊಟ್ಟು ಶಾಸಕರಾದವರು. ಅದೇ ಹಾದಿ ಅನುಸರಿಸಿದ್ದಾರೆ ಜಿನರಾಳಕರ. ಕೊನೆಯ ಕ್ಷಣದಲ್ಲಿ ಕಾಂಗ್ರೆಸ್ ಮಹೇಂದ್ರ ತಮ್ಮಣ್ಣವರ ಅವರಿಗೆ ಟಿಕೆಟ್ ನೀಡಿದೆ. ಜಿನರಾಳಕರ ಅವರ ನಡೆ ಇನ್ನೂ ನಿಗೂಢವಾಗಿದೆ.

‘ರಾಜಕೀಯವೂ ಎಲ್ಲ ಸೇವಾ ಕ್ಷೇತ್ರಗಳ ಕೀಲಿಕೈ ಎನ್ನುವುದು ಡಾ.ಅಂಬೇಡ್ಕರ್ ಅವರ ಹೇಳಿಕೆ. ಅದಕ್ಕೆ ಬದ್ಧನಾಗಿ ರಾಜಕೀಯ ಸೇರಿದ್ದೇನೆ’ ಎನ್ನುತ್ತಾರೆ ಅವರು.

ಜನಬೆಂಬಲ: ಬಸವರಾಜ ಬೀಸನಕೊಪ್ಪ 2010ರ ಬ್ಯಾಚ್‌ನ ಪಿಎಸ್‌ಐ. 2021ರಲ್ಲಿ ವಿಜಯಪುರದಲ್ಲಿ ಸಿಪಿಐ ಆಗಿದ್ದಾಗ ಸ್ವಯಂ ನಿವೃತ್ತಿ ಪಡೆದರು. ಈಗ 39 ವರ್ಷದ ಬಸವರಾಜ ಅವರು 23 ವರ್ಷ ಸೇವಾವಧಿ ಇರುವಾಗಲೇ ವಿಆರ್‌ಎಸ್ ಪಡೆದಿದ್ದಾರೆ.

2018ರಲ್ಲಿ ಅವರು ಅಥಣಿಯಲ್ಲಿ ನಾಲ್ಕು ತಿಂಗಳು ಪಿಎಸ್‌ಐ ಆಗಿದ್ದರು. ಪ್ರಕರಣವೊಂದರಲ್ಲಿ ಉಂಟಾದ ಗೊಂದಲದ ಕಾರಣ ವರ್ಗ ಮಾಡಲಾಯಿತು. ಅವರ ವರ್ಗಾವಣೆ ರದ್ದು ಮಾಡಬೇಕೆಂದು ಅಥಣಿಯ ಹಲವರು ವಾರಗಟ್ಟಲೇ ಹೋರಾಟ ನಡೆಸಿದ್ದರು. ಅದೇ ಜನಬೆಂಬಲ ನಂಬಿ ರಾಜಕೀಯಕ್ಕೆ ಧುಮುಕಿದ್ದಾರೆ.

ಜನಾರ್ದನ ರೆಡ್ಡಿ ಸ್ಥಾಪಿಸಿದ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದಿಂದ ಅಥಣಿ ಕ್ಷೇತ್ರದಲ್ಲಿ ಸ್ಪರ್ಧಿಸಲು ಮುಂದಾಗಿದ್ದಾರೆ. ರಾಯಬಾಗ ತಾಲ್ಲೂಕಿನ ಶೇಗುಣಸಿ ಗ್ರಾಮದವರಾದ ಅವರಿಗೆ, ದಶಕಗಳಿಂದಲೂ ಅಥಣಿಯೊಂದಿಗೆ ನಂಟಿದೆ.

ಜೆಡಿಎಸ್ ಪರ ಪ್ರಚಾರ: ವಾರ್ಡನ್ ಅಮಾನತು

ಕಲಬುರಗಿ: ಜೆಡಿಎಸ್ ಪರ ಚುನಾವಣೆ ಪ್ರಚಾರ ನಡೆಸಿದ ಆರೋಪದ ಮೇಲೆ ಸೇಡಂ ತಾಲ್ಲೂಕಿನ ಸರ್ಕಾರಿ ಮೆಟ್ರಿಕ್ ನಂತರದ ವೃತ್ತಿಪರ ಬಾಲಕಿಯರ ವಸತಿ ನಿಲಯದ ವಾರ್ಡನ್ ಯಶೋದಮ್ಮ ಅವರನ್ನು ಅಮಾನತುಗೊಳಿಸಿ ಜಿಲ್ಲಾಧಿಕಾರಿ ಯಶವಂತ ಗುರುಕರ್ ಆದೇಶ ಹೊರಡಿಸಿದ್ದಾರೆ.

‘ರಾಜಕೀಯ ಪಕ್ಷವೊಂದರ ಪರ ಚುನಾವಣೆ ಪ್ರಚಾರ ಮಾಡುತ್ತಿದ್ದ ಯಶೋದಮ್ಮ ಅವರಿದ್ದ ಭಾವಚಿತ್ರವು ಜಾಲತಾಣದಲ್ಲಿ ಕಂಡುಬಂತು. ಸರ್ಕಾರಿ ಕರ್ತವ್ಯ ನಿರ್ವಹಣೆಯಲ್ಲಿ ವಿಫಲ, ಆದೇಶ ಉಲ್ಲಂಘಿಸಿ ಚುನಾವಣೆ ಚಟುವಟಿಕೆಯಲ್ಲಿ ಭಾಗಿಯಾದ ಆರೋಪದ ಮೇಲೆ ಸೇವೆಯಿಂದ ಅಮಾನತು ಮಾಡಲಾಗಿದೆ’ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುದೀಪ್‌ಗೆ ಬೆದರಿಕೆ: ವಿಡಿಯೊ ವಿಚಾರ ಪ್ರಸ್ತಾಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ‘ಕಿಚ್ಚ’ ಸುದೀಪ್ ಅವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಾಗೂ ವಿಡಿಯೊ ವಿಚಾರ ಪ್ರಸ್ತಾಪಿಸಿ ಅವರ ಜೆ.ಪಿ.ನಗರದ ನಿವಾಸಕ್ಕೆ ಅಂಚೆಯ ಮೂಲಕ ಎರಡು ಬೆದರಿಕೆ ಪತ್ರಗಳು ಬಂದಿದ್ದು, ಪ್ರಕರಣದ ತನಿಖೆಯನ್ನು ಸಿಸಿಬಿ ಕೈಗೆತ್ತಿಕೊಂಡಿದೆ.

ಅನಾಮಧೇಯ ಹೆಸರಿನಲ್ಲಿ ಪತ್ರ ಬರೆಯಲಾಗಿದೆ. ಪತ್ರದ ಜಾಡು ಪತ್ತೆಗೆ ಸಿಸಿಬಿ ತನಿಖೆ ಚುರುಕುಗೊಳಿಸಿದೆ.

ಸುದೀಪ್ ಅವರ ಆಪ್ತ ಜಾಕ್ ಮಂಜ ಅವರು ಪುಟ್ಟೇನಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಆರಂಭದಲ್ಲಿ ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ದಾಖಲಿಸಿಕೊಂಡಿದ್ದ ಪೊಲೀಸರು, 30ನೇ ಹೆಚ್ಚುವರಿ ಸಿಎಂಎಂ ನ್ಯಾಯಾಲಯದ ಸೂಚನೆಯ ಮೇರೆಗೆ ಮಾರ್ಚ್ 29ರಂದು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಬುಧವಾರ ಪ್ರಕರಣವನ್ನು ಸಿಸಿಬಿಗೆ ವರ್ಗಾವಣೆ ಮಾಡಿ ಆದೇಶಿಸಿದ್ದಾರೆ.

‘ಪತ್ರದಲ್ಲಿ ಕೀಳುಮಟ್ಟದ ಪದ ಪ್ರಯೋಗಿಸಲಾಗಿದೆ. ಜತೆಗೆ ಚೆನ್ನೈ, ರಾಜರಾಜೇಶ್ವರಿ ನಗರ, ದುಬೈ, ಜೆಪಿ ನಗರ, ಪಂಜಾಬ್ ವಿಡಿಯೊ ಎಂದೆಲ್ಲ ಪತ್ರದಲ್ಲಿ ಪ್ರಸ್ತಾಪಿಸಲಾಗಿದೆ. ಇದು ಬ್ಲ್ಯಾಕ್ ಮೇಲ್ ಅಲ್ಲ. ನಿಜ ಮುಖ ಜನರಿಗೆ ತಿಳಿಯಬೇಕು.

ನಿರ್ಮಾಪಕರಿಗೆ ಹೊಟ್ಟೆ ಉರಿಸಿದರೆ ಸುಮ್ಮನೆ ಇರುತ್ತಾರೆಯೇ? ಎಂಬ ವಿಚಾರವನ್ನು ಪತ್ರದಲ್ಲಿ ಬರೆಯಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಗೌರವಯುತವಾದ ಕುಟುಂಬ ನಮ್ಮದು. ಕುಟುಂಬಕ್ಕೆ ಬೆದರಿಕೆ ಹಾಕಿ ಮಾನಸಿಕ ಕಿರುಕುಳ ನೀಡಲಾಗಿದೆ. ಆರೋಪಿಗಳನ್ನು ಬಂಧಿಸುವಂತೆ ದೂರು ನೀಡಿದ್ದಾರೆ’ ಎಂದು ಪೊಲೀಸರು ಹೇಳಿದ್ದಾರೆ.

ಚಿತ್ರರಂಗದವರ ಕೆಲಸ: ಆರೋಪ

‘ಮನೆಯ ವಿಳಾಸ ಗೊತ್ತಿದೆ ಎಂದು ಪತ್ರ ಬರೆದು ಕಳುಹಿಸಿದ್ದಾರೆ. ಇದಕ್ಕೆ ಹೆದರುವುದಿಲ್ಲ. ಚಿತ್ರರಂಗದವರ ಕೆಲವರ ಕೆಲಸವಿದು. ಆತ ಯಾರೂ ಎಂಬುದೂ ಗೊತ್ತಿದೆ. ಇದಕ್ಕೆ ಉತ್ತರ ನೀಡುತ್ತೇನೆ. ಯಾವ ರೀತಿಯಲ್ಲಿ ಕ್ರಮ ಆಗಬೇಕೋ ಅದು ಆಗಲಿದೆ’ ಎಂದು ಸುದೀಪ್ ಪ್ರತಿಕ್ರಿಯಿಸಿದ್ದಾರೆ.

‘ಚಿತ್ರರಂಗದಲ್ಲೂ ಶತ್ರುಗಳು ಇರುತ್ತಾರೆ. ಉತ್ತರ ಕೊಡದೆ ಸುಮ್ಮನೆ ಇರುವುದಿಲ್ಲ. ರಾಜಕೀಯಕ್ಕೂ ಈ ಪತ್ರಕ್ಕೂ ಸಂಬಂಧ ಇಲ್ಲ’ ಎಂದು ತಿಳಿಸಿದ್ದಾರೆ.

ಬಿಜೆಪಿ ಪರ ನಟ ಸುದೀಪ್ ಪ್ರಚಾರ

‘ಕಡುಕಷ್ಟದಲ್ಲಿ ನೆರವಾದ ಬಸವರಾಜ ಬೊಮ್ಮಾಯಿ ಅವರಿಗೆ ಈ ಮೂಲಕ ಕೃತಜ್ಞತೆ ಸಲ್ಲಿಸುತ್ತೇನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಲನಚಿತ್ರ ನಟ ಸುದೀಪ್ ಅವರು ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳ ಪರವಾಗಿ ಕೆಲವು ಕ್ಷೇತ್ರಗಳಲ್ಲಿ ಪ್ರಚಾರ ನಡೆಸಲಿದ್ದಾರೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸುದೀಪ್, ‘ನಾನು ಬಿಜೆಪಿ ಸೇರುತ್ತಿಲ್ಲ, ರಾಜಕೀಯವನ್ನು ಪ್ರವೇಶ ಮಾಡುತ್ತಿಲ್ಲ ಮತ್ತು ಚುನಾವಣೆಯಲ್ಲಿ ಸ್ಪರ್ಧಿಸುವುದೂ ಇಲ್ಲ’ ಎಂದು ಸ್ಪಷ್ಟಪಡಿಸಿದರು.

‘ನಾನು ಹಣಕ್ಕಾಗಿ ಪ್ರಚಾರಕ್ಕೆ ಬಂದಿಲ್ಲ. ನಾನೇ ಯಾರಿಗಾದರೂ ಹಣ ಕೊಡಲು ಸಿದ್ಧ. ಬಸವರಾಜ ಬೊಮ್ಮಾಯಿ ಅವರು ನನಗೆ ಚಿಕ್ಕಂದಿನಿಂದಲೂ ಪರಿಚಿತರು. ನಮ್ಮ ಮನೆಗೆ ಬರುತ್ತಿದ್ದರು. ಆಗಿನಿಂದಲೂ ಅವರನ್ನು ‘ಮಾಮ’ ಎಂದೇ ಕರೆಯುತ್ತಿದ್ದೆ. ಚಿತ್ರರಂಗದಲ್ಲಿ ನಾನು ಕಡು ಕಷ್ಟದಲ್ಲಿ ಇದ್ದ ಸಂದರ್ಭದಲ್ಲಿ ನನ್ನ ಕೈ ಹಿಡಿದ ಬೆರಳೆಣಿಕೆಯ ಜನರಲ್ಲಿ ಬೊಮ್ಮಾಯಿ ಒಬ್ಬರು. ಈಗ ಅವರು ನನ್ನ ಬೆಂಬಲ ಕೇಳಿದ್ದಾರೆ. ಈ ಸಂದರ್ಭದಲ್ಲಿ ಅವರಿಗೆ ನೆರವಾಗುವ ಮೂಲಕ ಕೃತಜ್ಞತೆ ಸಲ್ಲಿಸುವುದು ನನ್ನ ಕರ್ತವ್ಯ. ಆದ್ದರಿಂದ ಅವರು ಎಲ್ಲಿ ಹೇಳುತ್ತಾರೆಯೋ ಅಲ್ಲಿ ಪ್ರಚಾರ ನಡೆಸುತ್ತೇನೆ. ಹಾಗೆಂದು ಎಲ್ಲ ಕ್ಷೇತ್ರಗಳಲ್ಲಿ ಪ್ರಚಾರ ಮಾಡುವಷ್ಟು ಸಮಯವೂ ಇಲ್ಲ, ಮಾಡುವುದೂ ಇಲ್ಲ. ಕೆಲವು ಕಡೆಗಳಲ್ಲಿ ಮಾತ್ರ ಪ್ರಚಾರ ಮಾಡುತ್ತೇನೆ’ ಎಂದರು.

‘ಪಕ್ಷ ಎನ್ನುವುದಕ್ಕಿಂತ ವ್ಯಕ್ತಿಯ ನೆಲೆಯಲ್ಲಿ ಮುಖ್ಯಮಂತ್ರಿಯವರು ಕರೆದಿದ್ದಾರೆ. ಇಲ್ಲಿ ಪಕ್ಷಗಳ ವಿಚಾರ ಬರುವುದಿಲ್ಲ. ವ್ಯಕ್ತಿಗಾಗಿ ನಾನು ಬಂದಿದ್ದೇನೆ. ಕಠಿಣ ಪರಿಶ್ರಮ ಹಾಕಿ ಅಭಿಮಾನಿಗಳ ದೊಡ್ಡ ಬಳಗವನ್ನು ಪಡೆದಿದ್ದೇನೆ. ಅವರಲ್ಲಿ ಎಲ್ಲ ಪಕ್ಷವನ್ನು ಬೆಂಬಲಿಸುವವರೂ ಇದ್ದಾರೆ. ಒಂದು ವೇಳೆ ರಾಜಕೀಯ ಸೇರುವುದೇ ಆದಲ್ಲಿ ಮುಂಚಿತವಾಗಿಯೇ ಹೇಳಿಯೇ ಸೇರುತ್ತೇನೆ’ ಎಂದರು.

‘ನನ್ನ ಕಷ್ಟದಲ್ಲಿ ಯಾರು ನನ್ನ ಜತೆ ಇದ್ದರೋ ಅಂತಹವರು ಯಾವುದೇ ಪಕ್ಷದಲ್ಲಿದ್ದರೂ ಅವರ ನೆರವಿಗೆ ಹೋಗುತ್ತೇನೆ. ಹಿಂದೆ ಮುನಿರತ್ನ ಅವರಿಗೂ ಪ್ರಚಾರ ಮಾಡಿದ್ದೆ. ಆಗ ಅವರು ಬೇರೆ ಪಕ್ಷದಲ್ಲಿದ್ದರು’ ಎಂದರು.

‘ಐಟಿ ದಾಳಿ ಭೀತಿಯಿಂದ ಸೇರಿದಿರೇ’ ಎಂಬ ಪ್ರಶ್ನೆಗೆ, ಅಂತಹ ಯಾವುದೇ ಭೀತಿ ಇಲ್ಲ. ‘ಹಿಂದೆ ಬಂದು ಪರಿಶೀಲನೆ ಮಾಡಿದ್ದು ನಿಜ. ಅವರಿಗೆ ಏನೂ ಸಿಗಲಿಲ್ಲ. ಆ ಮಾತೆಲ್ಲ ಈಗ ಏಕೆ. ಮಾನವೀಯ ಸಂಬಂಧಕ್ಕೆ ಬೆಲೆ ಕೊಟ್ಟು, ಬೊಮ್ಮಾಯಿ ಅವರನ್ನು ಬೆಂಬಲಿಸಲು ಬಂದಿದ್ದೇನೆ. ಅವರು ಯಾವ ಪಕ್ಷದಲ್ಲಿದ್ದರೂ ಬೆಂಬಲಿಸುತ್ತಿದೆ’ ಎಂದರು.

ಮುಖ್ಯಮಂತ್ರಿ ಬೊಮ್ಮಾಯಿ ಮಾತನಾಡಿ, ‘ಈ ಸುದ್ದಿಗೋಷ್ಠಿಯನ್ನು ವೈಯಕ್ತಿಕ ನೆಲೆಯಲ್ಲಿ ಮಾಡಿದ್ದೇನೆ. ಸುದೀಪ್ ಅವರು ಪಕ್ಷ ಸೇರುತ್ತಿಲ್ಲ. ನಮ್ಮ ಪಕ್ಷದ ಅಭ್ಯರ್ಥಿಗಳ ಪರವಾಗಿ ಪ್ರಚಾರಕ್ಕೆ ಬರುವಂತೆ ಕೇಳಿದ್ದೆ. ನಿಮಗೋಸ್ಕರ ಬರುತ್ತೇನೆ. ಅವರ ಸಮಯ ಮತ್ತು ಗೌರವ ನೋಡಿಕೊಂಡು ಎಲ್ಲೆಲ್ಲಿ ಪ್ರಚಾರ ಮಾಡಬೇಕು ಎಂಬುದನ್ನು ಅವರಿಗೆ ತಿಳಿಸುತ್ತೇವೆ’ ಎಂದು ಹೇಳಿದರು.

‘ಎಲ್ಲ ಪಕ್ಷಗಳೂ ಸ್ಟಾರ್‌ಗಳನ್ನು ಬಳಸಿಕೊಳ್ಳುತ್ತಾರೆ. ಕಾಂಗ್ರೆಸ್‌ನಲ್ಲಿ ದೊಡ್ಡ ದೊಡ್ಡ ಸ್ಟಾರ್‌ಗಳಿದ್ದಾರೆ. ಇತ್ತೀಚೆಗೆ ಚಲನಚಿತ್ರ ಸಂಗೀತ ನಿರ್ದೇಶಕರೊಬ್ಬರು ಅವರ ಪಕ್ಷಕ್ಕೆ ಸೇರಿದ್ದಾರೆ. ಸುದೀಪ್ ಅವರು ಜನಪ್ರಿಯ ನಟ. ಅವರದ್ದೇ ಆದ ದೊಡ್ಡ ಅಭಿಮಾನ ಬಳಗ ಇದೆ. ಅವರು ಪ್ರಚಾರಕ್ಕೆ ಬರುತ್ತಾರೆ ಎಂಬ ವಿಷಯ ಯುವ ಜನರಲ್ಲಿ ಸಂಚಲನ ಮೂಡಿಸಿದೆ’ ಎಂದೂ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕಂದಾಯ ಸಚಿವ ಆರ್.ಅಶೋಕ, ಆರೋಗ್ಯ ಸಚಿವ ಡಾ.ಕೆ.ಸುಧಾಕರ್, ತೋಟಗಾರಿಕಾ ಸಚಿವ ಮುನಿರತ್ನ ಇದ್ದರು.

ಸುದ್ದಿಗೋಷ್ಠಿಯಲ್ಲಿ ನಟ ಸುದೀಪ್ ಮಾತನಾಡಿದರು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇದ್ದರು –ಪ್ರಜಾವಾಣಿ ಚಿತ್ರ

ಕೇಂದ್ರ, ರಾಜ್ಯ ಸರ್ಕಾರದ ಒತ್ತಡ ಇರಬಹುದು: ಡಿ.ಕೆ.ಶಿವಕುಮಾರ್

ಚಿತ್ರನಟ ಸುದೀಪ್ ಅವರು ಬಿಜೆಪಿಗೆ ಬೆಂಬಲ ನೀಡುತ್ತಿರುವುದಕ್ಕೆ ನಮ್ಮ ಯಾವ ಅಭ್ಯಂತರವೂ ಇಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿದರು.

ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಬೆಂಬಲ ನೀಡುವಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಒತ್ತಡ ತಂದಿರಬಹುದು. ಮನವಿ ಮಾಡಿರಬಹುದು’ ಎಂದರು. ಈ ಹಿಂದೆ ಸುದೀಪ್ ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ರಾಜಕೀಯ ಮಾತುಕತೆ ಆಗಿರಲಿಲ್ಲ. ಅವರ ಜತೆಗೆ ವೈಯಕ್ತಿಕ ಗೆಳೆತನ ಇದೆ. ಅವರು ನನ್ನ ಹಳೆಯ ಸ್ನೇಹಿತರು. ಹಾಗಾಗಿ, ಅವರನ್ನು ಭೇಟಿ ಮಾಡಲು ಹೋಗಿದ್ದೆ ಎಂದು ಅವರು ತಿಳಿಸಿದರು.

‘ಮೋದಿ ಕೆಲಸಗಳ ಬಗ್ಗೆ ಹೆಮ್ಮೆ ಇದೆ’

‘ಈ ದೇಶದ ಪ್ರಜೆಯಾಗಿ ನನಗೂ ನನ್ನದೇ ಆದ ಅಭಿಪ್ರಾಯಗಳಿವೆ. ಅದರಂತೆ ಪ್ರಧಾನಿ ಮೋದಿಯವರು ದೇಶದ ಪ್ರಗತಿಗಾಗಿ ಹಲವು ಉತ್ತಮ ಕೆಲಸಗಳನ್ನು ಮಾಡಿದ್ದಾರೆ. ಅದರ ಬಗ್ಗೆ ತುಂಬಾ ಹೆಮ್ಮೆ ಇದೆ’ ಎಂದು ಸುದೀಪ್ ಹೇಳಿದರು.

‘ದೇಶದ ಅಭ್ಯುದಯಕ್ಕಾಗಿ ಉತ್ತಮ ಕೆಲಸಗಳನ್ನು ಮಾಡಿದಾಗ ಯಾರೇ ಆದರೂ ಆ ಬಗ್ಗೆ ಹೆಮ್ಮೆ ಪಡಲೇಬೇಕು. ಒಬ್ಬ ನಾಗರಿಕನಾಗಿ ಈ ವಿಚಾರ ಹಂಚಿಕೊಂಡಿದ್ದೇನೆ’ ಎಂದು ಹೇಳಿದರು.

ಟ್ರೋಲ್‌ಗೆ ಗುರಿಯಾದ ‘ಮಾಮಾ’

‘ಚಿಕ್ಕಂದಿನಿಂದಲೂ ಬೊಮ್ಮಾಯಿ ಅವರನ್ನು ಮಾಮಾ ಎಂದೇ ಕರೆಯುತ್ತಿದ್ದೇನೆ’ ಎಂಬ ಸುದೀಪ್ ಹೇಳಿಕೆ ಟ್ರೋಲ್‌ಗೆ ಗುರಿಯಾಯಿತು.

ಸಾಮಾಜಿಕ ತಾಣಗಳಲ್ಲಿ ಈ ಪದವನ್ನು ಉಲ್ಲೇಖಿಸಿದ ಹಲವರು ಸುದೀಪ್ ಅವರನ್ನು ವ್ಯಂಗ್ಯವಾಡಿದರು. ಬಿಜೆಪಿ ಸರ್ಕಾರದ ವಿರುದ್ಧದ ಶೇ 40ರ ಲಂಚ ಪ್ರಕರಣವನ್ನೂ ಪ್ರಸ್ತಾಪಿಸಿದರು. ಸುದೀಪ್ ಪ್ರಚಾರಕರಾಗಿದ್ದ ರಮ್ಮಿಯನ್ನೂ ಎಳೆದು ತಂದರು. ಅವರ ಸಿನಿಮಾಗಳಲ್ಲಿ ರಾಜಕಾರಣಿಗಳ ಭ್ರಷ್ಟಾಚಾರವನ್ನು ಕಟು ಧ್ವನಿಯಲ್ಲಿ ಟೀಕಿಸಿದ್ದ ವಿಡಿಯೊವನ್ನು ಹರಿಬಿಟ್ಟು ಕುಟುಕಿದರು.

ಶಾಸಕ ಓಲೇಕಾರ್ ದೋಷಿ: ಆದೇಶಕ್ಕೆ ಹೈಕೋರ್ಟ್ ತಡೆ

ಬೆಂಗಳೂರು: ನಗರಸಭೆಗೆ ಮಂಜೂರಾದ ₹1 ಕೋಟಿ ಅನುದಾನದ ಹಂಚಿಕೆಯಲ್ಲಿ ಸ್ವಜನ ಪಕ್ಷಪಾತ ಹಾಗೂ ಭ್ರಷ್ಟಾಚಾರ ಎಸಗಿದ ಆರೋಪಕ್ಕೆ ಸಂಬಂಧಿಸಿದಂತೆ ಹಾವೇರಿ ವಿಧಾನಸಭೆ ಕ್ಷೇತ್ರದ ಬಿಜೆಪಿ ಶಾಸಕ ನೆಹರೂ ಸಿ.ಓಲೇಕಾರ್ ಅವರನ್ನು ದೋಷಿ ಎಂದು ತೀರ್ಮಾನಿಸಿ ಜನಪ್ರತಿನಿಧಿಗಳ ಕೋರ್ಟ್ ನೀಡಿದ್ದ ಆದೇಶ ಜಾರಿಗೆ ಹೈಕೋರ್ಟ್ ತಡೆ ನೀಡಿದೆ.

‘ಪ್ರಕರಣದ ವಿಚಾರಣೆ ನಡೆಸಿ ನನ್ನನ್ನು ದೋಷಿ ಎಂದು ತೀರ್ಮಾನಿಸಿರುವ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶಕ್ಕೆ ತಡೆ ನೀಡಬೇಕು’ ಎಂದು ಕೋರಿ ಓಲೇಕಾರ್ ಸಲ್ಲಿಸಿದ್ದ ಮಧ್ಯಂತರ ಅರ್ಜಿ ಮೇಲೆ ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪ್ರಕಟಿಸಿತು. ‘ವಿಸ್ತೃತ ಆದೇಶ ಇನ್ನಷ್ಟೇ ಲಭ್ಯವಾಗಬೇಕಿದ್ದು, ಮೂಲ ಅರ್ಜಿ ವಿಲೇವಾರಿ ಆಗುವ ತನಕ ಈ ಆದೇಶ ಜಾರಿಯಲ್ಲಿರುತ್ತದೆ. ದೋಷಿ ಮತ್ತು ಶಿಕ್ಷೆಯ ಆದೇಶಗಳೆರಡಕ್ಕೂ ಈಗ ತಡೆ ದೊರೆತಿರುವ ಕಾರಣ ಓಲೇಕಾರ್ ಅವರು ಬರಲಿರುವ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಹಾದಿ ಸುಗಮವಾಗಿದೆ’ ಎಂದು ಓಲೇಕಾರ್ ಪರ ವಾದ ಮಂಡಿಸಿದ್ದ ವಕೀಲ ಆರ್.ಸ್ವರೂಪಾನಂದ ತಿಳಿಸಿದ್ದಾರೆ.

ಮುದ್ನಾಳಗೆ ಟಿಕೆಟ್ ಬೇಡ: ಬಿಎಸ್‌ವೈಗೆ ಮನವಿ

ಪ್ರಜಾವಾಣಿ ವಾರ್ತೆ

ಯಾದಗಿರಿ: ‘ಯಾದಗಿರಿ ವಿಧಾನಸಭಾ ಕ್ಷೇತ್ರದ ಹಾಲಿ ಶಾಸಕ ವೆಂಕಟರೆಡ್ಡಿ ಮುದ್ನಾಳ ಅವರಿಗೆ ಮತ್ತೊಮ್ಮೆ ಟಿಕೆಟ್ ಕೊಡಬಾರದು. ಬೇರೆಯವರಿಗೆ ಅವಕಾಶ ನೀಡಬೇಕು’ ಎಂದು ಟಿಕೆಟ್ ಆಕಾಂಕ್ಷಿಗಳು ಬುಧವಾರ ಬೆಳಿಗ್ಗೆ ಬೆಂಗಳೂರಿನಲ್ಲಿ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರನ್ನು ಭೇಟಿಯಾಗಿ, ಮನವಿಪತ್ರ ಸಲ್ಲಿಸಿದರು.

ಈಗಾಗಲೇ ಟಿಕೆಟ್‌ಗೆ ಅರ್ಜಿ ಸಲ್ಲಿಸಿರುವ ಆಕಾಂಕ್ಷಿಗಳಾದ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಡಾ.ಶರಣಭೂಪಾಲರೆಡ್ಡಿ ನಾಯ್ಕಲ್, ಚಂದ್ರಶೇಖರಗೌಡ ಮಾಗನೂರ, ನಗರಸಭೆ ಮಾಜಿ ಉಪಾಧ್ಯಕ್ಷ ಚೆನ್ನಾರೆಡ್ಡಿ ಬಿಳ್ಹಾರ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರಾದ ಶ್ರೀನಿವಾಸರೆಡ್ಡಿ ಪಾಟೀಲ ಚೆನ್ನೂರ, ದೇವರಾಜ ನಾಯಕ ಮತ್ತು ನಗರಸಭೆ ಸದಸ್ಯ ಅಂಬಯ್ಯ ಶಾಬಾದಿ ತಮ್ಮ ಬೆಂಬಲಿಗರೊಂದಿಗೆ ಭೇಟಿಯಾದರು.

‘ನಮ್ಮ 6 ಜನರಲ್ಲಿ ಯಾರಿಗಾದರೂ ಟಿಕೆಟ್ ಕೊಡಿ. ಇಲ್ಲದಿದ್ದರೆ, ಪಕ್ಷದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಸಮರ್ಥ ಅಭ್ಯರ್ಥಿಗೆ ಟಿಕೆಟ್ ನೀಡಿದರೆ, ಗೆಲ್ಲಿಸಿ ತರುವ ಜವಾಬ್ದಾರಿ ನಮ್ಮದು. ಪಕ್ಷದ ವರ್ಚಸ್ಸು ಕುಂದಿದೆ. ಮುದ್ನಾಳಗೆ ಟಿಕೆಟ್ ನೀಡಿದರೆ ಗೆಲುವು ಕಷ್ಟ. ನಮ್ಮಲ್ಲೇ ಆಯ್ಕೆ ಮಾಡಿದರೆ, ಜನರಿಗೆ ಹೊಸ ಮುಖದ ಪರಿಚಯ ಆಗುತ್ತದೆ. ಪಕ್ಷಕ್ಕೂ ಬಲ ಬರುತ್ತದೆ’ ಎಂದು ಆಕಾಂಕ್ಷಿಗಳು ಹೇಳಿದ್ದಾರೆ ಎನ್ನಲಾಗಿದೆ.

‘ಕಳೆದ ವಿಧಾನಸಭಾ ಚುನಾವಣೆ ವೇಳೆ ಕೊನೆ ಗಳಿಗೆಯಲ್ಲಿ ವೆಂಕಟರೆಡ್ಡಿ ಮುದ್ನಾಳ ಅವರಿಗೆ ಗುರುಮಠಕಲ್ ಬದಲು ಯಾದಗಿರಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಅವಕಾಶ ನೀಡಿದ್ದೀರಿ. ಬಿಜೆಪಿ ಮೇಲಿನ ನಿಷ್ಠೆಯಿಂದ ಹಗಲು ರಾತ್ರಿ ಕೆಲಸ ಮಾಡಿ, 17 ದಿನದಲ್ಲಿ ಕೆಲಸ ಮಾಡಿ ಶಾಸಕರನ್ನಾಗಿ ಆಯ್ಕೆ ಮಾಡಿದ್ದೇವೆ. ಆದರೆ, ಶಾಸಕರು ಎಲ್ಲ ಸಮಾಜದವನ್ನು ಕಡೆಗಣಿಸಿದ್ದಾರೆ’ ಎಂದು ಆರೋಪಿಸಿದ್ದಾರೆ.

ಶಿವರಾಮೇಗೌಡ ಬಿಜೆಪಿ ಸೇರ್ಪಡೆ

ಬೆಂಗಳೂರು: ಮಾಜಿ ಸಂಸದ ಎಲ್.ಆರ್.ಶಿವರಾಮೇಗೌಡ ಅವರು ಜೆಡಿಎಸ್ ತೊರೆದು ಬುಧವಾರ ಬಿಜೆಪಿ ಸೇರಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಸಮ್ಮುಖದಲ್ಲಿ ತಮ್ಮ ಬೆಂಬಲಿಗರೊಂದಿಗೆ ಪಕ್ಷ ಸೇರಿದ ಅವರು, ‘ನಾನು ಕಾಂಗ್ರೆಸ್ ಮತ್ತು ಜೆಡಿಎಸ್‌ನಲ್ಲಿ ಹೋರಾಟ ಮಾಡಿ ಬೆಳೆದವನು. ಇವೆರಡೂ ಪಕ್ಷಗಳಲ್ಲಿ ಕಾರ್ಯಕರ್ತರಿಗೆ ಉಸಿರುಗಟ್ಟಿಸುವ ಸ್ಥಿತಿ ಇದೆ. ನರೇಂದ್ರ ಮೋದಿ ಅವರ ನಾಯಕತ್ವ ಮತ್ತು ಅಭಿವೃದ್ಧಿ ಕೆಲಸ ಮೆಚ್ಚಿ ಬಿಜೆಪಿ ಸೇರಿದ್ದೇನೆ’ ಎಂದರು.

‘ಮಂಡ್ಯ ಜಿಲ್ಲೆಯಲ್ಲಿ ಕಾಂಗ್ರೆಸ್–ಜೆಡಿಎಸ್‌ನ ಆಟಕ್ಕೆ ತಡೆ ಹಾಕಲು ಬಿಜೆಪಿಯಿಂದ ಮಾತ್ರ ಸಾಧ್ಯ. ಮಂಡ್ಯದಲ್ಲಿ ಪಕ್ಷ ಕಟ್ಟಲು ಹಲವು ನಾಯಕರು ಆಹ್ವಾನಿಸಿದ್ದಾರೆ. ಜಿಲ್ಲೆಯಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸುತ್ತೇವೆ’ ಎಂದರು.

ಶಿವರಾಮೇಗೌಡ ಅವರ ಪುತ್ರ ಚೇತನ್ ಗೌಡ, ಕಲಬುರಗಿ ಜಿಲ್ಲೆ ಗುರುಮಠಕಲ್ ಕ್ಷೇತ್ರದ ಕಾಂಗ್ರೆಸ್ ಮುಖಂಡ ಯೋಗೇಶ್ ಬೆಸ್ತರ್, ರಾಮದುರ್ಗ ಕ್ಷೇತ್ರದ ಕಾಂಗ್ರೆಸ್ ಮುಖಂಡ ಚಿಕ್ಕರೇವಣ್ಣ ಸೇರಿ ಹಲವರು ಬಿಜೆಪಿ ಸೇರಿದರು.

ಬಿಜೆಪಿ: ಪ್ರತಿಕ್ಷೇತ್ರಕ್ಕೆ 2–3 ಹೆಸರಿರುವ ಪಟ್ಟಿ ಆಖೈರು

ಬೆಂಗಳೂರು: ರಾಜ್ಯದ 224 ವಿಧಾನಸಭಾ ಕ್ಷೇತ್ರಗಳ ಪೈಕಿ ಬಹುಪಾಲು ಕ್ಷೇತ್ರಗಳಿಗೆ ಎರಡರಿಂದ ಮೂರು ಸಂಭವನೀಯ ಅಭ್ಯರ್ಥಿಗಳ ಹೆಸರುಗಳಿರುವ ಪಟ್ಟಿಯನ್ನು ಬಿಜೆಪಿ ಚುನಾವಣಾ ಸಮಿತಿ ಅಂತಿಮಗೊಳಿಸಿದೆ.

ರಾಜ್ಯ ಚುನಾವಣಾ ಉಸ್ತುವಾರಿ, ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಅಧ್ಯಕ್ಷತೆಯಲ್ಲಿ ಎರಡು ದಿನ ಚುನಾವಣಾ ಸಮಿತಿಯ ಸಭೆ ನಡೆಯಿತು. ಸಹ ಉಸ್ತುವಾರಿಗಳಾದ ಮನ್‌ಸುಖ್ ಮಾಂಡವೀಯ, ಅಣ್ಣಾಮಲೈ, ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ಪ್ರಲ್ಹಾದ ಜೋಷಿ ಸಭೆಯಲ್ಲಿದ್ದರು.

ಈ ಪಟ್ಟಿಯನ್ನು ಸಮಿತಿಯು ಗುರುವಾರ ದೆಹಲಿಗೆ ಕಳುಹಿಸಲಿದೆ. ಕೇಂದ್ರ ಸಂಸದೀಯ ಮಂಡಳಿ ಸಭೆಯು ಅಭ್ಯರ್ಥಿಗಳ ಪಟ್ಟಿ ಅಂತಿಮಗೊಳಿಸಲಿದೆ. ಶುಕ್ರವಾರವೇ ಮಂಡಳಿ ಸಭೆ ಸೇರುವ ಸಾಧ್ಯತೆ ಇದೆ.ಸಿ.ಎಂ ಅಂದೇ ದೆಹಲಿಗೆ ತೆರಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪ್ರತಿ ಕ್ಷೇತ್ರಕ್ಕೂ 2–3 ಹೆಸರುಗಳ ಜತೆ ಅವರ ಕುರಿತಾದ ಪುಟ್ಟ ಮಾಹಿತಿ ನೀಡಲಾಗಿದೆ. ಯಾರ ಸಾಮರ್ಥ್ಯ ಏನು, ಯಾರಿಗೆ ಕೊಟ್ಟರೆ ಅನುಕೂಲ ಎಂಬ ವಿವರವೂ ಒಳಗೊಂಡಿದೆ. ಶನಿವಾರ(ಏ.8) ಅಥವಾ ಭಾನುವಾರ (ಏ.9) ಮೊದಲ ಪಟ್ಟಿ ಬಿಡುಗಡೆ ಮಾಡಬಹುದು ಎಂದು ಹೇಳಲಾಗಿದೆ.

‘ಕಾಂಗ್ರೆಸ್‌ಗೆ ದಾಳಿ ಭಯ ಏಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ಆಯೋಗ, ಐಟಿ ಅಧಿಕಾರಿಗಳು ಸ್ವತಂತ್ರವಾಗಿ ಕೆಲಸ ಮಾಡುತ್ತಿದ್ದು, ಯಾರು ಕಳ್ಳರಿದ್ದಾರೋ ಅವರು ಸಿಗುತ್ತಾರೆ. ಕಾಂಗ್ರೆಸ್‌ನವರು ಯಾಕೆ ಭಯಪಡಬೇಕು. ಅವರು ಇಷ್ಟು ದಿನ ಅಕ್ರಮವಾಗಿ ಗಳಿಸಿರುವ ಕಪ್ಪು ಹಣ ಹೊರಗೆ ಬರುತ್ತದೆ ಎಂಬ ಭಯದ ಕಾರಣಕ್ಕೆ ಈ ರೀತಿಯ ತಂತ್ರ ಮಾಡುತ್ತಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಸೌಧದ ಬಳಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಚುನಾವಣಾ ಆಯೋಗ ಎಲ್ಲ ಪಕ್ಷದವರ ಮೇಲೆ ದಾಳಿ ಮಾಡಿ ವಸ್ತುಗಳನ್ನು ವಶಪಡಿಸಿಕೊಳ್ಳುತ್ತಿದೆ. ನಿಷ್ಪಕ್ಷಪಾತವಾಗಿ ನಡೆಯುತ್ತಿರುವ ದಾಳಿ ತಡೆಯಲು ಅಧಿಕಾರಿಗಳ ಮೇಲೆ ಒತ್ತಡ ತರುವ ಕೆಲಸ ಮಾಡಲಾಗುತ್ತಿದೆ ಎಂದರು.

‘ಕುಂಬಳಕಾಯಿ ಕಳ್ಳ ಎಂದರೆ ಇವರು ಬೆನ್ನು ಮುಟ್ಟಿಕೊಳ್ಳುತ್ತಿದ್ದಾರೆ. ಈಗಾಗಲೇ ಪ್ರತಿಯೊಂದು ಜಿಲ್ಲೆಗೂ ಐಟಿ ಅಧಿಕಾರಿಗಳು ಇದ್ದಾರೆ. ಚುನಾವಣಾ ಆಯೋಗಕ್ಕೂ ಕಾಂಗ್ರೆಸ್ ಸೋಲುವುದಕ್ಕೂ ಸಂಬಂಧವಿಲ್ಲ’ ಎಂದು ಹೇಳಿದರು.

ಕಾಂಗ್ರೆಸ್ ನಾಯಕರಾದ ರಣದೀಪ್ ಸಿಂಗ್ ಸುರ್ಜೇವಾಲಾ ಮತ್ತು ಸಿದ್ದರಾಮಯ್ಯ ಅವರು ದೆಹಲಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ನಾಯಕರು ಮತ್ತು ಬೆಂಬಲಿಗರ ಮನೆ ಮೇಲೆ ದಾಳಿ ನಡೆಸಲು ಐಟಿ ಅಧಿಕಾರಿಗಳು ಸಿದ್ಧರಾಗಿದ್ದಾರೆ ಎಂದು ದೂರಿದ್ದರು.

ಹರಿದಾಡಿದ ‘ಕೈ’ ನಕಲಿ ಪಟ್ಟಿ

ನವದೆಹಲಿ: ಮುಂಬರುವ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್‌ನಿಂದ ಸ್ಪರ್ಧಿಸುವ 50 ಕ್ಷೇತ್ರಗಳ ಅಭ್ಯರ್ಥಿಗಳ ಹೆಸರುಗಳನ್ನು ಒಳಗೊಂಡ ನಕಲಿ ಪಟ್ಟಿ ಬುಧವಾರ ಮಧ್ಯಾಹ್ನ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತು.

ಇದಕ್ಕೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸ್ಪಷ್ಟನೆ ನೀಡಿ, ‘ಕಾಂಗ್ರೆಸ್‌ನ ಯಾವುದೇ ಪಟ್ಟಿ ಬಿಡುಗಡೆ ಆಗಿಲ್ಲ. ಈಗ ಬಂದಿರುವ ಪಟ್ಟಿ ಬೋಗಸ್ ಆಗಿದೆ. ಪಟ್ಟಿಯನ್ನು ಯಾವಾಗ ಬಿಡುಗಡೆ ಮಾಡಬೇಕು ಎಂಬುದನ್ನು ಕೇಂದ್ರ ಚುನಾವಣಾ ಸಮಿತಿ (ಸಿಇಸಿ) ನಿರ್ಧರಿಸುತ್ತದೆ’ ಎಂದರು.

ಮಾಯಕೊಂಡ: ಕಾಂಗ್ರೆಸ್‌ನಲ್ಲಿ ಸವಿತಾಬಾಯಿ ಬಂಡಾಯ

ದಾವಣಗೆರೆ: ಮಾಯಕೊಂಡ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ವಂಚಿತರಾಗಿರುವ ಸವಿತಾಬಾಯಿ ಮಲ್ಲೇಶ್ ನಾಯ್ಕ್ ಸ್ವತಂತ್ರವಾಗಿ ಸ್ಪರ್ಧಿಸಲು ನಿರ್ಧರಿಸಿದ್ದು, ವಿಧಾನಸಭೆ ಚುನಾವಣೆಯಲ್ಲಿ ಎಸ್.ಸಿ ಮೀಸಲು ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಮೊದಲ ಬಂಡಾಯ ಎದುರಾದಂತಾಗಿದೆ.

ಕಣ್ಣೀರಿಟ್ಟ ಸವಿತಾಬಾಯಿ

‘ಮಹಿಳೆಗೆ ಆತ್ಮಗೌರವವೇ ಮುಖ್ಯ. ಟಿಕೆಟ್‌ಗಾಗಿ ನನ್ನ ತೇಜೋವಧೆ ಮಾಡಲಾಗಿದೆ. ಇಂಥದ್ದಕ್ಕೆ ಎದೆಗುಂದದೆ ನನ್ನ ಹೋರಾಟ ಮುಂದುವರಿಯಲಿದೆ’ ಎಂದು ಸವಿತಾಬಾಯಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಕಣ್ಣೀರಿಟ್ಟರು.

‘ಕಾಂಗ್ರೆಸ್ ಅಭ್ಯರ್ಥಿ ಕೆ.ಎಸ್. ಬಸವಂತಪ್ಪ ಅವರ ವಾಟ್ಸ್‌ಆ್ಯಪ್ ಗ್ರೂಪ್ ಮೂಲಕ ನನ್ನ ಚಾರಿತ್ರ್ಯವಧೆ ಮಾಡಲಾಗಿದೆ. ಈ ಬಗ್ಗೆ ದೂರು ನೀಡಿದರೂ ಪೊಲೀಸರು ಕ್ರಮ ಕೈಗೊಂಡಿಲ್ಲ. ಇದರಿಂದ ನನ್ನ ಮನೆಯ ಶಾಂತಿ ಕದಡಿದೆ. ಪತಿಯು ವಾರ ಮನೆ ಬಿಟ್ಟು ಹೋಗಿದ್ದರು. ತಾಯಿ ಎರಡು ಬಾರಿ ಆತ್ಮಹತ್ಯೆಗೆ ಯತ್ನಿಸಿದ್ದರು’ ಎಂದರು.

‘ಕಾಂಗ್ರೆಸ್ ಟಿಕೆಟ್ ತಪ್ಪಿದ ನಂತರ ದೂರು ನೀಡಿದ್ದೇಕೆ? ಎಂಬ ಪ್ರಶ್ನೆಗೆ ಅವರು, ‘ಕರೆದು ಮಾತನಾಡುವುದಾಗಿ ವರಿಷ್ಠರು ಭರವಸೆ ನೀಡಿದ್ದರು. ಅಂಥ ಪ್ರಯತ್ನಗಳು ನಡೆಯಲಿಲ್ಲ. ಅದಕ್ಕಾಗಿ ಈಗ ದೂರು ನೀಡಿದ್ದೇನೆ. ಕಾಂಗ್ರೆಸ್‌ನ ಕೆಲ ನಾಯಕರು ಬೆಂಬಲಿಸಿದ್ದಾರೆ. ಬೇರೆ ಪಕ್ಷಗಳು ಸಂಪರ್ಕಿಸಿವೆ. ಚುನಾವಣೆಗೆ ಸ್ಪರ್ಧಿಸುವುದು ಖಚಿತ’ ಎಂದರು.

57 ಕ್ಷೇತ್ರಗಳ ‘ಕೈ’ ಪಟ್ಟಿ ಅಂತಿಮ

ಒಂದನೇ ಪುಟದಿಂದ...

ಕೆಲವು ಕ್ಷೇತ್ರಗಳಿಗೆ ತಲಾ ಇಬ್ಬರು ಆಕಾಂಕ್ಷಿಗಳ ಹೆಸರನ್ನು ಶಿಫಾರಸು ಮಾಡಿತು. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಚುನಾವಣಾ ಸಮಿತಿಯು ಬುಧವಾರ ಸಂಜೆ ಸಭೆ ಸೇರಿ 57 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮಗೊಳಿಸಿತು. ತುರ್ತು ಕೆಲಸದ ನಿಮಿತ್ತ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸಭೆಯಿಂದ ಬೇಗನೆ ನಿರ್ಗಮಿಸಿದರು. ಹೀಗಾಗಿ, ಉಳಿದ ಕ್ಷೇತ್ರಗಳ ಕುರಿತು ಚರ್ಚೆ ನಡೆಯಲಿಲ್ಲ. ಗುರುವಾರ ಮಧ್ಯಾಹ್ನ 2.30ಕ್ಕೆ ಕೇಂದ್ರ ಚುನಾವಣಾ ಸಮಿತಿ ಮತ್ತೆ ಸಭೆ ಸೇರಿ ಉಳಿದ ಕ್ಷೇತ್ರಗಳ ಪ್ರಕ್ರಿಯೆ ಪೂರ್ಣಗೊಳಿಸಲಿದೆ.ಗುರುವಾರವೇ 42–43 ಕ್ಷೇತ್ರಗಳ ಪಟ್ಟಿಯನ್ನು ಬಿಡುಗಡೆ ಮಾಡಲು ಪಕ್ಷ ಸಿದ್ಧತೆ ಮಾಡಿಕೊಂಡಿದೆ. ರಾಹುಲ್ ಗಾಂಧಿ ಅವರ ಕೋಲಾರ ಭೇಟಿಯ ಬಳಿಕ ಮೂರನೇ ಪಟ್ಟಿ ಬಿಡುಗಡೆಯಾಗಲಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ವರುಣ ಕ್ಷೇತ್ರದಿಂದ ಸ್ಪರ್ಧಿಸಲು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಪಕ್ಷದ ಹೈಕಮಾಂಡ್ ಒಪ್ಪಿಗೆ ನೀಡಿದೆ. ಪಕ್ಷದ ಹೈಕಮಾಂಡ್ ಒಪ್ಪಿದರೆ ಕೋಲಾರ ಕ್ಷೇತ್ರದಿಂದಲೂ ಸ್ಪರ್ಧಿಸಲು ಸಿದ್ಧ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಕೋಲಾರ ಕ್ಷೇತ್ರಕ್ಕೆ ಸಿದ್ದರಾಮಯ್ಯ ಹೆಸರನ್ನು ಪಕ್ಷದ ಸ್ಕ್ರೀನಿಂಗ್ ಸಮಿತಿ ಶಿಫಾರಸು ಮಾಡಿದೆ. ಆದರೆ, ಕೇಂದ್ರ ಚುನಾವಣಾ ಸಮಿತಿಯ ಸಭೆಯಲ್ಲಿ ಈವರೆಗೆ ಕೋಲಾರ ಕ್ಷೇತ್ರದ ಕುರಿತು ಚರ್ಚೆ ಆಗಿಲ್ಲ. ವರುಣ ಕ್ಷೇತ್ರದಿಂದ ಸ್ಪರ್ಧಿಸುವಂತೆ ಸಿದ್ದರಾಮಯ್ಯ ಅವರಿಗೆ ಸೂಚನೆ ನೀಡಿದವರು ರಾಹುಲ್ ಗಾಂಧಿ. ಕೋಲಾರ ಕ್ಷೇತ್ರದ ಸ್ಪರ್ಧೆ ಕುರಿತು ಅವರೇ ತೀರ್ಮಾನ ತೆಗೆದುಕೊಳ್ಳಲಿದ್ದಾರೆ ಎಂದು ಪಕ್ಷದ ಹಿರಿಯ ನಾಯಕರೊಬ್ಬರು ತಿಳಿಸಿದರು.

> ಪಕ್ಷದ ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಗುರುವಾರ ಬೆಳಿಗ್ಗೆ 11 ಗಂಟೆಗೆ ಬಿಡುಗಡೆ ಮಾಡುತ್ತೇವೆ.
> **ರಣದೀಪ್ ಸಿಂಗ್ ಸುರ್ಜೇವಾಲಾ**
> ಪಕ್ಷದ ರಾಜ್ಯ ಉಸ್ತುವಾರಿ

ಮೊದಲ ಪಟ್ಟಿಯಲ್ಲಿ ಆರು ಶಾಸಕರ ಹೆಸರು ಇರಲಿಲ್ಲ. ಈ ಸಲದ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಶಿಡ್ಲಘಟ್ಟದ ಶಾಸಕ ವಿ.ಮುನಿಯಪ್ಪ ಈಗಾಗಲೇ ಹೇಳಿದ್ದಾರೆ. ಈ ಕ್ಷೇತ್ರಕ್ಕೆ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಬ್ಯಾಲಹಳ್ಳಿ ಗೋವಿಂದಗೌಡ ಹೆಸರನ್ನು ರಾಜ್ಯ ನಾಯಕರು ಶಿಫಾರಸು ಮಾಡಿದ್ದಾರೆ. ಸಿದ್ದರಾಮಯ್ಯ ಸ್ಪರ್ಧಿಸದಿದ್ದರೆ ಕೋಲಾರದಲ್ಲಿ ಸ್ಪರ್ಧಿಸಲು ಸಿದ್ಧರಾಗಿರುವಂತೆ ಗೋವಿಂದಗೌಡ ಅವರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೂಚಿಸಿದ್ದಾರೆ. ಕೋಲಾರ ಕ್ಷೇತ್ರದ ಗೊಂದಲ ಇತ್ಯರ್ಥವಾದ ಬಳಿಕ ಶಿಡ್ಲಘಟ್ಟ ಕ್ಷೇತ್ರದ ಅಭ್ಯರ್ಥಿಯ ಹೆಸರನ್ನು ಅಂತಿಮಗೊಳಿಸಲು ಪಕ್ಷ ತೀರ್ಮಾನಿಸಿದೆ ಎಂದರು.

ಹರಿಹರದಲ್ಲಿ ಶಾಸಕ ರಾಮಪ್ಪ ಹಾಗೂ ಕುಂದಗೋಳದಲ್ಲಿ ಕುಸುಮಾವತಿ ಶಿವಳ್ಳಿ ಅವರನ್ನು ಕಣಕ್ಕೆ ಇಳಿಸಲು ನಿರ್ಧರಿಸಲಾಗಿದೆ. ಪುಲಕೇಶಿನಗರದಲ್ಲಿ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಅವರಿಗೆ ಟಿಕೆಟ್ ನೀಡುವುದಕ್ಕೆ ಪಕ್ಷದೊಳಗೆ ವಿರೋಧ ಇದೆ. ಹೀಗಾಗಿ, ಈ ಕ್ಷೇತ್ರದ ಕುರಿತು ಗುರುವಾರ ಮತ್ತೊಮ್ಮೆ ಚರ್ಚೆ ನಡೆಸಿ ತೀರ್ಮಾನಕ್ಕೆ ಬರಲು ನಿರ್ಧರಿಸಲಾಯಿತು. ಲಿಂಗಸುಗೂರು ಕ್ಷೇತ್ರದ ಶಾಸಕ ಡಿ.ಎಸ್.ಹೂಲಗೇರಿ ಅವರನ್ನು ಕಣಕ್ಕೆ ಇಳಿಸುವ ಬಗ್ಗೆ ಪಕ್ಷ ಇನ್ನೂ ತೀರ್ಮಾನಕ್ಕೆ ಬಂದಿಲ್ಲ. ಅಫಜಲಪುರ ಕ್ಷೇತ್ರದಲ್ಲಿ ಪುತ್ರನಿಗೆ ಟಿಕೆಟ್ ನೀಡುವಂತೆ ಶಾಸಕ ಎಂ.ವೈ.ಪಾಟೀಲ ಮನವಿ ಮಾಡಿದ್ದಾರೆ. ಮಗನ ಹೆಸರನ್ನು ಸ್ಕ್ರೀನಿಂಗ್ ಸಮಿತಿ ಶಿಫಾರಸು ಮಾಡಿದೆ ಎಂದು ಮೂಲಗಳು ಹೇಳಿವೆ.

ಸುಮಾರು 25 ಕ್ಷೇತ್ರಗಳಿಗೆ ಇಬ್ಬರು ಸಂಭಾವ್ಯರ ಹೆಸರನ್ನು ಸ್ಕ್ರೀನಿಂಗ್ ಸಮಿತಿ ಶಿಫಾರಸು ಮಾಡಿದೆ. ಕೆಲವು ಕ್ಷೇತ್ರಗಳಿಗೆ ಪ್ರಬಲ ಅಭ್ಯರ್ಥಿಗಳಿಲ್ಲ. ಬಿಜೆಪಿಯ ಕೆಲವು ಶಾಸಕರು ಬರಬಹುದು ಎಂಬ ನಿರೀಕ್ಷೆಯಲ್ಲಿ ಕಾಂಗ್ರೆಸ್‌ನ ರಾಜ್ಯ ನಾಯಕರು ಇದ್ದಾರೆ.

ಕೇಂದ್ರ ಚುನಾವಣಾ ಸಮಿತಿಯ ಸಭೆ ಮುಗಿದ ಬಳಿಕ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರು ಪಕ್ಷದ ಕೇಂದ್ರ ಕಚೇರಿಯಲ್ಲಿ ಸಭೆ ನಡೆಸಿ ಸಮಾಲೋಚನೆ ನಡೆಸಿದರು.

ಪ್ರಜಾ ಪತ್ರ

ನೋಟಿಗಾಗಿ ನಮ್ಮ ಮತದಾನದ ಹಕ್ಕನ್ನು ಮಾರಿಕೊಳ್ಳಬಾರದು

ಸಣ್ಣ– ಪುಟ್ಟ ಆಯ್ಕೆಗಳನ್ನು ಮಾಡುವ ವಿಚಾರದಲ್ಲಿ ಹಲವಾರು ಬಾರಿ ಯೋಚಿಸುವ ನಾವು, ನಮ್ಮನ್ನಾಳುವ ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವ ವಿಚಾರದಲ್ಲಿ ಎಡವುತ್ತಿರುವುದು ವಿಪರ್ಯಾಸ. ನೋಟಿಗಾಗಿ ನಮ್ಮ ಹಕ್ಕನ್ನು ಮಾರಿಕೊಳ್ಳಬಾರದು. ಗ್ರಾಮೀಣ ಪ್ರದೇಶದ ಅಭಿವೃದ್ಧಿ ಸೇರಿ ಉದ್ಯೋಗ ಸೃಷ್ಟಿ, ಜನಸಾಮಾನ್ಯ-ರಿಗೆ ಲಭ್ಯವಾಗುವ, ಅಭಿವೃದ್ಧಿಗೆ ಆದ್ಯತೆ ನೀಡುವ ನಾಯಕರನ್ನು ಆಯ್ಕೆ ಮಾಡಬೇಕು. ಯಾವುದೇ ಆಮಿಷಗಳಿಗೆ ಬಲಿಯಾಗದೆ ಪ್ರಾಮಾಣಿಕವಾಗಿ ಮತ ಚಲಾಯಿಸುವ ಮೂಲಕ ನಾಯಕರನ್ನು ಗೆಲ್ಲಿಸಬೇಕು.

ಸುಶ್ಮಿತಾ ಜವಳಗಿ, ಬಾಗಲಕೋಟೆ

ಪೊಳ್ಳು ಭರವಸೆಗಳಿಗೆ ಮಾರು ಹೋಗದಿರಿ

ಚುನಾವಣೆ ಸಮೀಪಿಸುತ್ತಿದ್ದಂತೆ ರಾಜಕಾರಣಿಗಳು ಪೊಳ್ಳು ಭರವಸೆಗಳನ್ನು ನೀಡಲು ಪ್ರಾರಂಭಿಸುತ್ತಾರೆ. ಅದರಲ್ಲಿ ಬೆರಳೆಣಿಕೆಯ ರಾಜಕಾರಣಿಗಳು ಮಾತ್ರ ಭರವಸೆಗಳನ್ನು ಈಡೇರಿಸಿರುತ್ತಾರೆ. ಆದ್ದರಿಂದ, ಯೋಚಿಸಿ ಮತದಾನ ಮಾಡಬೇಕು. ಹಣ, ಹೆಂಡದ ಆಮಿಷಕ್ಕೆ ಬಲಿಯಾಗಬೇಡಿ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ದೇವರು. ನಮ್ಮ ಅಮೂಲ್ಯವಾದ ಮತಗಳಿಂದ ಅವರು ಶಾಸಕರಾಗಿ ಆಯ್ಕೆಯಾಗುವುದು. ಜನರ ಕಷ್ಟಕ್ಕೆ ಸ್ಪಂದಿಸುವ, ಜನರ ನೋವು ನಲಿವುಗಳಲ್ಲಿ ಪಾಲ್ಗೊಳ್ಳುವ, ಸಾಮಾನ್ಯ ನಾಗರಿಕರ ಕೈಗೆ ಸಿಗುವ ಅಭ್ಯರ್ಥಿಗೆ ಮತದಾನ ಮಾಡಿ. ನಾವು ಮತದಾನ ಮಾಡುವಲ್ಲಿ ಸ್ವಲ್ಪ ಎಡವಿದರೂ ಐದು ವರ್ಷ ಕಷ್ಟ ಪಡಬೇಕಾಗುತ್ತದೆ ಎಚ್ಚರವಿರಲಿ.

ಸಂತೋಷ್. ಪಿ. ಶೆಟ್ಟಿ, ಬೆಂಗಳೂರು

ರಾಜಕೀಯ ಪಕ್ಷಗಳ ಧೋರಣೆ, ಬದ್ಧತೆ, ಪ್ರಣಾಳಿಕೆ, ಪ್ರಚಾರದ ಕಾರ್ಯವೈಖರಿ ಹೇಗಿರಬೇಕು? ಚುನಾವಣೆಗೆ ಸಂಬಂಧಿಸಿದ ಇಂತಹ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು 100 ಶಬ್ದಗಳ ಮಿತಿ ಒಳಗೆ ಕಳುಹಿಸಿ. ವಿಳಾಸದ ಜತೆ ಭಾವಚಿತ್ರ ಇರಲಿ.

9606038256

ಮೀಸಲಾತಿ; ‘ಮತ’ ಸೆಳೆಯುವ ನೀತಿ

• ಎಸ್. ರವಿಪ್ರಕಾಶ್

ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಹಣಿಯಲು ವಿರೋಧ ಪಕ್ಷ ಕಾಂಗ್ರೆಸ್, ಶೇ 40 ಲಂಚ ಮತ್ತು ಭ್ರಷ್ಟಾಚಾರದ ‘ಬ್ರಹ್ಮಾಸ್ತ್ರ’ವನ್ನು ಅಣಿಗೊಳಿಸಿತ್ತು. ಇದಕ್ಕೆ ಪ್ರತಿತಂತ್ರ ಹೆಣೆದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪರಿಶಿಷ್ಟಜಾತಿ ಮತ್ತು ಪಂಗಡಗಳ ಮೀಸಲಾತಿ ಪ್ರಮಾಣದ ಹೆಚ್ಚಳ ಹಾಗೂ ಒಳಮೀಸಲಾತಿ, ಒಕ್ಕಲಿಗ ಮತ್ತು ಲಿಂಗಾಯತರ ಮೀಸಲಾತಿ ಪ್ರಮಾಣವನ್ನು ಹೆಚ್ಚಳ ಮಾಡುವ ಮೂಲಕ ಚುನಾವಣಾ ಜೂಜಿನಲ್ಲಿ ಮಹತ್ವದ ‘ದಾಳ’ ಉರುಳಿಸಿದ್ದಾರೆ. ಈ ‘ಆಟ’ ಬಿಜೆಪಿಯನ್ನು ತೇಲಿಸುತ್ತದೆಯೋ ಮುಳುಗಿಸುತ್ತದೆಯೋ ಎಂಬುದಕ್ಕೆ ಚುನಾವಣೆ ಬಳಿಕವಷ್ಟೇ ಉತ್ತರ ಸಿಗಲಿದೆ.

ಮೀಸಲಾತಿಯ ಪ್ರವರ್ಗ ಬದಲು, ಪ್ರಮಾಣದ ಹೆಚ್ಚಳ, ಒಳ ಮೀಸಲಾತಿಯ ಬೇಡಿಕೆ ಇಂದು ನಿನ್ನೆಯದಲ್ಲ. ಒಳ ಮೀಸಲಾತಿ ಬೇಡಿಕೆಗೆ ಎರಡು ದಶಕಗಳ ಹೋರಾಟದ ಚರಿತ್ರೆ ಇದೆ. ಅದಕ್ಕಾಗಿಯೇ ಧರ್ಮಸಿಂಗ್ ನೇತೃತ್ವದ ಸರ್ಕಾರದ ಅವಧಿಯಲ್ಲಿ ನ್ಯಾಯಮೂರ್ತಿ ಎ.ಜೆ. ಸದಾಶಿವ ನೇತೃತ್ವದ ಆಯೋಗವನ್ನು ರಚಿಸಲಾಗಿತ್ತು. ಅದರ ವರದಿಯೂ 2008–2013ರ ಅವಧಿಯಲ್ಲಿದ್ದ ಬಿಜೆಪಿ ಸರ್ಕಾರದ ಕೈಸೇರಿತ್ತು. ನಂತರ ಬಂದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಮುಂದೆ ಈ ವರದಿಯ ಹಣೆಬರೆಹ ಬರೆಯುವ ಸವಾಲಿತ್ತು. ಸಿದ್ದರಾಮಯ್ಯನವರಿಗೆ ವೈಯಕ್ತಿಕವಾಗಿ ಮನಸ್ಸಿದ್ದರೂ ಸಚಿವ ಸಂಪುಟ ಹಾಗೂ ಪಕ್ಷದ ಶಾಸಕರ ವಿರೋಧದಿಂದಾಗಿ ಅದನ್ನು ಅನುಷ್ಠಾನ ಮಾಡಲು ಸಾಧ್ಯವಾಗಲೇ ಇಲ್ಲ. 2018ರ ಚುನಾವಣೆಯಲ್ಲಿ ಬಿಜೆಪಿಗೆ ಒಳಮೀಸಲಾತಿ ಪ್ರಬಲ ಅಸ್ತ್ರವಾಗಿತ್ತು. ಎಡಗೈ ಸಮುದಾಯ ಬಿಜೆಪಿ ಪರ ನಿಂತಿದ್ದರಿಂದಾಗಿ, ಕಾಂಗ್ರೆಸ್‌ಗೆ ಬಹುದೊಡ್ಡ ನಷ್ಟ ಸಂಭವಿಸಿತ್ತು.

2019ರಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಈ ಬೇಡಿಕೆಯನ್ನು ಈಡೇರಿಸುವ ಯತ್ನ ಮಾಡಲಿಲ್ಲ. ಚುನಾವಣೆ ಹತ್ತಿರವಾಗುತ್ತಿದ್ದಂತೆ, ಒಳಮೀಸಲಾತಿ ಬೇಡಿಕೆ ಪ್ರಬಲಗೊಳ್ಳುತ್ತಿದ್ದಂತೆ ಇಂತಹದೊಂದು ತೀರ್ಮಾನವನ್ನು ಕೈಗೊಳ್ಳಲು ಸರ್ಕಾರ ಮುಂದಾಯಿತು. ನ್ಯಾ. ಸದಾಶಿವ ಆಯೋಗದ ವರದಿ ಬದಿಗಿಟ್ಟು, ಸಚಿವ ಸಂಪುಟದ ಉಪಸಮಿತಿ ನೀಡಿದ ವರದಿ ಆಧರಿಸಿ ಒಳಮೀಸಲಾತಿ ಜಾರಿ ಮಾಡುವ ನಿರ್ಣಯವನ್ನು ಸರ್ಕಾರ ಕೈಗೊಂಡಿತು. ಇದು ಲಾಭ ತರುತ್ತದೆ ಎಂದು ಬೊಮ್ಮಾಯಿ ಹಾಗೂ ಬಿಜೆಪಿ ನಾಯಕರು ಎಣಿಸಿದ್ದರು.

ಒಕ್ಕಲಿಗರು ಮತ್ತು ಒಳಪಂಗಡಗಳು	ಮೊದಲು		ಹೊಸ ಮೀಸಲಾತಿ	
	4%	3ಎ	6%	2ಸಿ

ವೀರಶೈವ, ಲಿಂಗಾಯತರು ಮತ್ತು ಒಳಪಂಗಡ	ಮೊದಲು		ಹೊಸ ಮೀಸಲಾತಿ	
	5%	3ಬಿ	7%	2ಡಿ

ಒಳ ಮೀಸಲಾತಿ (ಶೇಕಡಾವಾರು)	
ಎಸ್‌ಸಿ(ಎಡಗೈ)	6.0
ಎಸ್‌ಸಿ(ಬಲಗೈ)	5.5
ಲಂಬಾಣಿ, ಭೋವಿ, ಕೊರಮ,ಕೊರಚ	4.5
ಈ ಮೇಲಿನ ಗುಂಪಿಗೆ ಸೇರದ ಜಾತಿ	1.0
ಒಟ್ಟು	17
ಪರಿಶಿಷ್ಟ ಪಂಗಡ	7



ಬಸವರಾಜ ಬೊಮ್ಮಾಯಿ

ಆದರೆ, ಒಳಮೀಸಲಾತಿಗೆ ವಿರುದ್ಧವಾಗಿರುವ ಲಂಬಾಣಿ/ ಬಂಜಾರ ಸಮುದಾಯದವರು ಈಗ ಬೀದಿಗೆ ಇಳಿದಿದ್ದಾರೆ. ಜತೆಗೆ, ನಿರೀಕ್ಷೆಯಷ್ಟು ಮೀಸಲಾತಿ ಸಿಕ್ಕಿಲ್ಲ; ಜತೆಗೆ ಅದು ಕಾರ್ಯರೂಪಕ್ಕೆ ಬರುವ ಸಾಧ್ಯತೆ ಕ್ಷೀಣ ಎಂದು ಒಳಮೀಸಲಾತಿಗಾಗಿ ಹೋರಾಟ ನಡೆಸುತ್ತಿದ್ದವರು ಆಕ್ಷೇಪ ಎತ್ತಿದ್ದಾರೆ. ಚುನಾವಣೆಯನ್ನು ಗುರಿಯಾಗಿಸಿಕೊಂಡ ಈ ತರಾತುರಿ ನಿರ್ಣಯ ಎಷ್ಟರ ಮಟ್ಟಿಗೆ ಬಿಜೆಪಿ ಲಾಭ ಮಾಡಿಕೊಡಲಿದೆ ಎಂಬುದು ಫಲಿತಾಂಶದ ಬಳಿಕವಷ್ಟೇ ಗೊತ್ತಾಗಲಿದೆ.

ಇದಕ್ಕೆ ಮಾತ್ರ ಸೀಮಿತರಾಗದ ಬೊಮ್ಮಾಯಿ, ಬಿ.ಎಸ್. ಯಡಿಯೂರಪ್ಪನವರ ಕಾರಣಕ್ಕೆ ಬಿಜೆಪಿ ಬೆಂಬಲಕ್ಕೆ ನಿಂತಿದ್ದ ಲಿಂಗಾಯತರನ್ನು ತಮ್ಮ ತೆಕ್ಕೆಯಲ್ಲಿಯೇ ಹಿಡಿದಿಟ್ಟುಕೊಳ್ಳುವ ಉದ್ದೇಶದಿಂದ ಈ ಸಮುದಾಯದ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಿದರು. ಆದರೆ, ಪಂಚಮಸಾಲಿ ಲಿಂಗಾಯತರ ಬಹುಮುಖ್ಯ ಬೇಡಿಕೆ ಹಿಂದುಳಿದ ವರ್ಗಗಳ ಪ್ರವರ್ಗ ‘2ಎ’ ಪಟ್ಟಿಯಲ್ಲಿ ಮೀಸಲಾತಿ ಪಡೆಯುವುದೇ ಆಗಿತ್ತು. ಅದನ್ನು ಈಡೇರಿಸಲು ಬೊಮ್ಮಾಯಿ ಅವರಿಗೆ ಸಾಧ್ಯವಾಗಿಲ್ಲ.

ಒಕ್ಕಲಿಗರಿಗೆ ನೀಡಿರುವ ಮೀಸಲಾತಿಯ ಪ್ರಮಾಣವನ್ನು ಹೆಚ್ಚಿಸುವುದರ ಜತೆ ನಗರ ಪ್ರದೇಶದ ಒಕ್ಕಲಿಗರಿಗೂ ಮೀಸಲಾತಿ ನೀಡಬೇಕು ಎಂಬುದು ಈ ಸಮುದಾಯದ ಬೇಡಿಕೆಯಾಗಿತ್ತು. ಲಿಂಗಾಯತರು ಮತ್ತು ಒಕ್ಕಲಿಗರ ಬೇಡಿಕೆ ಈಡೇರಿಸಲು ಹಿಂದುಳಿದ ವರ್ಗಗಳ ಪ್ರವರ್ಗ ‘2ಬಿ’ ಅಡಿಯಲ್ಲಿ ಮುಸ್ಲಿಮರಿಗೆ ನೀಡಿದ್ದ ಶೇ 4ರಷ್ಟು ಮೀಸಲಾತಿಯನ್ನು ರದ್ದುಪಡಿಸಲಾಗಿದೆ. ಅದನ್ನು ತಲಾ ಶೇ 2ರಂತೆ ವಿಂಗಡಿಸಿ ಹೊಸದಾಗಿ ಸೃಜಿಸಿರುವ ಪ್ರವರ್ಗ ‘2ಸಿ’ ಪಟ್ಟಿಯಲ್ಲಿರುವ ಒಕ್ಕಲಿಗ ಮತ್ತು ಇತರ ಸಮುದಾಯಗಳು ಹಾಗೂ ಪ್ರವರ್ಗ ‘2ಡಿ’ ಪಟ್ಟಿಯಲ್ಲಿರುವ ಲಿಂಗಾಯತ ಮತ್ತು ಇತರ ಸಮುದಾಯಗಳಿಗೆ ಹಂಚಿಕೆ ಮಾಡಲಾಗಿದೆ.

ಒಳ ಮೀಸಲಾತಿ ನಿರ್ಧಾರದ ವಿರುದ್ಧ ಲಂಬಾಣಿ/ ಬಂಜಾರ, ಭೋವಿ, ಕೊರಮ ಮತ್ತು ಕೊರಚ ಸಮುದಾಯಗಳು ಹೋರಾಟಕ್ಕೆ ಇಳಿದಿವೆ. ದೀರ್ಘ ಕಾಲದಿಂದ ಬಿಜೆಪಿ ಪರವಾಗಿ ನಿಂತಿದ್ದ ಲಂಬಾಣಿ/ಬಂಜಾರ ಮತ್ತು ಭೋವಿ ಸಮುದಾಯಗಳು ಈ ಬಾರಿ ‘ಕೈ’ ಹಿಡಿಯಬಹುದು ಎಂಬ ಲೆಕ್ಕಾಚಾರ ರಾಜಕೀಯ ವಲಯದಲ್ಲಿ ಜೋರಾಗಿ ಚರ್ಚೆಯಲ್ಲಿದೆ. ಎಡಗೈ ಸಮುದಾಯಗಳ ಮತಗಳನ್ನು ಉಳಿಸಿಕೊಳ್ಳುವಲ್ಲಿ ಬಿಜೆಪಿ ಯಶಸ್ವಿಯಾಗಬಹುದು ಎನ್ನುವ ಮಾತುಗಳೂ ಇವೆ.

ಮುಸ್ಲಿಮರನ್ನು ಹಿಂದುಳಿದ ವರ್ಗಗಳ ಪಟ್ಟಿಯಿಂದ ಕಿತ್ತು, ಆರ್ಥಿಕವಾಗಿ ದುರ್ಬಲ ವರ್ಗಗಳ (ಇಡಬ್ಲ್ಯುಎಸ್) ಪಟ್ಟಿಗೆ ಸೇರಿಸಲಾಗಿದೆ. ಈ ನಿರ್ಣಯದ ವಿರುದ್ಧ ಮುಸ್ಲಿಂ ಸಂಘಟನೆಗಳು ಹೋರಾಟ ಆರಂಭಿಸಿವೆ. ‘ಮುಸ್ಲಿಮರಿಗೆ ಅನ್ಯಾಯವಾಗಿಲ್ಲ’ ಎಂದು ಬಲವಾಗಿ ಸಮರ್ಥಿಸಿಕೊಳ್ಳಲು ಬಿಜೆಪಿ ಪ್ರಯತ್ನಿಸುತ್ತಿದೆ. ಪಂಚಮಸಾಲಿ ಮೀಸಲಾತಿ ಹೋರಾಟದ ನೇತೃತ್ವ ವಹಿಸಿದ್ದ ಕೂಡಲ ಸಂಗಮದ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಚಳವಳಿಯಿಂದ ಹಿಂದೆ ಸರಿದಿದ್ದಾರೆ. ಒಕ್ಕಲಿಗ ಸಮುದಾಯದ ಕಡೆಯಿಂದ ಇನ್ನೂ ಖಚಿತವಾದ ಪ್ರತಿಕ್ರಿಯೆ ಹೊರಬಿದ್ದಿಲ್ಲ. ಆದರೆ, ‘ನಮ್ಮ ಬೇಡಿಕೆಯಷ್ಟು ಮೀಸಲಾತಿ ಪ್ರಮಾಣ ಹೆಚ್ಚಿಸಿಲ್ಲ. ಬೇರೆಯವರ ಮೀಸಲಾತಿ ಕಿತ್ತು ನಮಗೆ ಕೊಟ್ಟ ಸರ್ಕಾರದ ಕ್ರಮ ಸರಿಯಲ್ಲ’ ಎಂದು ಪಟ್ಟನಾಯಕನಹಳ್ಳಿ ಸ್ಫಟಿಕಪುರಿ ಮಠದ ನಂಜಾವಧೂತ ಸ್ವಾಮೀಜಿ ಅಸಮಾಧಾನ ಹೊರಹಾಕಿದ್ದಾರೆ.

ಮೀಸಲಾತಿಯ ಮರುಹಂಚಿಕೆ ವಿಚಾರದಲ್ಲಿ ರಾಜ್ಯ ಸರ್ಕಾರ ಕೈಗೊಂಡಿರುವ ತೀರ್ಮಾನ ರಾಜಕೀಯ ಪಕ್ಷಗಳ ನಡುವೆ ಬಿರುಸಿನ ವಾಕ್ಸಮರಕ್ಕೂ ನಾಂದಿಹಾಡಿದೆ. ‘ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಈ ನಿರ್ಧಾರವನ್ನು ರದ್ದು ಮಾಡುತ್ತೇವೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಘೋಷಿಸಿದ್ದಾರೆ. ‘ಮುಸ್ಲಿಮರಿಗೆ ಮೀಸಲಾತಿ ಕೊಟ್ಟಿದ್ದು ಎಚ್.ಡಿ. ದೇವೇಗೌಡರ ಸರ್ಕಾರ’ ಎಂದು ನೆನಪಿಸುವ ಮೂಲಕ ಮುಸ್ಲಿಮರ ಮತಗಳನ್ನು ಸೆಳೆಯುವ ಪ್ರಯತ್ನವನ್ನು ಜೆಡಿಎಸ್ ಮಾಡುತ್ತಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಲಿಂಗಾಯತರು, ಒಕ್ಕಲಿಗರಿಗೆ ಮೀಸಲಾತಿ ಮರು ಹಂಚಿಕೆಯಲ್ಲಿ ಅನುಕೂಲವಾಗಿದೆ ಎಂಬುದನ್ನೇ ಬಿಂಬಿಸಿಕೊಂಡು ಮತ ಸೆಳೆಯಲು ಬಿಜೆಪಿ ಬೂತ್ ಮಟ್ಟದಲ್ಲಿ ಅಭಿಯಾನ ನಡೆಸುತ್ತಿದೆ.

ಮೂಗಿಗೆ ತುಪ್ಪ ಹಚ್ಚುವ ಕಸರತ್ತು

ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಮೀಸಲಾತಿ ಹೆಚ್ಚಳ ಮಾಡಿರುವ ಕ್ರಮಕ್ಕೆ ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ ಒಪ್ಪಿಗೆ ಪಡೆಯಬೇಕಿದ್ದು, ಸಂವಿಧಾನದ ಶೆಡ್ಯೂಲ್ 9ಕ್ಕೆ ಸೇರಿಸಬೇಕಾಗಿದೆ. ಇದನ್ನು ಮಾಡಿಯೇ ತೀರುತ್ತೇವೆ ಎಂದು ಬಿಜೆಪಿ ಭರವಸೆಯನ್ನೇನೋ ಕೊಟ್ಟಿದೆ. ಇದು ‘ಚುನಾವಣಾ ಗಿಮಿಕ್’ ಆಗಿದ್ದು, ಸಂಸತ್ತಿನಲ್ಲಿ ಒಪ್ಪಿಗೆ ಪಡೆಯದೇ ಜಾರಿ ಮಾಡಿರುವ ಈ ಕ್ರಮದಿಂದ ಈ ಸಮುದಾಯಗಳಿಗೆ ಯಾವುದೇ ಪ್ರಯೋಜನ ಆಗುವುದಿಲ್ಲ. ಕೇವಲ ಮೂಗಿಗೆ ತುಪ್ಪ ಹಚ್ಚುವ ಕೆಲಸ ಮಾಡಿದೆ ಎಂದು ಕಾಂಗ್ರೆಸ್ ಹರಿಹಾಯ್ದಿದೆ.

ಮೀಸಲಾತಿ ಪ್ರಮಾಣ ಶೇ 50 ಮೀರ ಬಾರದು ಎಂದು ಸುಪ್ರೀಂಕೋರ್ಟ್ ಹೇಳಿದೆ. ಆದರೆ, ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಗೆ ಶೇ 17, ಪರಿಶಿಷ್ಟ ವರ್ಗಕ್ಕೆ ಶೇ 7 ಮತ್ತು ಹಿಂದುಳಿದ ವರ್ಗಕ್ಕೆ ಶೇ 32 ಸೇರಿ ಒಟ್ಟು ಶೇ 56 ಆಗುತ್ತದೆ. ಇದು ಸುಪ್ರೀಂ ಕೋರ್ಟ್ ತೀರ್ಪಿನ ಆದೇಶದ ಉಲ್ಲಂಘನೆಯೂ ಆಗಿದೆ. ಇಡಬ್ಲ್ಯೂಎಸ್‌ಗೆ ಶೇ 10 ಕೂಡ ನೀಡಲಾಗಿದೆ. ಯಾರಾದರೂ ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಿದರೆ, ಸರ್ಕಾರದ ಕಸರತ್ತು ನಿರರ್ಥಕವಾಗುತ್ತದೆ. ಸಂವಿಧಾನ ಶೆಡ್ಯೂಲ್ 9 ಕ್ಕೆ ಸೇರಿಸದೇ ಇದ್ದರೆ, ಪ್ರಯೋಜನವಿಲ್ಲ ಎನ್ನುತ್ತಾರೆ ತಜ್ಞರು.

ಮೀಸಲು ಕೂಗು

ಪ್ರೀತಿಯಿಂದ ಅಲ್ಲ, ಚುನಾವಣೆಗಾಗಿ

ತಳಸಮುದಾಯದ ಮತಗಳ ದೃಷ್ಟಿಯಿಂದ ಒಳಮೀಸಲಾತಿ ಕಲ್ಪಿಸಲಾಗಿದೆ. ರಾಜ್ಯ ಸರ್ಕಾರ ಪ್ರೀತಿಯಿಂದ ಇದನ್ನು ಮಾಡಿಲ್ಲ. ಒಳಮೀಸಲಾತಿ ಕುರಿತ ಆದೇಶದಲ್ಲಿ ಸರಿಪಡಿಸಬೇಕಾದ ವಿಷಯಗಳಿವೆ. ಹಲವು ಗೊಂದಲಗಳಿದ್ದರೂ ಸಾಮಾಜಿಕ ನ್ಯಾಯ ನೀಡುವುದಕ್ಕೆ ಸರ್ಕಾರ ತಾತ್ವಿಕವಾಗಿ ಒಪ್ಪಿಕೊಂಡಿದೆ. ಈ ನ್ಯೂನತೆಗಳನ್ನು ಸರಿಪಡಿಸಬೇಕು.

ಇಂದಿರಾಗಾಂಧಿ ಕಾಲದಿಂದಲೂ ದೇಶದಲ್ಲಿ ಚುನಾವಣೆಗಳನ್ನು ದೃಷ್ಟಿ ಇರಿಸಿಕೊಂಡೇ ಸರ್ಕಾರಗಳು ಮಹತ್ವದ ನಿರ್ಣಯಗಳನ್ನು ಕೈಗೊಂಡಿವೆ. ಜನಸಾಮಾನ್ಯರ ಅಭಿಪ್ರಾಯಗಳಿಗೆ ಗಮನ ನೀಡಿಲ್ಲ. ಚುನಾವಣೆಯಲ್ಲಿ ಗೆಲ್ಲುವುದೇ ಇವರಿಗೆ ಮುಖ್ಯ. ಇದಕ್ಕೆ ಮೀಸಲಾತಿಯೂ ಸಾಕ್ಷಿ. ಉದ್ದೇಶಪೂರ್ವಕವಾಗಿಯೇ ಮುಸ್ಲಿಮರಿಗೆ ಮೀಸಲಾತಿಯನ್ನು ಒಂದೆಡೆ ತೆಗೆದು ಇನ್ನೊಂದೆಡೆ ನೀಡಲಾಗಿದೆ. ಲಂಬಾಣಿ ಸಮುದಾಯದವರು ಒಳಮೀಸಲಾತಿ ವಿರೋಧಿಸುವುದರಲ್ಲಿ ಅರ್ಥವಿಲ್ಲ. ಲಂಬಾಣಿ ಸಮುದಾಯ, ಜನಸಂಖ್ಯೆಗಿಂತ ಹೆಚ್ಚು ಪ್ರಯೋಜನ ಪಡೆದಿದೆ. ರಾಜಕೀಯವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಅಭಿವೃದ್ಧಿ ಸಾಧಿಸಿದೆ. ಕನಿಷ್ಠ 7–8 ಶಾಸಕರು ಆಯ್ಕೆಯಾಗುತ್ತಿದ್ದಾರೆ. ಹೀಗಾಗಿ, ಅವರಿಗೆ ರಾಜಕೀಯ ಪ್ರಾತಿನಿಧ್ಯ ಸಿಕ್ಕಿದೆ. ಶಿಕಾರಿಪುರ ಘಟನೆ ನೋಡಿದರೆ ರಾಜಕೀಯ ಪ್ರೇರಿತ ಅನಿಸುತ್ತದೆ.

ಎಸ್.ಮಾರೆಪ್ಪ
ಪ್ರಧಾನ ಸಂಚಾಲಕರು, ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಜಾರಿ ಹೋರಾಟ ಸಮಿತಿ

ಚುನಾವಣೆಗೂ ಮೀಸಲಾತಿಗೂ ಸಂಬಂಧ ಇಲ್ಲ



ಲಿಂಗಾಯತ ಪಂಚಮಸಾಲಿ ಸಮುದಾಯದ ಹೋರಾಟಕ್ಕೆ ಮೊದಲ ಹಂತದ ಜಯ ಸಿಕ್ಕಿದೆ. ಪೂರ್ಣ ಪ್ರಮಾಣದ ಮೀಸಲಾತಿಗಾಗಿ ವಿಧಾನಸಭೆ ಚುನಾವಣೆ ನಂತರ ಹೋರಾಟ ಕೈಗೊಳ್ಳಲಾಗುವುದು. ಸದ್ಯ ಸರ್ಕಾರ ಕೈಗೊಂಡಿರುವ ನಿರ್ಧಾರ ಸಮಾಧಾನ ತಂದಿದೆ. ಆದರೆ, ಸಂಪೂರ್ಣ ತೃಪ್ತಿ ದೊರೆತಿಲ್ಲ. ನಾವು ಹೊಟ್ಟೆ ತುಂಬ ಊಟ ಕೇಳಿದ್ದೇವು. ಆದರೆ, ಸರ್ಕಾರ ಹಸಿವು ನೀಗಿಸುವ ಪ್ರಯತ್ನ ಮಾಡಿದೆ. ಸಮಾಜ ಬಾಂಧವರು ಎಲ್ಲ ಪಕ್ಷಗಳಲ್ಲಿಯೂ ಇದ್ದಾರೆ. ಹೀಗಾಗಿ, ಚುನಾವಣಾ ರಾಜಕಾರಣಕ್ಕೂ ಮೀಸಲಾತಿಗೂ ಸಂಬಂಧ ಇಲ್ಲ.

ಬಸವಜಯ ಮೃತ್ಯುಂಜಯ ಸ್ವಾಮೀಜಿ
ಕೂಡಲಸಂಗಮ ಪಂಚಮಸಾಲಿ ಪೀಠ

ಸುಪ್ರೀಂ ಕೋರ್ಟ್ ತೀರ್ಪಿಗೆ ಒಳಪಟ್ಟಿದೆ



ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದ ಸಮುದಾಯಗಳಿಗೆ ಸಂವಿಧಾನದಡಿ ಸಮಾನ ಅವಕಾಶಗಳಿಂದ ಪ್ರಜೆಗಳು ವಂಚಿತರಾಗಬಾರದು. ಜಾತಿರಹಿತ ಮತ್ತು ವರ್ಗರಹಿತ ಸಮಾಜ ನಿರ್ಮಾಣ ಅಂಬೇಡ್ಕರ್ ಅವರ ಕನಸು. ಶಾಹು ಮಹಾರಾಜ್ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರದ್ದು ಇದೇ ಧ್ಯೇಯ. ಅಂಬೇಡ್ಕರ ಅವರ ಭಾಷಣವನ್ನು ಪ್ರಸ್ತಾಪಿಸಿದ ನ್ಯಾಯಾಲಯ, ಮೀಸಲಾತಿಯು ಒಂದು ಅಪವಾದವಲ್ಲ. ಆದರೆ, ಅವಕಾಶದ ಸಮಾನತೆಯ ಅವಿಭಾಜ್ಯ ಅಂಶವಾಗಿದೆ ಎಂದು ಅಭಿಪ್ರಾಯಪಟ್ಟಿದೆ. ಈ ಹಿನ್ನೆಲೆಯಲ್ಲಿ ಪರಿಶಿಷ್ಟರ ಅಭಿವೃದ್ಧಿಗೆ ಕಾಲಕಾಲಕ್ಕೆ ಸುದೀರ್ಘ ಅಧ್ಯಯನ ನಡೆಸಿ, ಸಮಾನ ಅವಕಾಶಗಳನ್ನು ಸರ್ಕಾರಗಳು ಒದಗಿಸಬೇಕು.

ಮೀಸಲಾತಿ ಮತ್ತು ಒಳ ಮೀಸಲಾತಿ ಕುರಿತು ಭಾರತದ ಸಂವಿಧಾನದಲ್ಲಿ ಇರುವ ಅವಕಾಶ ಹಾಗೂ ಒಳ ಮೀಸಲಾತಿ ಜಾರಿಗೊಳಿಸಿರುವ ವಿವಿಧ ರಾಜ್ಯಗಳ ಆದೇಶಗಳ ತಾರ್ಕಿಕ ಚರ್ಚೆ, ಒಳ ಮೀಸಲಾತಿ ಸಂಬಂಧಿಸಿದಂತೆ ವಿವಿಧ ನ್ಯಾಯಾಲಯದ ಆದೇಶಗಳ ಸಿಂಹಾವಲೋಕನದ ಅವಶ್ಯಕತೆಯನ್ನು ಸುಪ್ರೀಂ ಕೋರ್ಟ್ ವ್ಯಕ್ತಪಡಿಸಿದೆ. ಪರಿಶಿಷ್ಟ ಜಾತಿಯ ಒಳ ಮೀಸಲಾತಿಯ ಪರ ವಿರೋಧ ಬಣಗಳು ಸುಪ್ರೀಂ ಕೋರ್ಟ್ ತೀರ್ಪಿಗೆ ತಲೆಬಾಗುತ್ತವೆ.

ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ,
ಭೋವಿ ಗುರುಪೀಠ

ಬಂಜಾರ, ಭೋವಿ, ಕೊರಚ ಕೊರಮರಿಗೆ ಅನ್ಯಾಯ

ಪರಿಶಿಷ್ಟ ಜಾತಿಗಳ ವರ್ಗೀಕರಣ (ಒಳ ಮೀಸಲಾತಿ) ಹಂಚಿಕೆ ನಿರ್ಣಯದಿಂದ ಭಾರತದ ಸಂವಿಧಾನ ಮತ್ತು ಕಾನೂನನ್ನು ಗಾಳಿಗೆ ತೂರಲಾಗಿದೆ. ಇದು ಅಸಾಂವಿಧಾನಿಕ ಮತ್ತು ಅವೈಜ್ಞಾನಿಕ ಪ್ರಕ್ರಿಯೆಯಾಗಿದೆ. ಒಂದು ಕಡೆ ನ್ಯಾ.ಸದಾಶಿವ ಆಯೋಗದ ವರದಿಯನ್ನು ಒಪ್ಪಿರುವುದಿಲ್ಲ. ಆದರೆ, ಸದರಿ ವರದಿಯನ್ನು ಆಧಾರಿಸಿ ಪರಿಶಿಷ್ಟ ಜಾತಿಗಳನ್ನು 4 ಗುಂಪುಗಳಾಗಿ ವಿಭಜಿಸಿ, ಒಳ ಮೀಸಲಾತಿ ಹಂಚಿಕೆ ಮಾಡಲಾಗಿದೆ ಎಂದು ಸರ್ಕಾರ ಹೇಳಿದೆ. ಬಂಜಾರ, ಭೋವಿ, ಕೊರಮ ಮತ್ತು ಕೊರಚ ಸಮುದಾಯಗಳಿಗೆ ಅನ್ಯಾಯ ಮಾಡಲಾಗಿದೆ. ನಮ್ಮ ಸಾಂವಿಧಾನಿಕ ಹಕ್ಕು ಮತ್ತು ಸ್ವಾಭಿಮಾನದ ಜೊತೆಗೆ ಚೆಲ್ಲಾಟ ಆಡುತ್ತಿದ್ದಾರೆ.

ಅನಂತನಾಯ್ಕ ಎನ್., ಪ್ರಧಾನ ಕಾರ್ಯದರ್ಶಿ,
ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ

ಸೆಲೆಬ್ರಿಟಿ ಮಾತು

ಯೋಗ್ಯ ಅಭ್ಯರ್ಥಿಗೆ ಮತ ನೀಡಿ

ದೇವದಾಸ್ ಕಾಪಿಕಾಡ್
ನಟ, ನಿರ್ದೇಶಕ

ಮತದಾನ ಪ್ರತಿಯೊಬ್ಬ ಭಾರತೀಯ ನಾಗರಿಕನ ಹಕ್ಕು. ನಮ್ಮನ್ನು ಆಳುವ ಸರ್ಕಾರವನ್ನು ನಾವೇ ನಿರ್ಧರಿಸುವ ಅಧಿಕಾರವೂ ಹೌದು. ಹೀಗಾಗಿ, ನಮ್ಮ ಹಕ್ಕನ್ನು ಸಂಭ್ರಮದಿಂದ ಚಲಾಯಿಸಬೇಕು. ಪಕ್ಷಗಳು ಯಾವುದೇ ಇರಲಿ, ಯೋಗ್ಯ ಅಭ್ಯರ್ಥಿಗೆ ಮತ ನೀಡಬೇಕು. ಯಾವುದೇ ಆಮಿಷಕ್ಕೆ ಬಲಿಯಾಗಬಾರದು. ಸಮಾಜದ ಕಷ್ಟ– ಸುಖಗಳಿಗೆ ಸ್ಪಂದಿಸುವ ಜನನಾಯಕನನ್ನು ಆರಿಸಬೇಕು. ಈ ತನಕ ನಡೆದ ಎಲ್ಲಾ ಚುನಾವಣೆಯಲ್ಲಿ ತಪ್ಪದೇ ಮತ ಚಲಾಯಿಸಿದ್ದೇನೆ. ಈ ಬಾರಿಯೂ ಮತದಾನದಲ್ಲಿ ಭಾಗವಹಿಸುತ್ತೇನೆ. ನೀವು ಕೂಡ ಮತದಾನ ಮಾಡಿ.

ಮಾತಿನೇಟು

ಬಳ್ಳಾರಿಯಲ್ಲಿ ಇದ್ದುಕೊಂಡು ಸರ್ಕಾರದ ಸಂಪತ್ತು ಲೂಟಿ ಮಾಡಿದ ಜನಾರ್ದನ ರೆಡ್ಡಿ ಈಗ ಗಂಗಾವತಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುವುದಾಗಿ ಹೇಳಿದ್ದಾರೆ. ಸರ್ಕಾರದ ಸಂಪತ್ತು ಎಂದರೆ ಸಾರ್ವಜನಿಕರ ಹಣ ಲೂಟಿ ಮಾಡಿದಂತೆ. ಚುನಾವಣೆ ಬಳಿಕ ರೆಡ್ಡಿ ಗಂಗಾವತಿಯಲ್ಲಿ ಇರುವುದಿಲ್ಲ. ಅವರಿಗೆ ಒಂದು ಮತವೂ ಹಾಕಬೇಡಿ. ಎಲ್ಲರೂ ಕಾಂಗ್ರೆಸ್ ಪಕ್ಷಕ್ಕೆ ಮತ ಹಾಕಿ ಗೆಲ್ಲಿಸಿದರೆ, ಸಿದ್ದರಾಮಯ್ಯ ಮುಖ್ಯಮಂತ್ರಿಯಾಗುವ ಸಾಧ್ಯತೆ ಇದೆ.

ಇಕ್ಬಾಲ್ ಅನ್ಸಾರಿ, ಕಾಂಗ್ರೆಸ್ ಮುಖಂಡ

ಹೂ ಮಳೆಯ ಸ್ವಾಗತ...

ರಾಜ್ಯ ವಿಧಾನಸಭೆ ಚುನಾವಣೆ ಪ್ರಯುಕ್ತ ಭದ್ರತೆಗೆ ನಿಯೋಜಿಸಲಾಗಿರುವ ಇಂಡೊ-ಟಿಬೆಟಿಯನ್ ಗಡಿ ಭದ್ರತಾ ಪಡೆಯ ಸೈನಿಕರು ಕೊಪ್ಪಳದಲ್ಲಿ ಬುಧವಾರ ಪಥಸಂಚಲನ ನಡೆಸಿದರು. ಈ ವೇಳೆ ನಗರದ ಜನರು ಹೂಮಳೆಗರೆಯುವ ಮೂಲಕ ಸ್ವಾಗತ ಕೋರಿದರು

ಪ್ರಜಾವಾಣಿ ಚಿತ್ರ: ಭರತ್ ಕಂದಕೂರ

ಗಾಳಿ ಮಾತು

ವಲಸಿಗರ ಕಣ್ಣು ಹಸ್ತದ ಮ್ಯಾಲೆ

ಜೆಡಿಎಸ್– ಕಾಂಗ್ರೆಸ್ ಮೈತ್ರಿ ಸರ್ಕಾರ ಉರುಳಿಸಿ, ಬಿಜೆಪಿ ಸರ್ಕಾರ ಬರಲು ಕಾರಣರಾದ ಶಾಸಕರ ಕಣ್ಣು ‘ಹಸ್ತ’ದ ಮ್ಯಾಲೆ ಬಿದ್ದಿದೆಯಂತೆ. ಚುನಾವಣೆಯಲ್ಲಿ ತಮ್ಮ ಪಾಲಿಗೆ ಹಸ್ತದ ‘ಅಭಯ’ ಸಿಗುವುದೋ ಎಂಬ ನಿರೀಕ್ಷೆಯಲ್ಲಿ ಅಂತರಂಗದಲ್ಲೇ ‘ಕೈ–ಕೈ ಜೈ–ಜೈ’ ಎನ್ನುತ್ತಿದ್ದಾರಂತೆ.

ಹೀಗೊಂದು ಸುದ್ದಿ ಕಾಂಗ್ರೆಸ್– ಬಿಜೆಪಿ ಕೇಂದ್ರ ಕಚೇರಿಯಲ್ಲಿ ಹರಿದಾಡುತ್ತಿದೆ. ‘ಪಕ್ಷಕ್ಕೆ ಕೈಕೊಟ್ಟು ವಲಸೆ ಹೋದವರನ್ನು ಸೇರಿಸಿಕೊಳ್ಳುವ ಪ್ರಶ್ನೆಯೇ ಇಲ್ಲ’ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಖುಲ್ಲಂಖುಲ್ಲಾ ಹೇಳಿರುವುದೇ ಅವರ ಒಂದು ಕಾಲದ ಆಪ್ತೇಷ್ಟರನ್ನು ಇಕ್ಕಟ್ಟಿಗೆ ಸಿಲುಕಿಸಿದೆಯಂತೆ. ಮರಳಿ ಯತ್ನವ ಮಾಡು ಎಂಬುದನ್ನು ಪಾಲಿಸುತ್ತಿರುವ ಕೆಲವರು, ತಮ್ಮ ಜಾತಿಗೆ ಸೇರಿದ, ನಾಯಕರ ಜತೆ ನಿಕಟ ಬಾಂಧವ್ಯ ಇರುವ ಶಾಸಕರನ್ನು ಸಂಪರ್ಕಿಸಿರುವ ಸಚಿವರೊಬ್ಬರು, ‘ಹೇಗಾದರೂ ಮಾಡಿ ಸಾಹೇಬರ ಭೇಟಿಗೆ ಅವಕಾಶ ಕೊಡಿಸಪ್ಪ’ ಎಂದು ದುಂಬಾಲು ಬಿದ್ದಿದ್ದಾರೆ. ಅದನ್ನು ನಾಯಕರ ಕಿವಿಗೆ ಹಾಕಿದಾಗ, ‘ಅಧಿಕಾರಕ್ಕಾಗಿ ಪಕ್ಷ ಬಿಟ್ಟು ಹೋಗುವಾಗ ಬುದ್ಧಿ ಎಲ್ಲೋಗಿತ್ತಂತೆ. ಈಗ ಅವರ ಪರ ವಕಾಲತ್ ವಹಿಸಿಕೊಂಡು ಬಂದಿದ್ಯಾ. ನಡೀ ನಡೀ’ ಎಂದು ಗದರಿದರಂತೆ ಸಿದ್ದರಾಮಯ್ಯ.

ಈ ಸರ್ಕಾರದಲ್ಲಿ ಸಚಿವರಾಗಿರುವ ಕೆಲವರು ಹೇಗಾದರೂ ಮಾಡಿ ಮತ್ತೆ ಕೈ ಹಿಡಿಯಲು ಅಣಿಯಾಗಿದ್ದಾರೆ. ಪಕ್ಷದ ಪ್ರಭಾವಿಗಳು ಸೈ ಎಂದಿದ್ದಾರೆ. ಆದರೆ, ಸಿದ್ದರಾಮಯ್ಯನವರೇ ಅಡ್ಡಗಾಲು ಹಾಕುತ್ತಿದ್ದಾರೆ ಎಂಬ ಗುಸುಗುಸು ಹಬ್ಬಿದೆ.

ಜಿಗಿ ನೆಗೆದಾಟ

ಎಲ್.ಆರ್. ಶಿವರಾಮೇಗೌಡ

ಪಕ್ಷೇತರ → ಕಾಂಗ್ರೆಸ್ → ಬಿಜೆಪಿ → ಜೆಡಿಎಸ್ → ಬಿಜೆಪಿ

ಮತ ಆಮಿಷ, ಸಿಕ್ಕಿದ್ದೇನು?

₹ 2 ಕೋಟಿ ನಗದು
ಬೆಳಗಾವಿ ಜಿಲ್ಲೆಯ ಹಿರೇಬಾಗೇವಾಡಿ ಚೆಕ್‌ಪೋಸ್ಟ್

₹11.49 ಲಕ್ಷ ನಗದು
ಬೆಳಗಾವಿಯ ಹುಕ್ಕೇರಿ ತಾಲ್ಲೂಕಿನ ಹಿಟ್ನಿ ಕ್ರಾಸ್ ಚೆಕ್‌ಪೋಸ್ಟ್

₹19.76 ಲಕ್ಷ ನಗದು, ಮೈಸೂರು ಜಿಲ್ಲೆಯ ವಿವಿಧೆಡೆ

₹4.23 ಲಕ್ಷ ಮೌಲ್ಯದ ಏರ್ ಕೂಲರ್, ಫ್ಯಾನ್, ಟಿ.ವಿ
ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಕಾನಹಳ್ಳಿ ಚೆಕ್‌ಪೋಸ್ಟ್

‘ಶ್ರೀಧರ್ ರೆಡ್ಡಿ ವಿರುದ್ಧ ಆಯೋಗಕ್ಕೆ ಪತ್ರ’

ಬೆಂಗಳೂರು: ‘ಚುನಾಯಿತ ಶಾಸಕರ ಕ್ರಿಮಿನಲ್ ಪ್ರಕರಣ ಕುರಿತು ಇತ್ತೀಚೆಗೆ ಬಂದ ವರದಿ ಪ್ರಕಾರ ಆಡಳಿತ ಪಕ್ಷ ಬಿಜೆಪಿಯ 40 ಶಾಸಕರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿವೆ. ಒಟ್ಟಾರೆ ಶೇ 35 ಶಾಸಕರು ಕ್ರಿಮಿನಲ್ ಪ್ರಕರಣ ಎದುರಿಸುತ್ತಿದ್ದಾರೆ’ ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಉಪಾಧ್ಯಕ್ಷ ರಮೇಶ್ ಬಾಬು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ‘ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಟಿಎಂ ಕ್ಷೇತ್ರದಲ್ಲಿ ಶ್ರೀಧರ್ ರೆಡ್ಡಿ ಎಂಬುವವರು ಬಿಜೆಪಿ ಅಭ್ಯರ್ಥಿ ಆಕಾಂಕ್ಷಿ ಎಂದು ಹೇಳಿಕೊಂಡಿದ್ದು, ಇದಕ್ಕೆ ಇಂಬು ಕೊಡುವಂತೆ ಅವರ ಹೆಸರನ್ನು ಬಿಜೆಪಿ ಪ್ರಸ್ತಾಪಿಸಿದೆ. ಬೆಂಗಳೂರು ನಗರ ಪದಾಧಿಕಾರಿಯಾಗಿ ಕೆಲಸ ಮಾಡಿರುವ ಅವರ ವಿರುದ್ಧ 12 ಕ್ರಿಮಿನಲ್ ಪ್ರಕರಣ ಹೆಬ್ಬಗೋಡಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿವೆ. ಈ ಸಂಬಂಧವಾಗಿ ಚುನಾವಣಾ ಆಯೋಗಕ್ಕೆ ಪತ್ರ ಬರೆಯುತ್ತಿದ್ದೇವೆ’ ಎಂದೂ ತಿಳಿಸಿದರು.

ಕ್ಷೇತ್ರದ ಕೂಗು

●**ಕ್ಷೇತ್ರ: ಬೇಲೂರು**
●**ಶಾಸಕ:** ಕೆ.ಎಸ್. ಲಿಂಗೇಶ್ (ಜೆಡಿಎಸ್)
- ಬೇಲೂರಿನ ಮುಖ್ಯರಸ್ತೆ ವಿಸ್ತರಣೆ ಮಾಡಲು ಹಲವು ವರ್ಷಗಳಿಂದ ಸಂಘ– ಸಂಸ್ಥೆಗಳು, ಸಾರ್ವಜನಿಕರು ಒತ್ತಾಯಿಸುತ್ತಿದ್ದರೂ ಪ್ರಯೋಜನವಾಗಿಲ್ಲ. ಶಾಸಕರು ಪರ್ಯಾಯವಾಗಿ ಹೊಳೇಬೀದಿ ರಸ್ತೆಯನ್ನು ಅಭಿವೃದ್ಧಿ ಪಡಿಸಿ, ಸೇತುವೆ ನಿರ್ಮಿಸಲು ಮುಂದಾಗಿದ್ದು, ₹ 24 ಕೋಟಿ ಬಿಡುಗಡೆಯಾದರೂ ಟೆಂಡರ್ ಪ್ರಕಿಯೆ ಮುಗಿದಿಲ್ಲ.

●**ಕ್ಷೇತ್ರ: ಶ್ರವಣಬೆಳಗೊಳ**
●**ಶಾಸಕ:** ಸಿ.ಎನ್. ಬಾಲಕೃಷ್ಣ (ಜೆಡಿಎಸ್)
- ಕ್ಷೇತ್ರದಲ್ಲಿ ತೆಂಗು ಹೆಚ್ಚಾಗಿ ಬೆಳೆಯುತ್ತಿದ್ದು, ಬೆಳೆ ಅಭಿವೃದ್ಧಿ ಮತ್ತು ತೆಂಗಿನ ಉತ್ಪನ್ನಗಳ ಕೈಗಾರಿಕಾ ಘಟಕಗಳು ಸ್ಥಾಪನೆ ಆಗಬೇಕಿದೆ. ಪ್ರವಾಸೋದ್ಯಮಕ್ಕೆ ಇನ್ನೂ ಹೆಚ್ಚಿನ ಒತ್ತು ಸಿಗಬೇಕಿದೆ.

●**ಕ್ಷೇತ್ರ: ಸಕಲೇಶಪುರ**
●**ಶಾಸಕ:** ಎಚ್.ಕೆ. ಕುಮಾರಸ್ವಾಮಿ (ಜೆಡಿಎಸ್)
- ಕ್ಷೇತ್ರದಲ್ಲಿ ಕಾಡಾನೆ ಸಮಸ್ಯೆ ನಿರಂತರವಾಗಿದೆ. ಹಲವು ದಶಕಗಳ ಈ ಸಮಸ್ಯೆಗೆ ಮುಕ್ತಿ ನೀಡಬೇಕಾಗಿದೆ. ಜೊತೆಗೆ ಕಾಫಿ ಬೆಳೆಗಾರರ ಸಮಸ್ಯೆಗಳನ್ನು ಪರಿಹರಿಸಬೇಕಾಗಿದೆ.

●**ಕ್ಷೇತ್ರ: ಅರಕಲಗೂಡು**
●**ಶಾಸಕ:** ಎ.ಟಿ. ರಾಮಸ್ವಾಮಿ (ಜೆಡಿಎಸ್)
- ಪದವಿ ಪೂರ್ವ ಶಿಕ್ಷಣದ ನಂತರ ಉನ್ನತ ಶಿಕ್ಷಣಕ್ಕೆ ಬೇರೆ ಊರುಗಳನ್ನೇ ಅವಲಂಬಿಸ ಬೇಕಾಗಿದೆ. ಹೀಗಾಗಿ ಕ್ಷೇತ್ರದಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳು ಬೇಕು. ರಾಮೇಶ್ವರ ಸೇರಿದಂತೆ ಹಲವು ಪ್ರವಾಸಿ ತಾಣಗಳಿದ್ದು, ಪ್ರವಾಸೋದ್ಯಮದ ಅಭಿವೃದ್ಧಿ ಆಗಬೇಕು. ಎರಡು ನದಿಗಳು ಹರಿಯುತ್ತಿದ್ದರೂ, ಸಮಗ್ರ ನೀರಾವರಿ ಸೌಲಭ್ಯ ಸಿಕ್ಕಿಲ್ಲ.

●**ಕ್ಷೇತ್ರ: ಅರಸೀಕೆರೆ**
●**ಶಾಸಕ:** ಕೆ.ಎಂ. ಶಿವಲಿಂಗೇಗೌಡ (ಜೆಡಿಎಸ್)
- ಎತ್ತಿನಹೊಳೆ ನೀರಾವರಿ ಯೋಜನೆಯಿಂದ ತಾಲ್ಲೂಕಿನ ಕೆರೆಗಳಿಗೆ ನೀರು ತುಂಬಿಸುವ ಪ್ರಕ್ರಿಯೆ ಹಲವು ವರ್ಷಗಳಿಂದ ಮಂದಗತಿಯಲ್ಲಿ ಸಾಗಿದೆ. ಯೋಜನೆಯನ್ನು ಚುರುಕುಗೊಳಿಸಬೇಕು. ಹಳ್ಳಿ ಜನರ ನೀರಿನ ಬವಣೆಯನ್ನು ನೀಗಿಸಬೇಕು.

●**ಕ್ಷೇತ್ರ: ಹಾಸನ**
●**ಶಾಸಕ:** ಪ್ರೀತಂ ಜೆ.ಗೌಡ (ಬಿಜೆಪಿ)
- ಪ್ರಮುಖವಾಗಿ ಕೈಗಾರಿಕೆಗಳ ಅಭಿವೃದ್ಧಿಗೆ ಒತ್ತು ನೀಡಬೇಕು. ಈಗಾಗಲೇ ಸಿದ್ಧ ಉಡುಪು ಉತ್ಪಾದಿಸುವ ಗಾರ್ಮೆಂಟ್ಸ್ ಕೈಗಾರಿಕೆಗಳಿದ್ದು, ಮಾಹಿತಿ ತಂತ್ರಜ್ಞಾನ ಪಾರ್ಕ್, ದೊಡ್ಡ ಪ್ರಮಾಣದ ಕೈಗಾರಿಕೆಗಳ ಸ್ಥಾಪನೆ ಆಗಬೇಕು.

●**ಕ್ಷೇತ್ರ: ಹೊಳೆನರಸೀಪುರ**
●**ಶಾಸಕ:** ಎಚ್.ಡಿ.ರೇವಣ್ಣ (ಜೆಡಿಎಸ್)
- ಕುಡಿಯುವ ನೀರಿನ ಪೂರೈಕೆ, ಒಳಚರಂಡಿ ವ್ಯವಸ್ಥೆ, ರಸ್ತೆಗಳು ಅಭಿವೃದ್ಧಿಯಾಗಬೇಕು. ಹಳ್ಳಿಮೈಸೂರು ಹೋಬಳಿಯಲ್ಲಿ ಹೊಗೆಸೊಪ್ಪು ಖರೀದಿ ಕೇಂದ್ರ ಇನ್ನೂ ಆರಂಭವಾಗಿಲ್ಲ. ದಿನಸಿ ಖರೀದಿ ಕೇಂದ್ರ, ಮಾರುಕಟ್ಟೆ ಇಲ್ಲ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಜೀವನದಲ್ಲಿ ಮೌಲ್ಯಯುತವಾದ ಎಲ್ಲವೂ ಪುಸ್ತಕಗಳಿಂದಲೇ ಸಿಗುವುದಿಲ್ಲ, ಪ್ರಪಂಚದ ಸಂಗತಿಗಳನ್ನು ಅನುಭವಿಸಿ. -ಥಾಮಸ್ ಆಲ್ವ ಎಡಿಸನ್

ಸಿಬಿಐ ಬಗ್ಗೆ ಪ್ರಧಾನಿ ಪ್ರಶಂಸೆ ಒಪ್ಪಿಕೊಳ್ಳಲು ಆಗದ ವಿವರಣೆ

ಪ್ರಧಾನಿ ನರೇಂದ್ರ ಮೋದಿ ಅವರು ಕೇಂದ್ರೀಯ ತನಿಖಾ ದಳವನ್ನು (ಸಿಬಿಐ) ಸೋಮವಾರ ಬಲವಾಗಿ ಸಮರ್ಥಿಸಿಕೊಂಡಿದ್ದಾರೆ. ಸಿಬಿಐ ಪಕ್ಷಪಾತಿಯಾಗಿ ವರ್ತಿಸುತ್ತಿದೆ ಎಂಬ ಟೀಕೆಯು ಈಗ ವ್ಯಾಪಕವಾಗಿದೆ. ಈ ಟೀಕೆ ಈಗ ನಿರಂತರವಾಗಿ ದಾಖಲಾಗುತ್ತಿದೆ. ಕೇಂದ್ರ ಸರ್ಕಾರವು ಹಲವು ಕೇಂದ್ರೀಯ ಸಂಸ್ಥೆಗಳನ್ನು ತನ್ನ ಮನಸ್ಸಿಗೆ ಬಂದಂತೆ ಬಳಕೆ ಮಾಡಿಕೊಳ್ಳುತ್ತಿದೆ ಎಂದು ಕಾಂಗ್ರೆಸ್ ನೇತೃತ್ವದಲ್ಲಿ ಒಟ್ಟು 14 ರಾಜಕೀಯ ಪಕ್ಷಗಳು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದವು ಕೂಡ. ಈ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿದೆ. ಆದರೂ, ಸಿಬಿಐ ಕುರಿತು ಇರುವ ಟೀಕೆಗಳ ಹಿನ್ನೆಲೆಯಲ್ಲಿ ಪ್ರಧಾನಿಯವರ ಸಮರ್ಥನೆಯನ್ನು ಅರ್ಥ ಮಾಡಿಕೊಳ್ಳಲು ಯತ್ನಿಸಬೇಕು. ಸಿಬಿಐನ ವಜ್ರ ಮಹೋತ್ಸವದ ಸಂದರ್ಭದಲ್ಲಿ ಪ್ರಧಾನಿಯವರು ಈ ಸಂಸ್ಥೆಯು 'ಸತ್ಯ ಮತ್ತು ನ್ಯಾಯಕ್ಕೆ ಹೆಸರಾಗಿದೆ' ಎಂದು ಬಣ್ಣಿಸಿದ್ದಾರೆ. ತನ್ನ ಕಾರ್ಯನಿರ್ವಹಣೆ, ದಕ್ಷತೆ ಮತ್ತು ಸಾಮರ್ಥ್ಯದ ಮೂಲಕ ಸಿಬಿಐ ಜನರ ವಿಶ್ವಾಸವನ್ನು ಸಂಪಾದಿಸಿದೆ ಎಂದು ಪ್ರಧಾನಿ ಹೇಳಿದ್ದಾರೆ. ದೇಶವನ್ನು ಭ್ರಷ್ಟಾಚಾರದಿಂದ ಮುಕ್ತಗೊಳಿಸುವುದು ಸಿಬಿಐನ ಮುಖ್ಯ ಹೊಣೆಗಾರಿಕೆ ಎಂದು ಹೇಳಿದ ಪ್ರಧಾನಿ, ಭ್ರಷ್ಟ ವ್ಯಕ್ತಿ ಎಷ್ಟೇ ದೊಡ್ಡವನಿದ್ದರೂ, ಎಷ್ಟೇ ಬಲಶಾಲಿಯಾಗಿದ್ದರೂ ಅವರನ್ನು ಬಿಡಬಾರದು ಎಂದೂ ಹೇಳಿದ್ದಾರೆ. ಇದಲ್ಲದೆ ಏನೇ ಇದ್ದರೂ, ಸಿಬಿಐಗೆ ಪ್ರಧಾನಿ ನೀಡಿರುವ ಪ್ರಮಾಣಪತ್ರವು ಹೆಚ್ಚಿನವರಲ್ಲಿ ಸಮಾಧಾನ ಮೂಡಿಸುವಂತೆ ಇಲ್ಲ. ಟೀಕೆಗಳಿಗೆ ತಾವು ಮನ್ನಣೆ ನೀಡುವುದಿಲ್ಲ, ಸಿಬಿಐ ತಾನು ಈಗ ಮಾಡುತ್ತಿರುವುದನ್ನು ಮುಂದುವರಿಸಬೇಕು ಎಂದು ಪ್ರಧಾನಿ ಹೇಳುತ್ತಿದ್ದಾರೆ ಎಂಬ ರೀತಿಯಲ್ಲಿಯೂ ಅವರ ಮಾತುಗಳನ್ನು ಗ್ರಹಿಸಬಹುದು.

ಸಿಬಿಐ ವಿಚಾರದಲ್ಲಿ ಪ್ರಧಾನಿ ಮೋದಿ ಅವರು ಹೇಳಿರುವ ಮಾತುಗಳಿಗಿಂತಲೂ ವಿರೋಧ ಪಕ್ಷಗಳು ಹೇಳುತ್ತಿರುವ ಮಾತುಗಳಿಗೆ ಹೆಚ್ಚು ತೂಕ ಇರುವಂತಿದೆ

ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಸಿಬಿಐ ಒಳಗೊಂಡಂತೆ ಹಲವು ತನಿಖಾ ಸಂಸ್ಥೆಗಳನ್ನು ವಿರೋಧ ಪಕ್ಷಗಳ ನಾಯಕರನ್ನು ಗುರಿಯಾಗಿಸಲು, ಸರ್ಕಾರದ ಬಗ್ಗೆ ಕಟುವಾದ ಟೀಕೆ ಮಾಡುವವರನ್ನು ಗುರಿಯಾಗಿಸಲು ಬಳಕೆ ಮಾಡಿಕೊಳ್ಳುತ್ತಿದೆ ಎಂದು ವಿರೋಧ ಪಕ್ಷಗಳ ನಾಯಕರು ಹಲವಾರು ಬಾರಿ ಹೇಳಿದ್ದಾರೆ. ಸಿಬಿಐ ಹಾಗೂ ಇತರ ಕೇಂದ್ರೀಯ ತನಿಖಾ ಸಂಸ್ಥೆಗಳನ್ನು ಕೇಂದ್ರ ಸರ್ಕಾರವು ಎಗ್ಗಿಲ್ಲದೆ ಬಳಸಿಕೊಳ್ಳುತ್ತಿರುವ ಕಾರಣದಿಂದಾಗಿ, ಸರ್ಕಾರದ ನೀತಿಗಳ ವಿರುದ್ಧ ಪ್ರಜಾಸತ್ತಾತ್ಮಕವಾಗಿ ಭಿನ್ನಾಭಿಪ್ರಾಯ ವ್ಯಕ್ತಪಡಿಸುವ ಹಕ್ಕಿಗೆ ಚ್ಯುತಿ ಬಂದಿದೆ ಎಂದು ವಿರೋಧ ಪಕ್ಷಗಳ ನಾಯಕರು ಹೇಳುತ್ತಾ ಬಂದಿದ್ದಾರೆ. ಮೋದಿ ನೇತೃತ್ವದ ಸರ್ಕಾರ ಆಡಳಿತಕ್ಕೆ ಬಂದ ನಂತರದಲ್ಲಿ ದಾಖಲಾಗಿರುವ ಹೆಚ್ಚಿನ ಪ್ರಕರಣಗಳು ವಿರೋಧ ಪಕ್ಷಗಳ ನಾಯಕರ ವಿರುದ್ಧ ಎಂಬ ಆರೋಪ ಇದೆ. ವಿರೋಧ ಪಕ್ಷಗಳ ಹಲವು ನಾಯಕರು ವಿವಿಧ ಆರೋಪಗಳ ಅಡಿಯಲ್ಲಿ ಜೈಲಿನಲ್ಲಿ ಇದ್ದಾರೆ. ತನಿಖೆ ಎದುರಿಸುತ್ತಿದ್ದ ಅಥವಾ ಸಿಬಿಐ ತನಿಖೆಗೆ ಗುರಿಯಾಗಬೇಕಾದ ಬೆದರಿಕೆ ಎದುರಿಸುತ್ತಿದ್ದ ಕೆಲವರು ಬಿಜೆಪಿ ಸೇರುವ ಮೂಲಕ 'ಶುದ್ಧಹಸ್ತ'ರಾಗಿ ಬದಲಾಗಿದ್ದಾರೆ ಎಂಬ ಮಾತು ರಾಜಕೀಯ ಚರ್ಚೆಗಳಲ್ಲಿ ಹಲವು ಬಾರಿ ಪ್ರಸ್ತಾಪ ಆಗಿದೆ. ಈ ಮಾತಿಗೆ ಪೂರಕವಾಗಿ ಕೆಲವು ನಿದರ್ಶನಗಳನ್ನು ಕೂಡ ನೀಡಬಹುದಾಗಿದೆ.

ಒಂದು ದಶಕದ ಹಿಂದೆ ಸುಪ್ರೀಂ ಕೋರ್ಟ್, ಸಿಬಿಐ ಸಂಸ್ಥೆಯನ್ನು 'ಪಂಜರದ ಗಿಣಿ' ಎಂದು ಕರೆದಿತ್ತು. ಸಂಸ್ಥೆಯು ಎಲ್ಲ ಪ್ರಕರಣಗಳ ತನಿಖೆಯನ್ನು ನ್ಯಾಯಸಮ್ಮತವಾಗಿ, ನಿಷ್ಪಕ್ಷಪಾತ ಧೋರಣೆಯಿಂದ, ಕಾನೂನಿಗೆ ಅನುಗುಣವಾಗಿ ನಡೆಸುತ್ತದೆ ಎಂದು ಸರ್ಕಾರ ಹೇಳಿದ್ದಕ್ಕೆ ಪ್ರತಿಯಾಗಿ ಕೋರ್ಟ್ ಹೀಗೆ ಹೇಳಿತ್ತು. ಸಿಬಿಐ ಬಗ್ಗೆ ಕೋರ್ಟ್ ಆಡಿದ್ದ ಮಾತುಗಳು ವರ್ಷಗಳಲ್ಲಿ ಅನುರಣಿಸುತ್ತಿವೆ, ವರ್ಷದಿಂದ ವರ್ಷಕ್ಕೆ ಈ ಮಾತಿಗೆ ಹೆಚ್ಚು ವಿಶ್ವಾಸಾರ್ಹತೆ ಲಭಿಸಿದೆ. ಈಗ ಹಲವರು ಈ ಸಂಸ್ಥೆಯನ್ನು ಪಂಜರದ ಗಿಣಿಯೆಂಬಂತೆ ಕಾಣುತ್ತಿಲ್ಲ. ಬದಲಿಗೆ, ವಿರೋಧ ಪಕ್ಷಗಳು ಹಾಗೂ ಟೀಕಾಕಾರರ ವಿರುದ್ಧ ಸರ್ಕಾರವು ಹೂಡಿರುವ ಅಸ್ತ್ರದಂತೆ ಕಾಣಲಾಗುತ್ತಿದೆ. ತನ್ನ ವಿರುದ್ಧ ಇರುವ ಆರೋಪಗಳನ್ನು ಪುಷ್ಟೀಕರಿಸುವ ರೀತಿಯಲ್ಲಿ ಸಿಬಿಐ ನಡೆದುಕೊಂಡ ಹಲವು ನಿದರ್ಶನಗಳು ಸಾರ್ವಜನಿಕರ ಅವಗಾಹನೆಯಲ್ಲಿ ಇವೆ. ಸಿಬಿಐ ತನಿಖೆ ನಡೆಸಿದ ಪ್ರಕರಣಗಳಲ್ಲಿ ಆರೋಪಿಗಳು ಶಿಕ್ಷೆಗೆ ಗುರಿಯಾದ ಪ್ರಮಾಣವು ಬಹಳ ಕಡಿಮೆ ಇದೆ. ಅಂದರೆ, ಸಂಸ್ಥೆಯ ಉದ್ದೇಶವು ನ್ಯಾಯ ಕೊಡಿಸುವುದಕ್ಕಿಂತಲೂ, ವ್ಯಕ್ತಿಗಳನ್ನು ಕಿರುಕುಳಕ್ಕೆ ಗುರಿಪಡಿಸುವುದಾಗಿರುತ್ತದೆ ಎಂಬ ಟೀಕೆಗಳು ಇವೆ. ಸಿಬಿಐ ವಿಚಾರದಲ್ಲಿ ಪ್ರಧಾನಿ ಮೋದಿ ಅವರು ಹೇಳಿರುವ ಮಾತುಗಳಿಗಿಂತಲೂ ವಿರೋಧ ಪಕ್ಷಗಳು ಹೇಳುತ್ತಿರುವ ಮಾತುಗಳಿಗೆ ಹೆಚ್ಚು ತೂಕ ಇರುವಂತಿದೆ.

ದಿನದ ಟ್ವೀಟ್

ಪುನಶ್ಚೇತನದ ಸಮಯ

ರಿಷಭ್ ಪಂತ್ ಅವರು ಚೇತರಿಸಿಕೊಳ್ಳಲು ಹೆಚ್ಚಿನ ಗಮನ ಹರಿಸಬೇಕು. ಅವರು ಸಾರ್ವಜನಿಕವಾಗಿ ಕಾಣಿಸಿಕೊಳ್ಳುವ ಸನ್ನಿವೇಶಗಳ ಬಗ್ಗೆ ಬಿಸಿಸಿಐ ನಿಗಾ ವಹಿಸಬೇಕು. ಅವರು ರಾಷ್ಟ್ರದ ಆಸ್ತಿ. ಅವರಲ್ಲಿನ ಛಲ ಏಕದಿನ ವಿಶ್ವಕಪ್ ಕ್ರಿಕೆಟ್‌ನಲ್ಲಿ ಸ್ಥಾನ ಪಡೆಯಲು ಬಳಕೆಯಾಗಬೇಕೆ ವಿನಾ ಐಪಿಎಲ್ ಫ್ರಾಂಚೈಸಿಯ ಬಾಲ್ಕನಿಯನ್ನು ಅಲಂಕರಿಸಲು ಸೀಮಿತವಾಗಬಾರದು. ಚೇತರಿಕೆ ಮತ್ತು ಮಾನಸಿಕ ಸಾಮರ್ಥ್ಯ ವೃದ್ಧಿಗಾಗಿ ಅವರು ಪರಿಶ್ರಮ ವಹಿಸಬೇಕಾದ ಸಮಯ ಇದಾಗಿದೆ.

ವಿಜಯ್ ಲೋಕಪಲ್ಲಿ, ಲೇಖಕ

ಕಿಡಿನುಡಿ



ಕರ್ನಾಟಕ– ಮಹಾರಾಷ್ಟ್ರ ಗಡಿ ವಿವಾದವು ಸುಪ್ರೀಂ ಕೋರ್ಟ್‌ನಲ್ಲಿ ಇದ್ದರೂ ಮಹಾರಾಷ್ಟ್ರ ಸರ್ಕಾರ ಎರಡೂ ರಾಜ್ಯಗಳ ಗಡಿ ಭಾಗದಲ್ಲಿ ಗೊಂದಲ ಸೃಷ್ಟಿಸುವ ಕೆಲಸ ಮಾಡುತ್ತಿದೆ. ಕರ್ನಾಟಕದ ಗಡಿಯಲ್ಲಿರುವ ಕೆಲವರಿಗೆ ವಿಮೆ ನೀಡುವ ಆದೇಶ ಮಾಡಿರುವುದು ಉದ್ಧಟತನದ ಪರಮಾವಧಿಯಾಗಿದ್ದು, ಇದು ಎರಡು ರಾಜ್ಯಗಳ ನಡುವಿನ ಬಾಂಧವ್ಯ ಕದಡುವ ಪ್ರಯತ್ನವಾಗಿದೆ. ಮಹಾರಾಷ್ಟ್ರ ಸರ್ಕಾರ ಇದೇ ರೀತಿ ಉದ್ಧಟತನ ಮುಂದುವರಿಸಿದರೆ ಕರ್ನಾಟಕ ಸರ್ಕಾರವೂ ಮಹಾರಾಷ್ಟ್ರ ಗಡಿಯಲ್ಲಿರುವ ಕನ್ನಡಿಗರ ರಕ್ಷಣೆಗೆ ಇದೇ ರೀತಿಯ ವಿಮೆ ಜಾರಿಗೊಳಿಸುವುದು.

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಸೋಮವಾರ, 6-4-1998

- **ವಿಶೇಷ ಎಐಸಿಸಿ ಅಧಿವೇಶನಕ್ಕೆ ಸಕಲ ಸಿದ್ಧತೆ**

ನವದೆಹಲಿ, ಏಪ್ರಿಲ್ 5– ಕಾಂಗ್ರೆಸ್ ಕಾರ್ಯಕಾರಿಣಿಯು ಮಾರ್ಚ್ 14ರಂದು ಸೀತಾರಾಂ ಕೇಸರಿ ಅವರ ಬದಲಿಗೆ ಸೋನಿಯಾ ಗಾಂಧಿ ಅವರನ್ನು ಎಐಸಿಸಿ ಅಧ್ಯಕ್ಷೆಯನ್ನಾಗಿ ಮಾಡಿದ ನಿರ್ಣಯವನ್ನು ಸ್ಥಿರೀಕರಣಗೊಳಿಸುವ ಉದ್ದೇಶದಿಂದ ಒಂದು ದಿನದ ಅಖಿಲ ಭಾರತ ಕಾಂಗ್ರೆಸ್ ಮಹಾಧಿವೇಶನ ನಾಳೆ ಇಲ್ಲಿ ಆರಂಭವಾಗಲು ಸಕಲ ಸಿದ್ಧತೆ ನಡೆದಿದೆ.

ಅಧಿವೇಶನದಲ್ಲಿ ಸೋನಿಯಾ ಅವರ ನಾಯಕತ್ವಕ್ಕೆ ಎಐಸಿಸಿಯ ಒಪ್ಪಿಗೆ ಪಡೆಯಲಾಗುವುದು. ಏಳು ವರ್ಷಗಳ ನಂತರ ಮತ್ತೆ ನೆಹರೂ ಕುಟುಂಬದ ಪ್ರತಿನಿಧಿ ಒಬ್ಬರು ಮತ್ತೆ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷ ಪೀಠವನ್ನು ಅಲಂಕರಿಸುವರು.

- **ಆರ್ಥಿಕ ಸುಧಾರಣೆ ಪ್ರಕ್ರಿಯೆ ಬದಲಿಲ್ಲ–ಯಶವಂತ ಸಿನ್ಹಾ**

ನವದೆಹಲಿ, ಏಪ್ರಿಲ್ 5 (ಪಿಟಿಐ)– 'ಆರ್ಥಿಕ ಸುಧಾರಣೆಗಳ ಪ್ರಕ್ರಿಯೆಗಳಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ; ಆದರೆ, ನಮ್ಮ ಅರ್ಥ ವ್ಯವಸ್ಥೆಯ ಜಾಗತೀಕರಣವನ್ನು ಎಚ್ಚರಿಕೆಯಿಂದಲೇ ತೀರ್ಮಾನಿಸುತ್ತೇನೆ' ಎಂದು ಹಣಕಾಸು ಸಚಿವ ಯಶವಂತ ಸಿನ್ಹಾ ಅವರು ಹೇಳಿದ್ದಾರೆ. 'ಜಾಗತೀಕರಣದ ನಿಟ್ಟಿನಲ್ಲಿ ಭಾರತೀಯ ಉದ್ಯಮ ಹಾಗೂ ಅರ್ಥ ವ್ಯವಸ್ಥೆ ಕೆಲವೊಂದು ವಿಷಯಗಳನ್ನು ಬಲು ಎಚ್ಚರಿಕೆಯಿಂದ ಪರಿಶೀಲಿಸಬೇಕಾದ ಅಗತ್ಯವಿದೆ' ಎಂದರು.

50 ವರ್ಷಗಳ ಹಿಂದೆ

ಶುಕ್ರವಾರ, 6-4-1973

- **11 ಕೋಟಿ ರೂ. ವೆಚ್ಚದ ವ್ಯಾಪಕ ಯೋಜನೆ: ಧಾರಿಯಾ ಪ್ರಕಟಣೆ**

ಬೆಂಗಳೂರು, ಏಪ್ರಿಲ್ 5– ಮೂರು ಸಾವಿರ ಪದವೀಧರರನ್ನೊಳಗೊಂಡು, ಮೈಸೂರಿನ ಒಟ್ಟು 35 ಸಾವಿರ ವಿದ್ಯಾವಂತ ನಿರುದ್ಯೋಗಿಗಳಿಗೆ 1973–74ರ ಅವಧಿಯಲ್ಲಿ ಉದ್ಯೋಗಗಳನ್ನು ಒದಗಿಸುವ ಕ್ರಮಬದ್ಧ ಕಾರ್ಯಕ್ರಮ ಇಂದು ಇಲ್ಲಿ ಕೇಂದ್ರ ಯೋಜನಾ ರಾಜ್ಯಮಂತ್ರಿ ಶ್ರೀ ಮೋಹನ್ ಧಾರಿಯಾ ಅವರ ಸಮ್ಮುಖದಲ್ಲಿ ರೂಪುಗೊಂಡಿತು.

10.35 ಕೋಟಿ ರೂಪಾಯಿಗಳ ಒಟ್ಟು ವೆಚ್ಚದ ಈ ಕೇಂದ್ರ–ರಾಜ್ಯಗಳ ಸಂಯುಕ್ತ ಯೋಜನೆಯಿಂದ, ರಾಜ್ಯದ ಎಂಜಿನಿಯರಿಂಗ್ ಪದವೀಧರರ ನಿರುದ್ಯೋಗ ಸಮಸ್ಯೆ ಸಂಪೂರ್ಣವಾಗಿ ನಿವಾರಣೆಯಾಗುವುದಲ್ಲದೆ, ಒಟ್ಟು ವಿದ್ಯಾವಂತ ನಿರುದ್ಯೋಗಿಗಳ ಪೈಕಿ ಶೇಕಡ 70ರಷ್ಟು ಮಂದಿಗೆ ಜೀವನೋಪಾಯ ಕಲ್ಪಿಸಿದಂತಾಗುವುದು.

- **ಸಿ.ಕೆ.ವೆಂಕಟರಾಮಯ್ಯ ನಿಧನ**

ಬೆಂಗಳೂರು, ಏಪ್ರಿಲ್ 5– ಕನ್ನಡದ ಸುಪ್ರಸಿದ್ಧ ಸಾಹಿತಿ ಶ್ರೀ ಸಿ.ಕೆ.ವೆಂಕಟರಾಮಯ್ಯ ಅವರು ಕಳೆದ ಮಂಗಳವಾರ ರಾತ್ರಿ 10.30ರ ಸಮಯದಲ್ಲಿ ನಗರದ ಚಿಕಿತ್ಸಾಲಯವೊಂದರಲ್ಲಿ ನಿಧನರಾದರು. ದಿವಂಗತರಿಗೆ 76 ವರ್ಷ ವಯಸ್ಸಾಗಿತ್ತು. 'ಪದ್ಮಶ್ರೀ' ಪ್ರಶಸ್ತಿ ವಿಜೇತರಾದ ಶ್ರೀ ವೆಂಕಟರಾಮಯ್ಯನವರು ತಮ್ಮ 'ಕಾಳಿದಾಸ' ಕೃತಿಗಾಗಿ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪಡೆದಿದ್ದರು.

ಕಲಿಕೆಯು ಬದುಕಿನ ಅನುಭವಗಳ ಮೂಲಕ ವ್ಯಕ್ತಿಯಲ್ಲಿ ಆಗುವ ಸಕಾರಾತ್ಮಕ ಪರಿವರ್ತನೆ

ಪರೀಕ್ಷೆ ಮತ್ತು ಫಲಿತಾಂಶ

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಪರೀಕ್ಷೆಗಳು ನಡೆಯುತ್ತಿವೆ. ಇನ್ನು ಫಲಿತಾಂಶದ ನಿರೀಕ್ಷೆಯ ಕಾಲ. ಫಲಿತಾಂಶದೊಂದಿಗೆ ಜೀವಾನಾಂತರ ಜಿದ್ದುಗಳು, ಸಂಸ್ಥೆಗಳ ಜಿದ್ದುಗಳು, ನಾವೇ ಶ್ರೇಷ್ಠ ಎನ್ನುವ ಘೋಷಣೆಗಳು, ಅದರೊಂದಿಗೇ ಬೆಳೆಯುವ ಶಿಕ್ಷಣೋದ್ಯಮಗಳೆಲ್ಲ ತೆರೆದುಕೊಳ್ಳುತ್ತವೆ. ಈ ಸಂದರ್ಭದಲ್ಲಿ ನಡೆಯಲಿರುವ ಎಲ್ಲ ಮೇಲಾಟಗಳನ್ನೂ ಅರ್ಥ ಮಾಡಿಕೊಳ್ಳಬೇಕು. ಅದಕ್ಕಾಗಿ ಕಲಿಕೆಯ ಪರಿಕಲ್ಪನೆ ಮತ್ತು ಪರೀಕ್ಷೆಯ ಪರಿಕಲ್ಪನೆಯನ್ನು ಅರ್ಥ ಮಾಡಿಕೊಳ್ಳಬೇಕು.

ಕಲಿಕೆಯು ಯಾವಾಗಲೂ ಸಮಗ್ರ ಸ್ವರೂಪವನ್ನು ಹೊಂದಿರುತ್ತದೆ ಮತ್ತು ಅದು ಪಠ್ಯಪುಸ್ತಕ ಕೇಂದ್ರಿತ ಅಲ್ಲ. ಬದುಕಿನ ಎಲ್ಲ ಅನುಭವಗಳ ಮೂಲಕ ವ್ಯಕ್ತಿಯಲ್ಲಿ ಆಗುವ ಸಕಾರಾತ್ಮಕ ಪರಿವರ್ತನೆಗಳು ಕಲಿಕೆಯೇ ಆಗಿರುತ್ತವೆ. ಪಠ್ಯಪುಸ್ತಕದ ಕಲಿಕೆ ಎಂದಾಗ ಕಲಿಕೆಯ ಪರಿಕಲ್ಪನೆಗೆ ಹೆಚ್ಚು ಸ್ಪಷ್ಟತೆ ಸಿಗುತ್ತದೆ. ಆದರೆ ಕಲಿಕೆಯ ಪರಿಕಲ್ಪನೆಯು ನಿರ್ದಿಷ್ಟ ಪಠ್ಯದ ವ್ಯಾಪ್ತಿಗೆ ಪರಿಮಿತಗೊಂಡೂ ಇರುತ್ತದೆ. ಆದರೆ ಪಠ್ಯದ ಕಲಿಕೆ ಕೂಡ ಸಮಗ್ರತೆಯನ್ನು ಹೊಂದಿಯೇ ಇರುತ್ತದೆ. ನಿರ್ದಿಷ್ಟ ಪಠ್ಯದ ಒಂದು ವಿಷಯವನ್ನು ಅಭ್ಯಾಸ ಮಾಡುವುದೆಂದರೆ ನಿರ್ದಿಷ್ಟ ಮಾಹಿತಿಯನ್ನು ಮಾತ್ರ ತಿಳಿದುಕೊಳ್ಳುವುದಲ್ಲ. ಓದುವ ಕ್ರಮ, ಉಚ್ಚರಿಸುವ ವಿಧಾನ, ಭಾವಾಭಿವ್ಯಕ್ತಿ, ಆಂಗಿಕ ಅಭಿವ್ಯಕ್ತಿ, ಧ್ವನಿಯ ಸ್ವರಭಾರ ಏರಿಳಿತ, ನಿರ್ದಿಷ್ಟ ವಿಷಯಕ್ಕೆ ಇರುವ ಬಹುಮುಖಿ ಚಿಂತನೆಗಳನ್ನು ಅರ್ಥ ಮಾಡಿಕೊಂಡು ನಿರೂಪಿಸುವುದು, ಅದರಿಂದ ಸಮಾಜ ಮತ್ತು ವ್ಯಕ್ತಿತ್ವದಲ್ಲಿ ಅಳವಡಿಸಿಕೊಳ್ಳಬೇಕಾದ ಕೌಶಲಗಳ ತಿಳಿವು- ಹೀಗೆ ಹಲವಾರು ವಿಷಯಗಳನ್ನು ಒಳಗೊಂಡೇ ಕಲಿಕೆಯು ನಡೆಯುತ್ತದೆ.

ಈ ರೀತಿ ನಡೆದ ಕಲಿಕೆಯನ್ನು ವ್ಯವಸ್ಥಿತವಾದ ರೀತಿಯಲ್ಲಿಯೇ ಕಾಲಕಾಲಕ್ಕೆ ಮೌಲ್ಯಮಾಪನ ಮಾಡಬೇಕು. ಮೌಲ್ಯಮಾಪನದ ಉದ್ದೇಶವೇ ಕಲಿಕೆಯನ್ನು ಉತ್ತಮೀಕರಿಸುವುದಾಗಿರುತ್ತದೆ. ಪರೀಕ್ಷೆಗಳು ಹೀಗಲ್ಲ. ನಿರ್ದಿಷ್ಟ ಕಲಿಕಾ ಸನ್ನಿವೇಶದಲ್ಲಿ ನಡೆದ ಕಲಿಕೆಯು ತೋರಿಸುವ ಅರ್ಹತೆಯ ಬಗ್ಗೆ ತೀರ್ಪು ಕೊಡುವ ರೂಪದಲ್ಲೇ ಪರೀಕ್ಷೆ ಇರುತ್ತದೆ. ಒಂದು ಶೈಕ್ಷಣಿಕ ವರ್ಷದಲ್ಲಿ ಕಲಿತದ್ದರಲ್ಲಿ ಕೆಲವು ವಿಚಾರಗಳನ್ನು ಮೂರು ಗಂಟೆಯ ಅವಧಿಯಲ್ಲಿ ಎಷ್ಟು ಸಮರ್ಥವಾಗಿ ಭಾಷೆಯ ಬರವಣಿಗೆಯ ಮೂಲಕ ನಿರೂಪಿಸಬಲ್ಲ ಎಂಬುದನ್ನು ಮಾತ್ರ ಸಾರ್ವಜನಿಕ ಪರೀಕ್ಷೆಗಳು ಪರೀಕ್ಷಿಸುತ್ತವೆ.

ಆದರೆ ಇಷ್ಟೇ ಆದಾಗಲೂ ಸಮರ್ಪಕವಾಗಿ ಕಲಿಕೆ ಮತ್ತು ಪರೀಕ್ಷೆ ನಡೆದರೆ ಪರೀಕ್ಷೆಯಲ್ಲಿ ಕೆಲವೊಂದು ಸಾಮರ್ಥ್ಯಗಳು ಪರೀಕ್ಷೆಗೆ ಒಳಪಡುತ್ತವೆ. ಉದಾಹರಣೆಗೆ, ಪ್ರಶ್ನೆಪತ್ರಿಕೆಯನ್ನು ರಚಿಸುವಾಗ ನಾಲ್ಕು ಸಾಮರ್ಥ್ಯಗಳನ್ನು ಪ್ರಧಾನವಾಗಿ ಇರಿಸಿಕೊಳ್ಳಲಾಗುತ್ತದೆ. ಸ್ಮರಣೆ ವಲಯದ ಸಾಮರ್ಥ್ಯದ ಪರೀಕ್ಷೆಗಾಗಿ ಸ್ಮರಣೆ ವಲಯದ ಪ್ರಶ್ನೆಗಳಿರುತ್ತವೆ. ನೀರಿನ ಅಣು ಸೂತ್ರ ಏನು, ಕಣ್ವ ಯುದ್ಧ ಯಾರ ನಡುವೆ ನಡೆಯಿತು... ಮುಂತಾದ ರೀತಿಯ ಪ್ರಶ್ನೆಗಳು ಸ್ಮರಣೆ ವಲಯದ ಪ್ರಶ್ನೆಗಳು. ಇವು ವಿದ್ಯಾರ್ಥಿಯ ನೆನಪಿಸಿಕೊಳ್ಳುವ ಸಾಮರ್ಥ್ಯವನ್ನು ಪರೀಕ್ಷಿಸುತ್ತವೆ. ಎರಡನೆಯದು, ಅರ್ಥ ಮಾಡಿಕೊಳ್ಳುವ ಸಾಮರ್ಥ್ಯದ ಪ್ರಶ್ನೆಗಳು. ಉದಾಹರಣೆಗೆ, ಸುಪೀರಿ ರಾಜ್ಯದ ಪರಿಕಲ್ಪನೆ, ದ್ಯುತಿ ಸಂಶ್ಲೇಷಣೆಯಂತಹ ಪರಿಕಲ್ಪನೆಗಳ ಕುರಿತ ಪ್ರಶ್ನೆಗಳು ವಿಚಾರವನ್ನು ಅರ್ಥ ಮಾಡಿಕೊಂಡಾಗ ಉತ್ತರಿಸುವ ಪ್ರಶ್ನೆಗಳಾಗಿರುತ್ತವೆ. ಮೂರನೆಯದು, ಕೌಶಲ ಸಾಮರ್ಥ್ಯದ ಪ್ರಶ್ನೆಗಳು. ಉದಾಹರಣೆಗೆ, ನಕಾಶೆ ರಚನೆ, ಹೃದಯದ ಚಿತ್ರ ರಚನೆಯಂತಹವು. ಈ ವಿಚಾರಗಳಲ್ಲಿ ಚಿತ್ರವನ್ನು ನೋಡಿ ಅರ್ಥ ಮಾಡಿಕೊಂಡು ಮನೋಚಿತ್ರವಾಗಿ ಮೂಡಿಸಿಕೊಂಡ ಕೂಡಲೇ ಚಿತ್ರ ಬರೆಯಲು ಆಗುವುದಿಲ್ಲ. ಚಿತ್ರ ಬರೆದೂ ಬರೆದೂ ಬೆರಳುಗಳು ತರಬೇತಿ ಪಡೆಯಬೇಕು. ನಾಲ್ಕನೆಯದು, ಅನ್ವಯ ಸಾಮರ್ಥ್ಯದ ಪರೀಕ್ಷೆ. ನಿವೃತ್ತಿ ವೇತನ ಪಡೆಯುವವರಿಗೆ ಯಾವ ಬಗೆಯ ಬ್ಯಾಂಕ್ ಖಾತೆ ಸೂಕ್ತ ಎಂದು ಕೇಳಿದರೆ ಉಳಿತಾಯ ಖಾತೆ, ಚಾಲ್ತಿ ಖಾತೆ, ಆವರ್ತ ಖಾತೆಗಳೆಲ್ಲದರ ಅರಿವಿದ್ದು ಯಾವ ಖಾತೆಯಲ್ಲಿ ನಿವೃತ್ತಿ ವೇತನ ಪಡೆಯಲು ಸುಲಭವಾಗುತ್ತದೆ ಎಂದು ತನ್ನ ಅರಿವನ್ನು ಅನ್ವಯಿಸಿ ಉತ್ತರಿಸಬೇಕಾಗುತ್ತದೆ. ಇಂತಹವು ಅನ್ವಯ ಮಾದರಿಯ ಪ್ರಶ್ನೆಗಳು.

ಆದರೆ ಈ ಸಾಮರ್ಥ್ಯಗಳು ಅದೇ ರೀತಿಯಲ್ಲಿ ಪರೀಕ್ಷೆಗೆ ಒಳಪಡಬೇಕಾದರೆ ಕಲಿಕಾ ಪ್ರಕ್ರಿಯೆ ಅದಕ್ಕೆ ತಕ್ಕ ಹಾಗೆ ನಡೆದಿರಬೇಕು. ಪಾಠ ಬೋಧನೆಯನ್ನು ನಡೆಸುವಾಗ ಉಳಿತಾಯ ಖಾತೆ ಎಂದರೆ ಏನು, ಅದರ ಅನುಕೂಲ ಏನು, ಸ್ವರೂಪ ಏನು, ಚಾಲ್ತಿ ಖಾತೆ ಎಂದರೆ ಏನು, ಅದರ ಅನುಕೂಲ ಮತ್ತು ಸ್ವರೂಪ ಏನು ಎಂಬುದನ್ನು ಮಾತ್ರ ತಿಳಿಸಿದ್ದು ವಿವಿಧ ಆರ್ಥಿಕ ಸ್ಥಿತಿಯಲ್ಲಿರುವವರಿಗೆ ಯಾವ ಖಾತೆ ಸೂಕ್ತ ಎಂದು ಪ್ರಶ್ನೆ ಕೇಳಿದಾಗ, ವಿದ್ಯಾರ್ಥಿ ತನ್ನಲ್ಲಿರುವ ಜ್ಞಾನವನ್ನು ನಿರ್ದಿಷ್ಟ ಆರ್ಥಿಕ ಸ್ಥಿತಿಯಲ್ಲಿರುವವರಿಗೆ ಅನ್ವಯಿಸಿ, ಅಂದಾಜಿಸಿ ಉತ್ತರ ಕೊಟ್ಟಾಗ ಮಾತ್ರ ಅದು ಅನ್ವಯ ಸಾಮರ್ಥ್ಯ ವಲಯದ ಪ್ರಶ್ನೆಯಾಗುತ್ತದೆ. ಅಂದರೆ ಚಾಲ್ತಿ ಖಾತೆ ಅರ್ಥ ಆದ ಮೇಲೆ ಉದ್ಯಮಿಗೆ ಯಾವ ಖಾತೆ ಅನುಕೂಲಕಾರಿಯಾಗಿದೆ ಎಂಬ ಪ್ರಶ್ನೆಗೆ ವಿದ್ಯಾರ್ಥಿಯು 'ಚಾಲ್ತಿ ಖಾತೆ' ಎಂದು ಉತ್ತರ ಕೊಟ್ಟರೆ ಆಗ ಅದು ಅನ್ವಯ ಸಾಮರ್ಥ್ಯದ ಪರೀಕ್ಷೆಯಾಗಿರುತ್ತದೆ. ಬದಲು ಉದ್ಯಮಿಗಳಿಗೆ ಚಾಲ್ತಿ ಖಾತೆ ಅನುಕೂಲಕಾರಿಯಾಗಿದೆ ಎಂದು ಅಧ್ಯಾಪಕರೇ ಮಕ್ಕಳಿಗೆ ತಿಳಿಸಿದ್ದಾಗ ಅಥವಾ ಪಾಠ ಪುಸ್ತಕದಲ್ಲಿ ತಿಳಿಸಿದ್ದಾಗ ಅಥವಾ ಪರೀಕ್ಷಾ ಸಹಾಯಕ ಪುಸ್ತಿಕೆಗಳು ಹಿಂದಿನ ಪ್ರಶ್ನೆಪತ್ರಿಕೆಗೆ ಉತ್ತರ ಎಂದು ಕೊಟ್ಟಿದ್ದಾಗ ಮೇಲಿನ ಪ್ರಶ್ನೆಯು ಅನ್ವಯ ಸಾಮರ್ಥ್ಯವನ್ನು ಪರೀಕ್ಷಿಸುವುದಿಲ್ಲ. ಬದಲು ಸ್ಮರಣೆ ಸಾಮರ್ಥ್ಯವನ್ನು ಮಾತ್ರ ಪರೀಕ್ಷಿಸುತ್ತದೆ.



ವರ್ತಮಾನದಲ್ಲಿ ಪರೀಕ್ಷಾ ನಿರ್ವಹಣೆಯ ಬಹಳ ದೊಡ್ಡ ಹಿನ್ನಡೆಯ ಮೂಲವೇ ಇದು. ಸಮಾಜ, ಮಾಧ್ಯಮಗಳು ಮತ್ತು ಪ್ರಭುತ್ವ ಪರೀಕ್ಷಾ ಫಲಿತಾಂಶಕ್ಕಾಗಿ ಅತಿಯಾದ ಒತ್ತಡವನ್ನು ಶಿಕ್ಷಣ ವ್ಯವಸ್ಥೆಯ ಮೇಲೆ ಹೇರುತ್ತಾ ಹೋದ ಹಾಗೆ ಚಿತ್ರವನ್ನೇ ಬರೆಯಬೇಕಾದ ಕೌಶಲ ಸಾಮರ್ಥ್ಯ ಒಂದನ್ನು ಬಿಟ್ಟರೆ ಉಳಿದೆಲ್ಲ ಸಾಮರ್ಥ್ಯಗಳನ್ನೂ ಸ್ಮರಣ ಸಾಮರ್ಥ್ಯವಾಗಿ ಪರಿವರ್ತಿಸಲಾಗುತ್ತಿದೆ. ಪರೀಕ್ಷಾ ವ್ಯವಸ್ಥೆಯನ್ನು ಈಗ ಹೇಳಿದ್ದಕ್ಕಿಂತಲೂ ದುರ್ಬಲಗೊಳಿಸಲು ಮತ್ತೊಂದು ವ್ಯವಸ್ಥೆ ಇದೆ. ಅತೀ ಮುಖ್ಯ ಪ್ರಶ್ನೆಗಳಿಗೆ ಮಾತ್ರ ಉತ್ತರ ಕಲಿಸುವ ಪದ್ಧತಿ ಇದೆ. ಯಾವುದೇ ಪಠ್ಯ ವಿಷಯದಲ್ಲಿ ಸುಮಾರು 60ರಿಂದ 80 ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರ ಕಲಿತುಕೊಂಡರೆ ಬಹು ಮಟ್ಟಿಗೆ ಉತ್ತೀರ್ಣರಾಗಲು ಸಾಕಾಗುತ್ತದೆ. ಕೇವಲ ಉತ್ತೀರ್ಣತೆಯೇ ಏನು, ಬಹಳಷ್ಟು ಒಳ್ಳೆಯ ಅಂಕಗಳೇ ಬರಲು ಅಷ್ಟು ಪ್ರಶ್ನೆಗಳಿಗೆ ಉತ್ತರ ಕಲಿತುಕೊಂಡರೆ ಸಾಕಾಗುತ್ತದೆ. ಇಡೀ ಶೈಕ್ಷಣಿಕ ವರ್ಷದಲ್ಲಿ ಅಷ್ಟು ಪ್ರಶ್ನೆಗಳನ್ನು ಕೊಟ್ಟು ಕಲಿಸಿ ಬರೆಸಿ ಪುನಃ ಬರೆಸಿ ಪುನಃ ಕಲಿಸಿ ಹೀಗೆ ಹಲವಾರು ಬಾರಿ ತಿರುವಿ ಹಾಕಿ ಅಂತಿಮ ಪರೀಕ್ಷೆಗೆ ಉತ್ತರ ಬರೆಸಿದಾಗ ಕಲಿಕೆ ಏನು ನಡೆದಿರುತ್ತದೆ? ಆಗ ಈ ಪರೀಕ್ಷೆಯಲ್ಲಿ ಬರುವ ಅಂಕಗಳು ವಿದ್ಯಾರ್ಥಿಯ ಕಲಿಕಾ ದಕ್ಷತೆಯನ್ನು ಎಷ್ಟರಮಟ್ಟಿಗೆ ಪ್ರತಿನಿಧಿಸಬಲ್ಲವು?

ಈ ಸಮಸ್ಯೆಯು ಔದ್ಯೋಗಿಕ ಪರೀಕ್ಷೆಗಳಿಗೆ ಮತ್ತೆ ತರಬೇತಿ, ಸಂದರ್ಶನಕ್ಕೆ ತರಬೇತಿ, ಉನ್ನತ ವ್ಯಾಸಂಗದ ಕೋರ್ಸುಗಳ ಪ್ರವೇಶಕ್ಕೆ ತರಬೇತಿ, ಅಲ್ಲಿ ಮತ್ತೆ ಹೊಸ ಹೊಸ ತರಬೇತಿಗಳ ದೊಡ್ಡ ಅಹಿತಕಾರಿ ಪರಂಪರೆಯನ್ನೇ ಹುಟ್ಟುಹಾಕುತ್ತದೆ. ಔದ್ಯೋಗಿಕ ಪರೀಕ್ಷೆಗಳಿಗೆ, ಉನ್ನತ ವ್ಯಾಸಂಗದ ಕೋರ್ಸುಗಳ ಪ್ರವೇಶ ಪರೀಕ್ಷೆಗಳಿಗೆ ತರಬೇತಿ ಬೇಕಾಗುವುದು ಅಲ್ಲಿನ ಪರೀಕ್ಷಾ ಸ್ವರೂಪಕ್ಕನುಗುಣವಾಗಿ ಉತ್ತರಿಸುವ ಕ್ರಮ ಹೇಗಿರಬೇಕು ಎಂಬ ಬಗ್ಗೆ. ಇದಕ್ಕಾಗಿ ಪ್ರತ್ಯೇಕ ತರಬೇತಿ ಬೇಕಾಗುತ್ತದೆ. ಆದರೆ ನಡೆಯುವ ಬಹುತೇಕ ತರಬೇತಿಗಳು ಆ ಪರೀಕ್ಷೆಯಲ್ಲಿ ಮುಖ್ಯ ಪ್ರಶ್ನೆ ಯಾವುದು ಬರಲಿದೆ ಎಂಬುದನ್ನು ಆಧರಿಸಿರುತ್ತದೆ. ಅಭ್ಯರ್ಥಿಗಳಿಗೆ ಗೊತ್ತಿರುವುದು ಮುಖ್ಯ ಜ್ಞಾನ ಅಲ್ಲ, ಪಠ್ಯ ಜ್ಞಾನ ಅಲ್ಲ, ಪ್ರಶ್ನೆಗಳ ಉತ್ತರವೂ ಅಲ್ಲ; ಕೇವಲ ಮುಖ್ಯ ಪ್ರಶ್ನೆಗಳ ಉತ್ತರಗಳ ನೆನಪು ಮಾತ್ರ ಇರುವುದು.

ಪರೀಕ್ಷೆಯನ್ನು ಈ ರೂಪಕ್ಕೆ ತಂದಾಗ ಪಾಠ ಪುಸ್ತಕವನ್ನು ನೋಡದೆ ಬರೆಯಬೇಕು ಎಂಬ ನಿಯಮವೇ ಅರ್ಥಹೀನ. ಹೇಗಿದ್ದರೂ ಯಾವ ಕಲಿಕೆಯೂ ನಡೆಯದೆ ಮುಖ್ಯ ಪ್ರಶ್ನೆಗಳ ಉತ್ತರವನ್ನು ಮಾತ್ರ ನೆನಪಿರಿಸಿ ಬರೆಯುವುದು ಎಂದ ಮೇಲೆ ಪಾಠ ಪುಸ್ತಕ ನೋಡಿಯೇ ಬರೆದರೆ ಆಗುವ ನಷ್ಟವೇನಿದೆ? ತೆರೆದ ಪುಸ್ತಕ ಪರೀಕ್ಷೆಯಲ್ಲಿ ಕನಿಷ್ಠಪಕ್ಷ ವಿದ್ಯಾರ್ಥಿಗಳು ನಿರಾಳರಾಗಿರುತ್ತಾರೆ. ತಾವು ಪಾಸಾಗಬಲ್ಲೆವು ಎಂಬ ಆತ್ಮವಿಶ್ವಾಸ ಹೊಂದಿರುತ್ತಾರೆ. ಉತ್ತರವನ್ನು ಹುಡುಕುವ ಸಾಮರ್ಥ್ಯವನ್ನಾದರೂ ಬೆಳೆಸಿಕೊಂಡಿರುತ್ತಾರೆ.

ಚುರುಮುರಿ

ಮೊಬೈಲಾಯಣ

• ನಾರಾಯಣ ರಾಯಚೂರ್

'ಬಯಲು ಆಲಯದೊಳಗೋ ಆಲಯದೊಳಗೆ ಬಯಲೋ ಅಂದಹಾಗೆ ಕೈಯೊಳಗೆ ಮೊಬೈಲೋ ಮೊಬೈಲೊಳಗೆ ಕೈಯೋ ಅನ್ನುವ ದಿನಗಳಿವು'.

'ಏನ್ರೀ? ಮೊಬೈಲ್ ಬಗ್ಗೆ ಕಾವ್ಯ ಹರೀತಾಯಿದೆಯಲ್ಲ? ಏನಿವತ್ತು? ಮೊಬೈಲ್ ಬರ್ತ್‌ಡೇನಾ?!' ಶ್ರೀಮತಿ ಕೆಣಕಿದಳು.

'ಬರೀ ಬರ್ತ್ ಡೇ ಅಲ್ಲ, ಗೋಲ್ಡನ್ ಬರ್ತ್ ಡೇ- ಸುವರ್ಣ ಸಂಭ್ರಮ'.

'ಹೌದೇನ್ರೀ? ಮೊಬೈಲ್ ಬಳಕೆಗೆ ಬಂದು ಐವತ್ತು ವರ್ಷ ಆಯ್ತಾ?!'

'ಈ ಐವತ್ತು ವರ್ಷದಲ್ಲಿ ಮೊಬೈಲ್ ಮನುಷ್ಯನ ಅವಿಭಾಜ್ಯ ಅಂಗವಾಗಿಬಿಟ್ಟಿದೆ'.

'ಹೌದು, ಕೈ ಹಿಡಿದವಳನ್ನಾದರೂ ಬಿಟ್ಟೇನು ಕೈಯಿಂದ ಮೊಬೈಲ್ ಬಿಡಲಾರೆ ಅನ್ನೋವಷ್ಟು!'

'ಅಷ್ಟೇ ಯಾಕೆ? ಈಗೇನಾದರೂ ಕಿಸಾ ಗೌತಮಿ ಬುದ್ಧನ ಬಳಿ, 'ನನ್ನ ಮಗು ಬದುಕಿಸಿಕೊಡಿ' ಅಂತ ಕೇಳಿ ಹೋದರೆ, ಬುದ್ಧ ಏನು ಹೇಳಬಹುದು ಗೊತ್ತಾ? ಮೊಬೈಲ್ ಇಲ್ಲದ ಮನೆಯ ಸಾಸಿವೆ ತೆಗೆದುಕೊಂಡು ಬಾ ಅಂತ...'

'ಪ್ರಪಂಚದಲ್ಲಿ 800 ಕೋಟಿ ಜನರಿದ್ದಾರಂತೆ, 700 ಕೋಟಿ ಮೊಬೈಲ್ ಇವೆಯಂತೆ'.

'ಹೀಗೇ ಆದ್ರೆ, ಮುಂದೆ ಹುಟ್ಟೋ ಮಕ್ಕಳು ಕೈಯಲ್ಲೊಂದು ಮೊಬೈಲ್ ಹಿಡ್ಕೊಂಡೇ ಭೂಮಿಗೆ ಬರಬಹುದು'.

'ಮುಂದೆ ಯಾಕೆ? ಮೊನ್ನೆ ಆಸ್ಪತ್ರೇಲಿ, ಅದೇತಾನೆ ಹುಟ್ಟಿದ ಮಗುವೊಂದು ಡೆಲಿವರಿ ಮಾಡಿಸಿದ ನರ್ಸ್ ಕೈಯಿಂದ ಮೊಬೈಲ್ ಕಿತ್ಕೊಂಡು, 'ಸೇಫ್ ಲ್ಯಾಂಡಿಂಗ್' ಅಂತ ಟೈಪ್ ಮಾಡಿ ತಾನು ಬಂದ ಲೋಕಕ್ಕೆ ಮೆಸೇಜ್ ಕಳಿಸಿತ್ತಂತೆ. ಈ ಜೋಕ್ ಸ್ವಲ್ಪ ಅತಿಶಯೋಕ್ತಿ ಅನಿಸಬಹುದಾದರೂ ಅದನ್ನು ಮೀರಿಸೋ ದಿನ ಬಂದರೂ ಅಚ್ಚರಿಯೇನಿಲ್ಲ'.

'ಹೌದುರೀ, 50 ವರ್ಷದ ಹಿಂದೆ ಕೆ.ಜಿ. ತೂಕ ಇದ್ದ ಮೊಬೈಲ್ ಸ್ಲಿಮ್ ಆಗಿ ಆಗಿ ಇನ್ನು ಮುಂದೆ ಅದೇ ನಮ್ಮನ್ನ ನಿಯಂತ್ರಿಸೋ ತರಹ ಆಗುತ್ತಂತೆ'.

'ಅಂತೂ... ಪ್ರೈವೆಸಿ, ಪ್ರೇಯಸಿ... ಇನ್ನೂ ಏನೇನು ಕಳ್ಕೋತಾನೊ- ಎಲ್ಲ 'ಕರ-ಗತ' ಮಾಡ್ಕೊತೀನಿ ಅಂತ...'

'ಕರ-ಗತ ಮಾಡಿಕೊಳ್ಳಲಿ; ಕೈ-ಮೀರಿ ಹೋಗೋದು ಬೇಡ, ಭಸ್ಮಾಸುರನ ಹಾಗೆ ಕೈ, ಮೈ ಸುಟ್ಕೊಳ್ಳೋದು ಬೇಡ' ಮಡದಿಯ ಮಾರ್ಮಿಕ, ಮಾರಲ್ ನುಡಿ.

ಸಂಗತ

ದಂಡಿಯಾತ್ರೆ: ಮಾದರಿ ಪಾದಯಾತ್ರೆ

93 ವರ್ಷಗಳ ಹಿಂದೆ ಇದೇ ದಿನ (ಏ.6) ಸಮಾರೋಪಗೊಂಡ ದಂಡಿಯಾತ್ರೆ ಜನಮಾನಸದ ಮೇಲೆ ಬೀರಿದ ಪರಿಣಾಮ ಅಮೋಘ

• ಮಲ್ಲಿಕಾರ್ಜುನ ಹೆಗ್ಗಳಗಿ

ಬ್ರಿಟಿಷ್ ಸರ್ಕಾರ ಭಾರತದಲ್ಲಿ ಉಪ್ಪಿನ ಉತ್ಪಾದನೆ ಮತ್ತು ಮಾರಾಟವನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡಿತ್ತು. ನೈಸರ್ಗಿಕವಾಗಿ ದೊರೆಯುವ ಈ ಅವಶ್ಯ ಆಹಾರ ವಸ್ತುವಿನ ಮೇಲೆ ವಿಪರೀತ ಕರ ಆಕರಣೆ ಮಾಡಲಾಗಿತ್ತು. ಇಲ್ಲಿಯ ಉಪ್ಪಿನ ಬೆಲೆ ಇಂಗ್ಲೆಂಡಿಗಿಂತ ನಾಲ್ಕು ಪಟ್ಟು ಹೆಚ್ಚಾಗಿತ್ತು.

ಉಪ್ಪಿನ ಮೇಲಿನ ತೆರಿಗೆ ರದ್ದುಪಡಿಸಬೇಕೆಂದು ಗಾಂಧೀಜಿ ಹಲವು ಪತ್ರಗಳನ್ನು ಬ್ರಿಟಿಷ್ ಸರ್ಕಾರಕ್ಕೆ ಬರೆದಿದ್ದರು. ಇದು ನಾಗರಿಕರ ಮೇಲೆ ಹೇರಿದ ಅತ್ಯಂತ ಕೆಟ್ಟ ತೆರಿಗೆ ಎಂಬ ವಿಚಾರ ಮಂಡನೆಯ ಲೇಖನಗಳನ್ನು ಅವರು ಬರೆದರು. ಆದರೆ ಬ್ರಿಟಿಷ್ ಆಡಳಿತ ತನ್ನ ನಿಲುವು ಬದಲಿಸಲಿಲ್ಲ.

ಉಪ್ಪಿನ ಮೇಲಿನ ಕರ ನಿರಾಕರಣೆಗೆ ಆಗ್ರಹಿಸಿ ದಂಡಿ ಪಾದಯಾತ್ರೆ ಹಮ್ಮಿಕೊಳ್ಳಲು ಗಾಂಧೀಜಿ ಮುಂದಾದರು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಎಲ್ಲ ಕಾಂಗ್ರೆಸ್ ನಾಯಕರು ಇದು ಗಂಭೀರ ಸಮಸ್ಯೆ ಅಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಜವಾಹರಲಾಲ್ ನೆಹರೂ, ಸರೋಜಿನಿ ನಾಯ್ಡು ಅವರಂತಹ ನಾಯಕರಿಗೂ ಈ ಹೋರಾಟದ ಬಗ್ಗೆ ಒಲವು ಇರಲಿಲ್ಲ. ಗಾಂಧೀಜಿ ಪಾದಯಾತ್ರೆಯ ಪೂರ್ಣ ನಕ್ಷೆ ಸಿದ್ಧಪಡಿಸಿದರು. ರಾತ್ರಿ ವಾಸ್ತವ್ಯ ಮಾಡುವ ಸ್ಥಳಗಳು ಕಡ್ಡಾಯವಾಗಿ ಪರಿಶಿಷ್ಟರ ಕೇರಿಗೆ ಹೊಂದಿಕೊಂಡಿರಬೇಕು, ಹೆಚ್ಚು ಎಣ್ಣೆ, ಮಸಾಲೆ ಬಳಸದ ಊಟ ತಯಾರಿಸಬೇಕು, ಸ್ವಚ್ಛತೆ ಕಾಪಾಡಬೇಕು ಎಂದು ತಾವು ಸಾಗುವ ದಾರಿಯಲ್ಲಿ ವ್ಯವಸ್ಥೆ ಮಾಡಲಿದ್ದ ಗ್ರಾಮಸ್ಥರಲ್ಲಿ ಕೇಳಿಕೊಂಡರು.

ಹೋರಾಟಗಳ ನೀತಿ ಕುರಿತು ಗಾಂಧೀಜಿ ವಿಚಾರಧಾರೆ ಬಹಳ ಮಹತ್ವದ್ದಾಗಿತ್ತು. ಮುಖ್ಯವಾಗಿ ಯಾವ ವಿಷಯಕ್ಕಾಗಿ ಹೋರಾಡುತ್ತೇವೆಯೋ ಆ ಬೇಡಿಕೆ ನ್ಯಾಯಸಮ್ಮತವಾಗಿರಬೇಕು, ಹೋರಾಟದಲ್ಲಿ ಭಾಗವಹಿಸುವ ಕಾರ್ಯಕರ್ತರು ಅಹಿಂಸೆ ಮತ್ತು ಸರಳತೆಯನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಕಾರ್ಯಕರ್ತರಿಗೆ ಗಾಂಧೀಜಿ ತರಬೇತಿ ನೀಡಿದ್ದರು. ದಂಡಿಯಾತ್ರೆಯಲ್ಲಿ ಗಾಂಧಿ ಅವರನ್ನು ಒಳಗೊಂಡು 78 ಕಾರ್ಯಕರ್ತರು ಭಾಗವಹಿಸಿದ್ದರು. ಪಾದಯಾತ್ರಿಗಳಿಗೆ ತಮ್ಮ ಎರಡು ಜೊತೆ ಬಟ್ಟೆ, ಹಾಸಿಗೆ, ನೂಲುವುದಕ್ಕೆ ತಕಲಿ, ಸಣ್ಣ ನೋಟ್ ಪುಸ್ತಕ, ಸೀಸದ ಕಡ್ಡಿ ತರಲು ಸೂಚಿಸಲಾಗಿತ್ತು. ಯಾತ್ರಾರ್ಥಿಗಳು ಆರೋಗ್ಯ ಚೆನ್ನಾಗಿ ಕಾಪಾಡಿಕೊಳ್ಳಲು ಗಾಂಧೀಜಿ ಸಲಹೆ ಮಾಡಿದ್ದರು.

1930ರ ಮಾರ್ಚ್ 12ರಂದು ಮುಂಜಾನೆ ಪ್ರಾರ್ಥನೆಯ ನಂತರ ಗಾಂಧೀಜಿ ತಮ್ಮ ಸಾಬರಮತಿ ಆಶ್ರಮದಿಂದ ದಂಡಿಯಾತ್ರೆ ಆರಂಭಿಸಿದರು. ದಂಡಿಯು ಗುಜರಾತ್ ಸಮುದ್ರ ದಂಡೆಯ ಸಣ್ಣ ಊರು. ಸಾಬರಮತಿ ಆಶ್ರಮದಿಂದ 241 ಕಿ.ಮೀ. ದೂರದಲ್ಲಿದೆ. ಏಪ್ರಿಲ್ 6ರಂದು ದಂಡಿ ಗ್ರಾಮವನ್ನು ತಲುಪಿ ಸಮುದ್ರದಂಡೆಯ ಹಿಡಿ ಉಪ್ಪು ಕೈಗೆತ್ತಿಕೊಂಡು ಉಪ್ಪಿನ ಕಾನೂನು ಭಂಗ ಮಾಡುವುದು ಗಾಂಧಿಯವರ ನಿರ್ಧಾರವಾಗಿತ್ತು. ಏಪ್ರಿಲ್ ಆರನ್ನು ನಿಗದಿಪಡಿಸುವುದಕ್ಕೆ ವಿಶೇಷ ಕಾರಣವಿತ್ತು. ಜಲಿಯನ್‌ವಾಲಾಭಾಗ್ ಹತ್ಯಾಕಾಂಡ ನಡೆದದ್ದು ಏಪ್ರಿಲ್ 6ರಂದು. ಈ ದಿನವನ್ನು ಧ್ಯಾನದ ಹಾಗೂ ಶುದ್ಧೀಕರಣದ ದಿನವನ್ನಾಗಿ ಆಚರಿಸುವ ಉದ್ದೇಶವನ್ನು ಗಾಂಧೀಜಿ ಹೊಂದಿದ್ದರು.

ಗಾಂಧಿಯವರಿಗೆ ಆಗ 61 ವರ್ಷ ವಯಸ್ಸಾಗಿತ್ತು. ರಕ್ತದೊತ್ತಡ,ಮಧುಮೇಹದತೊಂದರೆಗಳುಅವರನ್ನು ಕಾಡುತ್ತಿದ್ದವು. ಗಾಂಧೀಜಿ ಪಾದಯಾತ್ರೆಯನ್ನು ಮಧ್ಯದಲ್ಲಿಯೇ ನಿಲ್ಲಿಸಬಹುದು ಅಥವಾ ಅವರು ಅನಾರೋಗ್ಯಕ್ಕೆ ಈಡಾಗಬಹುದು ಎಂದು ಬ್ರಿಟಿಷ್ ಅಧಿಕಾರಿಗಳು ನಂಬಿದ್ದರು. ಹೀಗಾಗಿ ಅವರನ್ನು ಮಾರ್ಗ ಮಧ್ಯದಲ್ಲಿ ತಡೆಯಲಿಲ್ಲ ಮತ್ತು ಬಂಧಿಸಲಿಲ್ಲ.

24 ದಿನಗಳ ಕಾಲ ನಡೆದ ಪಾದಯಾತ್ರೆಯ ಉದ್ದಕ್ಕೂ ಜನಸಾಗರ ಹರಿದುಬಂದಿತು. ದೇಶ ವಿದೇಶಗಳ ಪತ್ರಿಕೆಗಳು ಇದನ್ನು ಮುಖ್ಯ ವಿಷಯವಾಗಿ ಪ್ರಕಟಿಸಿದವು. ಮೊದಲು ವಿರೋಧಿಸಿದ್ದ ನೆಹರೂ, ಸರೋಜಿನಿ ನಾಯ್ಡು ಪಾದಯಾತ್ರೆಯಲ್ಲಿ ಹೆಜ್ಜೆ ಹಾಕಿದರು. ಗಾಂಧೀಜಿ ಪುತ್ರ ಮಣಿಲಾಲ್ ಮತ್ತು ಮೊಮ್ಮಗ ಕಾಂತಿಲಾಲ್ ಕೂಡ ಭಾಗಿಯಾಗಿದ್ದರು. ಗಾಂಧಿಯವರಿಗೆ ತೊಂದರೆಯಾದರೆ ಬಳಸಲು ಒಂದು

ಕುದುರೆಯ ವ್ಯವಸ್ಥೆ ಮಾಡಲಾಗಿತ್ತು. ಆದರೆ ಗಾಂಧೀಜಿ ಗಟ್ಟಿಯಾಗಿ ನಡೆದೇ ಗುರಿ ಮುಟ್ಟಿದರು.

ಮೊದಲೇ ನಿರ್ಧರಿಸಿದಂತೆ ಏಪ್ರಿಲ್ 5ರಂದು ಯಾತ್ರಿಗಳು ದಂಡಿ ಗ್ರಾಮ ತಲುಪಿದರು. ಮರುದಿನ ಬೆಳಿಗ್ಗೆ ಎದ್ದು ಪ್ರಾರ್ಥನೆ ಮುಗಿಸಿ ತಮ್ಮ ತಂಡದೊಂದಿಗೆ ಸಮುದ್ರದ ಕಡೆಗೆ ನಡೆದರು. ಸಮುದ್ರ ಪ್ರವೇಶಿಸಿ ಒಂದು ಸಣ್ಣ ಗುಂಡಿಯಲ್ಲಿದ್ದ ಪ್ರಾಕೃತಿಕ ಉಪ್ಪಿನ ಉಂಡೆಯನ್ನು ಕೈಯಲ್ಲಿ ಎತ್ತಿಕೊಂಡು ಬ್ರಿಟಿಷ್ ಕಾನೂನು ಭಂಗಗೊಳಿಸಿದರು. ಉಳಿದವರು ಗಾಂಧಿಯವರನ್ನು ಅನುಸರಿಸಿದರು. ಪುಟ್ಟಗ್ರಾಮ ದಂಡಿಯ ಸುತ್ತಮುತ್ತ ಅಂದು 40,000ಕ್ಕೂ ಹೆಚ್ಚು ಜನ ಸೇರಿದ್ದರು.

ಸರಳವಾಗಿ ನಡೆದ ದಂಡಿಯಾತ್ರೆಯು ಜನಮಾನಸದ ಮೇಲೆ ಬೀರಿದ ಪರಿಣಾಮ ಅಮೋಘವಾಗಿತ್ತು. ದೇಶದ ತುಂಬಾ ಉಪ್ಪಿನ ಕಾನೂನುಭಂಗ ಚಳವಳಿಗಳು ಆರಂಭವಾದವು. ನಾಲ್ಕು ಲಕ್ಷಕ್ಕೂ ಅಧಿಕ ಜನ ಜೈಲು ಸೇರಿದರು. ಬ್ರಿಟಿಷ್ ಸೇವೆಯಲ್ಲಿದ್ದ ಬಹಳಷ್ಟು ನೌಕರರು ತಮ್ಮ ಹುದ್ದೆ ತೊರೆದು ಹೋರಾಟದಲ್ಲಿ ಸೇರಿಕೊಂಡರು. ಇಂಥ ಪರಿಸ್ಥಿತಿ ಎದುರಿಸುವುದು ಬ್ರಿಟಿಷ್ ಸರ್ಕಾರಕ್ಕೆ ದುಸ್ತರವಾಗತೊಡಗಿತು. ಅಂತಿಮವಾಗಿ ಕರ ರದ್ದುಪಡಿಸಿ ಉಪ್ಪು ತಯಾರಿಕೆಗೆ ಮುಕ್ತ ಅವಕಾಶ ಕಲ್ಪಿಸಲಾಯಿತು.

ಪಾದಯಾತ್ರೆ ನಡೆಸುವ ನಮ್ಮ ಈಗಿನ ಜನಪ್ರತಿನಿಧಿಗಳು ದಂಡಿ ಮಾದರಿಯನ್ನು ಅನುಸರಿಸುವಂತೆ ಆಗಲಿ.

ವಾಚಕರ ವಾಣಿ

ಹುಂಡಿ ಹಣ ಬಳಕೆ: ಶಾಸಕರ ಮಾದರಿ ನಡೆ

ನಂಜನಗೂಡು ಶ್ರೀಕಂಠೇಶ್ವರ ದೇವಸ್ಥಾನದ ನಿಧಿಯಲ್ಲಿನ ₹ 8 ಕೋಟಿಯನ್ನು ವಿವಿಧ ಜನಾಂಗದವರಿಗಾಗಿ ಸಮುದಾಯ ಭವನಗಳನ್ನು ನಿರ್ಮಿಸಲು ಬಿಜೆಪಿ ಶಾಸಕ ಬಿ.ಹರ್ಷವರ್ಧನ್ ಅವರು ಮಂಜೂರು ಮಾಡಿಸಿಕೊಂಡಿರುವುದರಲ್ಲಿ ತಪ್ಪು ಹುಡುಕುವಂಥದ್ದು ಏನೂ ಇಲ್ಲ. ಶಾದಿ ಮಹಲ್ ನಿರ್ಮಾಣ ಕಾಮಗಾರಿಗೂ ದೇವಸ್ಥಾನ ನಿಧಿಗಾಗಿ ಶಾಸಕರು ಬೇಡಿಕೆ ಇಟ್ಟಿದ್ದ ವಿಷಯ ಯಾಕೆ ಅಚ್ಚರಿ ತರಬೇಕು? ದೇವಸ್ಥಾನ, ಮಸೀದಿ, ಚರ್ಚುಗಳಲ್ಲಿ ಇರಬಹುದಾದ ಸಾವಿರಾರು ಕೋಟಿ ರೂಪಾಯಿ ಮೌಲ್ಯದ ನಿಧಿಯು ಅಲ್ಲಿ ಕೊಳೆಯುವ ಬದಲು ಸಾರ್ವಜನಿಕ ಉದ್ದೇಶಗಳಿಗೆ ಬಳಕೆಯಾಗಬೇಕಾದ ತುರ್ತು ಅಗತ್ಯವಿದೆ. ಇದಕ್ಕೆ ಕಾನೂನು ತೊಡಕು ಇದ್ದರೆ, ಅದಕ್ಕೆ ತಿದ್ದುಪಡಿ ತರಬೇಕಾಗಿದೆ. 'ದೇವಸ್ಥಾನದ ಹುಂಡಿಗೆ ಸಾರ್ವಜನಿಕರು ಹಾಕಿದ ಹಣವನ್ನು ಸಾರ್ವಜನಿಕ ಅಗತ್ಯಕ್ಕೆ ಬಳಸುತ್ತಿದ್ದೇವೆ, ಅದರಲ್ಲಿ ತಪ್ಪೇನಿದೆ?' ಎಂಬ ಶಾಸಕರ ಮಾತು ಸರಿಯಾಗಿದೆ. ಈ ಶಾಸಕರ ನಿರ್ಧಾರ ಮತ್ತು ನಡೆ ಎಲ್ಲ ಜನಪ್ರತಿನಿಧಿಗಳಿಗೂ ಮಾದರಿಯಾಗಿದೆ.

ಡಾ. ಸರ್ಜಾಶಂಕರ್ ಹರಳಿಮಠ, ಶಿವಮೊಗ್ಗ

ನಕಲು, ಇಲ್ಲಿ ಮಾಮೂಲು?!

ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕಿನ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರದಲ್ಲಿ ನಕಲು ಮಾಡಲು ಸ್ವತಃ ಶಿಕ್ಷಕರೇ ಸಹಕರಿಸಿರುವುದು ಅಚ್ಚರಿಪಡುವ ವಿಷಯವೇ ಅಲ್ಲ. ಉತ್ತರ ಕರ್ನಾಟಕ ಭಾಗದ ಕೆಲವು ಜಿಲ್ಲೆಗಳಲ್ಲಿ ಸಾಮೂಹಿಕ ನಕಲು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಇದು ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಗೊತ್ತಿರುವ ವಿಷಯವೇ ಆಗಿದ್ದರೂ ಅವರು ಜಾಣ ಕುರುಡರಂತೆ ವರ್ತಿಸುತ್ತಾರೆ. ಫಲಿತಾಂಶ ಕಡಿಮೆಯಾದರೆ ತಮ್ಮ ವಾರ್ಷಿಕ ಬಡ್ತಿಗೆ ತೊಂದರೆ ಆಗುತ್ತದೆ ಎಂದು ಸರ್ಕಾರಿ ಶಾಲೆ ಶಿಕ್ಷಕರು, ತಮ್ಮ ಶಾಲೆಯ ಘನತೆ ಕಡಿಮೆಯಾಗುತ್ತದೆ ಎಂದು ಖಾಸಗಿ ಶಾಲೆಯ ಶಿಕ್ಷಕರು ಸಾಮೂಹಿಕ ನಕಲಿಗೆ ಪರೋಕ್ಷವಾಗಿ ಸಹಕಾರ ನೀಡುತ್ತಾರೆ. ಊರಿನಲ್ಲಿ ಜಾತ್ರೆ ನಡೆದಾಗ ಸೇರುವಷ್ಟು ಜನರು ಪರೀಕ್ಷಾ ಕೇಂದ್ರದ ಬಳಿ ಸೇರಿ, ತಮ್ಮ ಮಗನಿಗೆ, ಗೆಳೆಯನಿಗೆ, ಉತ್ತರ ಇರುವ ಕಾಪಿ ಚೀಟಿಯನ್ನು ಸಣ್ಣ ಕಲ್ಲಿನಲ್ಲಿ ಕಟ್ಟಿ, ಕಿಟಕಿಯ ಮೂಲಕ ಒಳಕ್ಕೆ ಎಸೆಯುತ್ತಾರೆ. ಕೆಲವು ಸಲ ರಾಜಾರೋಷವಾಗಿ ಪೊಲೀಸರ ಭಯವೇ ಇಲ್ಲದೆ ಒಳನುಗ್ಗಿ, ಉತ್ತರ ಬರೆದ ಹಾಳೆಗಳನ್ನು ಕೊಟ್ಟು ಬರುತ್ತಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯು ವಿದ್ಯಾರ್ಥಿಗಳಿಗೆ ಮುಂದಿನ ಜೀವನದ ಮೈಲಿಗಲ್ಲು. ಆದರೆ ಈ ರೀತಿ ಅನೈತಿಕವಾಗಿ ಪರೀಕ್ಷೆ ಬರೆದು ತೇರ್ಗಡೆಯಾದ ವಿದ್ಯಾರ್ಥಿಗಳಿಂದ ಮುಂದೆ ನಾವು ಏನನ್ನು ನಿರೀಕ್ಷೆ ಮಾಡಬಹುದು? ಕಹಿ ಬಿತ್ತಿ ಸಿಹಿ ಪಡೆಯಲು ಸಾಧ್ಯವೇ? ಇನ್ನಾದರೂ ಸಂಬಂಧಪಟ್ಟವರು ಕ್ರಮ ಕೈಗೊಳ್ಳಲಿ. ಕಟ್ಟುನಿಟ್ಟಾಗಿ ಪರೀಕ್ಷೆ ನಡೆಸಿ, ಮಕ್ಕಳಲ್ಲಿ ನೈತಿಕತೆ ಮೂಡಿಸಲಿ.

ರವೀಂದ್ರ ಪಾಟೀಲ, ಬಾದಾಮಿ

ಆಸ್ಕರ್ ಪ್ರಶಸ್ತಿ ಎಂದಾಕ್ಷಣ...

ಬೆಂಗಳೂರು ಚಿತ್ರೋತ್ಸವದ ಬಗೆಗಿನ ವರದಿ (ಪ್ರ.ವಾ., ಮಾರ್ಚ್ 31) ಹಾಗೂ ವಿಮರ್ಶೆ (ಪ್ರ.ವಾ., ಏ. 2) ಓದಿದಾಗ ಪ್ರತಿಕ್ರಿಯೆ ಅನಿವಾರ್ಯ ಎನಿಸಿತು. ಒಟ್ಟಾರೆ ಅಭಿಪ್ರಾಯ ಬರೆದವರು ಮೂಲತಃ ಕಲೆಗಳ ವಿಮರ್ಶಕರು. ಅವರು ತಾವು ನೋಡಿದ ಚಿತ್ರಗಳನ್ನು ಆಧರಿಸಿ ಹಾಗೆ ಹೇಳಿದ್ದಾರೆ. ಇರಾನಿನ 'ನೋ ಎಂಡ್' ಅದೇ ದೇಶದ 'ನೋ ಬೇರ್ಸ್'ಗಿಂತ (ಜಾಫರ್ ಪನಾಹಿ ಬರೆದು, ನಿರ್ದೇಶಿಸಿ, ನಟಿಸಿದ್ದು) ಚೆನ್ನಾಗಿತ್ತು. ಮರಾಠಿಯ 'ವಾಳ್ವಿ' (ನಿ: ಪರೇಶ್ ಮೊಕಾಶಿ) ಪ್ರೇಕ್ಷಕರನ್ನು ಉದ್ದಕ್ಕೂ ನಗಿಸಿತು. 'ಗಾರ್ಗಿ'ಯಲ್ಲಿ (ತಮಿಳು) ಸಾಯಿಪಲ್ಲವಿ ವಿಭಿನ್ನ ಬಗೆಯ ಪಾತ್ರಗಳಲ್ಲಿ ಕಂಡುಬಂದು ಚಿತ್ರವೂ ಪರಿಣಾಮಕಾರಿ ಆಗಿತ್ತು. ಆಸ್ಕರ್ ಎಂದಾಕ್ಷಣ ಚಿತ್ರ ಅದ್ಭುತವಾಗಿರಬೇಕಿಲ್ಲ (ಎವ್ವೆರಿಥಿಂಗ್... ಒಂದು ಉದಾಹರಣೆ), ಆದರೆ ಅತ್ಯುತ್ತಮ ನಟ ಪ್ರಶಸ್ತಿ ಪಡೆದ ಬ್ರೆಂಡನ್ ಫ್ರೇಸರ್ ಇದ್ದ 'ದ ವ್ಹೇಲ್' ತೊಡಗಿಸಿಕೊಳ್ಳುವ ಚಿತ್ರ.

ಇನ್ನು ಸಂಘಟನೆ, ಚಿತ್ರಗಳ ಶಾರ್ಟ್ ಲಿಸ್ಟಿಂಗ್, ಪ್ರಶಸ್ತಿಗೆ ಆಯ್ಕೆ ಇವುಗಳಲ್ಲಿನ ಕೊರತೆಗಳಿಗೆ ಸುಲಭದ ಪರಿಹಾರ ಇಲ್ಲ. ಈ 'ಮೂಲವ್ಯಾಧಿ'ಗೆ ಕಾರಣ ಕೋರ್ ಕಮಿಟಿಯಲ್ಲಿ ವಾರ್ತಾ ವಿಭಾಗದ ಮೂವರು ಹಾಗೂ ಅದರದೇ ಅಂಗಸಂಸ್ಥೆಯಾದ ಕರ್ನಾಟಕ ಚಲನಚಿತ್ರ ಅಕಾಡೆಮಿಯ ಇಬ್ಬರು ಇರುವುದು. ಒಟ್ಟಾರೆ ಆರ್ಟಿಸ್ಟಿಕ್ ಡೈರೆಕ್ಟರ್ ಅವರ ಮಾತಿಗೆ ಕಡಿಮೆ ಬೆಲೆ. ಚುನಾವಣಾ ಆಯೋಗವು ಮತದಾನದ ದಿನಾಂಕ ನಿರ್ಧರಿಸಿದ್ದರಿಂದ ಚಿತ್ರೋತ್ಸವದ ಸಮಾರೋಪ ಸರಳವಾಗಿ ನಡೆದಿದೆ. ಇದು ಮಾರ್ಚ್ 22ರಂದೇ ಆಗಿದ್ದರೆ ಬಹಳಷ್ಟು ವೆಚ್ಚ ಉಳಿಯುತ್ತಿತ್ತು!

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಪರೀಕ್ಷೆ: ಗ್ರಾಮಗಳ ಮಧ್ಯೆ ಬೇಕು ಬಸ್ ಸೌಲಭ್ಯ

ಇದು ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಸಮಯ. ಅದಾಗಲೇ ಎರಡು ವಿಷಯಗಳ ಪರೀಕ್ಷೆಗಳು ಮುಗಿದಿವೆ. ಬಹುತೇಕ ಹಳ್ಳಿಗಳಿಂದ ಪಕ್ಕದ ದೊಡ್ಡ ಗ್ರಾಮ ಅಥವಾ ಪಟ್ಟಣಕ್ಕೆ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಗಳಿಗೆ ಹೋಗಬೇಕಾಗಿದೆ. ಈ ಸಮಯದಲ್ಲಿ ಹಳ್ಳಿಗಳಿಂದ ಪಟ್ಟಣ ಸೇರುವುದು ಸುಲಭವಾದ ಕಾರಣ ಸರ್ಕಾರಿ ಬಸ್ ಸೌಲಭ್ಯ ಇದ್ದೇ ಇರುತ್ತದೆ. ಇಲ್ಲವೇ ಒಂದಲ್ಲ ಒಂದು ವಾಹನ ಪಟ್ಟಣಕ್ಕೆ ಹೋಗುತ್ತಲೇ ಇರುತ್ತದೆ. ಸಮಸ್ಯೆ ಇರುವುದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ಹೋಗುವುದರಲ್ಲಿ. ಉದಾಹರಣೆಗೆ, ನನ್ನೂರು ಕುಂದಗೋಳ ತಾಲ್ಲೂಕಿನ ಯರಗುಪ್ಪಿ ಗ್ರಾಮ. ನನ್ನೂರು ಮತ್ತು ಪಕ್ಕದ ಮುಳ್ಳೊಳ್ಳಿ ಗ್ರಾಮದಿಂದಲೂ ಮಕ್ಕಳು ಪರೀಕ್ಷೆ ಬರೆಯಲು ಸುಮಾರು ಎಂಟು ಕಿಲೊಮೀಟರ್ ದೂರದ ರೊಟ್ಟಿಗವಾಡಕ್ಕೆ ಹೋಗಬೇಕಾಗಿದೆ. ಈ ಮಾರ್ಗ ಮಧ್ಯೆ ಯಾವುದೇ ಬಸ್ ಸೌಲಭ್ಯ ಇಲ್ಲ. ಬೈಕ್ ಅಥವಾ ಟೆಂಪೊ ವ್ಯವಸ್ಥೆ ಮಾಡಿಕೊಂಡೇ ಮಕ್ಕಳು ಹೋಗಬೇಕಾಗಿದೆ. ಇದು ಅತ್ಯಂತ ತ್ರಾಸದಾಯಕ.

ನಮ್ಮ ಹಳ್ಳಿಯಲ್ಲಿ ಬಹುತೇಕರು ಬೈಕ್ ಹೊಂದಿಲ್ಲ ಅಥವಾ ಟೆಂಪೊಗೆ ಹಣ ಪಾವತಿಸಿ ಹೋಗುವ ಮಟ್ಟಿಗೆ ಆರ್ಥಿಕವಾಗಿ ಸಬಲರಾಗಿಲ್ಲ. ಇಂಥ ಸಮಸ್ಯೆ ನಮ್ಮ ಊರಿಗೆ ಮಾತ್ರ ಸೀಮಿತವಲ್ಲ. ಅನೇಕ ಗ್ರಾಮಗಳು ಈ ಬಗೆಯ ತೊಂದರೆ ಎದುರಿಸುತ್ತಿವೆ. ಆದಕಾರಣ ಸಾರಿಗೆ ಇಲಾಖೆಯು ಉಳಿದ ಪರೀಕ್ಷೆಗಳಿಗೆ ಇದೂ ಸೇರಿದಂತೆ ಇಂತಹ ಕೆಲವು ಮಾರ್ಗಗಳ ಮಧ್ಯೆ ಬಸ್ ವ್ಯವಸ್ಥೆ ಕಲ್ಪಿಸಲು ಮುಂದಾಗಲಿ.

ಬಸನಗೌಡ ಮಂಜುನಾಥಗೌಡ ಪಾಟೀಲ, ಯರಗುಪ್ಪಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಡೊನಾಲ್ಡ್ ಟ್ರಂಪ್ ಬಂಧನದ ಸುತ್ತ

ಪ್ರಜಾವಾಣಿ ವಾರ್ತೆ

ಅಮೆರಿಕದ ಮಾಜಿ ಅಧ್ಯಕ್ಷ ಮತ್ತು ರಿಪಬ್ಲಿಕನ್ ಪಕ್ಷದ ನಾಯಕ ಡೊನಾಲ್ಡ್ ಟ್ರಂಪ್ ಅವರನ್ನು ಮಂಗಳವಾರವಷ್ಟೇ ಬಂಧಿಸಿ, ಬಿಡುಗಡೆ ಮಾಡಲಾಗಿದೆ. ಅಮೆರಿಕದ ನೀಲಿಚಿತ್ರ ತಾರೆ ಸ್ಟಾರ್ಮಿ ಡೇನಿಯಲ್ಸ್ ಅವರಿಗೆ 1.3 ಲಕ್ಷ ಡಾಲರ್ (ಅಂದಾಜು ₹1.06 ಕೋಟಿ) ಹಣ ವರ್ಗಾವಣೆ ಮಾಡಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಟ್ರಂಪ್ ಅವರು ಈ ಕ್ರಮವನ್ನು ಎದುರಿಸಿದ್ದಾರೆ. 2024ರಲ್ಲಿ ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಲಿದೆ. ಆ ಚುನಾವಣೆಯಲ್ಲಿ ಕಣಕ್ಕೆ ಇಳಿಯಲು ಟ್ರಂಪ್ ಸಿದ್ಧತೆ ನಡೆಸಿದ್ದಾರೆ. ಮಂಗಳವಾರದ ಬೆಳವಣಿಗೆ ಮುಂದಿನ ಚುನಾವಣೆಯನ್ನು ಪ್ರಭಾವಿಸಲಿದೆ ಎಂದು ರಾಜಕೀಯ ತಜ್ಞರು ವಿಶ್ಲೇಷಿಸಿದ್ದಾರೆ.

ಅಮೆರಿಕದ ಯಾವುದೇ ಅಧ್ಯಕ್ಷ ಅಥವಾ ಮಾಜಿ ಅಧ್ಯಕ್ಷ ಈವರೆಗೆ ಕ್ರಿಮಿನಲ್ ಅಪರಾಧ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿಲ್ಲ. ಅಂತಹ ಪ್ರಕರಣದಲ್ಲಿ ಮೊದಲು ಬಂಧಿಯಾಗಿದ್ದು ಡೊನಾಲ್ಡ್ ಟ್ರಂಪ್. ಟ್ರಂಪ್ ವಿರುದ್ಧ ಒಟ್ಟು 34 ಆರೋಪಗಳನ್ನು ಹೊರಿಸಲಾಗಿದೆ. ಟ್ರಂಪ್ ಅವರು ಈ ಎಲ್ಲಾ ಆರೋಪಗಳನ್ನು ನಿರಾಕರಿಸಿದ್ದಾರೆ. ಆದರೆ, ಈ ಪ್ರಕರಣದಲ್ಲಿ ಇನ್ನಷ್ಟೇ ವಿಚಾರಣೆ ಆರಂಭವಾಗಬೇಕಿದೆ. ವಿಚಾರಣೆಯು ಎರಡು ವರ್ಷಗಳವರೆಗೆ ಮುಂದುವರಿಯಬಹುದು ಎಂದು ಕಾನೂನು ತಜ್ಞರು ಅಂದಾಜಿಸಿದ್ದಾರೆ.

ಆದರೆ, ಈ ಎಲ್ಲಾ ಬೆಳವಣಿಗೆಯನ್ನು ರಾಜಕೀಯಕ್ಕೆ ಬಳಸಿಕೊಳ್ಳಲು ಟ್ರಂಪ್ ಮತ್ತು ರಿಪಬ್ಲಿಕನ್ ಪಕ್ಷದ ಬೆಂಬಲಿಗರು ಸಿದ್ಧತೆ ನಡೆಸಿದ್ದಾರೆ. ಟ್ರಂಪ್ ಅವರು ನ್ಯಾಯಾಲಯಕ್ಕೆ ಶರಣಾಗುವುದಕ್ಕೂ ಮುನ್ನವೇ, 'ನನ್ನನ್ನು ಅವರು ಬಂಧಿಸಲಿದ್ದಾರೆ' ಎಂದು ಟ್ವೀಟ್ ಮಾಡಿದ್ದರು. ಆನಂತರ ಅವರು ನ್ಯಾಯಾಲಯಕ್ಕೆ ಶರಣಾಗಿದ್ದರು. ಪೊಲೀಸ್ ಅಧಿಕಾರಿಗಳು ಅವರನ್ನು ನ್ಯಾಯಾಲಯದಲ್ಲಿಯೇ ಬಂಧಿಸಿ, ಕೆಲವೇ ನಿಮಿಷಗಳಲ್ಲಿ ಬಿಡುಗಡೆ ಮಾಡಿದ್ದರು.

ನ್ಯಾಯಾಲಯದಿಂದ ಹೊರಬಂದ ತಕ್ಷಣವೇ ತಮ್ಮ ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡಿದ್ದ ಟ್ರಂಪ್, 'ಎಡಪಂಥೀಯ ಡೆಮಾಕ್ರಟಿಕ್‌ಗಳು ದೇಶದ ಕಾನೂನು ಮತ್ತು ಪ್ರಜಾಪ್ರಭುತ್ವವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ' ಎಂದು ಆರೋಪಿಸಿದ್ದರು. ಅದರ ಬೆನ್ನಲ್ಲೇ ಟ್ರಂಪ್ ಬೆಂಬಲಿಗರು, ಟ್ರಂಪ್ ಪರವಾಗಿ ಪ್ರತಿಭಟನೆ ನಡೆಸಿದರು. 2016ರಲ್ಲಿ ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದಾಗ ಟ್ರಂಪ್ ಆರಂಭಿಸಿದ್ದ 'ಮೇಕ್ ಅಮೆರಿಕ ಗ್ರೇಟ್ ಅಗೈನ್' ಚಳವಳಿಯನ್ನು, ಟ್ರಂಪ್ ಬೆಂಬಲಿಗರು ಈಗ ಮತ್ತೆ ಆರಂಭಿಸಿದ್ದಾರೆ. ಟ್ರಂಪ್ ಸಹ ಈ ಚಳವಳಿಗೆ ಬೆಂಬಲ ಸೂಚಿಸಿದ್ದಾರೆ. ಈ ಎಲ್ಲಾ ಪ್ರಕರಣಗಳಲ್ಲಿ ಟ್ರಂಪ್ ಅವರ ಕಾನೂನು ಹೋರಾಟದ ವೆಚ್ಚವನ್ನು ಅವರ ಬೆಂಬಲಿಗರೇ ದೇಣಿಗೆ ನೀಡಿ ಭರಿಸಿದ್ದಾರೆ.

ಡೆಮಾಕ್ರಟಿಕ್ ಪಕ್ಷದ ಕಾರ್ಯಕರ್ತರೂ ಟ್ರಂಪ್ ವಿರುದ್ಧದ ಹೋರಾಟಕ್ಕೆ ಈಗಾಗಲೇ ಧುಮುಕಿದ್ದಾರೆ. ಮ್ಯಾನ್‌ಹಟನ್ ಜಿಲ್ಲಾ ನ್ಯಾಯಾಲಯಕ್ಕೆ ಟ್ರಂಪ್ ಬರುವಾಗ ದಾರಿಯುದ್ದಕ್ಕೂ ಡೆಮಾಕ್ರಟಿಕ್ ಪಕ್ಷದ ಕಾರ್ಯಕರ್ತರು ಮತ್ತು ಬೆಂಬಲಿಗರು ಪ್ರತಿಭಟನೆ ನಡೆಸಿದರು. 'ಟ್ರಂಪ್‌ನನ್ನು ಬಂಧಿಸಿ' ಎಂದು ಘೋಷಣೆ ಕೂಗಿದ್ದರು. ಟ್ರಂಪ್ ನ್ಯಾಯಾಲಯದಿಂದ ಹೊರಬಂದ ನಂತರವೂ ಈ ಪ್ರತಿಭಟನೆ ಮುಂದುವರಿದಿತ್ತು. ಹೀಗಾಗಿ ಮುಂದಿನ ಅಧ್ಯಕ್ಷೀಯ ಚುನಾವಣೆಯಲ್ಲಿ ಟ್ರಂಪ್ ಬಂಧನ ವಿಚಾರವು ಒಂದು ದೊಡ್ಡ ವಿಷಯವಾಗಲಿದೆ ಎಂದು ತಜ್ಞರು ಅಂದಾಜಿಸಿದ್ದಾರೆ.

ಡೊನಾಲ್ಡ್ ಟ್ರಂಪ್ ಬಂಧನಕ್ಕೆ ಆಗ್ರಹಿಸಿ ಡೆಮಾಕ್ರಟಿಕ್ ಪಕ್ಷದ ಬೆಂಬಲಿಗರು ನ್ಯೂಯಾರ್ಕ್‌ನಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದ್ದರು —ಎಎಫ್‌ಪಿ ಚಿತ್ರ

ಪ್ರಕರಣವೇನು?

ನೀಲಿಚಿತ್ರ ತಾರೆಯೊಂದಿಗೆ ಟ್ರಂಪ್ ತಾವು ಹೊಂದಿದ್ದ ದೈಹಿಕ ಸಂಬಂಧದ ವಿಚಾರವನ್ನು ಮುಚ್ಚಿಡಲು ಹಣ ನೀಡಿದ್ದರು ಮತ್ತು ಆ ನೀಲಿ ಚಿತ್ರತಾರೆಗೆ ಬೆದರಿಕೆ ಒಡ್ಡಲಾಗಿತ್ತು ಎಂಬುದು ಪ್ರಕರಣದಲ್ಲಿನ ಪ್ರಾಥಮಿಕ ಆರೋಪ. ಸ್ವತಃ ನೀಲಿಚಿತ್ರತಾರೆ ಡೇನಿಯಲ್ಸ್ ಈ ಬಗ್ಗೆ ದೂರು ದಾಖಲಿಸಿದ್ದರು. ಆದರೆ ಈಗ ಟ್ರಂಪ್ ಅವರನ್ನು ಬಂಧಿಸಿದ್ದು ಈ ಆರೋಪಗಳ ಅಡಿಯಲ್ಲಿ ಅಲ್ಲ. ಈ ಆರೋಪಗಳಿಗೆ ಸಂಬಂಧಿಸಿದ ಪೂರಕ ಆರೋಪಗಳ ಅಡಿಯಲ್ಲಿ.

'2006ರಲ್ಲಿ ಟ್ರಂಪ್ ಮತ್ತು ನನ್ನ ಮಧ್ಯೆ ದೈಹಿಕ ಸಂಪರ್ಕ ನಡೆದಿತ್ತು' ಎಂದು ಸ್ಟಾರ್ಮಿ ಡೇನಿಯಲ್ಸ್ 2011ರಲ್ಲಿ ಆರೋಪಿಸಿದ್ದರು. ಟಚ್ ನಿಯತಕಾಲಿಕೆಗೆ ನೀಡಿದ್ದ ಸಂದರ್ಶನದಲ್ಲಿ ಡೇನಿಯಲ್ಸ್ ಈ ವಿಷಯವನ್ನು ಬಹಿರಂಗಪಡಿಸಿದ್ದರು. ಈ ಆರೋಪವನ್ನು ಟ್ರಂಪ್ ನಿರಾಕರಿಸಿದ್ದರು. ಆನಂತರ ಹಲವು ವರ್ಷಗಳವರೆಗೆ ಈ ವಿಚಾರ ಚರ್ಚೆಗೆ ಬಂದಿರಲೇ ಇಲ್ಲ. ಆದರೆ, 2016ರ ಅಧ್ಯಕ್ಷೀಯ ಚುನಾವಣೆಗೆ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಯಾಗಲು ಟ್ರಂಪ್ ಉಮೇದುವಾರಿಕೆ ತೋರಿದ್ದರು. ಅದೇ ಸಂದರ್ಭದಲ್ಲಿ ಸ್ಟಾರ್ಮಿ ಡೇನಿಯಲ್ಸ್, 'ಟ್ರಂಪ್ ನನ್ನೊಂದಿಗೆ ದೈಹಿಕ ಸಂಬಂಧ ಹೊಂದಿದ್ದ ವಿಚಾರವನ್ನು ಬಹಿರಂಗಪಡಿಸದೇ ಇರಲು ನನಗೆ ಪರಿಹಾರ ಹಣ ನೀಡಲಾಗಿತ್ತು. ಟ್ರಂಪ್ ಅವರ ವಕೀಲ ಮೈಕಲ್ ಚೋಹೆನ್ ಹಣ ನೀಡಿದ್ದರು. ಆ ವಿಚಾರವನ್ನು ಬಹಿರಂಗಪಡಿಸದೇ ಇರಲು ಕಾನೂನು ಕ್ರಮ ಮತ್ತು ದೈಹಿಕ ಹಿಂಸಾಚಾರದ ಬೆದರಿಕೆ ಒಡ್ಡಲಾಗಿತ್ತು. ಅಪರಿಚಿತ ವ್ಯಕ್ತಿಯೊಬ್ಬ ಆ ಬೆದರಿಕೆ ಒಡ್ಡಿದ್ದ' ಎಂದು ಆರೋಪಿಸಿದ್ದರು. ಈ ಸಂಬಂಧ ದೂರೂ ದಾಖಲಾಗಿತ್ತು.

ಅಷ್ಟರಲ್ಲೇ ಮೈಕಲ್ ಚೋಹೆನ್, ಡೇನಿಯಲ್ಸ್ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು. ಡೇನಿಯಲ್ಸ್ ಸಹ ಚೋಹೆನ್ ಮತ್ತು ಟ್ರಂಪ್ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು. ಈ ಮೊಕದ್ದಮೆಗಳ ವಿಚಾರಣೆ ವೇಳೆ ಟ್ರಂಪ್ ಅವರಿಂದ, ಚೋಹೆನ್ ಮೂಲಕ ಡೇನಿಯಲ್ಸ್‌ಗೆ 1.3 ಲಕ್ಷ ಡಾಲರ್ ಪಾವತಿಯಾಗಿರುವುದು ಸಾಬೀತಾಯಿತು. ಮಾನಹಾನಿ ಪ್ರಕರಣಗಳಲ್ಲಿ ಡೇನಿಯಲ್ಸ್‌ಗೆ ಸೋಲಾದರೂ, ಪರಿಹಾರ ಮೊತ್ತ ಪಾವತಿಯಲ್ಲಿನ ಅಕ್ರಮದ ಕಾರಣಕ್ಕೆ ಟ್ರಂಪ್ ವಿರುದ್ಧ ಹೊಸ ಪ್ರಕರಣ ದಾಖಲಾಯಿತು.

ಅಮೆರಿಕದಲ್ಲಿ ವಿವಾಹೇತರ ದೈಹಿಕ ಸಂಪರ್ಕ ಹೊಂದುವುದು ಮತ್ತು ಅಂತಹ ವಿಚಾರಗಳನ್ನು ಮುಚ್ಚಿಡಲು 'ಪರಿಹಾರ ಹಣ' ನೀಡುವುದು ಕಾನೂನು ಬಾಹಿರವಲ್ಲ. ನಾನ್ ಡಿಸ್ಕ್ಲೋಸರ್ ಅಗ್ರಿಮೆಂಟ್–ಎನ್‌ಡಿಎ ಕಾಯ್ದೆಯ ಅಡಿಯಲ್ಲಿ, ಇಬ್ಬರು ವ್ಯಕ್ತಿಗಳು ಅಥವಾ ಎರಡು ಸಂಸ್ಥೆಗಳು ಅಥವಾ ವ್ಯಕ್ತಿ–ಸಂಸ್ಥೆ ಇಂತಹ ಒಪ್ಪಂದ ಮಾಡಿಕೊಳ್ಳಬಹುದು. ಒಪ್ಪಂದದ ಅನ್ವಯ ಪರಿಹಾರ ಹಣವನ್ನು ನೀಡಬಹುದು. ಒಪ್ಪಂದವನ್ನು ಉಲ್ಲಂಘಿಸುವವರು, ಒಪ್ಪಂದದ ಷರತ್ತುಗಳ ಅನ್ವಯ ದಂಡ ತೆರಬೇಕಾಗುತ್ತದೆ. ಹೀಗಾಗಿ ಈ ಯಾವ ವಿಷಯದಲ್ಲೂ ಟ್ರಂಪ್ ವಿರುದ್ಧ ಪ್ರಕರಣ ದಾಖಲಾಗಿಲ್ಲ.

ಡೇನಿಯಲ್ಸ್‌ಗೆ ನೀಡಿದ ಹಣವನ್ನು ಚೋಹೆನ್ ತಮ್ಮ ಲೆಕ್ಕಪತ್ರದಲ್ಲಿ 'ಎನ್‌ಡಿಎ ಪರಿಹಾರ ಹಣ' ಎಂದು ನಮೂದಿಸಿದ್ದರು. ಆ ಹಣವು ಚೋಹೆನ್‌ಗೆ ಟ್ರಂಪ್ ಅವರಿಂದ ಮರುಪಾವತಿಯೂ ಆಗಿತ್ತು. ಟ್ರಂಪ್ ಅವರಿಂದ ಬಂದ ಹಣವನ್ನು ಚೋಹೆನ್ ತಮ್ಮ ಲೆಕ್ಕಪತ್ರದಲ್ಲಿ 'ಕಾನೂನು ವೆಚ್ಚ' ಎಂದು ನಮೂದಿಸಿದ್ದರು. ಟ್ರಂಪ್ ಅವರ ಲೆಕ್ಕಪತ್ರದಲ್ಲೂ ಈ ಹಣವನ್ನು 'ಕಾನೂನು ವೆಚ್ಚ' ಎಂದೇ ನಮೂದಿಸಲಾಗಿತ್ತು.

ಕಾನೂನಿನ ಪ್ರಕಾರ ಚೋಹೆನ್ ಮತ್ತು ಟ್ರಂಪ್ ಅವರ ನಡುವಣ ಹಣ ವರ್ಗಾವಣೆಯನ್ನು 'ಎನ್‌ಡಿಎ ಪರಿಹಾರ ಹಣ' ಎಂದೇ ನಮೂದಿಸಬೇಕಿತ್ತು. ಹಾಗೆ ನಮೂದಿಸಿದ್ದಿದ್ದರೆ ಟ್ರಂಪ್ ವಿರುದ್ಧ ಪ್ರಕರಣ ದಾಖಲಾಗುತ್ತಲೇ ಇರಲಿಲ್ಲ. ಹಾಗೆ ನಮೂದಿಸಿದೇ ಕಾನೂನು ವೆಚ್ಚ ಎಂದು ನಮೂದಿಸಿದ ಕಾರಣ, ಇದು ಹಣದ ಅಕ್ರಮ ವರ್ಗಾವಣೆ ಎಂದು ಪ್ರಕರಣ ದಾಖಲಿಸಲಾಯಿತು. ಚೋಹೆನ್ ವಿರುದ್ಧದ ಪ್ರಕರಣದಲ್ಲಿ ಆತನಿಗೆ ಶಿಕ್ಷೆಯಾಯಿತು. ಟ್ರಂಪ್ ವಿರುದ್ಧದ ಪ್ರಕರಣದಲ್ಲಿ ಈಗಷ್ಟೇ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ.

ತನಿಖೆ ವೇಳೆ, ಟ್ರಂಪ್ ಅವರಿಂದ ಈ ಹಿಂದೆಯೂ ಹಲವು ಬಾರಿ ಹೀಗೆ ಅಕ್ರಮವಾಗಿ ಹಣ ವರ್ಗಾವಣೆಯಾಗಿರುವುದು ಪತ್ತೆಯಾಗಿತ್ತು. ಈ ಸಂಬಂಧ ಒಟ್ಟು 34 ದೋಷಾರೋಪಗಳನ್ನು ಟ್ರಂಪ್ ವಿರುದ್ಧ ಹೊರಿಸಲಾಗಿದೆ. ಡೇನಿಯಲ್ಸ್‌ಗೆ ನೀಡಿದ್ದ ಹಣವನ್ನು ಟ್ರಂಪ್ ಅವರ ಚುನಾವಣಾ ಪ್ರಚಾರ ನಿಧಿಯಿಂದ ಒದಗಿಸಲಾಗಿದೆ ಎಂಬುದೂ ಈ ಆರೋಪಗಳಲ್ಲಿ ಒಂದು. ತನಿಖಾಧಿಕಾರಿಗಳ ಈ ಆರೋಪಗಳ ಸತ್ಯಾಸತ್ಯತೆಯನ್ನು ನ್ಯಾಯಾಲಯವು ಇನ್ನಷ್ಟೇ ಪರಿಶೀಲಿಸಬೇಕಿದೆ.

ಕಣಕ್ಕಿಳಿಯಲು ಅಡ್ಡಿಯಿಲ್ಲ

ಡೊನಾಲ್ಡ್ ಟ್ರಂಪ್ ಅವರು 2024ರ ಅಮೆರಿಕ ಅಧ್ಯಕ್ಷೀಯ ಚುನಾವಣೆಗೆ ಬಿರುಸಿನ ತಯಾರಿ ನಡೆಸುತ್ತಿದ್ದ ಹೊತ್ತಿನಲ್ಲೇ ಅವರ ಮೇಲಿನ ಆರೋಪಗಳು ಅವರ ಸ್ಪರ್ಧೆಯ ಮೇಲೆ ಕರಿಛಾಯೆ ಮೂಡಿಸಿವೆ. ಚುನಾವಣೆಗೆ ಸ್ಪರ್ಧಿಸುವುದನ್ನು ತಡೆಯಲು ತಮ್ಮ ವಿರುದ್ಧ ರಾಜಕೀಯ ಷಡ್ಯಂತ್ರ ಮಾಡಲಾಗಿದೆ ಎಂದು ಟ್ರಂಪ್ ಅವರು ನೇರವಾಗಿ ಆರೋಪಿಸಿದ್ದಾರೆ.

ಟ್ರಂಪ್ ಅವರ ವಿರುದ್ಧ ದಾಖಲಾಗಿರುವ ಈ ಪ್ರಕರಣದ ಕಾರಣಕ್ಕೆ ಅವರನ್ನು ಅಧ್ಯಕ್ಷೀಯ ಚುನಾವಣೆಯಿಂದ ಹೊರಗಿಡಲು ಆಗುವುದಿಲ್ಲ. ಈ ಸ್ವರೂಪದ ಪ್ರಕರಣಗಳು ದಾಖಲಾದ ವ್ಯಕ್ತಿಗಳು ಅಧ್ಯಕ್ಷೀಯ ಚುನಾವಣೆಗೆ ಸ್ಪರ್ಧಿಸುವಂತಿಲ್ಲ ಎಂದು ಕಾನೂನುಗಳು ಹೇಳುವುದಿಲ್ಲ. ಅಧ್ಯಕ್ಷೀಯ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿ ಮೂರು ಅಂಶಗಳನ್ನು ಪೂರೈಸಿದ್ದರೆ ಸಾಕು ಎಂದು ಅಮೆರಿಕದ ಸಂವಿಧಾನ ಹೇಳುತ್ತದೆ. ಅಮೆರಿಕದಲ್ಲಿ ಜನಿಸಿರಬೇಕು. 15 ವರ್ಷಗಳಿಂದ ಅಮೆರಿಕದಲ್ಲಿ ವಾಸವಾಗಿರಬೇಕು ಮತ್ತು 35 ವರ್ಷ ವಯಸ್ಸಾಗಿರಬೇಕು. ಈ ಮೂರು ಅರ್ಹತೆಗಳಿದ್ದರೆ ಸಾಕು ಚುನಾವಣಾ ಕಣಕ್ಕೆ ಇಳಿಯಬಹುದು. ದೋಷಾರೋಪ ಹೊಂದಿದ್ದರೂ ಅಥವಾ ಜೈಲಿನಲ್ಲಿದ್ದರೂ ಅವರು ಸ್ಪರ್ಧೆ ಮಾಡಲು ಸಾಧ್ಯವಿದೆ.

ಜೈಲು ಶಿಕ್ಷೆ ಆಗುತ್ತದೆಯೇ?

2016ರ ಚುನಾವಣೆಗೆ ಸಂಬಂಧಪಟ್ಟಂತೆ ಟ್ರಂಪ್ ವಿರುದ್ಧ 34 ರೀತಿಯ ಆರೋಪಗಳನ್ನು ಹೊರಿಸಲಾಗಿದೆ. ಆದರೆ ಅವರ ವಿರುದ್ಧ ಮಾಡಲಾಗಿರುವ ಹೆಚ್ಚಿನ ಆರೋಪಗಳು ಗಂಭೀರ ಸ್ವರೂಪದವುಗಳಲ್ಲ ಎಂದು ತಜ್ಞರು ಹೇಳಿದ್ದಾರೆ. ಟ್ರಂಪ್ ಅವರ ವಿರುದ್ಧದ ಪ್ರಕರಣಗಳು ಅಪರಾಧಗಳೇ ಆಗಿದ್ದರೂ, ಅವು ಹಿಂಸಾತ್ಮಕ ಸ್ವರೂಪದವುಗಳಲ್ಲ. ಅವುಗಳ ಸ್ವರೂಪ ಗಂಭೀರವಾದುದಲ್ಲ. ಹೀಗಾಗಿ ಇವು ದೊಡ್ಡ ಮಟ್ಟದ ಶಿಕ್ಷೆಗೆ ಅರ್ಹವಾದ ಪ್ರಕರಣಗಳಲ್ಲ ಎಂದು ತಜ್ಞರು ಹೇಳುತ್ತಾರೆ.

ಕಾನೂನಿನ ಪ್ರಕಾರ, ಈ ರೀತಿಯ ಆರೋಪಗಳು ಸಾಬೀತಾದವರಿಗೆ ಕನಿಷ್ಠ ಒಂದು ವರ್ಷದಿಂದ ಗರಿಷ್ಠ ನಾಲ್ಕು ವರ್ಷಗಳ ವರೆಗೆ ಜೈಲು ಶಿಕ್ಷೆ ವಿಧಿಸಬಹುದಾಗಿದೆ. ಅಥವಾ ಜೈಲು ಶಿಕ್ಷೆಯನ್ನು ನೀಡಲೇಬೇಕು ಎಂದೇನೂ ಇಲ್ಲ. ದಂಡ ಪಾವತಿಯ ಬಳಿಕ ಅವರನ್ನು ಬಿಡುಗಡೆ ಮಾಡಲು ಸ್ಥಳೀಯ ಕಾನೂನಿನಲ್ಲಿ ಅವಕಾಶವಿದೆ. ಟ್ರಂಪ್ ಅವರ ವಿರುದ್ಧದ ಪ್ರಕರಣದ ವಿಚಾರಣೆ ಇನ್ನಷ್ಟೇ ಆರಂಭವಾಗಬೇಕಿದೆ. ಸರ್ಕಾರಿ ವಕೀಲರು ತಾವು ಮಾಡಿರುವ ಆರೋಪಗಳಿಗೆ ಸಾಕ್ಷ್ಯಗಳನ್ನು ಒದಗಿಸಬೇಕಿದೆ. ಟ್ರಂಪ್ ಪರ ವಕೀಲರು ಈ ಸಾಕ್ಷ್ಯಗಳು ಸುಳ್ಳು ಎಂದು ಸಾಬೀತುಪಡಿಸಬೇಕಿದೆ. ಈ ಎಲ್ಲ ವಾದ ಪ್ರತಿವಾದಿಗಳ ಪ್ರಕ್ರಿಯೆ ನಡೆಯಲು ವರ್ಷಗಳೇ ಬೇಕಾಗಬಹುದು. ಅಲ್ಲಿವರೆಗೂ ಟ್ರಂಪ್ ಅವರು ತಮ್ಮ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಯಾವುದೇ ಅಡ್ಡಿ ಇರದು ಎನ್ನುತ್ತಾರೆ ತಜ್ಞರು.

ಟ್ರಂಪ್‌ಗೆ ಪರ್ಯಾಯ ಯಾರು?

2016ರಲ್ಲಿ ಅಮೆರಿಕ ಅಧ್ಯಕ್ಷರಾಗಿ ಮೊದಲ ಬಾರಿಗೆ ಆಯ್ಕೆಯಾಗಿದ್ದರು. 2024ರಲ್ಲಿ ಮರು ಆಯ್ಕೆ ಬಯಸಿದ್ದಾರೆ. ಆದರೆ ಅವರು ನ್ಯಾಯಾಲಯಕ್ಕೆ ಹೋಗಿ ಬರುತ್ತಿದ್ದಂತೆಯೇ ರಿಪಬ್ಲಿಕನ್ ಪಕ್ಷದ ಅಧ್ಯಕ್ಷೀಯ ಚುನಾವಣಾ ಆಕಾಂಕ್ಷಿಗಳಲ್ಲಿ ಉತ್ಸಾಹ ಇಮ್ಮಡಿಗೊಂಡಿದೆ.
ಟ್ರಂಪ್ ಅವರಿಗೆ ಅಧ್ಯಕ್ಷೀಯ ಚುನಾವಣಾ ಕಣಕ್ಕೆ ಇಳಿಯುತ್ತಾರೆಯೇ ಅಥವಾ ಕಣದಿಂದ ಹಿಂದೆ ಸರಿಯುತ್ತಾರೆಯೇ ಎಂಬ ಚರ್ಚೆಗಳು ಬಿರುಸು ಪಡೆದಿವೆ. ರಿಪಬ್ಲಿಕನ್ ಪಕ್ಷದ ಕೆಲವು ನಾಯಕರು ಈಗಾಗಲೇ ತಮ್ಮ ಹೆಸರನ್ನು ಘೋಷಿಸಿಕೊಂಡಿದ್ದಾರೆ.

ಇಂತಹ ನಾಯಕರ ಪೈಕಿ ಭಾರತ ಮೂಲದ ಅಮೆರಿಕ ಸಂಜಾತೆ ನಿಕ್ಕಿ ಹ್ಯಾಲೆ ಪ್ರಮುಖರು. ಭಾರತ ಮೂಲದ ಮತ್ತೊಬ್ಬ ನಾಯಕ ವಿವೇಕ್ ರಾಮಸ್ವಾಮಿ ಅವರು ತಮ್ಮ ಉಮೇದುವಾರಿಕೆ ಪ್ರಕಟಿಸಿದ್ದಾರೆ. ಫ್ಲಾರಿಡಾದ ಗವರ್ನರ್ ಆಗಿರುವ ರಾನ್ ಡೆಸಾಂಟಿಸ್ ಅವರು ಮತ್ತೊಬ್ಬ ಪ್ರಬಲ ಆಕಾಂಕ್ಷಿಯಾಗಿದ್ದಾರೆ. ಇವರು ಟ್ರಂಪ್‌ಗೆ ನೇರ ಸ್ಪರ್ಧೆ ಒಡ್ಡಲಿದ್ದಾರೆ ಎಂದೇ ಚರ್ಚೆಯಾಗುತ್ತಿದೆ. ಟ್ರಂಪ್ ಅವರ ಸರ್ಕಾರದ ಅವಧಿಯಲ್ಲಿ ಅಮೆರಿಕದ ಉಪಾಧ್ಯಕ್ಷರಾಗಿ ಕೆಲಸ ಮಾಡಿದ್ದ ಮೈಕ್ ಪೆನ್ಸ್ ಅವರೂ ಅಧ್ಯಕ್ಷೀಯ ಚುನಾವಣೆಗೆ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ.

ಆಧಾರ: ನ್ಯೂಯಾರ್ಕ್ ಟೈಮ್ಸ್ ವರದಿ, ಬಿಬಿಸಿ

ಸಿನಿ ಬಿಟ್ಸ್

ರಶ್ಮಿಕಾ ಬರ್ತ್‌ಡೇ; ಹೊಸ ಪೋಸ್ಟರ್

'ಕಿರಿಕ್ ಪಾರ್ಟಿ' ಸಿನಿಮಾ ಮೂಲಕ ಬಣ್ಣದ ಲೋಕ ಪ್ರವೇಶಿಸಿದ್ದ ರಶ್ಮಿಕಾ ಮಂದಣ್ಣ, ಬುಧವಾರ 27ನೇ ಹುಟ್ಟುಹಬ್ಬ ಆಚರಿಸಿಕೊಂಡರು. ಸದ್ಯ ತಮಿಳು, ತೆಲುಗು, ಬಾಲಿವುಡ್‌ನಲ್ಲಿ ಬ್ಯುಸಿಯಾಗಿರುವ ಅವರ ಕೈಯಲ್ಲಿ ಸಾಕಷ್ಟು ಸಿನಿಮಾಗಳಿವೆ. ತೆಲುಗಿನ 'ಭೀಷ್ಮ' ಸಿನಿಮಾ ಮೂಲಕ ಪ್ರೇಕ್ಷಕರನ್ನು ರಂಜಿಸಿದ್ದ ನಟ ನಿತಿನ್ ಹಾಗೂ ರಶ್ಮಿಕಾ ಮಂದಣ್ಣ '#ವಿಎನ್‌ಆರ್‌ಟ್ರಯೊ' ಸಿನಿಮಾ ಮೂಲಕ ಮತ್ತೆ ಒಂದಾಗುತ್ತಿದ್ದಾರೆ. ರಶ್ಮಿಕಾ ಹುಟ್ಟುಹಬ್ಬದ ಪ್ರಯುಕ್ತ ಚಿತ್ರತಂಡ ಚಿತ್ರದ ಹೊಸ ಪೋಸ್ಟರ್ ಬಿಡುಗಡೆಗೊಳಿಸಿದೆ.

'ಭೀಷ್ಮ' ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದ ವೆಂಕಿ ಕುಡುಮುಲ ಮತ್ತೊಮ್ಮೆ ಈ ಜೋಡಿಗೆ ನಿರ್ದೇಶನ ಮಾಡುತ್ತಿದ್ದು, ದಕ್ಷಿಣ ಭಾರತದ ಪ್ರತಿಷ್ಠಿತ ನಿರ್ಮಾಣ ಸಂಸ್ಥೆ ಮೈತ್ರಿ ಮೂವಿ ಮೇಕರ್ಸ್ ಬಂಡವಾಳ ಹೂಡಿದೆ. ಪೋಸ್ಟರ್‌ನಲ್ಲಿ ರಶ್ಮಿಕಾ ಗ್ಲಾಮರ್ ಲುಕ್‌ನಲ್ಲಿದ್ದಾರೆ. ನಟ ಕಿರೀಟ ರಾಜೇಂದ್ರ ಪ್ರಸಾದ್ ಹಾಗೂ ವೆನ್ನೆಲ ಕಿಶೋರ್ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದು, ಜಿ.ವಿ. ಪ್ರಕಾಶ್ ಕುಮಾರ್ ಸಂಗೀತ, ಸಾಯಿ ಶ್ರೀರಾಮ್ ಛಾಯಾಗ್ರಹಣ ಚಿತ್ರಕ್ಕಿದೆ.

ಇತ್ತೀಚೆಗಷ್ಟೆ ತಮಿಳು ನಟ ವಿಜಯ್ ಜತೆ ರಶ್ಮಿಕಾ ಅಭಿನಯಿಸಿದ್ದ 'ವಾರಿಸು' ಚಿತ್ರ ತೆರೆಕಂಡಿತ್ತು. ರಶ್ಮಿಕಾ ಪಾಲಿಗೆ 2022–23 ಅದೃಷ್ಟದ ವರ್ಷ. ಅಲ್ಲು ಅರ್ಜುನ್ ಜತೆ 'ಪುಷ್ಪ', ಬಾಲಿವುಡ್ ನಟ ಸಿದ್ಧಾರ್ಥ್ ಜತೆ 'ಮಿಷನ್ ಮಜ್ನು', ದುಲ್ಕರ್ ಸಲ್ಮಾನ್ ಜತೆ 'ಸೀತಾರಾಮಂ', ಅಮಿತಾಭ್ ಬಚ್ಚನ್ ಜತೆ 'ಗುಡ್‌ಬೈ' ಮೊದಲಾದ ದೊಡ್ಡ ಸಿನಿಮಾಗಳಲ್ಲಿ ರಶ್ಮಿಕಾ ಕಾಣಿಸಿಕೊಂಡಿದ್ದಾರೆ. 'ಪುಷ್ಪ-2', ರಣಬೀರ್ ಕಪೂರ್ ಜತೆ 'ಅನಿಮಲ್' ಚಿತ್ರಗಳಲ್ಲಿ ನಟಿಸುತ್ತಿದ್ದು, ಈ ವರ್ಷ ತೆರೆ ಕಾಣಲಿವೆ. ರಶ್ಮಿಕಾ ಹುಟ್ಟುಹಬ್ಬದ ಪ್ರಯುಕ್ತ ಅಭಿಮಾನಿಗಳು ವಿಶೇಷ ವಿಡಿಯೊ ಬಿಡುಗಡೆ ಮಾಡಿ ಪ್ರೀತಿಯಿಂದ ಶುಭಾಶಯ ಕೋರಿದ್ದಾರೆ.

ರಶ್ಮಿಕಾ ಅವರನ್ನು ಚಿತ್ರರಂಗಕ್ಕೆ ಪರಿಚಯಿಸಿದ ನಟ ರಕ್ಷಿತ್ ಶೆಟ್ಟಿ ಕೂಡ ತಮ್ಮ ಪರಂವಃ ಸ್ಟುಡಿಯೋಸ್ ಮೂಲಕ ಕೂಡ ರಶ್ಮಿಕಾ ಹುಟ್ಟುಹಬ್ಬಕ್ಕೆ ಶುಭಕೋರಿದ್ದಾರೆ. ❖

ರಶ್ಮಿಕಾ ಮಂದಣ್ಣ

'ಬಾ ನಲ್ಲೆ ಮದುವೆಗೆ' ಬಂತು ಟೀಸರ್

ಹೊಸಬರೇ ಸೇರಿಕೊಂಡು ಸಿದ್ಧಪಡಿಸಿರುವ 'ಬಾ ನಲ್ಲೆ ಮದುವೆಗೆ'ಚಿತ್ರದ ಟೀಸರ್ ಮತ್ತು ಐದು ಹಾಡುಗಳು ಬಿಡುಗಡೆಗೊಂಡಿವೆ. 'ಹುಡುಗಿ ನೋಡಿ ಹುಚ್ಚರಾಗಬೇಡಿ'ಎಂಬ ಅಡಿಬರಹ ಚಿತ್ರಕ್ಕಿದ್ದು, ಪ್ರೀತಿಯ ಕಥೆ ಹೇಳುವ ಚಿತ್ರವಿದು ಎಂದು ಚಿತ್ರತಂಡ ಹೇಳಿದೆ.

ಚಾಮರಾಜನಗರದ ಎಂ.ಯೋಗೇಶ್ ನಂದನ್ ಚಿತ್ರವನ್ನು ನಿರ್ದೇಶಿಸಿ, ನಿರ್ಮಾಣ ಮಾಡಿದ್ದಾರೆ. 'ಅತಿಯಾದ ಪ್ರೀತಿ ಇಬ್ಬರಿಂದ ಆದರೆ ಅದು ಮುಳುವಾಗುತ್ತದೆ. ಅದರಂತೆ ಕಷ್ಟಗಳು ಎದುರಾಗಿ, ಕುಟುಂಬದ ಕಡೆಯಿಂದಲೂ ಆಕ್ಷೇಪಗಳು ಬರುತ್ತದೆ. ಇದರಿಂದ ತೊಂದರೆ ಅನುಭವಿಸಬೇಕಾಗುತ್ತದೆ. ಸಂಬಂಧಿಕರ ಮಾತು ಮೀರಿ ನಾಯಕಿ ತೆಗೆದುಕೊಂಡ ನಿರ್ಧಾರದಿಂದ, ನಾಯಕ ಯಾವ ರೀತಿ ಕಷ್ಟಪಡುತ್ತಾನೆ ಎಂಬುದನ್ನು ಚಿತ್ರದಲ್ಲಿ ವಿವರಿಸಲಾಗಿದೆ' ಎಂದು ನಿರ್ದೇಶಕರು ಹೇಳಿದ್ದಾರೆ.

ನಾಯಕ ಅರ್ಜುನ್ ಚಿತ್ರದಲ್ಲಿ ಹಳ್ಳಿ ಹುಡುಗ. ನಾಯಕಿ ಶೋಭಾ ಮುಗ್ಧೆ ಪಾತ್ರ ನಿಭಾಯಿಸಿದ್ದಾರೆ. ದಿನೇಶ್‌ಕುಮಾರ್ ಸಂಗೀತ ಸಂಯೋಜಿಸಿದ್ದಾರೆ. ಛಾಯಾಗ್ರಹಣ ಪ್ರಸನ್ನಕುಮಾರ್ ಅವರದ್ದು. ಚಾಮರಾಜನಗರದ ಸುಂದರ ತಾಣಗಳು ಮತ್ತು ಸುವರ್ಣಾವತಿ ಡ್ಯಾಮ್ ಬಳಿ 38 ದಿನಗಳ ಕಾಲ ಒಂದೇ ಹಂತದಲ್ಲಿ ಚಿತ್ರೀಕರಣ ನಡೆಸಲಾಗಿದೆ. ಸದ್ಯ ಚಿತ್ರವು ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ ಎಂದು ಚಿತ್ರತಂಡ ಹೇಳಿದೆ. ❖

ಅರ್ಜುನ್, ಶೋಭಾ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ದೆಹಲಿಯ ಕಾರವಾಲ ನಗರದಲ್ಲಿ ವಿದ್ಯಾರ್ಥಿಗಳ ಎರಡು ಗುಂಪಿನ ನಡುವೆ ಹೊಡೆದಾಟ ನಡೆದಿದ್ದು, ಮುಸ್ಲಿಂ ಸಮುದಾಯಕ್ಕೆ ಸೇರಿದ ಹುಡುಗರು ಹಿಂದೂ ಸಮುದಾಯದ ಹುಡುಗರ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಹೇಳಲಾಗಿದೆ. ಈ ಕುರಿತಂತೆ ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊ ತುಣುಕು ಹರಿದಾಡುತ್ತಿದೆ. 'ರಂಜಾನ್ ಸಮಯದಲ್ಲಿ ಮುಸ್ಲಿಮರು ಹಿಂದೂಗಳಿಗೆ ಎಂತಹ ಉಡುಗೊರೆ ಕೊಟ್ಟಿದ್ದಾರೆ ನೋಡಿ' ಎಂದು ಟ್ವಿಟರ್ ಬಳಕೆದಾರರೊಬ್ಬರು ಹೇಳಿದ್ದಾರೆ. ಆದರೆ ಕೋಮುಸಂಘರ್ಷದ ಈ ಆರೋಪ ಸತ್ಯಕ್ಕೆ ದೂರವಾದುದು.

ಕಾರವಾಲ ನಗರ ಹಾಗೂ ಸಮೀಪದ ನೆಹರೂ ನಗರದಲ್ಲಿರುವ ಸರ್ಕಾರಿ ಪ್ರೌಢಶಾಲೆಗಳ 12ನೇ ತರಗತಿ ವಿದ್ಯಾರ್ಥಿಗಳ ನಡುವಿನ ಘರ್ಷಣೆಯನ್ನು ಕೋಮುಸಂಘರ್ಷ ಎಂಬುದಾಗಿ ತಪ್ಪಾಗಿ ಅರ್ಥೈಸಲಾಗಿದೆ ಎಂದು 'ದಿ ಲಾಜಿಕಲ್ ಇಂಡಿಯನ್' ವೆಬ್‌ಸೈಟ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಘರ್ಷಣೆ ಕುರಿತಂತೆ ಐವರು ವಿದ್ಯಾರ್ಥಿಗಳನ್ನು ಬಂಧಿಸಲಾಗಿದೆ. ಹಲ್ಲೆಗೊಳಗಾದವರು ಹಾಗೂ ಬಂಧನಕ್ಕೆ ಒಳಗಾದವರು ಒಂದೇ ಸಮುದಾಯಕ್ಕೆ ಸೇರಿದವರು ಎಂದು ಪೊಲೀಸರು ತಿಳಿಸಿದ್ದಾರೆ. ಬೈಕ್ ಸ್ಟಂಟ್ ವಿಚಾರಕ್ಕೆ ಎರಡು ಶಾಲೆಗಳ ವಿದ್ಯಾರ್ಥಿಗಳ ನಡುವೆ ಹೊಡೆದಾಟ ನಡೆದಿದೆಯೇ ವಿನಾ, ಕೋಮುಸಂಘರ್ಷ ಅಲ್ಲ ಎಂದು ವೆಬ್‌ಸೈಟ್ ತಿಳಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಏಪ್ರಿಲ್ 6, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ಚೈತ್ರ ಶುದ್ಧ ಪೂರ್ಣಿಮಾ ಗಂ. 10-05, ನಕ್ಷತ್ರ: ಹಸ್ತ ಗಂ. 12-42 ಯೋಗ: ವ್ಯಾಘಾತ ಗಂ. 26-31, ಕರಣ: ಬವ ಗಂ. 10-05, ಮೀನ ಮಾಸದ 22 ನೇ ದಿನ, ಮಳೆನಕ್ಷತ್ರ: ರೇವತಿ 2. ರಾಹುಕಾಲ: ಮಧ್ಯಾಹ್ನ 01-30 – 03-00 ಸೂರ್ಯೋದಯ : 06-27 ಸೂರ್ಯಾಸ್ತ : 06-39, ಮುಸ್ಲಿಂ ದಿನಾಂಕ : 14 ರಂಜಾನ್, ದಿನ ವಿಶೇಷ : ಚೈತ್ರ ಪೂರ್ಣಿಮಾ, ಹನುಮಜಯಂತಿ (ದ.ಭಾರತ), ಓಳಿ ಮುಕ್ತಾಯ (ಜೈನ್), ಪಾಸೋವರ್ ಮೊದಲ ದಿನ (ಪೀಪ್) ಜ್ಯೂಯಿಷ್,ಅದೃಷ್ಟ ಸಂಖ್ಯೆ : 10, 2

ಮೇಷ: ಇಂಧನ ವ್ಯಾಪಾರಸ್ಥರಿಗೆ ಬೇಡಿಕೆ ಹೆಚ್ಚಲಿದೆ. ಹಣಕಾಸಿನ ಪರಿಸ್ಥಿತಿ ಉತ್ತಮವಾಗಿರಲಿದೆ. ಪಿತ್ರಾರ್ಜಿತ ಆಸ್ತಿಗಾಗಿ ನಡೆಯುತ್ತಿದ್ದ ವಾದವಿವಾದಗಳು ಕೊನೆಗೊಂಡು ಬಯಸಿದ್ದನ್ನು ಪಡೆಯುತ್ತೀರಿ.

ವೃಷಭ: ಶಸ್ತ್ರವೈದ್ಯರಿಗೆ ವೃತ್ತಿಗೆ ಸಂಬಂಧಿಸಿದಂತೆ ಸೌಲಭ್ಯಗಳು ಹೆಚ್ಚಲಿದೆ. ನಿರುದ್ಯೋಗಿಗಳು ಬಂದ ಅವಕಾಶವನ್ನು ಒಪ್ಪಿಕೊಳ್ಳುವುದು ಸದ್ಯದ ಪರಿಸ್ಥಿತಿಗೆ ಉತ್ತಮವಾಗಿ ಕಾಣುತ್ತದೆ. ನಿತ್ಯದ ಹಣಕಾಸಿನ ಕೊರತೆ ಇರುವುದಿಲ್ಲ.

ಮಿಥುನ: ರಾಜಕೀಯ ವರ್ಗದವರು ಸಾಮಾಜಿಕ ಬದುಕಿನಲ್ಲಿ ಹೊಸ ಹುರುಪು ಕಾಣಲಿದ್ದೀರಿ. ರೈತಾಪಿ ವರ್ಗದವರ ಕೆಲಸಗಳು ಸರಾಗವಾಗಿ ನೆರವೇರುವುದು. ದಿನಸಿ ವ್ಯಾಪಾರಿಗಳು ಮಾರಾಟದ ಕ್ಷೇತ್ರವನ್ನು ಹೆಚ್ಚಿಸಿಕೊಳ್ಳಬಹುದು.

ಕರ್ಕಾಟಕ: ತಂದೆ ಅಥವಾ ಹಿರಿಯ ಸಹೋದರರಲ್ಲಿ ಸಂಯಮದ ನಡವಳಿಕೆ ಅಗತ್ಯ. ಸ್ನೇಹಿತರೊಂದಿಗಿನ ಮಾತುಕತೆ ಉಪಯುಕ್ತವೆನಿಸಲಿದೆ. ಮಗನಿಗೆ ಓದಿನಲ್ಲಿ ಸಹಾಯ ಮಾಡುವಿರಿ. ಶ್ರೀ ಕೃಷ್ಣನನ್ನು ಸ್ಮರಿಸುವುದರಿಂದ ಸತ್ಫಲ.

ಸಿಂಹ: ಮನೆಯ ಆಗು-ಹೋಗುಗಳನ್ನು ಪೂರ್ಣಗೊಳಿಸಲು ಹಣಕಾಸಿನ ಕೊರತೆ ಅಷ್ಟಾಗಿ ಕಾಡದು. ಮಗನ ಕೆಲಸ ನೆರವೇರಿದ ಕಾರಣಕ್ಕೆ ಹೇಳಿಕೊಂಡ ಹರಕೆಯನ್ನು ಪೂರ್ಣಗೊಳಿಸುವ ಬಗ್ಗೆ ಮಗನಲ್ಲಿ ಪ್ರಸ್ತಾಪಿಸಿ. ಬಿಳಿ ಬಣ್ಣ ಶುಭ.

ಕನ್ಯಾ: ದೇಹದ ಎಲ್ಲಾ ನೋವುಗಳು ಮರೆಯಾಗುವುದು. ಗುತ್ತಿಗೆದಾರರ ಹತ್ತಿರ ಗೃಹ ನಿರ್ಮಾಣದ ವಿಚಾರದಲ್ಲಿ ಪುನಃ ಪಾಠ ಕಲಿಯುವಿರಿ. ತತ್ವ ಆದರ್ಶಗಳ ಜತೆಗೆ ಹಿರಿಯರ ಅನುಭವ ಸಲಹೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಿರಿ.

ತುಲಾ: ತಮ್ಮನ ಕೆಲಸಕ್ಕಾಗಿ ಉನ್ನತ ಅಧಿಕಾರಿಗಳನ್ನು ಕಾಣಲು, ಅವರಿಂದ ಸಹಾಯ ಪಡೆಯಲು ದಿನವಿಡೀ ಓಡಾಟ ನಡೆಸುವಿರಿ. ಕಣ್ಣಿನ ದೃಷ್ಟಿಯಲ್ಲಿ ಬದಲಾವಣೆ ಅನುಭವಕ್ಕೆ ಬಂದಲ್ಲಿ ತಡಮಾಡದೆ ವೈದ್ಯರನ್ನು ಭೇಟಿ ಮಾಡಿ.

ವೃಶ್ಚಿಕ: ಮಾನಸಿಕ ನೆಮ್ಮದಿ ಇರುವುದು. ಆಪ್ತರು ಸಕಾಲಿಕ ನೆರವಿಗಾಗಿ ನಿಮಗೆ ಧನ್ಯವಾದ ತಿಳಿಸುವರು. ಜೀವನದಲ್ಲಿ ನಡೆದ ಕಹಿ ಘಟನೆಗಳನ್ನು ಪಾಠದ ರೂಪದಲ್ಲಿ ಹೇಳುವ ಅನಿವಾರ್ಯತೆಯ ಸನ್ನಿವೇಶ ಎದುರಾಗುವುದು.

ಧನು: ಈ ದಿನ ಎರಡನೇ ದರ್ಜೆಯ ನೌಕರರಿಗೆ ವರ್ಗಾವಣೆಯಿಂದ ಆರ್ಥಿಕವಾಗಿ ಅನುಕೂಲವಾಗುವುದು. ಇದು ನಿಮ್ಮ ಆನಂದವನ್ನು ಇಮ್ಮಡಿಗೊಳಿಸಲಿದೆ. ಹಣ್ಣು-ತರಕಾರಿಗಳ ವ್ಯಾಪಾರಿಗಳಿಗೆ ಲಾಭಾಂಶ ವೃದ್ಧಿ.

ಮಕರ: ಮನೆಯಲ್ಲಿ ನಡೆಯುವ ಶುಭಸಮಾರಂಭಕ್ಕೆ ಬಂಧು- ಮಿತ್ರರ ಸಹಕಾರ ನಿಮಗೆ ದೊರೆಯಲಿದೆ. ಬಂಗಾರದ ಮೇಲಿನ ಧನ ಹೂಡಿಕೆಯಲ್ಲಿ ಲಾಭ ಆಗುವುದು. ಮನಸ್ಸಿನ ನಾಗಾಲೋಟಕ್ಕೆ ಕಡಿವಾಣ ಹಾಕುವುದು ಉತ್ತಮ.

ಕುಂಭ: ದ್ವಿಚಕ್ರ ವಾಹನಗಳ ಮಾರಾಟಗಾರರು ಜೋರಿನ ವಹಿವಾಟು ನಡೆಸುವರು. ಷೇರು ಮಾರಾಟದಿಂದ ಅಧಿಕ ಲಾಭ ಹೊಂದಬಹುದು. ಮಾಡುವ ಕೆಲಸದಿಂದ ಗುಂಪಿನಲ್ಲಿ ಗುರುತಿಸುವ ವ್ಯಕ್ತಿಯಾಗುವ ಲಕ್ಷಣ ಕಾಣುತ್ತಿದೆ.

ಮೀನ: ಮನೆ ಶುದ್ಧೀಕರಣ ಪ್ರಕ್ರಿಯೆಯಲ್ಲಿ ಹಳೆ ನೆನಪನ್ನು ಮರುಕಳಿಸುವಂತಹ ವಸ್ತುಗಳು ಲಭ್ಯವಾಗುತ್ತದೆ. ಉತ್ತಮ ಕೆಲಸ ನಿರ್ವಹಣೆಯಿಂದ ಬಡ್ತಿಯ ವಿಚಾರ ಸುಳಿದಾಡಿ ಸಹೋದ್ಯೋಗಿಗಳ ಈರ್ಷ್ಯೆಗೆ ಕಾರಣವಾಗುತ್ತದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಸಿದ್ಧಿ – ಪ್ರಯತ್ನ

ಸತತ ಮಾರ್ಗಣೆ, ಸಿದ್ಧಿಯಂತಿರಲಿ, ಮಾರ್ಗಣೆಯೆ |
ಗತಿ ಮನುಜ ಲೋಕಕ್ಕೆ; ಜಗದ ಜೀವವದು ||
ಕೃತಕಾಮರೆಲ್ಲರಾದೊಡೆ ಕೃತ್ಯವುಳಿಯದೊಡೆ |
ಕಥೆ ಮುಗಿವುದು ಜಗಕೆ – ಮಂಕುತಿಮ್ಮ || 857 ||

ಪದ-ಅರ್ಥ: ಸತತ ಮಾರ್ಗಣೆ = ಸತತವಾದ ಹುಡುಕಾಟ, ಸಿದ್ಧಿಯಂತಿರಲಿ = ಸಿದ್ಧಿಯು + ಅಂತಿರಲಿ, ಕೃತಕಾಮರೆಲ್ಲರಾದೊಡೆ = ಕೃತಕಾಮರು(ಆಸೆಗಳನ್ನು ಪೂರೈಸಿಕೊಂಡವರು) + ಎಲ್ಲರೂ + ಆದೊಡೆ(ಆದರೆ), ಕೃತ್ಯವುಳಿಯದೊಡೆ = ಕೃತ್ಯವು (ಕಾರ್ಯವು) + ಉಳಿಯದೊಡೆ(ಉಳಿಯದಿದ್ದರೆ).

ವಾಚ್ಯಾರ್ಥ: ಸತತವಾದ ಹುಡುಕಾಟವೇ ಗತಿ ಈ ಮನುಷ್ಯ ಲೋಕಕ್ಕೆ. ಸರ್ವರಿಗೂ ಹಿತವಾದ ಸಿದ್ಧಿ ಸಾಧ್ಯವಿಲ್ಲ. ಯಾಕೆಂದರೆ ಅದು ಈ ಜಗತ್ತಿನ ಜೀವ. ಇಲ್ಲಿ ಹುಟ್ಟಿದವರೆಲ್ಲ ತಾವು ಬಯಸಿದ್ದೆಲ್ಲ ಸಿಕ್ಕಿತು ಎಂದು ಸಂಪೂರ್ಣ ತೃಪ್ತರಾಗಿ ಬಿಟ್ಟರೆ, ಮಾಡಲು ಯಾವ ಕಾರ್ಯವೂ ಉಳಿಯದಿದ್ದರೆ ಜಗತ್ತಿನ ಕಥೆಯೆ ಮುಗಿದು ಹೋಗುತ್ತದೆ.

ವಿವರಣೆ: ಅಬು ಬೆನ್ ಆದಮ್ ಒಬ್ಬ ಮಹಾನ್ ಸಂತ. ಆತ ಸತತವಾಗಿ ಸೇವೆ ಮಾಡುವುದನ್ನೇ ಕರ್ತವ್ಯವನ್ನಾಗಿಸಿಕೊಂಡಿದ್ದ. ಅವನ ನಿರ್ಮಲ ಪ್ರೇಮ, ಕ್ರಿಮಿ-ಕೀಟ-ಪಶು-ಪಕ್ಷಿ-ಮನುಷ್ಯ ಎಲ್ಲರಲ್ಲೂ ಏಕಪ್ರಕಾರವಾಗಿತ್ತು. ಅವನೊಬ್ಬ ಕರ್ಮಯೋಗಿ. ಕರ್ಮಮಾಡುತ್ತಲೇ ಅವನಿಗೆ ವೃದ್ಧಾಪ್ಯ ಅಡರಿತು. ಒಂದು ದಿನ ತನ್ನ ಗುಡಿಸಲಿನಲ್ಲಿ ಮಲಗಿದಾಗ ಅವನಿಗೊಂದು ಕನಸು. ಕನಸಿನಲ್ಲಿ ಭಗವಂತ ಬಂದ; ಅವನನ್ನು ಕಂಡು ಆದಮ್ ಉದ್ಗರಿಸಿದ, "ಭಗವಂತಾ, ಇಲ್ಲಿಯವರೆಗೆ ಯಾಕೆ ಬಂದೆ?" "ನಿನ್ನ ಅಪರಿಮಿತ ಪ್ರೇಮದ ಬದುಕನ್ನು ಗಮನಿಸಿದ್ದೇನೆ. ಸಂತೋಷದಿಂದ ನಿನ್ನನ್ನು ಸ್ವರ್ಗಕ್ಕೆ ಕರೆದೊಯ್ಯಲು ಬಂದಿದ್ದೇನೆ" ಎಂದ ಭಗವಂತ. "ಸಂತೋಷ ದೇವಾ. ಆದರೆ ಸ್ವರ್ಗದಲ್ಲಿ ಏನಿದೆ?" "ಅಲ್ಲಿ ಏನಿಲ್ಲ? ಸುಖ, ಶಾಂತಿ, ನೆಮ್ಮದಿ ಎಲ್ಲ ಇದೆ. ಅಲ್ಲಿ ದುಃಖದ, ನೋವಿನ ಲೇಶವೂ ಇಲ್ಲ. ಅಲ್ಲಿರುವವರೆಲ್ಲ ಬದುಕಿನಲ್ಲಿ ಸಾಧನೆ ಮಾಡಿ ಬಂದ ಪುಣ್ಯಪುರುಷರು. ಯಾರಿಗೂ ಯಾವ ಕೊರತೆಯೂ ಇರುವುದಿಲ್ಲ" "ಹಾಗಾದರೆ ನಾನು ಅಲ್ಲಿಗೆ ಬಂದು ಏನು ಮಾಡಲಿ?". "ಇಷ್ಟು ದಿನ ಕಷ್ಟಪಟ್ಟಿದ್ದೆಯಲ್ಲ, ಅಲ್ಲಿ ಸುಮ್ಮನೆ ದೀರ್ಘಕಾಲ ಸಂತೋಷದಿಂದ ಇರು". "ಹಾಗಾದರೆ ನಾನು ಸ್ವರ್ಗಕ್ಕೆ ಬರಲಾರೆ. ಯಾಕೆಂದರೆ ನನ್ನ ಕೆಲಸವೆಲ್ಲ ದೀನದಲಿತರ, ದು:ಖಿಗಳ, ನೋವುಂಡವರ ಸೇವೆ ಮಾಡುವುದು. ನನಗೆ ಸ್ವರ್ಗ, ಭೂಮಿಯಲ್ಲಿಯ ದುಡಿತಕ್ಕೆ ಪ್ರತಿಫಲವಲ್ಲ. ಬದುಕಿನ ಕರ್ಮವೇ ನನಗೆ ಪ್ರತಿಫಲ" ಎಂದ ಸಂತ ಆದಮ್. ಕಗ್ಗ ಧ್ವನಿಸುವುದು ಅದನ್ನೇ. ಸಿದ್ಧಿಯಾದೀತೋ ಇಲ್ಲವೊ ತಿಳಿಯದು. ಆದರೆ ಸಿದ್ಧಿಗಾಗಿ ಮಾಡುವ ಹುಡುಕಾಟ, ಪ್ರಯತ್ನವೇ ಮನುಜಕುಲದ ಹಿರಿಮೆ. ಗಾಂಧೀಜಿ ಹೇಳುತ್ತಿದ್ದರು, ಗುರಿ ಎಷ್ಟು ಮುಖ್ಯವೋ, ಅಷ್ಟೇ ಮುಖ್ಯ ಅದನ್ನು ಪಡೆಯುವ ಮಾರ್ಗ. ನಾವು ಅಂದುಕೊಂಡದ್ದೆಲ್ಲ ಈಡೇರಿಬಿಟ್ಟರೆ, ಇನ್ನು ಮಾಡಬೇಕಾದ ಯಾವ ಕಾರ್ಯವೂ ಉಳಿಯದೆ ಹೋದರೆ ಪ್ರಪಂಚ ಹೇಗೆ ನಡೆದೀತು? ಪ್ರಪಂಚದಲ್ಲಿ ಎಲ್ಲ ಕಾರ್ಯಗಳು ಎಂದಿಗೂ ಸಂಪೂರ್ಣವಾಗಿ ಮುಗಿಯುವುದಿಲ್ಲ. ಅಂತೆಯೇ, ಮನುಷ್ಯ ಪ್ರಯತ್ನ ಸಾಗುತ್ತಲೇ ಇರುತ್ತದೆ. ಈ ಪ್ರಯತ್ನವೇ ಜಗತ್ತಿನ ಜೀವ. ಅದರಿಂದಾಗಿಯೇ ಜಗತ್ತು ಚಲನಶೀಲವಾಗಿರುವುದು, ಸದಾ ಬದಲಾವಣೆಯಾಗುತ್ತಿರುವುದು.

ಪದಬಂಧ 5280

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಉನ್ನತ ವಿದ್ಯಾಭ್ಯಾಸದ ಸಂಸ್ಥೆ (6)
4.ತೀಡೀ ತೀಡಿ ಮಾಡಿದ ಸುಧಾರಣೆ! (4)
5.ರಸ ಒಸರುವ ಜಿಹ್ವೆ (3)
7.ಒಂದೇ ಒಂದಾದುದು (3)
10.ಕಾರುಬಾರು ನಡೆಸುವವನು ಹೇಳಿದ ಕೆಟ್ಟ ಸುದ್ದಿ (3)
12. ಆಳವಾದ ಗುಂಡಿ (3)
13.ಅದೇ ತಾನೆ ಮೂಡುತ್ತಿರುವ ಸೂರ್ಯ (4)
15.ಅಧಿಕಾರ ಸ್ವೀಕಾರದ ಮೊದಲಲ್ಲಿ ಮಾಡುವ ಪ್ರತಿಜ್ಞೆ (6)

ಮೇಲಿಂದ ಕೆಳಕ್ಕೆ

1.ಈ ಡಿಸ್ಟ್ರಿಬ್ಯೂಟರ್ ಪಕ್ಕಾ ಕನ್ನಡಿಗ! (4)
2.ಇಂದ್ರಿಯ ನಿಗ್ರಹಮಾಡುವವನು (2)
3.ಬರದಲ್ಲಿ ತೋರಿಸಿದ ಡೌಲು! (4)
6.ಪರಿಮಳ ಇಲ್ಲಿಹರಡಿದೆ (4)
7.ಕೊನೆಗೆ ವಿಕ್ರಯಿಸಿ ಮೋಸಹೋಗು! (3)
8.ಈತ ಲೆಕ್ಕ ಬರೆಯುವವನು (4)
9.ಹೂವಿನ ಶರ (4)
11.ಪೂರ್ಣ ಅರಿವು (4)
14.ಅವಿರತ ಪ್ರಯತ್ನದಲ್ಲಿರುವ ಬ್ರಾಹ್ಮಣ (2)



5279ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಶಯನಗೃಹ 4.ಸರ್ವಜ್ಞ 5.ವರಾತ 6.ಕದನ 7.ತಕಲಿ 9.ಗುಣಕ 10.ಕೆಸರು 13.ನಾಲಿಗೆ 15.ಕನಕ 16.ಬಹಳ 17.ಉಗುರು 18.ಶರಣಮೇಳ

ಮೇಲಿಂದ ಕೆಳಕ್ಕೆ: 1.ಶತಮಾನ 2.ನವೀಕರಣ 3.ಹವನ 4.ಸತತ 8.ಕದಿರು 9.ಗುದ್ದಲಿ 11.ಸಮೀಕರಣ 12.ಅಂತರಾಳ 14.ಗೆಬರು 15.ಕಳಶ

ಸುಡೊಕು 5666

	2			6	7	4		
3								
	7	1		4	8		6	
	4						8	
8		9		7	1			6
	5		8		4		9	
2				9			3	
4		3		5	2			8
	1		4			5	2	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5665 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,398
ಇಂದಿನ ಅಂತ್ಯ	17,557
▲	159
ದಿನದ ಕನಿಷ್ಠ	17,570

ಕೊಬ್ಬರಿ ಧಾರಣೆ

ತಿಪಟೂರು	₹8000-9100
ತುರುವೇಕೆರೆ	₹8900-8900

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹445

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1730(1710)
ಸೋಯಾ (ರಿಫೈನ್ಡ್)	₹1080(1075)
ಸೂರ್ಯಕಾಂತಿ (ರಿಫೈನ್ಡ್)	₹1080(1080)
ಪಾಮೋಲಿನ್	₹980(990)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹800-1,300
ಮಧ್ಯಮ	₹500-800
ಸಣ್ಣ	₹300-500

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹401-552
ದ್ವಿತಳಿ (ಬಿ.ವಿ)	₹175-635

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹146.50
ಆರ್‌ಎಸ್‌ಎಸ್-5	₹141
ಗುಡ್ ಲಾಟ್	₹132

(ಪ್ರತಿ ಕೆ.ಜಿಗೆ)

5 ಬಿಲಿಯನ್ ಡಾಲರ್ ಸಾಲ ಸಂಗ್ರಹಿಸಿದ ರಿಲಯನ್ಸ್

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಮತ್ತು ಅದರ ದೂರಸಂಪರ್ಕ ಸೇವಾ ಕಂಪನಿಯಾಗಿರುವ ಜಿಯೊ ಇನ್ಫೊಕಾಮ್ ವಿವಿಧ ಬ್ಯಾಂಕ್‌ಗಳಿಂದ ಒಟ್ಟು 5 ಬಿಲಿಯನ್ ಡಾಲರ್ (₹ 40 ಸಾವಿರ ಕೋಟಿ) ಸಾಲ ಸಂಗ್ರಹಿಸಿದೆ. ಇದು ದೇಶದ ಕಾರ್ಪೊರೇಟ್ ಇತಿಹಾಸದಲ್ಲಿ ವಿವಿಧ ಬ್ಯಾಂಕ್‌ಗಳಿಂದಪಡೆದಿರುವಅತಿದೊಡ್ಡಮೊತ್ತದ ಸಾಲ ಎಂದು ಮೂಲಗಳು ಹೇಳಿವೆ.

ರಿಲಯನ್ಸ್ ಇಂಡಸ್ಟ್ರೀಸ್ ಕಂಪನಿಯು 55 ಬ್ಯಾಂಕ್‌ಗಳಿಂದ 3 ಬಿಲಿಯನ್ ಡಾಲರ್ (₹ 24 ಸಾವಿರ ಕೋಟಿ), ಜಿಯೊ ಇನ್ಫೊಕಾಮ್ ಕಂಪನಿಯು 18 ಬ್ಯಾಂಕ್‌ಗಳಿಂದ 2 ಬಿಲಿಯನ್ ಡಾಲರ್ (₹16ಸಾವಿರಕೋಟಿ) ಸಾಲಸಂಗ್ರಹಿಸಿವೆ ಎಂದು ಮೂಲಗಳು ಹೇಳಿವೆ. ಈ ಮೊತ್ತವನ್ನು ರಿಲಯನ್ಸ್ ಕಂಪನಿಯು ಬಂಡವಾಳ ವೆಚ್ಚಗಳಿಗೆ ಬಳಸಿಕೊಳ್ಳಲಿದೆ.

ಜಿಯೊ ಕಂಪನಿಯು ರಾಷ್ಟ್ರದಾದ್ಯಂತ 5ಜಿ ಜಾಲ ವಿಸ್ತರಣೆಗೆ ಬಳಕೆ ಮಾಡಿಕೊಳ್ಳಲಿದೆ. ಎರಡೂ ಕಂಪನಿಗಳಿಗೆ ಸಾಲ ನೀಡಿರುವ ಬ್ಯಾಂಕ್‌ಗಳ ಪಟ್ಟಿಯಲ್ಲಿ ಬ್ಯಾಂಕ್ ಆಫ್ ಅಮೆರಿಕ, ಎಚ್‌ಎಸ್‌ಬಿಸಿ, ಸಿಟಿ, ತೈವಾನ್‌ನ ಕೆಲವು ಬ್ಯಾಂಕ್‌ಗಳು ಇವೆ.

ಹೆಸರಷ್ಟೇ ಬದಲಾಗಿದೆ.
ಬದಲಾಗಲಿಲ್ಲ ಬದ್ಧತೆ.

ಐಡಿಎಫ್‌ಸಿ ಮ್ಯೂಚುವಲ್ ಫಂಡ್ ಈಗ ಆಗಿದೆ ಬಂಧನ್ ಮ್ಯೂಚುವಲ್ ಫಂಡ್.
ಬಂಧನ್ ಸಮೂಹದ ಪರಂಪರೆ, ಸದ್ಭಾವನೆ ಮತ್ತು ಒಳಗೊಳ್ಳುವಿಕೆಯ ಬೆಂಬಲದೊಂದಿಗೆ ನೀವು ಸದಾ ನಮ್ಮಿಂದ ನಿರೀಕ್ಷಿಸುತ್ತಿರುವ ಅದೇ ಉತ್ಸಾಹ, ಪರಿಣಿತಿ ಮತ್ತು ಹೂಡಿಕೆದಾರರಿಗೆ ಪ್ರಥಮ ಆದ್ಯತೆಯೊಂದಿಗೆ ನಾವು ಭವಿಷ್ಯದತ್ತ ವಿಶ್ವಾಸದೊಂದಿಗೆ ಹೆಜ್ಜೆ ಹಾಕುತ್ತಿದ್ದೇವೆ,
ಇಲ್ಲಿದೆ ಹೊಸ ಶುಭಾರಂಭ.

IDFC MUTUAL FUND ಈಗ ಆಗಿದೆ Bandhan Mutual Fund

www.bandhanmutual.com

ಮ್ಯೂಚುವಲ್ ಫಂಡ್ ಹೂಡಿಕೆಯು ಮಾರುಕಟ್ಟೆಯ ಅಪಾಯಗಳಿಗೆ ಒಳಪಟ್ಟಿರುತ್ತವೆ.ಎಲ್ಲ ಯೋಜನೆಗೆ ಸಂಬಂಧಿಸಿದ ದಾಖಲೆಗಳನ್ನು ಗಮನವಿಟ್ಟು ಓದಿ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12,500-25,000
ಹೊಸತು	27,500-38,000
ಹಳತು	48,000-53,000
ಹೊನ್ನಾಳಿ	
ರಾಶಿ	44,800-44,800
ಕಾರ್ಕಳ	
ಹೊಸತು	30,000-38,000
ಹಳತು	40,000-53,000
ಕುಂದಾಪುರ	
ಹಳೆಚಾಲಿ	44,000-44,500
ಹೊಸಚಾಲಿ	35,000-36,000
ಶಿವಮೊಗ್ಗ	
ಸರಕು	40,509-40,509
ಬೆಟ್ಟೆ	30,609-30,609
ಗೊರಬಲು	18,009-18,009
ತುಮಕೂರು	
ಇತರ	44,200-45,100

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

ಮುದ್ರೆಮನೆ	
ಎಪಿ	14,500
ಎಸಿ	7,560
ಆರ್‌ಪಿ	10,250
ಆರ್‌ಸಿ	5,300

ಸೆನ್ಸೆಕ್ಸ್, ನಿಫ್ಟಿ ಏರಿಕೆ

ಮುಂಬೈ (ಪಿಟಿಐ): ಷೇರುಪೇಟೆ ಸೂಚ್ಯಂಕಗಳು ಸತತ ನಾಲ್ಕನೆಯ ದಿನವೂ ಏರಿಕೆ ಕಂಡಿವೆ. ಐ.ಟಿ. ಮತ್ತು ಹಣಕಾಸು ವಲಯದ ಷೇರುಗಳನ್ನು ಹೂಡಿಕೆದಾರರು ಹೆಚ್ಚು ಖರೀದಿಸಿದ್ದು ಸೂಚ್ಯಂಕಗಳ ಏರಿಕೆಗೆ ನೆರವಾಯಿತು.

ಮಂಗಳವಾರ ಬಿಎಸ್‌ಇ ಸೆನ್ಸೆಕ್ಸ್ 582 ಅಂಶ, ನಿಫ್ಟಿ 159 ಅಂಶ ಏರಿಕೆ ಕಂಡಿವೆ. ನಾಲ್ಕು ದಿನಗಳ ವಹಿವಾಟಿನಲ್ಲಿ ಸೆನ್ಸೆಕ್ಸ್ 2,075 ಅಂಶಗಳಷ್ಟು, ನಿಫ್ಟಿ 605 ಅಂಶಗಳಷ್ಟು ಏರಿಕೆ ಕಂಡಿವೆ. ಹೂಡಿಕೆದಾರರು ರೆಪೊ ದರವನ್ನು ಹೆಚ್ಚಿಸುವ ವಿಚಾರವಾಗಿ ಆರ್‌ಬಿಐ ಗುರುವಾರ ಕೈಗೊಳ್ಳಲಿರುವ ತೀರ್ಮಾನದ ಮೇಲೆ ಕಣ್ಣಿಟ್ಟಿದ್ದಾರೆ.

‘ಆರ್‌ಬಿಐ ರೆಪೊ ದರವನ್ನು ಶೇ 0.25ರಷ್ಟು ಹೆಚ್ಚಿಸುವ ಸಾಧ್ಯತೆ ಇದೆ. ಇದಾದ ನಂತರದಲ್ಲಿ ಆರ್‌ಬಿಐ ರೆಪೊ ದರ ಹೆಚ್ಚಳಕ್ಕೆ ವಿರಾಮ ನೀಡುವ ಸಾಧ್ಯತೆ ಇದೆ. ಇದು ಮಾರುಕಟ್ಟೆಗಳ ಪಾಲಿಗೆ ಒಳ್ಳೆಯದು’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಕೆನರಾ ಬ್ಯಾಂಕ್: ಹೊಸ ಸಹಾಯವಾಣಿ ಸಂಖ್ಯೆ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆನರಾ ಬ್ಯಾಂಕ್ ತನ್ನ ಗ್ರಾಹಕರಿಗೆ ವಿವಿಧ ಸೇವೆಗಳನ್ನು ಪಡೆಯಲು ಹೊಸ ದೂರವಾಣಿ ಸಂಖ್ಯೆ ಪ್ರಕಟಿಸಿದೆ. ಗ್ರಾಹಕರು 18001030 ಸಂಖ್ಯೆಗೆ ಶುಲ್ಕ ರಹಿತವಾಗಿ ಕರೆ ಮಾಡಿ ತಮ್ಮ ಖಾತೆಯಲ್ಲಿರುವ ಹಣದ ಮಾಹಿತಿ, ಖಾತೆಗೆ ಸಂಬಂಧಿಸಿದ ವಿವರ, ಕ್ರೆಡಿಟ್ ಕಾರ್ಡ್ ಕುರಿತ ವಿವರಗಳನ್ನು ಪಡೆದುಕೊಳ್ಳಬಹುದು.

ದಿನದ ಯಾವುದೇ ಹೊತ್ತಿನಲ್ಲಿ ಈ ಸಂಖ್ಯೆಗೆ ಕರೆ ಮಾಡಬಹುದು ಎಂದು ಬ್ಯಾಂಕ್‌ನ ಪ್ರಕಟಣೆ ತಿಳಿಸಿದೆ. ‘ಗ್ರಾಹಕರು ಈ ಸಂಖ್ಯೆಗೆ ಕರೆ ಮಾಡಿ, ಬ್ಯಾಂಕ್‌ಗೆ ಸಂಬಂಧಿಸಿದ ಯಾವುದೇ ನೆರವು ಪಡೆದುಕೊಳ್ಳಬಹುದು’ ಎಂದು ಅದು ಹೇಳಿದೆ.

ಎಸ್‌ಆ್ಯಂಡ್‌ಪಿ ಗ್ಲೋಬಲ್ ಮಾರ್ಕೆಟ್ ಇಂಟೆಲಿಜೆನ್ಸ್ ಸಂಸ್ಥೆಯ ವರದಿ

ಮಾರ್ಚ್: ತಗ್ಗಿದ ಸೇವಾ ವಲಯ

ನವದೆಹಲಿ (ಪಿಟಿಐ): ಮಾರ್ಚ್ ತಿಂಗಳಲ್ಲಿ ದೇಶದ ಸೇವಾ ವಲಯದ ಚಟುವಟಿಕೆಗಳು ತುಸು ಕಡಿಮೆ ಆಗಿವೆ. ಫೆಬ್ರುವರಿಯಲ್ಲಿ ಸೇವಾ ವಲಯದ ಚಟುವಟಿಕೆಗಳು 12 ತಿಂಗಳ ಗರಿಷ್ಠ ಮಟ್ಟ ತಲುಪಿದ್ದವು.

ಎಸ್‌ಆ್ಯಂಡ್‌ಪಿ ಗ್ಲೋಬಲ್ ಇಂಡಿಯಾ ಸರ್ವಿಸಸ್ ಪಿಎಂಐ ವಾಣಿಜ್ಯ ಚಟುವಟಿಕೆಗಳ ಸೂಚ್ಯಂಕವು ಫೆಬ್ರುವರಿಯಲ್ಲಿ 59.4ರಷ್ಟು ಇದ್ದಿದ್ದು, ಮಾರ್ಚ್‌ನಲ್ಲಿ 57.8ಕ್ಕೆ ಇಳಿಕೆ ಕಂಡಿದೆ. ಅಂದರೆ ವಲಯದ ಬೆಳವಣಿಗೆಯ ಪ್ರಮಾಣವು ತುಸು ತಗ್ಗಿದೆ.

ಸೂಚ್ಯಂಕವು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಅದನ್ನು ಬೆಳವಣಿಗೆ ಎಂದು, 50ಕ್ಕಿಂತ ಕಡಿಮೆ ಮಟ್ಟದಲ್ಲಿದ್ದರೆ ಅದನ್ನು ಕುಸಿತವೆಂದು ಭಾವಿಸಲಾಗುತ್ತದೆ.



ಮುಖ್ಯಾಂಶಗಳು

- ಉದ್ಯೋಗಿಗಳನ್ನು ಹೆಚ್ಚಿಸದ ಕಂಪನಿಗಳು
- ಫೆಬ್ರುವರಿಯಲ್ಲಿ ಸೇವಾ ವಲಯದ ಚಟುವಟಿಕೆ 12 ತಿಂಗಳ ಗರಿಷ್ಠ ಮಟ್ಟ

ಚಟುವಟಿಕೆಗಳಲ್ಲಿ ಸತತ ಹತ್ತು ತಿಂಗಳುಗಳಿಂದ ಏರಿಕೆ ಇದ್ದರೂ, ವಲಯದಲ್ಲಿನ ಉದ್ಯೋಗ ಸೃಷ್ಟಿಯು ಮಾರ್ಚ್‌ನಲ್ಲಿ ಅಲ್ಪ ಮಟ್ಟದಲ್ಲಿ ಮಾತ್ರ ಹೆಚ್ಚಾಗಿದೆ. ಸಮೀಕ್ಷೆಯಲ್ಲಿ ಪಾಲ್ಗೊಂಡ ಹೆಚ್ಚಿನ ಕಂಪನಿಗಳು ಮಾರ್ಚ್‌ನಲ್ಲಿ ತಮ್ಮ ಉದ್ಯೋಗಿಗಳ ಸಂಖ್ಯೆಯನ್ನು ಹೆಚ್ಚಿಸಿಲ್ಲ ಎಂದು ಎಸ್‌ಆ್ಯಂಡ್‌ಪಿ ಗ್ಲೋಬಲ್ ಮಾರ್ಕೆಟ್ ಇಂಟೆಲಿಜೆನ್ಸ್ ಸಂಸ್ಥೆಯ ವರದಿಯು ಹೇಳಿದೆ.

ತಯಾರಿಕಾ ವಲಯ ಹಾಗೂ ಸೇವಾ ವಲಯದ ಚಟುವಟಿಕೆಗಳನ್ನು ಒಟ್ಟಾಗಿ ಪ್ರತಿನಿಧಿಸುವ ಎಸ್‌ಆ್ಯಂಡ್‌ಪಿ ಗ್ಲೋಬಲ್ ಇಂಡಿಯಾ ಕಾಂಪೊಸಿಟ್ ಪಿಎಂಐ ಔಟ್‌ಪುಟ್ ಸೂಚ್ಯಂಕವು ಫೆಬ್ರುವರಿಯಲ್ಲಿ 59ರ ಮಟ್ಟದಲ್ಲಿ ಇದ್ದಿದ್ದು, ಮಾರ್ಚ್‌ನಲ್ಲಿ 58.4ಕ್ಕೆ ಇಳಿಕೆ ಕಂಡಿದೆ.

ಚಿನ್ನಕ್ಕೆ ಸಾರ್ವಕಾಲಿಕ ಗರಿಷ್ಠ ಬೆಲೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ಬೆಲೆಯು ಮಂಗಳವಾರ 10 ಗ್ರಾಂಗೆ ₹1,025ರಷ್ಟು ಹೆಚ್ಚಳ ಆಗಿದೆ. 10 ಗ್ರಾಂ ಚಿನ್ನವು ₹61,080ರಂತೆ ಮಾರಾಟವಾಗಿದೆ. ಇದು ಚಿನ್ನದ ಸಾರ್ವಕಾಲಿಕ ಗರಿಷ್ಠ ಬೆಲೆ. ಬೆಳ್ಳಿ ಬೆಲೆಯು 1 ಕೆ.ಜಿ.ಗೆ ₹1,810ರಷ್ಟು ಹೆಚ್ಚಳ ಕಂಡು ₹73,950ರಂತೆ ಮಾರಾಟ ಆಗಿದೆ.

ಜಾಗತಿಕ ಮಾರುಕಟ್ಟೆಗಳಲ್ಲಿ ಚಿನ್ನದ ಬೆಲೆ ಏರಿಕೆಆಗಿರುವುದು ಇಲ್ಲಿ ಬೆಲೆ ಏರಿಕೆಗೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ಹೇಳಿದೆ.

ಬಂಡೀಪುರಕ್ಕೆ ಮೋದಿ: ಇಂದಿನಿಂದ ಸಫಾರಿ, ಹೋಂ ಸ್ಟೇ, ರೆಸಾರ್ಟ್ ಬಂದ್

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶಕ್ಕೆ ಏ.9ರಂದು ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡುತ್ತಿರುವ ಕಾರಣಕ್ಕೆ ಗುರುವಾರದಿಂದ (ಏಪ್ರಿಲ್ 6) 9ರವರೆಗೆ ಬಂಡೀಪುರದಲ್ಲಿ ಸಾರ್ವಜನಿಕರಿಗೆ ಸಫಾರಿ ನಿರ್ಬಂಧಿಸಲಾಗಿದೆ.

ನಾಲ್ಕು ದಿನಗಳ ಕಾಲ ಬಂಡೀಪುರ ವ್ಯಾಪ್ತಿಯ ಎಲ್ಲ ಹೋಂ ಸ್ಟೇಗಳು, ರೆಸಾರ್ಟ್‌ಗಳು ಮತ್ತು ಲಾಡ್ಜ್‌ಗಳು ಕೂಡ ಬಂದ್ ಆಗಲಿವೆ. ಈ ಸಂಬಂಧ ಜಿಲ್ಲಾಧಿಕಾರಿ ಡಿ.ಎಸ್.ರಮೇಶ್ ಬುಧವಾರ ಆದೇಶ ಹೊರಡಿಸಿದ್ದಾರೆ.

‘ಪ್ರಧಾನಿಯವರ ಭದ್ರತೆ, ರಸ್ತೆ ನಿರ್ವಹಣೆ ಹಾಗೂ ಭೇಟಿಯ ಪೂರ್ವ ಸಿದ್ಧತೆ ಕೈಗೊಳ್ಳಬೇಕಾಗಿರುವುದರಿಂದ ಸಾರ್ವಜನಿಕರಿಗೆ ಸಫಾರಿ, ಹೋಂ ಸ್ಟೇ, ರೆಸಾರ್ಟ್‌ಗಳು ಹಾಗೂ ಲಾಡ್ಜ್‌ಗಳ ಕಾಯ್ದಿರಿಸುವಿಕೆ, ತಂಗುವಿಕೆಯನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ’ ಎಂದು ಆದೇಶದಲ್ಲಿ ಹೇಳಿದ್ದಾರೆ.

ಎಸ್‌ಪಿಜಿ ತಂಡ ಆಗಮನ

ಪ್ರಧಾನಿ ಭದ್ರತೆ ಹೊಣೆ ಹೊತ್ತಿರುವ ಎಸ್‌ಪಿಜಿ ತಂಡದ 40ಕ್ಕೂ ಹೆಚ್ಚು ಅಧಿಕಾರಿಗಳು, ಕಮಾಂಡೊಗಳು ಗುಂಡ್ಲುಪೇಟೆಗೆ ಬಂದಿದ್ದು, ಬುಧವಾರ ಮಧ್ಯಾಹ್ನ ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿ ಜೊತೆ ಸಭೆ ನಡೆಸಿದರು.

ಮುಖ್ಯಶಿಕ್ಷಕ ಸೇರಿ 16 ಶಿಕ್ಷಕರು ಅಮಾನತು

ಕಲಬುರಗಿ: ಅಫಜಲಪುರ ತಾಲ್ಲೂಕಿನ ಗೊಬ್ಬೂರ(ಬಿ) ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ಗಣಿತ ಪರೀಕ್ಷಾ ನಡೆಯುತ್ತಿದ್ದ ವೇಳೆ ಸಾಮೂಹಿಕ ನಕಲಿಗೆ ಸಹಕರಿಸಿದ ಆರೋಪದ ಮೇಲೆ ಮುಖ್ಯಶಿಕ್ಷಕ ಸೇರಿ 16 ಶಿಕ್ಷಕರನ್ನು ತಕ್ಷಣದಿಂದಲೇ ಅಮಾನತುಗೊಳಿಸಿ ಶಿಸ್ತು ಪ್ರಾಧಿಕಾರಿ ಮತ್ತು ಶಾಲಾ ಶಿಕ್ಷಣ ಇಲಾಖೆಯ ಹೆಚ್ಚುವರಿ ಆಯುಕ್ತ ಆನಂದ ಪ್ರಕಾಶ ಮೀನಾ ಆದೇಶ ಹೊರಡಿಸಿದ್ದಾರೆ.

ಪರೀಕ್ಷಾ ಕೇಂದ್ರಗಳ ಭದ್ರತೆ ಪರಿಶೀಲನೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಇಶಾ ಪಂತ್ ಅವರು ಸೋಮವಾರ ಗೊಬ್ಬೂರ(ಬಿ) ಪ್ರೌಢಶಾಲೆಗೆ ಭೇಟಿ ನೀಡಿದ್ದರು. ಕೇಂದ್ರದ ಆವರಣದಲ್ಲಿ ಸಾಮೂಹಿಕ ನಕಲಿಗೆ ಬಳಸಿದ್ದ ಮೈಕ್ರೊ ಝೆರಾಕ್ಸ್ ಪುಸ್ತಕ, ಚೀಟಿಗಳು ಬಿದ್ದಿದ್ದು ಕಂಡು ಬಂತು. ಜೊತೆಗೆ ನಿಷೇಧಿತ ಪ್ರದೇಶದಲ್ಲಿ ಓಡಾಡಿದ ಕೆಲವರನ್ನು ಪೊಲೀಸರು ವಶಕ್ಕೆ ಪಡೆದರು.

ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕ, ಕಸ್ಟೋಡಿಯನ್, ಸ್ಥಾನಿಕ ಜಾಗೃತ ದಳ ಹಾಗೂ ಕೋಣೆಯ ಮೇಲ್ವಿಚಾರಕರು ಪರೀಕ್ಷೆ ವ್ಯವಸ್ಥೆ ಕಾಪಾಡುವಲ್ಲಿ ವಿಫಲವಾಗಿದ್ದಾರೆ ಎಂದು ಇಶಾ ಪಂತ್ ಅವರು ಶಾಲಾ ಇಲಾಖೆಯ ಆಯುಕ್ತರಿಗೆ ವರದಿ ಸಲ್ಲಿಸಿದ್ದರು.

‘ಪರೀಕ್ಷಾ ಕೇಂದ್ರದ ಹೊರಭಾಗದಲ್ಲಿ ಜನರು ಓಡಾಡುತ್ತಿದ್ದರೆ, ಶಿಕ್ಷಕರನ್ನು ಹೊಣೆಗಾರರನ್ನಾಗಿ ಮಾಡುವುದು ಎಷ್ಟು ಸರಿ? ತಪ್ಪು ಮಾಡದ ಶಿಕ್ಷಕರನ್ನು ಅಮಾನತಿನಿಂದ ಕೈ ಬಿಡಬೇಕು’ ಎಂದು ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಚಿದಾನಂದ ಪಾಟೀಲ ಕೋರಿದ್ದಾರೆ.

ಗುಗ್ಗಳ ಮಹೋತ್ಸವ

ದಾವಣಗೆರೆಯ ಹಳೇಪೇಟೆಯಲ್ಲಿ ಬುಧವಾರ ನಡೆದ ವೀರಭದ್ರೇಶ್ವರ ದೇವರ ಗುಗ್ಗಳ ಮತ್ತು ಅಗ್ನಿಕುಂಡ ಮಹೋತ್ಸವದಲ್ಲಿ ಪುರವಂತರು ಅಗ್ನಿಕುಂಡ ಹಾಯ್ದುಹೋದ ಕ್ಷಣ.

–ಪ್ರಜಾವಾಣಿ ಚಿತ್ರ/ಸತೀಶ ಬಡಿಗೇರ್

ದಾಖಲೆ ಇಲ್ಲದ ₹2 ಕೋಟಿ ನಗದು ಜಪ್ತಿ

ಪ್ರಜಾವಾಣಿ ವಾರ್ತೆ

ಹಿರೇಬಾಗೇವಾಡಿ(ಬೆಳಗಾವಿ ಜಿಲ್ಲೆ): ಖಾಸಗಿ ಬಸ್‌ನಲ್ಲಿ ದಾಖಲೆ ಇಲ್ಲದೆ ಸಾಗಿಸುತ್ತಿದ್ದ ₹2 ಕೋಟಿಯನ್ನು ಹಿರೇಬಾಗೇವಾಡಿ ಟೋಲ್ ಗೇಟ್‌ನಲ್ಲಿ ಬುಧವಾರ ಬೆಳಗಿನ ಜಾವ ವಶಕ್ಕೆ ಪಡೆಯಲಾಗಿದೆ.

ಮುಂಬೈಯಿಂದ ಮಂಗಳೂರಿಗೆ ಹೊರಟಿದ್ದ ಖಾಸಗಿ ಬಸ್ ಅನ್ನು ಚುನಾವಣಾ ಎಫ್‌ಎಸ್‌ಟಿ ಹಾಗೂ ಪೊಲೀಸ್ ಅಧಿಕಾರಿಗಳ ತಂಡ ಜಂಟಿಯಾಗಿ ಪರಿಶೀಲಿಸಿದಾಗ, ಅಕ್ರಮ ಹಣ ಪತ್ತೆಯಾಗಿದೆ.

ಹಿರೇಬಾಗೇವಾಡಿಗೆ ಭೇಟಿ ನೀಡಿ ಪರಿಶೀಲಿಸಿದ ಜಿಲ್ಲಾಧಿಕಾರಿ ನಿತೇಶ್ ಪಾಟೀಲ, ‘ಕರ್ನಾಟಕ ಪೊಲೀಸ್ ಕಾಯ್ದೆ ಪ್ರಕಾರ ಪ್ರಕರಣ ದಾಖಲಿಸಿಕೊಂಡಿದ್ದು, ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ. ಒಬ್ಬ ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ’ ಎಂದರು.

ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಸ್ನೇಹಾ, ಗ್ರಾಮೀಣ ಎಸಿಪಿ ಗೋಪಾಲಕೃಷ್ಣಗೌಡರ, ಬೆಳಗಾವಿ ಗ್ರಾಮೀಣ ಕ್ಷೇತ್ರದ ಚುನಾವಣಾಧಿಕಾರಿ ರಾಜಶೇಖರ್ ಡಂಬಳ, ಸಿಪಿಐ ಅಮರೇಶ್, ಎಫ್.ಎಸ್.ಟಿ. ತಂಡದ ಮುಖ್ಯಸ್ಥ ಶಂಭುಲಿಂಗಪ್ಪ, ರಾಜೇಂದ್ರ ಮೊರಬದ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

₹60 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ

ಮೂಡಲಗಿ(ಬೆಳಗಾವಿ ಜಿಲ್ಲೆ): ಅರಭಾವಿ ಮತಕ್ಷೇತ್ರದ ಹಳ್ಳೂರ ಚೆಕ್‌ಪೋಸ್ಟ್‌ನಲ್ಲಿ ದಾಖಲೆ ಇಲ್ಲದೆ ಸಾಗಿಸುತ್ತಿದ್ದ ₹60.47 ಲಕ್ಷ ಮೌಲ್ಯದ 1,025 ಗ್ರಾಂ ಚಿನ್ನಾಭರಣವನ್ನು ಚುನಾವಣೆ ಅಧಿಕಾರಿಗಳು ಹಾಗೂ ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಮಹಾಲಿಂಗಪುರದಿಂದ ಬೆಳಗಾವಿಗೆ ಹೊರಟಿದ್ದ ವಾಹನ ತಪಾಸಣೆ ಮಾಡುವ ವೇಳೆ, ಚಿನ್ನಾಭರಣ ಪತ್ತೆಯಾಗಿವೆ. ಕಾರು ಚಾಲಕನನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

₹11.49 ಲಕ್ಷ ನಗದು ವಶ

ಬೆಳಗಾವಿ ವರದಿ: ಹುಕ್ಕೇರಿ ತಾಲ್ಲೂಕಿನ ಹಿಟ್ನಿ ಕ್ರಾಸ್ ಚೆಕ್‌ಪೋಸ್ಟ್‌ನಲ್ಲಿ ದಾಖಲೆ ಇಲ್ಲದೆ ಸಾಗಿಸುತ್ತಿದ್ದ ₹11.49 ಲಕ್ಷ ಹಣವನ್ನು ಚುನಾವಣಾಧಿಕಾರಿಗಳು ಹಾಗೂ ಪೊಲೀಸರು ಬುಧವಾರ ಸಂಜೆ ವಶಕ್ಕೆ ಪಡೆದಿದ್ದಾರೆ.

₹ 4.23 ಲಕ್ಷ ಮೌಲ್ಯದ ಏರ್ ಕೂಲರ್, ಫ್ಯಾನ್, ಟಿ.ವಿ. ವಶಕ್ಕೆ

ಹರಪನಹಳ್ಳಿ (ವಿಜಯನಗರ ಜಿಲ್ಲೆ) ವರದಿ: ತಾಲ್ಲೂಕಿನ ಕಾನಹಳ್ಳಿ ಚೆಕ್ ಪೋಸ್ಟ್ ಬಳಿ ಸರಕು ಸಾಗಣೆ ಆಟೊದಲ್ಲಿ ಸಾಗಿಸುತ್ತಿದ್ದ ₹4.23 ಲಕ್ಷ ಮೌಲ್ಯದ ವಸ್ತುಗಳನ್ನು ಚುನಾವಣಾ ಸಿಬ್ಬಂದಿ ಮಂಗಳವಾರ ರಾತ್ರಿ ವಶಪಡಿಸಿಕೊಂಡಿದ್ದಾರೆ.

₹2.45 ಲಕ್ಷ ಮೌಲ್ಯದ ಮಿನಿ ಏರ್ ಕೂಲರ್‌ಗಳು, ₹1.05 ಲಕ್ಷ ಬೆಲೆಬಾಳುವ ಗ್ಯಾಸ್ ಸ್ಟೌವ್‌ಗಳು, ₹40 ಸಾವಿರ ಮೌಲ್ಯದ ಸ್ಪೀಕರ್‌ಗಳು ಹಾಗೂ ₹33 ಸಾವಿರ ಮೌಲ್ಯದ ಆರು ಟಿ.ವಿ.ಗಳನ್ನು ದಾಖಲೆಯಿಲ್ಲದೆ ಸಾಗಿಸುತ್ತಿದ್ದರು. ಉತ್ತರ ಪ್ರದೇಶ ಮೂಲದ ಚಾಲಕ ಎ.ರಾಮ ಪ್ರಕಾಶ್ ತಿವಾರಿ ಮತ್ತು ಮಹಾರಾಷ್ಟ್ರದ ರಾಜೇಶ್ ಸಿಂಗ್ ಧರ್ಮಪಾನ್ ಸಿಂಗ್ ಚೌಹಾಣ್ ವಿರುದ್ಧ ಹರಪನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದಾಖಲೆ ರಹಿತ ₹95 ಲಕ್ಷ ನಗದು ಜಪ್ತಿ

ಗದಗ: ಬೆಟಗೇರಿ ಪೊಲೀಸ್ ಠಾಣೆ ವ್ಯಾಪ್ತಿಯ ದಂಡಿನ ದುರ್ಗಮ್ಮ ದೇವಸ್ಥಾನದ ಹತ್ತಿರ ತೆರೆಯಲಾದ ಚೆಕ್‌ಪೋಸ್ಟ್‌ನಲ್ಲಿ ನಾಲ್ಕು ಪ್ರತ್ಯೇಕ ಪ್ರಕರಣಗಳಲ್ಲಿ ದಾಖಲೆ ರಹಿತ ₹95 ಲಕ್ಷ ನಗದನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

₹3.16 ಲಕ್ಷ ನಗದು ವಶ

ರಾಣೆಬೆನ್ನೂರು: ದಾಖಲೆಯಿಲ್ಲದೆ ಬೈಕ್‌ನಲ್ಲಿ ಸಾಗಿಸುತ್ತಿದ್ದ ₹3.16 ಲಕ್ಷ ಹಣವನ್ನು ತಾಲ್ಲೂಕಿನ ಹರನಗಿರಿ ಚೆಕ್‌ಪೋಸ್ಟ್‌ನಲ್ಲಿ ಮಂಗಳವಾರ ಸಂಜೆ ಎಸ್‌ಟಿಎಸ್ ತಂಡದವರು ವಶಪಡಿಸಿಕೊಂಡಿದ್ದಾರೆ.

ಮುಂಬೈ ಧಾರಣೆ

ಶೇಂಗಾ

5-4-2023

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12200-12300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1740(1720)
ಒಂದು ವಾರದ ಡೆಲಿವರಿ	1735(1715)
ಸೋಯಾ ಕಚ್ಚಾ	990(1000)
ಪಾಮ್ ವಾರದ ಡೆಲಿವರಿ	978(988)
ಸೂರ್ಯಕಾಂತಿ ಎಣ್ಣೆ ಕಚ್ಚಾ	960(960)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
60700(59750)
ಬೆಳ್ಳಿ ಕೆ.ಜಿ 73800(71850)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಘಾರಂತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266/ 9611221244

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಘಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಸಾರ್ವಜನಿಕ ಪ್ರಕಟಣೆ

SHIMOGGI VEGETABLE MARKETING PRIVATE LIMITED.
CIN No U46101KA2023PTC171848, PAN NO.ABKCS 4773N,
Reg. Office Address: Flat No. B-002, Pristen Temple Tree Apt, Harsha Layout, Kengeri, South, Bangalore-560060, Karnataka.
Email ID: bharathigopalshimoggi@gmail.com
Mob: 7760721323 & 8123405236
ಕಂಪನಿಗೆ ತರಕಾರಿ ಪೂರೈಕೆಗೆ ಮತ್ತು ವಿಧವೆ ಮಹಿಳೆಯರಿಗೆ ಉದ್ಯೋಗಾವಕಾಶ
[illegible]
ದಿನಾಂಕ: 06.04.2023
ಸಹಿ/- (ಭಾರತಿ. ಜೆ.) ನಿರ್ದೇಶಕರು

TRAVEL CORNER
ಕ್ಲಾಸಿಫೈಡ್ಸ್

ಜೀರೊ ಕ್ಯಾಶ್ ಕ್ಯಾರಿ ಪ್ರವಾಸಗಳು

ಶ್ರೀ ಮಲ್ಲಿಕಾರ್ಜುನ ಟ್ರಾವೆಲ್ಸ್ shree mallikarjuna travels explore the world with comfort

ಚಾರಧಾಮ್ ಯಾತ್ರಾ 13 ದಿನಗಳು, ಮೇ-3, 17 ಜೂನ್-7, 21, ಒಬ್ಬರಿಗೆ: 49,000 /- ರೂ.

ನಾರ್ತ್ ಈಸ್ಟ್ ಯಾತ್ರಾ 7/12 ದಿನಗಳು, ಮೇ-12 ಒಬ್ಬರಿಗೆ: 63,000 /- ರೂ. ಹಾಗೂ 70,000 /- ರೂ.

ಗುಜರಾತ್ ಪ್ರವಾಸ 9 ದಿನಗಳು, ಏಪ್ರಿಲ್- 28, ಮೇ- 24 ಒಬ್ಬರಿಗೆ: 35,000 /- ರೂ.

ಅಮರನಾಥ ಯಾತ್ರಾ 11 ದಿನಗಳು, ಜೂನ್-26, ಜುಲೈ- 10, 24 ಒಬ್ಬರಿಗೆ: 54,000 /- ರೂ.

ಮುಕ್ತಿನಾಥ ಯಾತ್ರಾ 13 ದಿನಗಳು, ಮೇ-8, 26 ಒಬ್ಬರಿಗೆ: 59,000 /- ರೂ.

ಪುರಿ-ಕಲ್ಕತ್ತಾ-ದಾರ್ಜಿಲಿಂಗ್ ಪ್ರವಾಸ 11 ದಿನಗಳು, ಮೇ- 11 ಒಬ್ಬರಿಗೆ: 48,000 /- ರೂ.

ಕಾಶಿ ಯಾತ್ರಾ 6 ದಿನಗಳು, ಏಪ್ರಿಲ್-24, ಮೇ-8 ಒಬ್ಬರಿಗೆ: 32,000 /- ರೂ.

ಕಾಶ್ಮೀರ ಪ್ರವಾಸ 6 /9 ದಿನಗಳು, ಮೇ-15, 29 ಒಬ್ಬರಿಗೆ: 45,000 /- ರೂ. ಹಾಗೂ 54,000 /- ರೂ.

* 5%Gst ಪ್ರತ್ಯೇಕ

ಪ್ರತಿ ತಿಂಗಳು ದಕ್ಷಿಣ ಕನ್ನಡ, ಉತ್ತರ ಕರ್ನಾಟಕ, ಗೋವಾ, ಶಿರಡಿ, ಕೇರಳ, ಮಂತ್ರಾಲಯ, ತಮಿಳುನಾಡು ಮತ್ತು ಇತ್ಯಾದಿ

ಪ್ರವಾಸದ ದರದಲ್ಲಿ ಸೇರಿರುತ್ತದೆ: ವಿಮಾನ ದರ | ಎಸಿ ಬಸ್ | ಎಸಿ ರೂಮ್ | ತಿಂಡಿ, ಊಟ, ಸ್ನ್ಯಾಕ್ಸ್ | ಪ್ರವೇಶ ಶುಲ್ಕಗಳು | ಆಟೋ ಶುಲ್ಕಗಳು

Tour Cost Includes: Air Tickets*, 2X2 A/C Bus Transportation, Food, Twin Sharing Rooms, Entry Fees* *T&C apply

Office Address: 19/1, 1st Main Road, Opp Vijaynagar Club, Vijaynagar, Bangalore-560040

Mob: 9902008056, 9880847001, 9342848791

ಪ್ರವಾಸ

Travel

ವಿಮಾನ ಪ್ರವಾಸ 03.05.2023 ರಿಂದ 5 ದಿನ ಕಾಶಿ, ಗಯಾ, ಪ್ರಯಾಗ್, ಅಯೋಧ್ಯಾ. Contact Travel Comfort: 9731001111/ 08041664646

ಶ್ರೀರಾಜರಾಜೇಶ್ವರಿ ಟೂರ್ಸ್ 04.05.2023,12ದಿನ 4ಸಿಸ್ಟರ್ಸ್ ನಾರ್ತ್‌ಈಸ್ಟ್ ನಾಗಾಲ್ಯಾಂಡ್ ಮಿಝೋರಾಂ ಮಣಿಪುರ್ ತ್ರಿಪುರಸುಂದರಿ ಶಕ್ತಿಪೀಠ ಫ್ಲೋಟಿಂಗ್ ನ್ಯಾಷನಲ್ ಪಾರ್ಕ್ 9739618243 9743895346

ಸುಸಜ್ಜಿತ ವ್ಯವಸ್ಥೆಗಳೊಂದಿಗೆ: 18.05.2023 29.05.2023 ರಿಂದ 15 ದಿನಗಳ ಚಾರ್‌ಧಾಮ್. 11.05.2023 ರಿಂದ 12 ದಿನಗಳ ಅಮೃತ್‌ಸರ್ ವೈಷ್ಣೋದೇವಿ ಕಾಶ್ಮೀರ್. 22.05.2023 ರಿಂದ 7/12 ದಿನಗಳ ಕಾಶಿ,ಗಯಾ,ಹರಿದ್ವಾರ್. 29.06.2023 04.07.2023 ರಿಂದ 10/12 ದಿನಗಳ ವೈಷ್ಣೋದೇವಿ ಅಮರನಾಥ ಕಾಶ್ಮೀರ್ 22.05.2023 ರಿಂದ 7/11 ದಿನಗಳ ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್. 16.05.2023 ರಿಂದ 17 ದಿನಗಳ ಯುರೋಪ್ ಪ್ರವಾಸಗಳು. ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Pilgrimage Tours

14.4.2023, 3 ದಿನಗಳು ಇರ್ಪುಫಾಲ್ಸ್, ನಾಗರಹೊಳೆ, ಮಡಿಕೇರಿ ಇತ್ಯಾದಿ. 18.4.2023, 3ದಿನ ಸಿಗಂದೂರು, ಕೊಲ್ಲೂರು, ಕಮಲಶಿಲೆ, ಜೋಗಜಲಪಾತ ಇತ್ಯಾದಿ. 9481433157

ಸುವರ್ಣ ಯಾತ್ರ.130423 ನೇಪಾಳ, ಮುಕ್ತಿನಾಥ ಪ್ರವಾಸ 9 ದಿನಗಳು. 240423.ಕಾಶಿ ಪ್ರವಾಸ 7 ದಿನಗಳು.9008381022, 9019462508.

19.4.2023 ವಿಮಾನದಲ್ಲಿ ಶಿರಡಿ, 3 ಜ್ಯೋತಿರ್ಲಿಂಗದರ್ಶನ 12,800/-. 12.6.2023, ರೈಲು ಮತ್ತು ವಿಮಾನದಲ್ಲಿ ಕಾಶಿ, ಅಯೋಧ್ಯ 17,500/-. ಅನುಗ್ರಹಯಾತ್ರ. 8095179351

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 17/04/23 ಜಾರ್ಖಂಡ್, ಕೋಲ್ಕತಾ, ಭುವನೇಶ್ವರ. 26/04/23 ಜಮ್ಮು, ಕಾಶ್ಮೀರ್, ವೈಷ್ಣೋದೇವಿ. 08/06/23 ಚಾರ್ಧಾಮ್ ಯಾತ್ರ. 9964527782, 9591017782

ವೈಯಕ್ತಿಕ

Change of Name

I BIPIN Rajashekhar Yadalagatte S/O Rajashekhar Yadalagatte R/O of No 1329 HMT Layout Nagasandra post Bangalore Shall henceforth be known as Bipin Rajashekhar affidavit no IN-KA20076149251342V sworn before notary Anuradha D dated 21st mar 2023

DH ಪ್ರಜಾವಾಣಿ
BOOK YOUR AD FOR SUNDAY & GET 50% OFF* ON WEEKDAYS
For Lineage & Single/ Multi Column Classifieds Display ads
For more information Contact:
9845114560 : 9731810277
9901641752 : 9886213331
080 - 45557163 / 164
*conditions apply

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಹನುಮಾನ್ ಜಯಂತಿ: ಎಲ್ಲ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಗೃಹ ಸಚಿವಾಲಯ ಸೂಚನೆ

ಶಾಂತಿಯುತ ಆಚರಣೆಗೆ ಕ್ರಮ– ಸೂಚನೆ

ನವದೆಹಲಿ (ಪಿಟಿಐ): ದೇಶದಾದ್ಯಂತ ಗುರುವಾರ ಹನುಮಾನ್ ಜಯಂತಿಯನ್ನು ಶಾಂತಿಯುತವಾಗಿ ಆಚರಿಸಲು ಅನುವಾಗುವಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಎಲ್ಲ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಗೃಹ ಸಚಿವಾಲಯ ಸಲಹೆ ನೀಡಿದೆ.

‘ಹನುಮಾನ್ ಜಯಂತಿ ಆಚರಣೆ ಸಂದರ್ಭದಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ಆಗದಂತೆ ಕ್ರಮ ಕೈಗೊಳ್ಳಬೇಕು. ಸಮಾಜದಲ್ಲಿನ ಶಾಂತಿ–ಸೌಹಾರ್ದವನ್ನು ಕೆಡಿಸುವಂತಹ ಸಂಗತಿಗಳ ಮೇಲೆ ಕಣ್ಗಾವಲಿರಿಸಬೇಕು’ ಎಂದು ಸಚಿವಾಲಯವು ಬುಧವಾರ ಸೂಚಿಸಿದೆ.

ರಾಮ ನವಮಿ ಸಂದರ್ಭದಲ್ಲಿ ಪಶ್ಚಿಮ ಬಂಗಾಳ, ಬಿಹಾರದಲ್ಲಿ ಹಿಂಸಾಚಾರ ನಡೆದ ಹಿನ್ನೆಲೆಯಲ್ಲಿ ಕೇಂದ್ರ ಗೃಹ ಸಚಿವಾಲಯವು ಈ ಸೂಚನೆಗಳನ್ನು ನೀಡಿದೆ.

ರಾಮ ನವಮಿ ಅಂಗವಾಗಿ ನಡೆದ ಶೋಭಾಯಾತ್ರೆ ವೇಳೆ ಪಶ್ಚಿಮ ಬಂಗಾಳದ ಹೂಗ್ಲಿ ಹಾಗೂ ಹೌರಾ ಜಿಲ್ಲೆಗಳಲ್ಲಿ ಹಿಂಸಾಚಾರ ಭುಗಿಲೆದ್ದಿತ್ತು. ಹಲವು ಅಂಗಡಿಗಳು ಹಾಗೂ ವಾಹನಗಳಿಗೆ ದುಷ್ಕರ್ಮಿಗಳು ಬೆಂಕಿ ಹಚ್ಚಿದ್ದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪಶ್ಚಿಮ ಬಂಗಾಳ ರಾಜ್ಯಪಾಲ ಸಿ.ವಿ.ಆನಂದ ಬೋಸ್ ಅವರೊಂದಿಗೆ ಮಾತನಾಡಿ, ವಸ್ತುಸ್ಥಿತಿ ಕುರಿತು ಮಾಹಿತಿ ಪಡೆದಿದ್ದರು. ಇದಕ್ಕೂ ಮುನ್ನ, ರಾಜ್ಯಪಾಲರು ಹಿಂಸಾಗ್ರಸ್ತ ಪ್ರದೇಶಗಳಿಗೆ ಭೇಟಿ ನೀಡಿದ್ದರು.

ಬಿಹಾರದ ಸಸಾರಾಮ್ ಹಾಗೂ ಬಿಹಾರ್‌ಶರೀಫ್ ಪಟ್ಟಣಗಳಲ್ಲಿ ಕೂಡ ರಾಮ ನವಮಿ ದಿನ ಹಾಗೂ ನಂತರ ಹಿಂಸಾಚಾರ ಕಂಡುಬಂದಿತ್ತು. ಘಟನೆಗೆ ಸಂಬಂಧಿಸಿ ಪೊಲೀಸರು 170 ಜನರನ್ನು ಬಂಧಿಸಿದ್ದಾರೆ.

ಶಾ ಭೇಟಿ ಮಾಡಿದ ಮುಸ್ಲಿಂ ನಿಯೋಗ

ಮುಸ್ಲಿಂ ಮುಖಂಡರ ನಿಯೋಗವೊಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಮಂಗಳವಾರ ರಾತ್ರಿ ಅವರ ನಿವಾಸದಲ್ಲಿ ಭೇಟಿ ಮಾಡಿ, ರಾಮ ನವಮಿ ಮೆರವಣಿಗೆ ಸಂದರ್ಭದಲ್ಲಿ ಕೆಲವೆಡೆ ಸಮುದಾಯದ ವಿರುದ್ಧ ನಡೆದ ಹಿಂಸಾಚಾರದ ಘಟನೆಗಳ ಕುರಿತು ಚರ್ಚಿಸಿತು.

ಕರ್ನಾಟಕದಲ್ಲಿ ಮುಸ್ಲಿಮರಿಗಿದ್ದ ಶೇ 4ರಷ್ಟು ಮೀಸಲಾತಿಯನ್ನು ತೆಗೆದು ಹಾಕಿದ್ದರ ಬಗ್ಗೆಯೂ ನಿಯೋಗವು ಕಳವಳ ವ್ಯಕ್ತಪಡಿಸಿತು. ಇದಕ್ಕೆ ಪ್ರತಿಕ್ರಿಯಿಸಿದ ಶಾ, ‘ಧರ್ಮದ ಆಧಾರದ ಮೇಲೆ ಮೀಸಲಾತಿ ನೀಡಿದ್ದು ಸಂವಿಧಾನ ಬಾಹಿರ. ಇದನ್ನು ಹಿಂದಿನ ಕಾಂಗ್ರೆಸ್ ಸರ್ಕಾರಗಳು ನೀಡಿದ್ದವು. ಬಿಜೆಪಿ ಸರ್ಕಾರವು ಹಿಂದುಳಿದಿರುವಿಕೆ ಆಧಾರದಲ್ಲಿ ಮೀಸಲಾತಿ ನೀಡಿದೆ ಎಂಬುದಾಗಿ ವಿವರಿಸಿದರು’ ಎಂದು ಮೂಲಗಳು ಹೇಳಿವೆ.

ಜಮಿಯಾತ್ ಉಲೇಮಾ–ಇ–ಹಿಂದ್ ಅಧ್ಯಕ್ಷ ಮೌಲಾನಾ ಮಹಮೂದ್ ಮದಾನಿ, ಕಾರ್ಯದರ್ಶಿ ನಿಯಾಜ್ ಫಾರೂಕಿ, ಎಐಎಂಪಿಎಲ್‌ಬಿಯ ಸದಸ್ಯರಾದ ಕಮಾಲ್ ಫಾರೂಕಿ ಹಾಗೂ ಪ್ರೊ.ಅಖ್ತರುಲ್ ವಾಸೆ ನಿಯೋಗದಲ್ಲಿದ್ದರು.

ಕೇಂದ್ರೀಯ ಪಡೆಗಳನ್ನು ಕರೆಸಿಕೊಳ್ಳಿ: ಕಲ್ಕತ್ತಾ ಹೈಕೋರ್ಟ್

ಕೋಲ್ಕತ್ತ: ಹನುಮಾನ್ ಜಯಂತಿ ಆಚರಣೆ ಸಂದರ್ಭದಲ್ಲಿ ಶಾಂತಿ–ಸುವ್ಯವಸ್ಥೆ ಕಾಪಾಡುವಲ್ಲಿ ರಾಜ್ಯ ಪೊಲೀಸರಿಗೆ ನೆರವಾಗುವ ಸಲುವಾಗಿ ಕೇಂದ್ರೀಯ ಪಡೆಗಳನ್ನು ಕರೆಸಿಕೊಳ್ಳುವಂತೆ ಪಶ್ಚಿಮ ಬಂಗಾಳ ಸರ್ಕಾರಕ್ಕೆ ಕಲ್ಕತ್ತಾ ಹೈಕೋರ್ಟ್ ಬುಧವಾರ ನಿರ್ದೇಶನ ನೀಡಿದೆ.

‘ಕಳೆದ ಕೆಲ ದಿನಗಳ ಹಿಂದಿನ ಅಹಿತಕರ ಘಟನೆಗಳ ಹಿನ್ನೆಲೆಯಲ್ಲಿ ಈ ಆದೇಶ ನೀಡಲಾಗಿದೆ. ನಾವೆಲ್ಲ ಸುರಕ್ಷಿತವಾಗಿದ್ದು, ಯಾವುದೇ ಗಲಭೆಗಳಿಂದ ತಮಗೆ ಯಾವುದೇ ತೊಂದರೆಯಾಗದು ಎಂಬುದಾಗಿ ಜನರಿಗೆ ಭರವಸೆ ನೀಡುವ ಉದ್ದೇಶವನ್ನು ಕೂಡ ಈ ಆದೇಶ ಹೊಂದಿದೆ’ ಎಂದು ಹೈಕೋರ್ಟ್ ಹೇಳಿದೆ.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಟಿ.ಎಸ್.ಶಿವಜ್ಞಾನಮ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ನಿರ್ದೇಶನ ನೀಡಿತು.

‘ರಾಜ್ಯದ ಮನವಿಗೆ ಸ್ಪಂದಿಸಿ, ಕೇಂದ್ರೀಯ ಪಡೆಗಳನ್ನು ಕಳುಹಿಸಿದ ಕೂಡಲೇ ಅವುಗಳ ನಿಯೋಜನೆಗೆ ಕ್ರಮ ಕೈಗೊಳ್ಳಬೇಕು. ಆ ಮೂಲಕ ಹನುಮಾನ್ ಜಯಂತಿ ಅಂಗವಾಗಿ ನಡೆಯುವ ಶೋಭಾಯಾತ್ರೆ ವೇಳೆ ಶಾಂತಿಭಂಗ ಆಗದಂತೆ ನೋಡಿಕೊಳ್ಳಬೇಕು’ ಎಂದು ನ್ಯಾಯಪೀಠ ಸೂಚಿಸಿತು. ಹನುಮಾನ್ ಜಯಂತಿ ಅಂಗವಾಗಿ ಮೆರವಣಿಗೆ ನಡೆಸಲು ಅನುಮತಿ ಕೋರಿ ಪೊಲೀಸ್ ಇಲಾಖೆಗೆ 2 ಸಾವಿರದಷ್ಟು ಅರ್ಜಿಗಳು ಸಲ್ಲಿಕೆಯಾಗಿವೆ ಎಂದು ಅಡ್ವೊಕೇಟ್ ಜನರಲ್ ಎಸ್.ಎನ್.ಮುಖರ್ಜಿ ಅವರು ನ್ಯಾಯಪೀಠದ ಗಮನಕ್ಕೆ ತಂದರು.

ರಿಶಾರಾ: ನಿಷೇಧಾಜ್ಞೆ ಮುಂದುವರಿಕೆ

ರಿಶಾರಾ, ಪಶ್ಚಿಮ ಬಂಗಾಳ (ಪಿಟಿಐ): ಹಿಂಸಾಚಾರ ಪೀಡಿತ, ಹೂಗ್ಲಿ ಜಿಲ್ಲೆಯ ರಿಶಾರಾ ಪಟ್ಟಣದಲ್ಲಿ ನಿಷೇಧಾಜ್ಞೆಯನ್ನು ಬುಧವಾರವೂ ಮುಂದುವರಿಸಲಾಗಿದೆ. ಇಂಟರ್‌ನೆಟ್ ಸೇವೆಗಳನ್ನೂ ಸ್ಥಗಿತಗೊಳಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಹಿಂಸಾಚಾರ ಇಲ್ಲವೇ ಬೆಂಕಿ ಹಚ್ಚಿದ ಘಟನೆಗಳು ನಡೆದ ಬಗ್ಗೆ ವರದಿಗಳು ಬಂದಿಲ್ಲ. ಪಟ್ಟಣದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಹಾಕಲಾಗಿದೆ ಎಂದು ಪೊಲೀಸ್ ಕಮಿಷನರೇಟ್‌ನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಭಾನುವಾರ ನಡೆದ ಹಿಂಸಾಚಾರಕ್ಕೆ ಸಂಬಂಧಿಸಿ ಕೆಲವರನ್ನು ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ.

ರೈಲು ಬೋಗಿಯೊಳಗೆ ಬೆಂಕಿ ಹಚ್ಚಿದ್ದ ಆರೋಪಿ ಬಂಧನ

ಮುಂಬೈ (ಪಿಟಿಐ): ‘ಚಲಿಸುತ್ತಿರುವ ರೈಲಿನ ಬೋಗಿಯೊಳಗೆ ಬೆಂಕಿ ಹಚ್ಚಿ ಮೂವರು ಪ್ರಯಾಣಿಕರ ಸಾವಿಗೆ ಕಾರಣನಾಗಿದ್ದ ಆರೋಪಿಯನ್ನು ರತ್ನಗಿರಿಯಲ್ಲಿ ಬಂಧಿಸಲಾಗಿದೆ’ ಎಂದು ಮಹಾರಾಷ್ಟ್ರದ ಭಯೋತ್ಪಾದನಾ ನಿಗ್ರಹ ಪಡೆಯ (ಎಟಿಎಸ್) ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ.

‘ಬಂಧಿತನನ್ನು ಶಾರುಖ್ ಸೈಫಿ ಎಂದು ಗುರುತಿಸಲಾಗಿದೆ. ಈತ ನವದೆಹಲಿಯ ಶಾಹೀನ್ ಬಾಗ್ ನಿವಾಸಿ ಎಂಬುದು ಗೊತ್ತಾಗಿದೆ. ಕೃತ್ಯದಲ್ಲಿ ಭಾಗಿಯಾಗಿರುವುದಾಗಿ ಈತ ಒಪ್ಪಿಕೊಂಡಿದ್ದಾನೆ’ ಎಂದು ಅಧಿಕಾರಿಗಳು ಹೇಳಿದ್ದಾರೆ.

‘ರತ್ನಗಿರಿಯ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದ ಆರೋಪಿಯು ಬಳಿಕ ನಗರದಿಂದ ಪರಾರಿಯಾಗಲು ಮುಂದಾಗಿದ್ದ. ಈ ವೇಳೆ ಕೇರಳದ ಎಸ್‌ಐಟಿ, ಎಟಿಎಸ್ ಹಾಗೂ ಮಹಾರಾಷ್ಟ್ರ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ರತ್ನಗಿರಿ ರೈಲ್ವೆ ನಿಲ್ದಾಣದ ಬಳಿ ಆತನನ್ನು ಬಂಧಿಸಿದ್ದಾರೆ. ಆತನ ಬಳಿ ಇದ್ದ ಪಾನ್, ಆಧಾರ್ ಹಾಗೂ ಎಟಿಎಂ ಕಾರ್ಡ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಮೊಬೈಲ್ ಕೂಡ ಜಪ್ತಿ ಮಾಡಲಾಗಿದೆ. ಏತಕ್ಕಾಗಿ ಆತ ರೈಲು ಬೋಗಿಯೊಳಗೆ ಬೆಂಕಿ ಹಚ್ಚಿದ್ದ ಎಂಬುದು ಇನ್ನೂ ಗೊತ್ತಾಗಿಲ್ಲ. ಹೆಚ್ಚಿನ ವಿಚಾರಣೆಗಾಗಿ ಆತನನ್ನು ಕೇರಳ ಪೊಲೀಸರ ಸುಪರ್ದಿಗೆ ಒಪ್ಪಿಸಲಾಗಿದೆ’ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಆಲಪ್ಪುಳ–ಕಣ್ಣೂರು ಎಕ್ಸಿಕ್ಯುಟಿವ್ ಎಕ್ಸ್‌ಪ್ರೆಸ್ ರೈಲಿನ ಬೋಗಿಗೆ ಭಾನುವಾರ ರಾತ್ರಿ 9.30ರ ಸುಮಾರಿಗೆ ಬೆಂಕಿ ಹಚ್ಚಲಾಗಿತ್ತು. ಈ ಘಟನೆಯಲ್ಲಿ ಒಂಬತ್ತು ಮಂದಿ ಗಾಯಗೊಂಡಿದ್ದರು.

ಕೋವಿಡ್: 4,435 ಹೊಸ ಪ್ರಕರಣ

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್ –19 ಪ್ರಕರಣಗಳ ಸಂಖ್ಯೆ ಮತ್ತೆ ದಿಢೀರ್ ಏರುಗತಿಗೆ ಹೊರಳಿದ್ದು, ಬುಧವಾರ 4,435 ಹೊಸ ಪ್ರಕರಣಗಳು ವರದಿಯಾಗಿವೆ. 15 ಮಂದಿ ಮೃತಪಟ್ಟಿದ್ದಾರೆ.

ಕೇಂದ್ರ ಆರೋಗ್ಯ ಸಚಿವಾಲಯದ ಮಾಹಿತಿ ಪ್ರಕಾರ, 163 ದಿನಗಳಲ್ಲಿ ಇದೇ ಮೊದಲ ಬಾರಿಗೆ ಒಂದೇ ದಿನದಲ್ಲಿ ಸೋಂಕಿತ ಪ್ರಕರಣಗಳ ಸಂಖ್ಯೆ ಹೆಚ್ಚಿನ ಪ್ರಮಾಣದಲ್ಲಿ ದಾಖಲಾಗಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 23,091ಕ್ಕೆ ಏರಿಕೆಯಾಗಿದೆ. ಕಳೆದ ವರ್ಷ ಸೆಪ್ಟೆಂಬರ್ 25ರಂದು 4,777 ಪ್ರಕರಣಗಳು ದಾಖಲಾಗಿದ್ದವು.

ಮಹಾರಾಷ್ಟ್ರ ಮತ್ತು ಕೇರಳದಲ್ಲಿ ತಲಾ ನಾಲ್ವರು ಸಾವನ್ನಪ್ಪಿದ್ದರೆ, ಛತ್ತೀಸಗಢ, ದೆಹಲಿ, ಗುಜರಾತ್, ಹರಿಯಾಣ, ಕರ್ನಾಟಕ, ಪಾಂಡಿಚೇರಿ ಮತ್ತು ರಾಜಸ್ಥಾನಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ.

ಕೋವಿಡ್: ವಿಡಿಯೊ ಕಾನ್ಫರೆನ್ಸ್‌ನಲ್ಲಿ ವಕೀಲರ ವಾದ

ನವದೆಹಲಿ(ಪಿಟಿಐ): ದೇಶದಲ್ಲಿ ಕೋವಿಡ್ 19 ಪ್ರಕರಣಗಳು ಮತ್ತೆ ಉಲ್ಬಣಿಸುತ್ತಿರುವ ಹಿನ್ನೆಲೆಯಲ್ಲಿ ಪ್ರಕರಣಗಳ ವಿಚಾರಣೆ ವೇಳೆ ವಕೀಲರ ವಾದ– ಪ್ರತಿವಾದಗಳನ್ನು ವಿಡಿಯೊ ಕಾನ್ಫರೆನ್ಸ್ ಮೂಲಕವೇ ಆಲಿಸಲು ಸುಪ್ರೀಂ ಕೋರ್ಟ್ ಸಿದ್ಧವಿರುವುದಾಗಿ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ಬುಧವಾರ ಹೇಳಿದ್ದಾರೆ.

ಸಿಜೆಐ ಮತ್ತು ನ್ಯಾಯಮೂರ್ತಿ ಜೆ.ಬಿ. ಪಾರ್ದೀವಾಲಾ ಅವರಿದ್ದ ನ್ಯಾಯಪೀಠವು, ಕೋವಿಡ್ ಪ್ರಕರಣಗಳ ಏರಿಕೆ ಕುರಿತ ಇತ್ತೀಚಿನ ಮಾಧ್ಯಮ ವರದಿಗಳನ್ನು ಉಲ್ಲೇಖಿಸಿ, ಹೈಬ್ರಿಡ್ ಮೋಡ್ (ವಿಡಿಯೊ ಕಾನ್ಫರೆನ್ಸ್) ಮೂಲಕ ಕೋರ್ಟ್ ಕಲಾಪಗಳಿಗೆ ಹಾಜರಾಗಲು ವಕೀಲರಿಗೆ ಅನುಮತಿ ನೀಡಲು ನ್ಯಾಯಾಲಯ ಸಿದ್ಧವಿದೆ’ ಎಂದು ಹೇಳಿದೆ.

ಬಿಜೆಪಿ ಸಂಸ್ಥಾಪನಾ ದಿನ ಇಂದು: ಮೋದಿ ಭಾಷಣ 10 ಲಕ್ಷ ಕಡೆಗಳಲ್ಲಿ ನೇರ ಪ್ರಸಾರ

ನವದೆಹಲಿ (ಪಿಟಿಐ): ಬಿಜೆಪಿ ಸಂಸ್ಥಾಪನಾ ದಿನಾಚರಣೆಯು ಗುರುವಾರ ನಡೆಯಲಿದ್ದು, ಈ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ಪಕ್ಷದ ಸದಸ್ಯರನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ.

ಜೊತೆಗೆ, ಮುಂದಿನ ಲೋಕಸಭೆ ಚುನಾವಣೆಯಲ್ಲೂ ಪ್ರಧಾನಿಯಾಗಿ ಮೋದಿ ಅವರನ್ನೇ ಪುನರ್‌ಆಯ್ಕೆ ಮಾಡುವಂಥ ಸಂದೇಶವಿರುವ ‘ಗೋಡೆ ಬರಹ’ ಅಭಿಯಾನಕ್ಕೂ ಈ ವೇಳೆ ಚಾಲನೆ ನೀಡಲಾಗುವುದು.

ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ ನಡ್ಡಾ ಅವರು ಗೋಡೆ ಬರಹ ಅಭಿಯಾನಕ್ಕೆ ಮಧ್ಯಾಹ್ನ 12 ಗಂಟೆಗೆ ಚಾಲನೆ ನೀಡಲಿದ್ದಾರೆ. ನಂತರ, ‘ಏಕ್ ಬಾರ್ ಫಿರ್ ಸೆ ಮೋದಿ ಸರ್ಕಾರ್’ (ಒಂದು ಬಾರಿ ಮತ್ತೆ ಮೋದಿ ಸರ್ಕಾರ) ಎಂಬ ಘೋಷಣೆಯನ್ನು 10.22 ಲಕ್ಷಕ್ಕೂ ಹೆಚ್ಚು ಸ್ಥಳಗಳಲ್ಲಿ ಪಕ್ಷದ ಕಾರ್ಯಕರ್ತರು ಬರೆಯಲಿದ್ದಾರೆ ಎಂದು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಚುಂಗ್ ಸುದ್ದಿಗಾರರಿಗೆ ತಿಳಿಸಿದರು. ಮೋದಿ ಅವರ ಭಾಷಣವನ್ನು ದೇಶದ ಸುಮಾರು 10 ಲಕ್ಷ ಕಡೆಗಳಲ್ಲಿ ನೇರ ಪ್ರಸಾರ ಮಾಡಲಾಗುವುದು ಎಂದರು.

‘ಸಾಮಾಜಿಕ ನ್ಯಾಯ ವಾರ’ಕ್ಕೆ ಪಕ್ಷವು ಸಂಸ್ಥಾಪನಾ ದಿನದಂದು ಚಾಲನೆ ನೀಡಲಿದೆ. ಈ ಆಚರಣೆ ಏಪ್ರಿಲ್ 14ರವರೆಗೂ (ಅಂಬೇಡ್ಕರ್ ಜಯಂತಿ) ನಡೆಯಲಿದೆ ಎಂದರು.

ಕೇಂದ್ರ ಸರ್ಕಾರದಿಂದ ತನಿಖಾ ಸಂಸ್ಥೆಗಳ ದುರ್ಬಳಕೆ ಆರೋಪ

ವಿಪಕ್ಷಗಳ ಅರ್ಜಿ ವಿಚಾರಣೆ: ‘ಸುಪ್ರೀಂ’ ನಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ತನ್ನ ರಾಜಕೀಯ ವಿರೋಧಿಗಳನ್ನು ಹಣಿಯಲು ಕೇಂದ್ರ ಸರ್ಕಾರವು ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಆರೋಪಿಸಿ ಕಾಂಗ್ರೆಸ್ ಸೇರಿದಂತೆ ಒಟ್ಟು 14 ವಿರೋಧ ಪಕ್ಷಗಳು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಬುಧವಾರ ನಿರಾಕರಿಸಿದೆ.

‘ಕಾನೂನಿನ ಎದುರು ಎಲ್ಲರೂ ಸಮಾನರು. ರಾಜಕಾರಣಿಗಳಿಗೆ ಸಾಮಾನ್ಯ ನಾಗರಿಕರಿಗಿಂತಲೂ ಹೆಚ್ಚಿನ ರಕ್ಷಣೆ ನೀಡಲಾಗದು. ಅಮೂರ್ತ ರೀತಿಯಲ್ಲಿ ಮಾರ್ಗಸೂಚಿಗಳನ್ನು ಪ್ರಕಟಿಸುವುದೂ ಅಪಾಯಕಾರಿ’ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿ ಜೆ.ಬಿ.ಪಾರ್ದಿವಾಲಾ ಅವರನ್ನೊಳಗೊಂಡ ಪೀಠ ಅಭಿಪ್ರಾಯಪಟ್ಟಿದೆ.

‘ಯಾರೊ ನೊಂದ ವ್ಯಕ್ತಿ ಸಲ್ಲಿಸಿರುವ ಅರ್ಜಿ ಇದಲ್ಲ. ಇದು ರಾಜಕೀಯ ಪಕ್ಷಗಳು ಹೂಡಿರುವ ದಾವೆ. ಕೆಲ ಅಂಕಿ ಅಂಶಗಳು ಲಭ್ಯ ಇದ್ದ ಮಾತ್ರಕ್ಕೆ ಅವುಗಳ ಆಧಾರದಲ್ಲಿ ತನಿಖೆ ನಿಲ್ಲಿಸಿ ಎಂದು ಹೇಳಲು ಆಗುತ್ತದೆಯೇ? ರಾಜಕೀಯ ನಾಯಕರೂ ಈ ದೇಶದ ನಾಗರಿಕರಲ್ಲವೇ. ನಾಗರಿಕರಾಗಿರುವ ನಾವೆಲ್ಲರೂ ಕಾನೂನಿಗೆ ಬದ್ಧರಾಗಿರಬೇಕಲ್ಲವೇ’ ಎಂದು ನ್ಯಾಯಪೀಠವು ವಿಪಕ್ಷಗಳ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ವಕೀಲ ಅಭಿಷೇಕ್ ಮನು ಸಿಂಘ್ವಿ ಅವರನ್ನು ಪ್ರಶ್ನಿಸಿತು.

ಕಾಂಗ್ರೆಸ್, ಡಿಎಂಕೆ, ಆರ್‌ಜೆಡಿ, ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್), ತೃಣಮೂಲ ಕಾಂಗ್ರೆಸ್ (ಟಿಎಂಸಿ), ಆಮ್ ಆದ್ಮಿ ಪಕ್ಷ (ಎಎಪಿ), ಎನ್‌ಸಿಪಿ, ಶಿವಸೇನಾ (ಉದ್ಧವ್ ಠಾಕ್ರೆ ಬಣ), ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ), ಜೆಡಿಯು, ಸಿಪಿಎಂ, ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಸಿಪಿಐ), ಸಮಾಜವಾದಿ ಪಕ್ಷ ಹಾಗೂ ಜಮ್ಮು ಮತ್ತು ಕಾಶ್ಮೀರ ನ್ಯಾಷನಲ್ ಕಾನ್ಫರೆನ್ಸ್ ಪಕ್ಷಗಳು ಅರ್ಜಿ ಸಲ್ಲಿಸಿದ್ದವು. ಭವಿಷ್ಯದಲ್ಲಿ ಇಂತಹ ದುರ್ಬಳಕೆ ತಡೆಯುವ ಸಲುವಾಗಿ ಮಾರ್ಗಸೂಚಿಗಳನ್ನು ರಚಿಸುವಂತೆಯೂ ಕೋರಿದ್ದವು.

ರಾಷ್ಟ್ರಪತಿ ಭವನದಲ್ಲಿ ಬುಧವಾರ ನಡೆದ ಸಮಾರಂಭದಲ್ಲಿ ಸಾಹಿತಿ ಎಸ್‌.ಎಲ್‌.ಭೈರಪ್ಪ (ಎಡ) ಹಾಗೂ ಇನ್ಫೊಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಸುಧಾ ಮೂರ್ತಿ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪದ್ಮಭೂಷಣ ಗೌರವ ಪ್ರದಾನ ಮಾಡಿದರು –ಪಿಟಿಐ ಚಿತ್ರ

11,000 ವಾಹನಗಳು ಗುಜರಿಗೆ: ಗಡ್ಕರಿ

ನವದೆಹಲಿ: ‘ರಾಷ್ಟ್ರೀಯ ಗುಜರಿ ನೀತಿಯಡಿ ಈ ವರ್ಷದ ಮಾರ್ಚ್ 21ರವರೆಗೆ ಒಟ್ಟು 11,025 ವಾಹನಗಳನ್ನು ಗುಜರಿಗೆ ಹಾಕಲಾಗಿದೆ’ ಎಂದು ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು ಲೋಕಸಭೆಗೆ ಬುಧವಾರ ತಿಳಿಸಿದರು.

ಇವುಗಳಲ್ಲಿ 7,750 ಖಾಸಗಿ ಹಾಗೂ 3,725 ಸರ್ಕಾರಿ ವಾಹನಗಳು ಸೇರಿವೆ. ‘ದೇಶದ ಒಟ್ಟು 24 ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಸರ್ಕಾರಿ ಒಡೆತನದ 2,56,935 ವಾಹನಗಳು 15 ವರ್ಷಕ್ಕಿಂತ ಹಳೆಯವಾಗಿರುವುದಾಗಿ ವರದಿಯಾಗಿದೆ’ ಎಂದು ಗಡ್ಕರಿ ಹೇಳಿದರು.

ಗಾಂಧಿ ಪಠ್ಯದ ಭಾಗಕ್ಕೆ ಕೊಕ್

ಒಂದನೇ ಪುಟದಿಂದ...

‘ಕೋವಿಡ್ ಪಿಡುಗಿನ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಗೆ ಆಗುತ್ತಿರುವ ಹೊರೆಯನ್ನು ಇಳಿಸಬೇಕಿದೆ. ಪಠ್ಯದ ಹೊರೆಯನ್ನು ಕಡಿಮೆ ಮಾಡಬೇಕು ಎಂದು ನೂತನ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ), 2020 ಕೂಡ ಹೇಳುತ್ತದೆ. ಈ ಹಿನ್ನೆಲೆಯಲ್ಲಿ ಎಲ್ಲ ತರಗತಿಗಳ ಎಲ್ಲ ವಿಷಯಗಳ ಪಠ್ಯಪುಸ್ತಕಗಳನ್ನು ಸಂಕ್ಷೇಪಗೊಳಿಸುವ ಕಾರ್ಯವನ್ನು ಎನ್‌ಸಿಇಆರ್‌ಟಿ ಕೈಗೆತ್ತಿಕೊಂಡಿದೆ’ ಎಂದು ಮಂಡಳಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಮೊಘಲರ ನ್ಯಾಯ ಪದ್ಧತಿ ಕುರಿತ ಪಾಠವನ್ನು ಸಹ ಎನ್‌ಸಿಇಆರ್‌ಟಿ ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಕೈಬಿಟ್ಟಿದೆ. ಪರಿಷ್ಕೃತ ಪಠ್ಯವನ್ನು ಅಳವಡಿಸಿಕೊಳ್ಳುವುದಾಗಿ ಉತ್ತರ ಪ್ರದೇಶ ಸರ್ಕಾರ ಈಗಾಗಲೇ ಪ್ರಕಟಿಸಿದ್ದು, ಇದೇ ಹಾದಿಯಲ್ಲಿ ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಸಾಗುವ ಸಾಧ್ಯತೆ ಇದೆ. ಎನ್‌ಸಿಇಆರ್‌ಟಿಯ ಈ ನಿರ್ಧಾರವೂ ತೀವ್ರ ಟೀಕೆಗೆ ಗುರಿಯಾಗಿದೆ. ‘ಅವರು ಎಷ್ಟೇ ಪ್ರಯತ್ನಿಸಿದರೂ ಇತಿಹಾಸವನ್ನು ಅಳಿಸುವುದು ಸಾಧ್ಯವಿಲ್ಲ’ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರತೀಕಾರದ ಕ್ರಮ: ಕಾಂಗ್ರೆಸ್



ಜೈರಾಮ್ ರಮೇಶ್

ಎನ್‌ಸಿಇಆರ್‌ಟಿ ಕ್ರಮಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಕಾಂಗ್ರೆಸ್, ‘ಕೇಂದ್ರ ಸರ್ಕಾರವು ಪ್ರತೀಕಾರವಾಗಿ ಇಂಥ ಕ್ರಮ ಕೈಗೊಂಡಿದೆ. ಆ ಮೂಲಕ ತಿಪ್ಪೆ ಸಾರಿಸುವ ಕಾರ್ಯಕ್ಕೆ ಮುಂದಾಗಿದೆ’ ಎಂದು ಹೇಳಿದೆ.

ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು, ಪಠ್ಯದಲ್ಲಿ ಕೆಲ ಅಂಶಗಳನ್ನು ಕೈಬಿಟ್ಟಿರುವ ಕುರಿತ ವರದಿಗಳನ್ನು ತಮ್ಮ ಟ್ವೀಟ್‌ನೊಂದಿಗೆ ಹಂಚಿಕೊಂಡಿದ್ದಾರೆ.

ಮೊಘಲರು ಹಾಗೂ ದಲಿತ ಲೇಖಕರ ಕುರಿತ ಪಾಠಗಳನ್ನು ಕೈಬಿಡಲಾಗಿದೆ ಎಂಬ ವರದಿಯನ್ನು ಹಂಚಿಕೊಂಡಿರುವ ಅವರು, ‘ಇದು ಸರ್ಕಾರದ ಮನಸ್ಥಿತಿಯನ್ನು ತೋರುತ್ತದೆ. ಆರ್‌ಎಸ್‌ಎಸ್ ಕೇವಲ ಗಾಂಧಿ ಅವರ ಮೇಲೆ ದಾಳಿ ನಡೆಸಲಿಲ್ಲ, ಅದು ಡಾ.ಅಂಬೇಡ್ಕರ್ ಅವರ ಕಡು ವಿರೋಧಿಯಾಗಿತ್ತು’ ಎಂದಿದ್ದಾರೆ.

ಸಚಿವೆ ಶೋಭಾ ಸಮರ್ಥನೆ

ಎನ್‌ಸಿಇಆರ್‌ಟಿ ಕ್ರಮವನ್ನು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ಸಮರ್ಥಿಸಿಕೊಂಡಿದ್ದಾರೆ.

‘ಐತಿಹಾಸಿಕ ಸಂಗತಿಗಳನ್ನು ಕಾಂಗ್ರೆಸ್ ತಿರುಚಿತ್ತು. ಕಳೆದ ದಿನಗಳಲ್ಲಿ ಆಗಿರುವ ಇಂಥ ಲೋಪದೋಷಗಳನ್ನು ಸರಿಪಡಿಸುವ ಕಾರ್ಯವನ್ನು ಬಿಜೆಪಿ ಮಾಡುತ್ತಿದೆ’ ಎಂದು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

‘ಮೊಘಲರ ಕ್ರೌರ್ಯ, ತುರ್ತು ಪರಿಸ್ಥಿತಿ ದಿನಗಳು, ಕಾಶ್ಮೀರಿ ಪಂಡಿತರು ಹಾಗೂ ಸಿಖ್ಖರ ಹತ್ಯಾಕಾಂಡ, ಭ್ರಷ್ಟಾಚಾರದಂತಹ ವಿಷಯಗಳು ಕಾಂಗ್ರೆಸ್‌ಗೆ ಹೆದರಿಕೆ ಹುಟ್ಟಿಸಿದ್ದವು. ಹೀಗಾಗಿ, ಇವುಗಳನ್ನು ಕಾಂಗ್ರೆಸ್ ಪಠ್ಯಗಳಲ್ಲಿ ಸೇರಿಸಿರಲಿಲ್ಲ. ಈ ತಪ್ಪುಗಳನ್ನು ಬಿಜೆಪಿ ಈಗ ಸರಿಪಡಿಸುತ್ತಿದೆ’ ಎಂದಿದ್ದಾರೆ.

ತೆಲಂಗಾಣ: 10ನೇ ತರಗತಿ ಪ್ರಶ್ನೆ ಪತ್ರಿಕೆ ಸೋರಿಕೆ

ಬಿಜೆಪಿ ಸಂಸದ ಸಂಜಯ್ ಕುಮಾರ್ ಬಂಧನ

ಹೈದರಾಬಾದ್/ನವದೆಹಲಿ (ಪಿಟಿಐ): 10ನೇ ತರಗತಿ (ಎಸ್‌ಎಸ್‌ಸಿ) ಬೋರ್ಡ್ ಪರೀಕ್ಷೆಯ ಹಿಂದಿ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದ ಪ್ರಮುಖ ಆರೋಪಿ ತೆಲಂಗಾಣ ಬಿಜೆಪಿ ಅಧ್ಯಕ್ಷ ಮತ್ತು ಕರೀಂನಗರದ ಸಂಸದ ಬಂಡಿ ಸಂಜಯ್ ಕುಮಾರ್ ಅವರನ್ನು ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಪ್ರಧಾನಿ ಮೋದಿ ಇದೇ 8ರಂದು ವಿವಿಧ ಯೋಜನೆಗಳ ಉದ್ಘಾಟನೆಗೆ ರಾಜ್ಯಕ್ಕೆ ಭೇಟಿ ನೀಡುತ್ತಿದ್ದು, ಅದಕ್ಕೂ ಮುನ್ನ ಈ ಬೆಳವಣಿಗೆ ನಡೆದಿದೆ.

ತ್ವರಿತ ಸಂದೇಶದ ವಿವಿಧ ಆ್ಯಪ್‌ಗಳಲ್ಲಿ ಈ ಪ್ರಶ್ನೆ ಪತ್ರಿಕೆ ರವಾನಿಸಿ ಪರೀಕ್ಷೆ ನಕಲಿಗೆ ಸಹಕರಿಸಿದ ಪ್ರಕರಣದಲ್ಲಿ ಸಂಜಯ್ ಕುಮಾರ್ ಅವರನ್ನು ವಾರಂಗಲ್ ಪೊಲೀಸರು ಪ್ರಮುಖ ಆರೋಪಿಯನ್ನಾಗಿ ಹೆಸರಿಸಿದ್ದಾರೆ.

ಪ್ರಸ್ತುತ ನಡೆಯುತ್ತಿರುವ ಎಸ್‌ಎಸ್‌ಸಿ ಬೋರ್ಡ್ ಪಬ್ಲಿಕ್ ಪರೀಕ್ಷೆ ವೇಳೆ ವಿದ್ಯಾರ್ಥಿಗಳು ಮತ್ತು ಪೋಷಕರಲ್ಲಿ ಆತಂಕ ಮೂಡಿಸುವ ಸಂಚು ರೂಪಿಸಿ, ಪ್ರಶ್ನೆ ಪತ್ರಿಕೆ ಸೋರಿಕೆ ಕಳಂಕವನ್ನು ತೆಲಂಗಾಣ ಆಡಳಿತದ ಮೇಲೆ ಹೊರಿಸಿ, ಸರ್ಕಾರ ದೂಷಿಸಲು ಸಂಜಯ್ ಕುಮಾರ್ ಯತ್ನಿಸಿದ್ದರು ಎಂದು ಪೊಲಿಸರು ಆರೋಪ ಹೊರಿಸಿದ್ದಾರೆ.

> **ಬಿಆರ್‌ಎಸ್ ನಾಯಕತ್ವ ಮುಳುಗುತ್ತಿರುವ ದೋಣಿಯಾಗಿದೆ. ಈ ಬಂಧನ ಅವರ ರಾಜಕೀಯ ಅಸ್ತಿತ್ವದ ಶವಪೆಟ್ಟಿಗೆಯ ಕೊನೆಯ ಮೊಳೆ**
> **ಬಿ.ಎಲ್. ಸಂತೋಷ್,** ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ

ಹಿಂದಿ ಪ್ರಶ್ನೆ ಪತ್ರಿಕೆಯನ್ನು ತ್ವರಿತ ಸಂದೇಶದ ಆ್ಯಪ್‌ಗಳಲ್ಲಿ ರವಾನಿಸಿದ ಆರೋಪಿಗಳಲ್ಲಿ ಒಬ್ಬಾತ ಆ ಪ್ರಶ್ನೆ ಪತ್ರಿಕೆಯನ್ನು ಸಂಸದ ಸಂಜಯ್ ಕುಮಾರ್ ಅವರಿಗೂ ಕಳುಹಿಸಿದ್ದ. ನಂತರ ಈ ಪ್ರಶ್ನೆ ಪತ್ರಿಕೆ ಸಾಮಾಜಿಕ ಮಾಧ್ಯಮಗಳಲ್ಲೂ ವ್ಯಾಪಕವಾಗಿ ಹರಿದಾಡಿತ್ತು. ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ ಎಂದು ಪೊಲೀಸ್ ಆಯುಕ್ತರು ಹೇಳಿದ್ದಾರೆ.

ತೆಲಂಗಾಣದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಂಡಿ ಸಂಜಯ್ ಕುಮಾರ್ ಅವರನ್ನು ಪೊಲೀಸರು ಬುಧವಾರ ಬಂಧಿಸಿದರು – ಪಿಟಿಐ ಚಿತ್ರ

ಬಿಜೆಪಿ ನಾಯಕಿ ಮತ್ತು ವಕೀಲೆ ರಚನಾ ರೆಡ್ಡಿ, ಸಂಜಯ್ ಕುಮಾರ್ ಅವರನ್ನು ಕೋರ್ಟ್ ಮುಂದೆ ತಕ್ಷಣ ಹಾಜರುಪಡಿಸಲು ಪೊಲೀಸರಿಗೆ ನಿರ್ದೇಶಿಸಲು ಕೋರಿ ಪಕ್ಷವು ತೆಲಂಗಾಣ ಹೈಕೋರ್ಟ್‌ಗೆ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದೆ ಎಂದು ತಿಳಿಸಿದ್ದಾರೆ.

ಬಿಜೆಪಿ ಪ್ರತಿಭಟನೆ: ಸಂಸದರ ಬಂಧನ ವಿರೋಧಿಸಿ ಪ್ರತಿಭಟಿಸಿದ ಬಿಜೆಪಿ ಕಾರ್ಯಕರ್ತರು, ಸಂಸದರನ್ನು ತಕ್ಷಣ ಬಿಡುಗಡೆಗೊಳಿಸಲು ಆಗ್ರಹಿಸಿದರು. ಮುಖ್ಯಮಂತ್ರಿ ಚಂದ್ರಶೇಖರ ರಾವ್ ವಿರುದ್ಧ ಘೋಷಣೆಯನ್ನೂ ಕೂಗಿದರು.

ಅದಾನಿ: ಇ.ಡಿ ಕಚೇರಿಯತ್ತ ಮೆರವಣಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಅದಾನಿ ಸಮೂಹದ ವಿರುದ್ಧದ ಆರೋಪಗಳನ್ನು ಮುಂದಿಟ್ಟುಕೊಂಡು ವಿರೋಧ ಪಕ್ಷಗಳು ಜಾರಿ ನಿರ್ದೇಶನಾಲಯ (ಇ.ಡಿ) ಕಚೇರಿವರೆಗೆ ಬುಧವಾರ ಮೆರವಣಿಗೆ ಕೈಗೊಂಡವು. ಆದರೆ, ಪೊಲೀಸರು ಮೆರವಣಿಗೆಯನ್ನು ಸಂಸತ್ ಭವನದ ಹೊರಗೆ ತಡೆದರು.

ಹೀಗಾಗಿ, ವಿಪಕ್ಷಗಳ ನಾಯಕರು ತಮ್ಮ ಮನವಿ ಪತ್ರವನ್ನು ಇ–ಮೇಲ್ ಮೂಲಕ ಜಾರಿ ನಿರ್ದೇಶನಾಲಯಕ್ಕೆ ಸಲ್ಲಿಸಿದರು. ಅದಾನಿ ಸಮೂಹದಲ್ಲಿ ಹೂಡಿಕೆ ಮಾಡಿರುವ ವ್ಯಕ್ತಿಯೇ, ಸಮೂಹದ ಒಡೆತನದಲ್ಲಿರುವ ರಕ್ಷಣಾ ಸಾಧನಗಳ ಉತ್ಪಾದನಾ ಕಂಪನಿಯೊಂದರ ಸಹ ಮಾಲೀಕರಾಗಿರುವುದು ಹೇಗೆ ಎಂದೂ ವಿಪಕ್ಷಗಳು ಈ ಪತ್ರದಲ್ಲಿ ಪ್ರಶ್ನಿಸಿವೆ.

‘ಮೀಡಿಯಾ ಒನ್’ ನಿರ್ಬಂಧ ತೆರವು

ಒಂದನೇ ಪುಟದಿಂದ...

‘ಸಾಮಾಜಿಕ, ಆರ್ಥಿಕ, ರಾಜಕೀಯದಿಂದ ಹಿಡಿದು ರಾಜಕೀಯ ಸಿದ್ಧಾಂತದವರೆಗೆ ಇರುವ ಸಮಸ್ಯೆಗಳ ಕುರಿತಾದ ಏಕರೂಪದ ದೃಷ್ಟಿಕೋನವು ಪ್ರಜಾಪ್ರಭುತ್ವಕ್ಕೆ ದೊಡ್ಡ ಅಪಾಯ ತಂದೊಡ್ಡಲಿದೆ. ಸುದ್ದಿವಾಹಿನಿಯ ಪರವಾನಗಿಯನ್ನು ನವೀಕರಿಸದೇ ಇರುವುದು ವಾಕ್ ಸ್ವಾತಂತ್ರ್ಯದ ಹಕ್ಕಿನ ಮೇಲಿನ ನಿರ್ಬಂಧ ಎನಿಸಲಿದೆ’ ಎಂದು ಅಭಿಪ್ರಾಯಪಟ್ಟಿದೆ.

‘ವಾಹಿನಿಯ ಷೇರುದಾರರಿಗೂ ಜಮಾತೆ–ಇ–ಇಸ್ಲಾಂ ಹಿಂದ್ ಸಂಘಟನೆಗೂ ಇರುವ ನಂಟಿನ ಕುರಿತಾದ ಆರೋಪದ ಆಧಾರದಲ್ಲಿ ಸುದ್ದಿ ವಾಹಿನಿಯ ಹಕ್ಕನ್ನು ನಿರ್ಬಂಧಿಸಲು ಆಗುವುದಿಲ್ಲ. ಕಾನೂನಿನ ಅಡಿಯಲ್ಲಿ ನೀಡಲಾಗಿರುವ ನಾಗರಿಕರ ಪರಿಹಾರ ಕ್ರಮಗಳನ್ನು ನಿರಾಕರಿಸುವುದಕ್ಕಾಗಿ ಸರ್ಕಾರವು ರಾಷ್ಟ್ರೀಯ ಭದ್ರತೆಯನ್ನು ಅಸ್ತ್ರವಾಗಿ ಪ್ರಯೋಗಿಸುತ್ತಿದೆ’ ಎಂದು ಹೇಳಿದೆ. ‘ಮುಚ್ಚಿದ ಲಕೋಟೆ ಸಂಸ್ಕೃತಿಯು ಸಹಜ ನ್ಯಾಯದ ತತ್ವಗಳನ್ನು ಉಲ್ಲಂಘಿಸಲಿದೆ’ ಎಂದಿದೆ.

‘3ನೇ ಮಹಾಯುದ್ಧ ದೂರವಿಲ್ಲ’

ವಾಷಿಂಗ್ಟನ್ (ಪಿಟಿಐ): ಅಮೆರಿಕ ಅಧ್ಯಕ್ಷ ಜೋ ಬೈಡನ್ ಆಡಳಿತದಲ್ಲಿ ಜಗತ್ತು ಮೂರನೇ ಪರಮಾಣು ಮಹಾಯುದ್ಧ ಎದುರಿಸುವ ಸಾಧ್ಯತೆ ಇದೆ. ಅಮೆರಿಕ ಸರ್ಕಾರ ದೇಶವನ್ನು ನಾಶ ಮಾಡುತ್ತಿದೆ ಎಂದು ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆರೋಪಿಸಿದರು.

ನೀಲಿಚಿತ್ರ ತಾರೆಗೆ ಹಣ ಸಂದಾಯ ಮಾಡಿದ್ದ ಕ್ರಿಮಿನಲ್ ಪ್ರಕರಣದ ವಿಚಾರಣೆ ಎದುರಿಸಿದ ಟ್ರಂಪ್, ನ್ಯೂಯಾರ್ಕ್‌ನಿಂದ ಫ್ಲೋರಿಡಾಗೆ ವಾಪಸ್ ಬಂದು ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದರು.

‘ಪರಮಾಣು ಅಸ್ತ್ರ ಬಳಕೆ ಮಾಡುವ ಬಗ್ಗೆ ಹಲವು ದೇಶಗಳಿಂದ ಬಹಿರಂಗ ಬೆದರಿಕೆ ಇದೆ. ಆದಾಗ್ಯೂ ಬೈಡನ್ ಆಡಳಿತದಲ್ಲಿ ಇತರ ದೇಶಗಳು ಈ ಬಗ್ಗೆ ಧ್ವನಿ ಎತ್ತುತ್ತಿಲ್ಲ, ಚರ್ಚೆ ನಡೆಸುತ್ತಿಲ್ಲ. ಇದು ಜಗತ್ತು ಮೂರನೇ ಪರಮಾಣು ಯುದ್ಧ ಎದುರಿಸಲು ಕಾರಣವಾಗಬಹುದು. ನೀವು ನಂಬಿ ಅಥವಾ ಬಿಡಿ ಮೂರನೇ ಮಹಾಯುದ್ಧಕ್ಕೆ ಹೆಚ್ಚೇನೂ ದೂರ ಇಲ್ಲ’ ಭವಿಷ್ಯ ನುಡಿದರು.

‘ಬೈಡನ್ ಆಡಳಿತದಲ್ಲಿ ಆರ್ಥಿಕತೆ ಕುಸಿಯುತ್ತಿದೆ, ಹಣದುಬ್ಬರ ನಿಯಂತ್ರಣ ಮೀರಿದೆ. ರಷ್ಯಾ ಚೀನಾದೊಂದಿಗೆ ಕೈಜೋಡಿಸಿದೆ. ಸೌದಿ ಅರೇಬಿಯಾ ಇರಾನ್ ಜೊತೆ ಸೇರಿದೆ. ಚೀನಾ, ರಷ್ಯಾ, ಇರಾನ್ ಮತ್ತು ಉತ್ತರ ಕೊರಿಯಾ ಒಟ್ಟಾಗಿ ವಿನಾಶಕಾರಿ ಒಕ್ಕೂಟ ರಚನೆ ಮಾಡಿಕೊಂಡಿವೆ. ನನ್ನ ಆಡಳಿತಾವಧಿಯಲ್ಲಿ ಇಂಥದ್ದು ಘಟಿಸಿರಲಿಲ್ಲ’ ಎಂದು ಹೇಳಿದರು.

‘ನಾನು ಅಮೆರಿಕ ಅಧ್ಯಕ್ಷನಾಗಿದ್ದರೆ ಇದೆಲ್ಲ ಸಾಧ್ಯವೇ ಇರಲಿಲ್ಲ. ಉಕ್ರೇನ್ ಮೇಲೆ ರಷ್ಯಾ ದಾಳಿ ಮಾಡುತ್ತಿರಲಿಲ್ಲ. ಎಲ್ಲರೂ ಬದುಕುಳಿಯುತ್ತಿದ್ದರು. ಸುಂದರ ನಗರಗಳು ಸ್ವಚ್ಛಂದವಾಗಿ ಇರುತ್ತಿದ್ದವು’ ಎಂದು ಹೇಳಿದರು.

ಡಿ.4ಕ್ಕೆ ಮತ್ತೆ ಟ್ರಂಪ್ ವಿಚಾರಣೆ

ನ್ಯೂಯಾರ್ಕ್ (ಪಿಟಿಐ): ನೀಲಿಚಿತ್ರ ತಾರೆಗೆ ಹಣ ಸಂದಾಯ ಮಾಡಿದ್ದ ಕ್ರಿಮಿನಲ್ ಪ್ರಕರಣ ಸಂಬಂಧ ಅಮೆರಿಕ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿರುದ್ಧದ ಮುಂದಿನ ವಿಚಾರಣೆಯನ್ನು ಡಿ.4 ಮುಂದೂಡಲಾಗಿದೆ.

2024ರ ಅಧ್ಯಕ್ಷೀಯ ಚುನಾವಣೆ ಆರಂಭಕ್ಕೂ ಎರಡು ತಿಂಗಳು ಮೊದಲು ಟ್ರಂಪ್ ವಿಚಾರಣೆ ಎದುರಿಸಲಿದ್ದಾರೆ.

ಮುಂದಿನ 65 ದಿನಗಳಲ್ಲಿ ಪ್ರಕರಣದ ಬಹುಪಾಲು ಸಾಕ್ಷ್ಯಗಳು ದೊರಕುವ ನಿರೀಕ್ಷೆಯಿದೆ ಎಂದು ಸರ್ಕಾರದ ಪರ ವಕೀಲರು ವಿಚಾರಣೆ ವೇಳೆ ತಿಳಿಸಿದರು.

ಪ್ರಕರಣ ಸಂಬಂಧ ಮನವಿ ಸಲ್ಲಿಕೆಗೆ ಟ್ರಂಪ್ ಅವರಿಗೆ ಆ.8ರ ವರೆಗೆ ಸಮಯಾವಕಾಶ ನೀಡಲಾಗಿದೆ. ಇದಕ್ಕೆ ಸರ್ಕಾರದ ಪರ ವಕೀಲರು ಸೆ.19 ರಂದು ಪ್ರತಿಕ್ರಿಯೆ ನೀಡಲಿದ್ದಾರೆ. ಡಿ.4ರಂದು ನ್ಯಾಯಮೂರ್ತಿ ಅವರು ಮನವಿಗಳ ಕುರಿತು ನಿರ್ಧಾರ ಪ್ರಕಟಿಸಲಿದ್ದಾರೆ.

ಅರುಣಾಚಲದಲ್ಲಿ ಹೆಸರು ಬದಲು: ಅಮೆರಿಕ ವಿರೋಧ

ವಾಷಿಂಗ್ಟನ್ (ಪಿಟಿಐ): ಅರುಣಾಚಲ ಪ್ರದೇಶ ರಾಜ್ಯವನ್ನು ಭಾರತದ ಅವಿಭಾಜ್ಯ ಅಂಗ ಎಂದು ಅಮೆರಿಕ ಗುರುತಿಸಿದ್ದು, ಇಲ್ಲಿನ ಸ್ಥಳಗಳ ಹೆಸರುಗಳನ್ನು ಬದಲಾಯಿಸಿ ಈ ಪ್ರದೇಶ ತನ್ನದೆನ್ನುವ ಯಾವುದೇ ಏಕಪಕ್ಷೀಯ ಯತ್ನಗಳನ್ನು ಬಲವಾಗಿ ವಿರೋಧಿಸಲಿದೆ ಎಂದು ಶ್ವೇತಭವನ ತಿಳಿಸಿದೆ.

‘ಅರುಣಾಚಲದಲ್ಲಿ ಹೆಸರು ಬದಲಾವಣೆಗೆ ತೀವ್ರ ವಿರೋಧವಿದೆ. ಹಿಂದಿನಿಂದಲೂ ನಾವು ಈ ನಿಲುವಿಗೆ ಬದ್ಧರಾಗಿದ್ದೇವೆ’ ಎಂದು ಶ್ವೇತಭವನದ ಮಾಧ್ಯಮ ಕಾರ್ಯದರ್ಶಿ ಕರೈನ್ ಜೀನ್ ಪಿಯರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅರುಣಾಚಲದ 11ಕ್ಕೂ ಹೆಚ್ಚು ಸ್ಥಳಗಳ ಹೆಸರುಗಳನ್ನು ಚೀನಾ ಬದಲಾಯಿಸಿದ ಬೆನ್ನಲ್ಲೇ ಅಮೆರಿಕದಿಂದ ಈ ಹೇಳಿಕೆ ಹೊರಬಿದ್ದಿದೆ.

ಅರುಣಾಚಲ ಪ್ರದೇಶವನ್ನು ತನ್ನ ವಶದಲ್ಲಿರುವ ಟಿಬೆಟ್‌ನ ದಕ್ಷಿಣ ಭಾಗ ಎಂದು ಚೀನಾ ಹೇಳಿಕೊಳ್ಳುತ್ತಿದೆ.

ವಿರಾಟ್ ಕೊಹ್ಲಿ, ಸಿರಾಜ್ ಮೇಲೆ ಕಣ್ಣು; ಈಡನ್‌ನಲ್ಲಿ ಆರ್‌ಸಿಬಿಗೆ ಇಂದು ಕೋಲ್ಕತ್ತ ಸವಾಲು

ತವರಿನಾಚೆಯೂ ಜಯದ ಛಲ

ಕೋಲ್ಕತ್ತ (ಪಿಟಿಐ): ಸ್ಟಾರ್ ಆಟಗಾರರ ತಂಡ ರಾಯಲ್ ಚಾಲೆಂಜರ್ಸ್ ಬೆಂಗಳೂರು ಬುಧವಾರ ಈಡನ್ ಗಾರ್ಡನ್‌ನಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ಎದುರು ಕಣಕ್ಕಿಳಿಯಲಿದೆ.

ಫಫ್ ಡುಪ್ಲೆಸಿ ನಾಯಕತ್ವದ ತಂಡವು ತನ್ನ ತವರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದಿದ್ದ ಮೊದಲ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ ಭರ್ಜರಿ ಜಯಸಾಧಿಸಿತ್ತು.

ಮುಂಬೈ ತಂಡದ ಅಗ್ರಕ್ರಮಾಂಕದ ಬ್ಯಾಟರ್‌ಗಳನ್ನು ಬೇಗನೆ ಕಟ್ಟಿಹಾಕಿದ್ದ ಮೊಹಮ್ಮದ್ ಸಿರಾಜ್ ಹಾಗೂ ಕರಣ್ ಶರ್ಮಾ ಮಿಂಚಿದ್ದರು. ವಿರಾಟ್ ಕೊಹ್ಲಿ ಮತ್ತು ಫಫ್ ಡುಪ್ಲೆಸಿಯ ಅಬ್ಬರದ ಬ್ಯಾಟಿಂಗ್ ರಂಗೇರಿತ್ತು.

ತಂಡದಲ್ಲಿ ಗ್ಲೆನ್ ಮ್ಯಾಕ್ಸ್‌ವೆಲ್, ದಿನೇಶ್ ಕಾರ್ತಿಕ್ ಕೂಡ ಬಿರುಸಿನ ಬ್ಯಾಟರ್‌ಗಳಾಗಿರುವುದರಿಂದ ಕೋಲ್ಕತ್ತ ಬೌಲರ್‌ಗಳಾದ ಟಿಮ್ ಸೌಥಿ, ಲಾಕಿ ಫರ್ಗ್ಯುಸನ್ ಹಾಗೂ ಶಾರ್ದೂಲ್ ಠಾಕೂರ್ ಅವರಿಗೆ ಕಠಿಣ ಸವಾಲು ಎದುರಾಗಬಹುದು. ಕೋಲ್ಕತ್ತ ತಂಡವು ತನ್ನ ಮೊದಲ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಎದುರು ಸೋಲನುಭವಿಸಿತ್ತು.

ಅಲ್ಲದೇ ತಂಡದ ಆಟಗಾರರು ಗಾಯದ ಸಮಸ್ಯೆಯನ್ನೂ ಎದುರಿಸುತ್ತಿದ್ದಾರೆ. ನಾಯಕ ಶ್ರೇಯಸ್ ಅಯ್ಯರ್ ಟೂರ್ನಿಗೂ ಮುನ್ನವೇ ಗಾಯಗೊಂಡಿದ್ದರು. ಅವರ ಬದಲಿಗೆ ಬ್ಯಾಟರ್ ನಿತೀಶ್ ರಾಣಾ ತಂಡವನ್ನು ಮುನ್ನಡೆಸುತ್ತಿದ್ದಾರೆ. ಆಲ್‌ರೌಂಡರ್ ಶಕೀಬ್ ಅಲ್ ಹಸನ್ ಅವರು ಕೌಟುಂಬಿಕ ಕಾರಣಗಳು ಹಾಗೂ ಅಂತರರಾಷ್ಟ್ರೀಯ ಟೂರ್ನಿಯಲ್ಲಿ ತಮ್ಮ ದೇಶದ ತಂಡವನ್ನು ಪ್ರತಿನಿಧಿಸಲು ಐಪಿಎಲ್‌ನಿಂದ ನಿರ್ಗಮಿಸಿದ್ದಾರೆ.

ಅವರ ಬದಲಿಗೆ ಈಗ ₹ 2.8 ಕೋಟಿ ಮೌಲ್ಯ ನೀಡಿ ಇಂಗ್ಲೆಂಡ್‌ನ ಜೇಸನ್ ರಾಯ್ ಅವರನ್ನು ಸೇರ್ಪಡೆ ಮಾಡಿಕೊಳ್ಳಲಾಗಿದೆ. ಆದರೆ ಅವರು ಆರ್‌ಸಿಬಿ ಎದುರಿನ ಪಂದ್ಯಕ್ಕೆ ಲಭ್ಯರಿರುವ ಬಗ್ಗೆ ಖಚಿತ ಮಾಹಿತಿ ಇಲ್ಲ. ರಾಣಾ, ಆ್ಯಂಡ್ರೆ ರಸೆಲ್, ವೆಂಕಟೇಶ್ ಅಯ್ಯರ್ ಅವರು ಲಯಕ್ಕೆ ಮರಳಿದರೆ ಆರ್‌ಸಿಬಿ ಬೌಲರ್‌ಗಳು ಹೆಚ್ಚು ಶ್ರಮಪಡಬೇಕಾಗಬಹುದು.

ದೇಶಿ ಕ್ರಿಕೆಟ್‌ನ ಯಶಸ್ವಿ ಕೋಚ್ ಚಂದ್ರಕಾಂತ್ ಪಂಡಿತ್ ಈ ಬಾರಿ ಕೋಲ್ಕತ್ತಕ್ಕೆ ಮಾರ್ಗದರ್ಶಕರಾಗಿದ್ದಾರೆ. ಸದ್ಯ ತಂಡದಲ್ಲಿರುವ ಆಟಗಾರರನ್ನು ಅವರು ಸಿದ್ಧಗೊಳಿಸಿರುವ ಬಗ್ಗೆ ಎಲ್ಲರಿಗೂ ಕುತೂಹಲ ಮೂಡಿದೆ.

ಬಾಲಿವುಡ್ ನಟ ಶಾರೂಕ್ ಖಾನ್ ಮಾಲೀಕತ್ವದ ಕೆಕೆಆರ್ 1438 ದಿನಗಳ ನಂತರ ಈಡನ್ ಗಾರ್ಡನ್‌ನಲ್ಲಿ ಐಪಿಎಲ್ ಪಂದ್ಯ ಆಡಲಿದೆ. ಇದರಿಂದಾಗಿ 66 ಸಾವಿರ ಸಾಮರ್ಥ್ಯದ ಪ್ರೇಕ್ಷಕರ ಗ್ಯಾಲರಿಯು ಭರ್ತಿಯಾಗುವ ನಿರೀಕ್ಷೆ ಇದೆ.

ತಂಡಗಳು

ರಾಯಲ್ ಚಾಲೆಂಜರ್ಸ್ ಬೆಂಗಳೂರು: ಫಫ್ ಡುಪ್ಲೆಸಿ (ನಾಯಕ), ವಿರಾಟ್ ಕೊಹ್ಲಿ, ಸುಯಶ್ ಪ್ರಭುದೇಸಾಯಿ, ದಿನೇಶ್ ಕಾರ್ತಿಕ್, ಅನುಜ್ ರಾವತ್, ಫಿನ್ ಅಲೆನ್, ಗ್ಲೆನ್ ಮ್ಯಾಕ್ಸ್‌ವೆಲ್, ವಣಿಂದು ಹಸರಂಗಾ, ಶಾಬಾಜ್ ಅಹಮದ್, ಹರ್ಷಲ್ ಪಟೇಲ್, ಡೇವಿಡ್ ವಿಲಿ, ಕರ್ಣ ಶರ್ಮಾ, ಮಹಿಪಾಲ್ ಲೊಮ್ರೊರ್, ಮೊಹಮ್ಮದ್ ಸಿರಾಜ್, ಜೋಶ್ ಹ್ಯಾಜಲ್‌ವುಡ್, ಸಿದ್ಧಾರ್ಥ್ ಕೌಲ್, ಆಕಾಶದೀಪ್, ರೀಸ್ ಟಾಪ್ಲಿ, ಹಿಮಾಂಶು ಶರ್ಮಾ, ಮಿಚೆಲ್ ಬ್ರೇಸ್‌ವೆಲ್.

ಕೋಲ್ಕತ್ತ ನೈಟ್ ರೈಡರ್ಸ್: ನಿತೀಶ್ ರಾಣಾ (ನಾಯಕ), ರೆಹಮಾನುಲ್ಲಾ ಗುರ್ಬಾಜ್, ವೆಂಕಟೇಶ್ ಅಯ್ಯರ್, ಆ್ಯಂಡ್ರೆ ರಸೆಲ್, ಸುನೀಲ್ ನಾರಾಯಣ, ಶಾರ್ದೂಲ್ ಠಾಕೂರ್, ಲಾಕಿ ಫರ್ಗ್ಯುಸನ್, ಉಮೇಶ್ ಯಾದವ್, ಟಿಮ್ ಸೌಥಿ, ಹರ್ಷಿತ್ ರಾಣಾ, ವರುಣ ಚಕ್ರವರ್ತಿ, ಅನುಕೂಲ್ ರಾಯ್, ರಿಂಕು ಸಿಂಗ್, ಎನ್. ಜಗದೀಶನ್, ವೈಭವ್ ಅರೋರಾ, ಸುಯಶ್ ಶರ್ಮಾ. ಡೇವಿಡ್ ವೀಸ್, ಕುಲವಂತ್ ಖೆಜರೊಲಿಯಾ, ಲಿಟನ್ ದಾಸ್, ಮನದೀಪ್ ಸಿಂಗ್.

ನಿತೀಶ್ ರಾಣಾ



ವಿರಾಟ್ ಕೊಹ್ಲಿ

ಬಲಾಬಲ

ಪಂದ್ಯ 30	
ಆರ್‌ಸಿಬಿ ಜಯ	14
ಕೆಕೆಆರ್ ಜಯ	16

ಜಾವೆಲಿನ್ ಬಿಟ್ಟು ಕ್ರಿಕೆಟ್‌ಗೆ ಬಂದ ಜೋಶ್

ಹ್ಯಾಜಲ್‌ವುಡ್

ಬೆಂಗಳೂರು: 'ತಂಡ ಕ್ರೀಡೆಯಲ್ಲಿ ಆಡಲು ಅಥ್ಲೆಟಿಕ್ಸ್ ಬಿಟ್ಟು ಕ್ರಿಕೆಟ್ ಕ್ಷೇತ್ರಕ್ಕೆ ಬಂದೆ' ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬೌಲರ್ ಜೋಶ್ ಹ್ಯಾಜಲ್‌ವುಡ್ ಹೇಳಿದ್ದಾರೆ.

ತಾವು ಶಾಲಾ ವಿದ್ಯಾರ್ಥಿಯಾಗಿದ್ದ ಸಂದರ್ಭದಲ್ಲಿ ಜಾವೆಲಿನ್ ಥ್ರೋ ಅಥ್ಲೀಟ್ ಆಗಿದ್ದರು. ಕೆಲವು ವರ್ಷಗಳ ನಂತರ ಕ್ರಿಕೆಟ್‌ನತ್ತ ಆಕರ್ಷಿತರಾದ ಜೋಶ್ ವೇಗದ ಬೌಲರ್ ಆಗಿದ್ದಾರೆ. ಹೋದ ವರ್ಷದ ಐಪಿಎಲ್‌ನಲ್ಲಿ ಅವರು 20 ವಿಕೆಟ್‌ಗಳನ್ನು ಗಳಿಸಿದ್ದರು.

'ಕ್ರಿಕೆಟ್ ಆಟವೇ ನನ್ನ ಪ್ರಥಮ ಪ್ರೇಮ. 15-16 ವರ್ಷದವನಾಗಿದ್ದಾಗ ಕ್ರಿಕೆಟ್ ಆಡುತ್ತಿದೆ. ಆಗ ಚಳಿಗಾಲದಲ್ಲಿ ಮಾತ್ರ ಅಥ್ಲೆಟಿಕ್ಸ್ ಮಾಡುತ್ತಿದ್ದೆ. ಅದು ಫಿಟ್‌ನೆಸ್ ರಕ್ಷಿಸಿಕೊಳ್ಳಲು ಸಹಾಯವಾಗುತ್ತಿತ್ತು. ಅದಕ್ಕಾಗಿ ಶಾಲೆಯಿಂದ ಬಿಡುವು ಕೂಡ ಸಿಗುತ್ತಿತ್ತು' ಎಂದು ಜೋಶ್ ಆರ್‌ಸಿಬಿಯ ಪಾಡ್‌ಕಾಸ್ಟ್‌ನಲ್ಲಿ ಹೇಳಿದರು.

'ವೈಯಕ್ತಿಕ ಕ್ರೀಡೆಗಳು ಬಹಳ ಕಠಿಣ. ಸುದೀರ್ಘ ಅವಧಿಯವರೆಗೆ ಅದರಲ್ಲಿ ಮುಂದುವರಿಯಲು ಸಾಧ್ಯವಿಲ್ಲ. ಕಡಿಮೆ ಅವಧಿಯಲ್ಲಿ ದೊಡ್ಡ ಸಾಧನೆ ಮಾಡಬೇಕು. ಆದರೆ ತಂಡ ಕ್ರೀಡೆಗಳಲ್ಲಿ ದೀರ್ಘ ಕಾಲದವರೆಗೆ ಆಡುವ ಅವಕಾಶ ಇದೆ. ಅಲ್ಲಿಯೂ ಫಿಟ್‌ನೆಸ್ ಮುಖ್ಯ' ಎಂದರು.

ಪಂಜಾಬ್‌ಗೆ ರೋಚಕ ಜಯ

ಎಲಿಸ್ ಅಮೋಘ ಬೌಲಿಂಗ್: ರಾಜಸ್ಥಾನಕ್ಕೆ ನಿರಾಸೆ

ಗುವಾಹಟಿ (ಪಿಟಿಐ): ನೇಥನ್ ಎಲಿಸ್ ಪರಿಣಾಮಕಾರಿ ಬೌಲಿಂಗ್‌ನಿಂದಾಗಿ ಪಂಜಾಬ್ ಕಿಂಗ್ಸ್ ತಂಡವು ರಾಜಸ್ಥಾನ ರಾಯಲ್ಸ್ ಎದುರಿನ ಐಪಿಎಲ್ ಪಂದ್ಯದಲ್ಲಿ ಜಯ ಗಳಿಸಿತು.

ರಾಜಸ್ಥಾನ ತಂಡದ ದಿಟ್ಟ ಹೋರಾಟಕ್ಕೆ ಫಲ ಲಭಿಸಲಿಲ್ಲ.

ಬರ್ಸಾಪರ ಕ್ರಿಕೆಟ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಪಂಜಾಬ್ 5 ರನ್‌ಗಳ ರೋಚಕ ಜಯ ಸಾಧಿಸಿತು. ಗೆಲುವಿಗೆ ನಾಯಕ ಶಿಖರ್ ಧವನ್ ಮತ್ತು ಪ್ರಭಸಿಮ್ರನ್ ಸಿಂಗ್ ಅವರ ಅಮೋಘ ಬ್ಯಾಟಿಂಗ್ ಕೂಡ ಕಾರಣವಾದವು.

ಮೊದಲು ಬ್ಯಾಟ್ ಮಾಡಿದ ಪಂಜಾಬ್ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 197 ರನ್ ಗಳಿಸಿತು. ರಾಜಸ್ಥಾನ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 192 ರನ್ ಗಳಿಸಿತು.

ಪಂಜಾಬ್ ನೀಡಿದ 198 ರನ್‌ಗಳ ಗುರಿ ಬೆನ್ನತ್ತಿದ ರಾಜಸ್ಥಾನ ಆರಂಭಿಕ ಆಘಾತ ಅನುಭವಿಸಿತು. 26 ರನ್ ಆಗುವಷ್ಟರಲ್ಲಿ ಯಶಸ್ವಿ ಜೈಸ್ವಾಲ್ (11) ಹಾಗೂ ಆರ್.ಅಶ್ವಿನ್ (0) ವಿಕೆಟ್‌ಗಳನ್ನು ಕಳೆದುಕೊಂಡಿತು.

ಮಧ್ಯಮಕ್ರಮಾಂಕದಲ್ಲಿ ಜೋಸ್ ಬಟ್ಲರ್ (19), ಸಂಜು ಸ್ಯಾಮ್ಸನ್ (42, 25ಎ, 4X5, 6X1), ದೇವದತ್ತ ಪಡಿಕ್ಕಲ್ (21), ರಿಯಾನ್ ಪರಾಗ್ (21) ನಡೆಸಿದ ಪ್ರಯತ್ನ ಫಲ ನೀಡಲಿಲ್ಲ.

ಕೊನೆಯ ಹಂತದಲ್ಲಿ ಶಿಮ್ರಾನ್ ಹೆಟ್ಮೆಯರ್ (36, 18ಎ, 4X1, 6X2) ಹಾಗೂ ಧ್ರುವ ಜುರೆಲ್ (ಔಟಾಗದೆ 32, 15ಎ, 4X3, 6X2) ನಡೆಸಿದ ಹೋರಾಟವೂ ವಿಫಲವಾಯಿತು.

ನೇಥನ್ ಎಲಿಸ್ ಅವರು 30 ರನ್ ನೀಡಿ ನಾಲ್ಕು ವಿಕೆಟ್‌ಗಳನ್ನು ಕಬಳಿಸಿದರು.

ಭರ್ಜರಿ ಆಟ: ಟಾಸ್ ಗೆದ್ದ ರಾಜಸ್ಥಾನ ರಾಯಲ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಶಿಖರ್ (86, 56ಎ) ಹಾಗೂ ಪ್ರಭಸಿಮ್ರನ್ (60, 34ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 90 ರನ್ ಸೇರಿಸಿದರು.

ಪ್ರಭಸಿಮ್ರನ್ 34 ಎಸೆತಗಳನ್ನು ಆಡಿದರು. ಏಳು ಬೌಂಡರಿ ಮೂರು ಸಿಕ್ಸರ್‌ಗಳನ್ನು ಹೊಡೆದರು. ಇನ್ನೊಂದು ಬದಿಯಲ್ಲಿ ನಾಯಕ ಶಿಖರ್ ಕೂಡ ಅಬ್ಬರಿಸಿದರು. ಅವರೂ 9 ಬೌಂಡರಿ ಹಾಗೂ 3 ಸಿಕ್ಸರ್ ಗಳಿಸಿದರು.

ಹತ್ತನೇ ಓವರ್‌ನಲ್ಲಿ ವೆಸ್ಟ್ ಇಂಡೀಸ್‌ನ ಹೋಲ್ಡರ್ ಎಸೆತದಲ್ಲಿ ಪ್ರಭಸಿಮ್ರನ್ ಔಟಾದರು. ಇದರೊಂದಿಗೆ ಜೊತೆಯಾಟ ಮುರಿದುಬಿತ್ತು.

ಬಿ. ರಾಜಪಕ್ಸ ಗಾಯಗೊಂಡು ನಿವೃತ್ತರಾದರು. ಈ ಸಂದರ್ಭದಲ್ಲಿ ಇನ್ನೊಂದು ಬದಿಯಲ್ಲಿದ್ದ ಶಿಖರ್ ಬೀಸಾಟ ಆರಂಭಿಸಿದರು.

ಇದರಿಂದಾಗಿ ತಂಡದ ಮೊತ್ತವು ಹೆಚ್ಚಿತು. ಆದರೆ ಜಿತೇಶ್ ಶರ್ಮಾ (27 ರನ್) ಅವರನ್ನು ಬಿಟ್ಟರೆ ಉಳಿದವರಿಂದ ದೊಡ್ಡ ಇನಿಂಗ್ಸ್ ಮೂಡಿಬರಲಿಲ್ಲ.

ನೇಥನ್ ಎಲಿಸ್‌ಗೆ (ಬಲ) ಸಹ ಆಟಗಾರನ ಅಭಿನಂದನೆ– ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಪಂಜಾಬ್ ಕಿಂಗ್ಸ್: 4ಕ್ಕೆ197 (20 ಓವರ್‌ಗಳಲ್ಲಿ)

ಪ್ರಭಸಿಮ್ರನ್ ಸಿ ಬಟ್ಲರ್ ಬಿ ಹೋಲ್ಡರ್ 60 (34ಎ,4X7,6X3)
ಶಿಖರ್ ಔಟಾಗದೆ 86 (56ಎ, 4X9, 6X3)
ಭಾನುಕಾ ಗಾಯಗೊಂಡು ನಿವೃತ್ತಿ 1 (1ಎ)
ಜಿತೇಶ್ ಸಿ ರಿಯಾನ್ ಬಿ ಚಾಹಲ್ 27 (16ಎ, 4X2, 6X1)
ಸಿಕಂದರ್ ಬಿ ಅಶ್ವಿನ್ 1 (2ಎ)
ಶಾರೂಕ್ ಸಿ ಬಟ್ಲರ್ ಬಿ ಹೋಲ್ಡರ್ 11 (10ಎ, 4X1)
ಸ್ಯಾಮ್ ಔಟಾಗದೆ 1 (2ಎ))
ಇತರೆ 10 (ಬೈ 1, ನೋಬಾಲ್ 1, ವೈಡ್ 8)
ವಿಕೆಟ್ ಪತನ: 1-90(ಪ್ರಭಸಿಮ್ರನ್ ಸಿಂಗ್; 9.4), 2-158 (ಜಿತೇಶ್ ಶರ್ಮಾ; 15.4), 3-159 (ಸಿಕಂದರ್ ರಝಾ; 16.1) 4-196 (ಶಾರೂಕ್ ಖಾನ್; 19.4)
ಬೌಲಿಂಗ್: ಟ್ರೆಂಟ್ ಬೌಲ್ಟ್ 4-0-38-0, ಕೆ.ಎಂ. ಆಸಿಫ್ 4-0-54-0, ಆರ್. ಅಶ್ವಿನ್ 4-0-25-1, ಜೇಸನ್ ಹೋಲ್ಡರ್ 4-0-29-2, ಯಜುವೇಂದ್ರ ಚಾಹಲ್ 4-0-50-1

ರಾಜಸ್ಥಾನ ರಾಯಲ್ಸ್ 7ಕ್ಕೆ 192 (20 ಓವರ್‌ಗಳಲ್ಲಿ)

ಯಶಸ್ವಿ ಸಿ ಶಾರ್ಟ್ (ಬದಲಿ) ಬಿ ಅರ್ಷದೀಪ್ 11 (8ಎ, 4X1, 6X1)
ಆರ್. ಅಶ್ವಿನ್ ಸಿ ಶಿಖರ್ ಬಿ ಅರ್ಷದೀಪ್ 0 (4ಎ)
ಬಟ್ಲರ್ ಸಿ ಮತ್ತು ಬಿ ಎಲಿಸ್ 19 (11ಎ, 4X1, 6X1)
ಸಂಜು ಸಿ ಶಾರ್ಟ್ (ಬದಲಿ) ಬಿ ಎಲಿಸ್ 42 (25ಎ, 4X5, 6X1)
ದೇವದತ್ತ ಬಿ ಎಲಿಸ್ 21 (26ಎ, 4X1)
ಪರಾಗ್ ಸಿ ಶಾರೂಕ್ ಬಿ ಎಲಿಸ್ 20 (12ಎ, 4X1, 6X2)
ಹೆಟ್ಮೆಯರ್ ರನೌಟ್ (ಶಾರೂಕ್/ಕರನ್) 36 (18ಎ, 4X1, 6X3)
ಧ್ರುವ ಔಟಾಗದೆ 32 (15ಎ, 4X3, 6X2)
ಹೋಲ್ಡರ್ ಔಟಾಗದೆ 1 (1ಎ)
ಇತರೆ 10 (ವೈಡ್ 9, ಬೈ 1)
ವಿಕೆಟ್ ಪತನ: 1-13 (ಯಶಸ್ವಿ ಜೈಸ್ವಾಲ್, 1.3), 2-26 (ಆರ್.ಅಶ್ವಿನ್, 3.2), 3-57 (ಜೋಸ್ ಬಟ್ಲರ್, 5.4), 4-91 (ಸಂಜು ಸ್ಯಾಮ್ಸನ್, 10.6), 5-121 (ರಿಯಾನ್ ಪರಾಗ್, 14.1), 6-124 (ದೇವದತ್ತ ಪಡಿಕ್ಕಲ್, 14.6), 7-186 (ಶಿಮ್ರಾನ್ ಹೆಟ್ಮೆಯರ್, 19.3)
ಬೌಲಿಂಗ್: ಸ್ಯಾಮ್ ಕರನ್ 4-0-44-0, ಅರ್ಷದೀಪ್ ಸಿಂಗ್ 4-0-47-2, ಹರ್‌ಪ್ರೀತ್ ಬ್ರಾರ್ 2-0-15-0, ನೇಥನ್ ಎಲಿಸ್ 4-0-30-4, ರಾಹುಲ್ ಚಾಹರ್ 4-0-31-0, ಸಿಕಂದರ್ ರಝಾ 2-0-24-0

ಫಲಿತಾಂಶ: ಪಂಜಾಬ್ ತಂಡಕ್ಕೆ 5 ರನ್ ಜಯ

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಗುಜರಾತ್	2	2	0	0	4	0.700
ಪಂಜಾಬ್	2	2	0	0	4	0.333
ಬೆಂಗಳೂರು	1	1	0	0	2	1.981
ರಾಜಸ್ಥಾನ	2	1	1	0	2	1.675
ಲಖನೌ	2	1	1	0	2	0.950
ಚೆನ್ನೈ	2	1	1	0	2	0.036
ಕೋಲ್ಕತ್ತ	1	0	1	0	0	-0.438
ಡೆಲ್ಲಿ	2	0	2	0	0	-1.703
ಮುಂಬೈ	1	0	1	0	0	-1.981
ಹೈದರಾಬಾದ್	1	0	1	0	0	-3.600

*ಬುಧವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ವುಡ್	ಲಖನೌ	8

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಋತುರಾಜ್	ಚೆನ್ನೈ	149

ಸುದರ್ಶನ್ ಆಟಕ್ಕೆ ಹಾರ್ದಿಕ್ ಮೆಚ್ಚುಗೆ

ನವದೆಹಲಿ (ಪಿಟಿಐ): ಗುಜರಾತ್ ಟೈಟನ್ಸ್ ತಂಡವು ಮಂಗಳವಾರ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಜಯಿಸಲು ಅರ್ಧಶತಕದ ಕಾಣಿಕೆ ನೀಡಿದ ಸಾಯಿ ಸುದರ್ಶನ್ ಆಟವನ್ನು ನಾಯಕ ಹಾರ್ದಿಕ್ ಪಾಂಡ್ಯ ಶ್ಲಾಘಿಸಿದ್ದಾರೆ.

'ಸಾಯಿ ಅತ್ಯಮೋಘವಾಗಿ ಬ್ಯಾಟಿಂಗ್ ಮಾಡಿದರು. ನೆರವು ಸಿಬ್ಬಂದಿ ಹಾಗೂ ಸಾಯಿಗೆ ಎಲ್ಲ ಶ್ರೇಯ ಸಲ್ಲಬೇಕು. ಕಳೆದ 15 ದಿನಗಳಿಂದ ಅವರು ಬಹಳ ಶ್ರಮಪಟ್ಟು ಅಭ್ಯಾಸ ಮಾಡುತ್ತಿದ್ದಾರೆ. ಅವರ ಕಠಿಣ ಪರಿಶ್ರಮದ ಫಲ ಈಗ ಎದ್ದು ಕಾಣುತ್ತಿದೆ' ಎಂದು ಹಾರ್ದಿಕ್ ಪಾಂಡ್ಯ ಪಂದ್ಯದ ನಂತರ ಸುದ್ದಿಗಾರರಿಗೆ ತಿಳಿಸಿದರು.

ಡೆಲ್ಲಿ ತಂಡದ ಎದುರು ಸಾಯಿ 48 ಎಸೆತಗಳಲ್ಲಿ 62 ರನ್ ಗಳಿಸಿದ್ದರು.

ಹಾರ್ದಿಕ್ ಪಾಂಡ್ಯ

'ಮುಂದಿನ ಎರಡು ವರ್ಷಗಳಲ್ಲಿ ಸಾಯಿ ಅವರು ಫ್ರ್ಯಾಂಚೈಸಿ ಕ್ರಿಕೆಟ್‌ನಲ್ಲಿ ದೊಡ್ಡ ಸಾಧನೆ ಮಾಡುತ್ತಾರೆಂಬ ವಿಶ್ವಾಸ ನನಗಿದೆ. ನಂತರ ಭಾರತ ತಂಡದಲ್ಲಿ ಅವಕಾಶ ಪಡೆದರೆ ಅಲ್ಲಿಯೂ ಮಿಂಚುವುದರಲ್ಲಿ ಅನುಮಾನವಿಲ್ಲ' ಎಂದು ಹಾರ್ದಿಕ್ ಹೇಳಿದರು.

ಡೆಲ್ಲಿ ಕ್ಯಾಪಿಟಲ್ಸ್ ತಂಡವು ಮೊದಲು ಬ್ಯಾಟಿಂಗ್ ಮಾಡಿ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 162 ರನ್ ಗಳಿಸಿತ್ತು. ಅದಕ್ಕುತ್ತರವಾಗಿ ಗುಜರಾತ್ ಟೈಟನ್ಸ್ ತಂಡವು 18.1 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 163 ರನ್ ಗಳಿಸಿ, 6 ವಿಕೆಟ್‌ಗಳಿಂದ ಜಯಿಸಿತು. ತಂಡಕ್ಕೆ ಇದು ಎರಡನೇ ಜಯ.

ಟೈಟನ್ಸ್ ತಂಡದ ಡೇವಿಡ್ ಮಿಲ್ಲರ್ 16 ಎಸೆತಗಳಲ್ಲಿ 31 ರನ್ ಗಳಿಸಿದರು. ಎರಡು ಸಿಕ್ಸರ್ ಮತ್ತು 2 ಬೌಂಡರಿ ಸಿಡಿಸಿದರು.

ತಮಿಳುನಾಡಿನ ಎಡಗೈ ಬ್ಯಾಟರ್ ಸಾಯಿ ಸುದರ್ಶನ್ ಅವರು ಇದುವರೆಗೆ ಐಪಿಎಲ್ ನಲ್ಲಿ ಏಳು ಪಂದ್ಯಗಳನ್ನು ಆಡಿದ್ದಾರೆ.

ಭಾರತದ ಐವರಿಗೆ ಎಂಸಿಸಿ ಆಜೀವ ಸದಸ್ಯತ್ವ

ಲಂಡನ್ (ಪಿಟಿಐ): ಪ್ರತಿಷ್ಠಿತ ಮೆರಿಲ್‌ಬೋನ್ ಕ್ರಿಕೆಟ್ ಕ್ಲಬ್ (ಎಂಸಿಸಿ) ಬುಧವಾರ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿ ಸೇರಿ ದೇಶದ ಐವರಿಗೆ ಆಜೀವ ಸದಸ್ಯತ್ವ ನೀಡಿದೆ.

ಇಲ್ಲಿಯ ಲಾರ್ಡ್ಸ್ ಕ್ರಿಕೆಟ್ ಅಂಗಣದಲ್ಲಿರುವ ಕ್ಲಬ್, ಭಾರತದ ಯುವರಾಜ್ ಸಿಂಗ್, ಸುರೇಶ್ ರೈನಾ ಹಾಗೂ ಮಹಿಳಾ ತಂಡದ ಮಿಥಾಲಿ ರಾಜ್ ಹಾಗೂ ಜೂಲನ್ ಗೋಸ್ವಾಮಿ ಅವರಿಗೆ ಈ ಗೌರವವನ್ನು ನೀಡಿದೆ.

ಟೆಸ್ಟ್ ಆಡುವ ಎಂಟು ದೇಶಗಳ 19 ಹೊಸ ಗೌರವ ಸದಸ್ಯರನ್ನು ಎಂಸಿಸಿ ಹೆಸರಿಸಿದೆ.

ಮಹೇಂದ್ರ ಸಿಂಗ್ ಧೋನಿ

ಬ್ಯಾಡ್ಮಿಂಟನ್: ಮಿಥುನ್ ಶುಭಾರಂಭ

ಆರ್ಲಿಯನ್ಸ್, ಫ್ರಾನ್ಸ್ (ಪಿಟಿಐ): ಭಾರತದ ಮಿಥುನ್ ಮಂಜುನಾಥ್ ಮತ್ತು ಪ್ರಿಯಾಂಶು ರಾಜಾವತ್ ಅವರು ಇಲ್ಲಿ ನಡೆಯುತ್ತಿರುವ ಆರ್ಲಿಯನ್ಸ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಗೆಲುವಿನ ಆರಂಭ ಮಾಡಿದ್ದಾರೆ. ಆದರೆ ಸೈನಾ ನೆಹ್ವಾಲ್ ಮತ್ತು ಸಮೀರ್ ವರ್ಮಾ ಮೊದಲ ಸುತ್ತಿನಲ್ಲೇ ನಿರಾಸೆ ಅನುಭವಿಸಿದರು.

ಬುಧವಾರ ಆರಂಭವಾದ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಕರ್ನಾಟಕದ ಮಿಥುನ್ 24-22, 25-23ರಿಂದ ಡೆನ್ಮಾರ್ಕ್‌ನ ವಿಕ್ಟರ್ ಸ್ವೆಂಡ್‌ಸನ್ ಅವರನ್ನು ಮಣಿಸಿದರು.

ಮುಂದಿನ ಪಂದ್ಯದಲ್ಲಿ ಮಂಜುನಾಥ್ ಅವರಿಗೆ ಚೀನಾ ತೈಪೆಯ ಯು ಜೆನ್ ಸವಾಲು ಎದುರಾಗಿದೆ. ಯು ಜೆನ್ ಅವರು ಮೊದಲ ಸುತ್ತಿನಲ್ಲಿ ಡೆನ್ಮಾರ್ಕ್‌ನ ರಾಸ್ಮಸ್ ಗೆಮ್ಕೆ ಎದುರು ಸ್ಪರ್ಧಿಸಿದ್ದರು. ಆದರೆ ಗಾಯದಿಂದಾಗಿ ರಾಸ್ಮಸ್ ಪಂದ್ಯದ ಅರ್ಧದಲ್ಲೇ ಹಿಂದೆ ಸರಿದರು.

ಮತ್ತೊಂದು ಹಣಾಹಣಿಯಲ್ಲಿ ಪ್ರಿಯಾಂಶು 21-18, 21-13ರಿಂದ ಭಾರತದವರೇ ಆದ ಕಿರಣ್ ಜಾರ್ಜ್ ಅವರಿಗೆ ಸೋಲುಣಿಸಿದರು. ಎರಡನೇ ಸುತ್ತಿನಲ್ಲಿ ಪ್ರಿಯಾಂಶು ಅವರು ಜಪಾನ್‌ನ ಕೆಂಟಾ ನಿಶಿಮೊಟೊ ಎದುರು ಆಡುವರು.

ಸಮೀರ್, ಸೈನಾಗೆ ಸೋಲು: ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಸಮೀರ್ ವರ್ಮಾ 19-21, 21-19, 21-17ರಿಂದ ಐರ್ಲೆಂಡ್‌ನ ನಹತ್ ಎನ್‌ಗುಯೆನ್ ಎದುರು ಮಣಿದರು.

ಲಂಡನ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಸೈನಾ ನೆಹ್ವಾಲ್, ಮಹಿಳೆಯರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ 16-21, 14-21ರಿಂದ ಟರ್ಕಿಯ ನೆಸ್ಲಿಹಾನ್ ಯಿಜಿಟ್ ಎದುರು ಸೋಲುಂಡರು.ತಾನಿಯಾ ಹೇಮಂತ್ ಮತ್ತು ಆಕರ್ಷಿ ಕಶ್ಯಪ್ ಎರಡನೇ ಸುತ್ತಿಗೆ ಮುನ್ನಡೆದರು. ತಾನಿಯಾ ಅವರು 21-17, 21-18ರಿಂದ ಫ್ರಾನ್ಸ್‌ನ ಲೆಯೊನಿಸ್ ಹುಯೆಟ್ ವಿರುದ್ಧ ಮತ್ತು ಆಕರ್ಷಿ 8-21, 21-13, 8-21ರಿಂದ ಜಪಾನ್‌ನ ನತ್ಸುಕಿ ನಿದ್ರೈರಾ ಎದುರು ಜಯ ಸಾಧಿಸಿದರು.

ಭರವಸೆಯ ಆಟಗಾರ್ತಿ ತಸ್ನಿಂ ಮಿರ್22-20 13-21 5-21ರಿಂದ ಜರ್ಮನಿಯ ಯೊವೊನ್ ಲಿ ಎದುರು ಹೋರಾಡಿ ಸೋತರು.

ರನ್ನರ್ ಅಪ್ ಆದ ಕರ್ನಾಟಕದ ಬಾಲಕರ ಮತ್ತು ಬಾಲಕಿಯರ ತಂಡಗಳು. ನಿಂತವರು (ಎಡದಿಂದ): ವೃಷಭ್, ಪ್ರಜ್ವಲ್, ಸೂರ್ಯ, ಋತ್ವಿನ್, ಧೀರಜ್ ರೆಡ್ಡಿ, ಅಭಿಷೇಕ್, ವಿನಯ್, ಸಂಜಯ್, ಮನೋಜ್, ಮೇಘರಾಜ್. ಕುಳಿತವರು: ಲಕ್ಷ್ಮಿದೇವಿ, ಪ್ರಿಯಾ, ಸುಚಿತ್ರಾ, ಸುಹಾನ, ಲತಶ್ರೀ, ಯಮುನಾ, ವಿದ್ಯಾಶ್ರೀ, ಮಾನಸ, ವಿಷ್ಣು ಪ್ರಿಯಾ, ಭವ್ಯ

ಬಾಲ್ ಬ್ಯಾಡ್ಮಿಂಟನ್: ಕರ್ನಾಟಕ ರನ್ನರ್ಸ್ ಅಪ್

ಪ್ರಜಾವಾಣಿ ವಾರ್ತೆ

ಮಂಗಳೂರು: ವಿದರ್ಭದ ಮುರ್ತಿಜಾಪುರ್‌ನಲ್ಲಿ ನಡೆದ ರಾಷ್ಟ್ರೀಯ ಜೂನಿಯರ್ 67ನೇ ಬಾಲ್‌ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕದ ಬಾಲಕರ ಮತ್ತು ಬಾಲಕಿಯರ ತಂಡಗಳು ರನ್ನರ್ ಅಪ್ ಆಗಿ ಹೊರಹೊಮ್ಮಿವೆ.

ಏಪ್ರಿಲ್ 3ರಂದು ಮುಕ್ತಾಯಗೊಂಡ ಚಾಂಪಿಯನ್‌ಷಿಪ್‌ನ ಬಾಲಕರ ವಿಭಾಗದ ಫೈನಲ್ ಪಂದ್ಯದಲ್ಲಿ ರಾಜ್ಯ ತಂಡ ತಮಿಳುನಾಡು ವಿರುದ್ಧ 26-35, 32-35 ಪಾಯಿಂಟ್‌ಗಳಿಂದ ಸೋತಿತು. ಬಾಲಕಿಯರ ವಿಭಾಗದ ಅಂತಿಮ ಹಣಾಹಣಿಯಲ್ಲಿ ಕರ್ನಾಟಕ ತಂಡ ತಮಿಳುನಾಡು ವಿರುದ್ಧ 18-35, 26-35ರಿಂದ ಪರಾಭವಗೊಂಡಿತು.

ಬಾಲಕರ ವಿಭಾಗದ ಸೆಮಿಫೈನಲ್‌ನಲ್ಲಿ ರಾಜ್ಯ ತಂಡ ಆಂಧ್ರಪ್ರದೇಶವನ್ನು 21-35, 35-31, 35-22ರಿಂದ ಮತ್ತು ಕ್ವಾರ್ಟರ್ ಫೈನಲ್‌ನಲ್ಲಿ ತೆಲಂಗಾಣ ತಂಡವನ್ನು 35-25, 35-22ರಲ್ಲಿ ಮಣಿಸಿತು. ಬಾಲಕಿಯರ ವಿಭಾಗದ ಸೆಮಿಫೈನಲ್‌ನಲ್ಲಿ ಬಿಹಾರವನ್ನು 35-21, 35-18ರಲ್ಲಿ ಮತ್ತು ಕ್ವಾರ್ಟರ್ ಫೈನಲ್‌ನಲ್ಲಿ ರಾಜಸ್ಥಾನವನ್ನು 35-16, 35-21ರಲ್ಲಿ ಸೋಲಿಸಿತು. ಮನೋಜ್ ಹಾಗೂ ಲತಾಶ್ರೀ 'ಸ್ಟಾರ್ ಆಫ್ ಇಂಡಿಯಾ' ಪ್ರಶಸ್ತಿ ಪಡೆದುಕೊಂಡರು.

ಮುಶ್ಫೀಕುರ್, ಶಕೀಬ್ ಭರ್ಜರಿ ಆಟ

ಢಾಕಾ (ಎಎಫ್‌ಪಿ): ಮುಶ್ಫೀಕುರ್ ರಹೀಂ ಅವರ ಅಮೋಘ ಶತಕ ಹಾಗೂ ಶಕೀಬ್ ಅಲ್ ಹಸನ್ ಅವರ ಆಲ್‌ರೌಂಡ್ ಆಟದ ನೆರವಿನಿಂದ ಬಾಂಗ್ಲಾದೇಶ ತಂಡವು ಐರ್ಲೆಂಡ್ ವಿರುದ್ಧದ ಏಕೈಕ ಟೆಸ್ಟ್ ಪಂದ್ಯದಲ್ಲಿ ಮೇಲುಗೈ ಸಾಧಿಸಿದೆ.

ಪಂದ್ಯದ ಎರಡನೇ ದಿನವಾದ ಬುಧವಾರ ಬಾಂಗ್ಲಾ ತಂಡವು ಮೊದಲ ಇನಿಂಗ್ಸ್‌ನಲ್ಲಿ 369 ರನ್ ಗಳಿಸಿತು. ರಹೀಂ 126 ರನ್ ಗಳಿಸಿದರು. ಶಕೀಬ್ (87), ಮೆಹದಿ ಹಸನ್ (55 ತಂಡಕ್ಕೆ ಉಪಯುಕ್ತ ಕಾಣಿಕೆ ನೀಡಿದರು.

ಎರಡನೇ ಇನಿಂಗ್ಸ್‌ನಲ್ಲಿ ಐರ್ಲೆಂಡ್ 27 ರನ್‌ಗೆ 4 ವಿಕೆಟ್ ಕಳೆದುಕೊಂಡಿದೆ. ಬಾಂಗ್ಲಾದೇಶ ಸದ್ಯ ಒಟ್ಟು 128 ರನ್‌ಗಳ ಮುನ್ನಡೆಯಲ್ಲಿದೆ.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಐರ್ಲೆಂಡ್: 77.2 ಓವರ್‌ಗಳಲ್ಲಿ 214. ಬಾಂಗ್ಲಾದೇಶ: 80.3 ಓವರ್‌ಗಳಲ್ಲಿ 369 (ಮುಶ್ಫೀಕುರ್ ರಹೀಂ 126, ಶಕೀಬ್ ಅಲ್ ಹಸನ್ 87, ಲಿಟನ್ ದಾಸ್ 43, ಮೆಹದಿ ಹಸನ್ 55; ಮಾರ್ಕ್ ಅಡೈರ್ 64ಕ್ಕೆ 2, ಆ್ಯಂಡಿ ಮ್ಯಾಕ್‌ಬ್ರಯನ್ 118ಕ್ಕೆ 6, ಬೆನ್ ವೈಟ್ 71ಕ್ಕೆ 2). ಎರಡನೇ ಇನಿಂಗ್ಸ್: ಐರ್ಲೆಂಡ್: 17 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 27 (ಹ್ಯಾರಿ ಟೆಕ್ಟರ್ ಬ್ಯಾಟಿಂಗ್ 8, ಪೀಟರ್ ಮೂರ್ ಬ್ಯಾಟಿಂಗ್ 8; ಶಕೀಬ್ ಅಲ್ ಹಸನ್ 11ಕ್ಕೆ 2, ತೈಜುಲ್ ಇಸ್ಲಾಂ 7ಕ್ಕೆ 2)

ಸುಧೀರ್ ಇನ್ನಿಲ್ಲ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಸುಧೀರ್ ನಾಯ್ಕ (78) ಬುಧವಾರ ನಿಧನರಾದರು. ಕೆಲವು ದಿನಗಳಿಂದ ಅವರಿಗೆ ಅನಾರೋಗ್ಯ ಕಾಡಿತ್ತು. ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು ಎಂದು ಮುಂಬೈ ಕ್ರಿಕೆಟ್ ಸಂಸ್ಥೆ ಮೂಲಗಳೂ ತಿಳಿಸಿವೆ.

ಅವರಿಗೆ ಒಬ್ಬ ಪುತ್ರಿ ಇದ್ದಾರೆ.

'ಈಚೆಗೆ ಸುಧೀರ್ ಬಾತ್ ರೂಮ್ ಫ್ಲೋರ್ ಮೇಲೆ ಬಿದ್ದಿದ್ದರು. ತಲೆಗೆ ಗಾಯವಾಗಿತ್ತು. ಮುಂಬೈ ಆಸ್ಪತ್ರೆಗೆ ಅವರನ್ನು ದಾಖಲಿಸಲಾಗಿತ್ತು. ಆದರೆ ಅವರು ಕೋಮಾಗೆ ಜಾರಿದ್ದರು. ಕೆಲವು ದಿನಗಳ ನಂತರ ಕೊನೆಯುಸಿರೆಳೆದರು' ಎಂದು ಎಂಸಿಎ ಮೂಲಗಳು ತಿಳಿಸಿವೆ. 1974ರಲ್ಲಿ ಸುಧೀರ್ ಅವರು ಭಾರತ ತಂಡದಲ್ಲಿ ಮೂರು ಟೆಸ್ಟ್ ಪಂದ್ಯಗಳಲ್ಲಿ ಆಡಿದ್ದರು. 1970–71ರಲ್ಲಿ ರಣಜಿ ಟ್ರೋಫಿ ಜಯಿಸಿದ್ದ ತಂಡದಲ್ಲಿ ಇವರಿದ್ದರು. ದೇಶಿ ಕ್ರಿಕೆಟ್‌ನಲ್ಲಿ ಸುಧೀರ್ ನಾಯ್ಕ ಅವರಿಗೆ ಅಪಾರ ಗೌರವ ಇದೆ.

ಅಪ್ಪಚೆಟ್ಟೋಳಂಡ ಕಪ್ ಹಾಕಿ: ಕ್ವಾರ್ಟರ್ ಫೈನಲ್‌ಗೆ ಚೆಕ್ಕೇರ

ಪ್ರಜಾವಾಣಿ ವಾರ್ತೆ

ನಾಪೋಕ್ಲು (ಕೊಡಗು ಜಿಲ್ಲೆ): ವಿಶಾಲ್ ಹಾಗೂ ಶಿವನ್ ಗಳಿಸಿದ ಗೋಲುಗಳ ಬಲದಿಂದ ಚೆಕ್ಕೇರ ತಂಡವು ಇಲ್ಲಿ ನಡೆಯುತ್ತಿರುವ ಅಪ್ಪಚೆಟ್ಟೋಳಂಡ ಕಪ್ ಹಾಕಿ ಟೂರ್ನಿಯ ಬುಧವಾರದ ಪಂದ್ಯದಲ್ಲಿ ಗೆಲುವು ಸಾಧಿಸಿ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಇಟ್ಟಿತು.

ಸಮೀಪದ ಚೆರಿಯಪರಂಬುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ಚೆಕ್ಕೇರ ತಂಡದವರು 3–2 ಗೋಲುಗಳಿಂದ ಕಲಿಯಂಡ ತಂಡದವರ ವಿರುದ್ಧ ರೋಚಕ ಜಯ ಸಾಧಿಸಿದರು. ವಿಶಾಲ್ ಎರಡು ಹಾಗೂ ಶಿವನ್ ಒಂದು ಗೋಲು ಗಳಿಸಿದರು. ಕಲಿಯಂಡ ಪರ ಮಾಚಯ್ಯ ಹಾಗೂ ಕಾರ್ಯಪ್ಪ ತಲಾ ಒಂದು ಗೋಲು ಗಳಿಸಿದರು.

ಅಮ್ಮಣಿಚಂಡ ತಂಡದವರು 3–2ರಲ್ಲಿ ಕರಿನೆರವಂಡ ತಂಡವನ್ನು ಮಣಿಸಿ ಎಂಟರ ಘಟ್ಟ ತಲುಪಿದರು. ವಿಜೇತ ತಂಡದ ಪರ ವಿಘ್ನೇಶ್ ಬೋಪಣ್ಣ, ಬೆನ್ ಬೆಳ್ಳಿಯಪ್ಪ ಹಾಗೂ ಸಜನ್ ಸುಬ್ಬಯ್ಯ ತಲಾ ಒಂದೊಂದು ಗೋಲು ಗಳಿಸಿದರು. ಕರಿನೆರವಂಡ ತಂಡದ ರತನ್ ಕುಂಜಪ್ಪ ಹಾಗೂ ಬಿದ್ದಪ್ಪ ಗೋಲು ಗಳಿಸಿದರು. ಪಳಂಗಂಡ ತಂಡದವರು 2-0ಯಲ್ಲಿ ಕೊಂಗಂಡ ವಿರುದ್ಧ ಜಯ ಸಾಧಿಸಲು ಪಿ.ಸಿ.ಮುತ್ತಣ್ಣ ಹಾಗೂ ಪೊನ್ನಪ್ಪ ನೆರವಾದರು.

ಟೂರ್ನಿಯಲ್ಲಿ ಪಾಲ್ಗೊಳ್ಳಲು 336 ತಂಡಗಳು ನೋಂದಾಯಿಸಿದ್ದವು. ಹಲವು ತಂಡಗಳು ಪಂದ್ಯಗಳಿಂದ ಸೋತು ಹೊರನಡೆದಿವೆ. ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ 8 ತಂಡಗಳು ಸೆಣಸಾಡಲಿದ್ದು, ಇದುವರೆಗಿನ ಪಂದ್ಯಗಳಲ್ಲಿ ಒಟ್ಟು 952 ಗೋಲುಗಳು ದಾಖಲಾಗಿವೆ. 66 ಹಸಿರು ಕಾರ್ಡ್ ಹಾಗೂ 11 ಹಳದಿ ಕಾರ್ಡ್ ಬಳಸಲಾಗಿದೆ. 49 ಟೈಬ್ರೇಕರ್ ಪಂದ್ಯಗಳು ನಡೆದಿವೆ. ಮಳೆಯ ಕಾರಣದಿಂದಾಗಿ ಮರುವಂಡ ಮತ್ತು ಕುಪ್ಪಣ್ಣ ತಂಡಗಳ ನಡುವಿನ ಪಂದ್ಯ ಸ್ಥಗಿತಗೊಂಡಿತು. ಗುರುವಾರ ಪಂದ್ಯ ನಡೆಯಲಿದೆ.

ಇಂದಿನ ಪಂದ್ಯಗಳು: ಬೆಳಿಗ್ಗೆ 8 ಗಂಟೆಗೆ ಮರುವಂಡ – ಕುಪ್ಪಣ್ಣ (ಪ್ರೀಕ್ವಾರ್ಟರ್ ಫೈನಲ್), ಕ್ವಾರ್ಟರ್ ಫೈನಲ್: 9.30ಕ್ಕೆ ಅಮ್ಮಣಿಚಂಡ-ಪಳಂಗಂಡ, 11ಕ್ಕೆ ನೆಲ್ಲಮಕ್ಕಡ-ಕಂಬೀರಂಡ, ಮಧ್ಯಾಹ್ನ 1 ಗಂಟೆಗೆ ಕುಲ್ಲೇಟಿರ-ಪುದಿಯೊಕ್ಕಡ, 2.30ಕ್ಕೆ ಚೆಕ್ಕೇರ-ಪುದಿಯೊಕ್ಕಡ

ಕುಸ್ತಿ: ಶಿಬಿರಕ್ಕೆ ಅನುಜ್‌ಕುಮಾರ್ ಆಯ್ಕೆ

ನವದೆಹಲಿ (ಪಿಟಿಐ): ದೆಹಲಿ ಹೈಕೋರ್ಟ್ ಆದೇಶಕ್ಕೆ ಅನುಸಾರವಾಗಿ ಕುಸ್ತಿಪಟು ಅನುಜ್‌ಕುಮಾರ್ ಅವರನ್ನು ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ಗೆ ನಡೆಸಲಾಗುವ ಶಿಬಿರಕ್ಕೆ ಕೇಂದ್ರ ಸರ್ಕಾರ ಆಯ್ಕೆ ಮಾಡಿದೆ.

ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ನಡೆಸುವ ಆಯ್ಕೆ ಟ್ರಯಲ್ಸ್‌ನಿಂದ ತಮ್ಮನ್ನು ಹೊರಗಿಟ್ಟ ಕ್ರಮವನ್ನು ಪ್ರಶ್ನಿಸಿ ಕುಸ್ತಿಪಟುಗಳಾದ ಅನುಜ್‌ಕುಮಾರ್, ಚಂದರ್ ಮೋಹನ್, ವಿಜಯ್, ಅಂಕಿತ್ ಮತ್ತು ಸಚಿನ್ ಮೊರ್ ಕಳೆದ ತಿಂಗಳು ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ಕುರಿತು ವಿಚಾರಣೆ ನಡೆಸಿ ಮಾರ್ಚ್ 9ರಂದು ಆದೇಶ ನೀಡಿದ್ದ ಹೈಕೋರ್ಟ್, ಟ್ರಯಲ್ಸ್‌ನಲ್ಲಿ ಪಾಲ್ಗೊಳ್ಳಲು ಐವರಿಗೂ ಅವಕಾಶ ನೀಡಿತ್ತು.

ಟ್ರಯಲ್ಸ್‌ನಲ್ಲಿ ಭಾಗವಹಿಸಿದ್ದ ಐವರ ಪೈಕಿ ಅನುಜ್‌ಕುಮಾರ್ ಅವರನ್ನು ಉತ್ತಮ ಸಾಮರ್ಥ್ಯ ತೋರಿದ್ದ ಆಧಾರದ ಮೇಲೆ ಏಷ್ಯನ್ ಚಾಂಪಿಯನ್‌ಷಿಪ್ ಶಿಬಿರಕ್ಕೆ ಆಯ್ಕೆ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರದ ಪರ ವಕೀಲ ಮನೀಷ್ ಮೋಹನ್ ಕೋರ್ಟ್‌ಗೆ ತಿಳಿಸಿದ್ದಾರೆ.

ಏಕದಿನ ರ‍್ಯಾಂಕಿಂಗ್: ಗಿಲ್‌ಗೆ ಬಡ್ತಿ

ಶುಭಮನ್ ಗಿಲ್

ದುಬೈ (ಪಿಟಿಐ): ಭಾರತ ತಂಡದ ಆರಂಭಿಕ ಬ್ಯಾಟರ್ ಶುಭಮನ್ ಗಿಲ್ ಅವರು ಐಸಿಸಿ ಏಕದಿನ ರ‍್ಯಾಂಕಿಂಗ್‌ನಲ್ಲಿ ಜೀವನಶ್ರೇಷ್ಠ ನಾಲ್ಕನೇ ಸ್ಥಾನ ತಲುಪಿದ್ದಾರೆ.

ಬುಧವಾರ ಪ್ರಕಟವಾದ ಪಟ್ಟಿಯಲ್ಲಿ ಗಿಲ್ ಅವರೊಂದಿಗೆ ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ಕೂಡ ಅಗ್ರ 10ರೊಳಗೆ ಸ್ಥಾನ ಪಡೆದಿದ್ದಾರೆ. ವಿರಾಟ್ ಒಂದು ಸ್ಥಾನ ಬಡ್ತಿ ಪಡೆದು ಏಳನೇ ಸ್ಥಾನಕ್ಕೇರಿದ್ದರೆ, ರೋಹಿತ್ ಎಂಟನೇ ಸ್ಥಾನದಲ್ಲಿ ಸ್ಥಿರವಾಗಿದ್ದಾರೆ.

ಈ ಪಟ್ಟಿಯಲ್ಲಿ ಪಾಕಿಸ್ತಾನದ ಬಾಬರ್ ಆಜಂ ಅಗ್ರಸ್ಥಾನದಲ್ಲಿದ್ದಾರೆ.

ದಕ್ಷಿಣ ಆಫ್ರಿಕಾದ ಏಡನ್ ಮರ್ಕರಂ ಅವರು 13 ಸ್ಥಾನಗಳ ಏರಿಕೆ ದಾಖಲಿಸಿ 41ನೇ ಸ್ಥಾನದಲ್ಲಿದ್ದರೆ, ನ್ಯೂಜಿಲೆಂಡ್‌ನ ಹೆನ್ರಿ ನಿಕೊಲ್ಸ್ 69ನೇ ಸ್ಥಾನಕ್ಕೇರಿದ್ದಾರೆ.

ವೇಗಿ ಮೊಹಮ್ಮದ್ ಸಿರಾಜ್ ಅಗ್ರ 10ರೊಳಗಿನ ರ‍್ಯಾಂಕಿಂಗ್ ಪಟ್ಟಿ ಯಲ್ಲಿರುವ ಭಾರತದ ಏಕೈಕ ಬೌಲರ್ ಆಗಿದ್ದಾರೆ. ಸದ್ಯ ಅವರು ಮೂರನೇ ಸ್ಥಾನದಲ್ಲಿದ್ದಾರೆ.

ಆಸ್ಟ್ರೇಲಿಯಾದ ಜೋಶ್ ಹ್ಯಾಜಲ್‌ವುಡ್ ಮತ್ತು ನ್ಯೂಜಿಲೆಂಡ್‌ನ ಟ್ರೆಂಟ್ ಬೌಲ್ಟ್ ಈ ಪಟ್ಟಿಯಲ್ಲಿ ಮೊದಲೆರಡು ಸ್ಥಾನಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.

ಭಾರತದ ಸೂರ್ಯಕುಮಾರ್ ಯಾದವ್ ಟಿ20 ಬ್ಯಾಟರ್‌ಗಳ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೆ ಮರಳಿದ್ದಾರೆ.

ಟಿ20: ನ್ಯೂಜಿಲೆಂಡ್‌ಗೆ ಭರ್ಜರಿ ಜಯ

ಡುನೆಡಿನ್, ನ್ಯೂಜಿಲೆಂಡ್ (ಎಎಫ್‌ಪಿ): ನ್ಯೂಜಿಲೆಂಡ್ ಇಲ್ಲಿ ಬುಧವಾರ ನಡೆದ ಎರಡನೇ ಟಿ20 ಪಂದ್ಯದಲ್ಲಿ ಒಂಬತ್ತು ವಿಕೆಟ್‌ಗಳಿಂದ ಶ್ರೀಲಂಕಾ ತಂಡವನ್ನು ಮಣಿಸಿತು.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 19 ಓವರ್‌ಗಳಲ್ಲಿ 141 (ಕುಶಾಲ್ ಪೆರೇರ 35, ಧನಂಜಯ ಡಿಸಿಲ್ವಾ 37, ಚರಿತ ಅಸಲಂಕ 24; ಆ್ಯಡಂ ಮಿಲ್ನೆ 26ಕ್ಕೆ 5, ಬೆನ್ ಲಿಸ್ಟರ್ 26ಕ್ಕೆ 2). ನ್ಯೂಜಿಲೆಂಡ್: 14.4 ಓವರ್‌ಗಳಲ್ಲಿ 1 ವಿಕೆಟ್‌ಗೆ 146 (ಚಾಡ್ ಬೋವ್ಸ್ 31, ಟಿಮ್ ಸೀಫರ್ಟ್ ಔಟಾಗದೆ 79, ಟಾಮ್ ಲಥಾಮ್ ಔಟಾಗದೆ 20; ಕಸುನ್ ರಜಿತ 25ಕ್ಕೆ 1). ಫಲಿತಾಂಶ: ನ್ಯೂಜಿಲೆಂಡ್‌ಗೆ 9 ವಿಕೆಟ್ ಜಯ